ಸಂವಾದ

ಜೂನ್ ೨೦೦೮ ರೂ. ೨೦

ಕಾಂಗ್ರೆಸ್ ಗೆಲುವು ಮತ್ತು ಭಾರತದ ಮನಸ್ಸು

ಸಂದರ್ಶನ



ಡಾ. ಆನಂದ್ ತೇಲ್‌ತುಂಬ್ಡೆ

ಆಮೇಲೆ ಹೇಳಲಿಲ್ಲ ಎನ್ನಬೇಡಿ; ಮುಂದಿನ ಐದು ವರ್ಷಗಳಲ್ಲಿ

ಬಾಣಾಲೆಯ ಬೆಂಕಿ ಹೆಚ್ಚುತ್ತದೆ!

ಸಂವಾದ

ಮಾಸ ಪತ್ರಿಕೆ

ಸಂಪುಟ ೭ ಸಂಚಿಕೆ ೮

ಜೂನ್ ೨೦೦೯

ಸಂಪಾದಕ :

ಇಂದೂಧರ ಹೊನ್ನಾಪುರ

ಸಂಪಾದಕೀಯ ಬಳಗ :

ಡಾ|| ನಟರಾಜ್ ಹುಳಿಯಾರ್

ಪ್ರೊ|| ರಹಮತ್ ತರೀಕೆರೆ

ಡಾ|| ಕೆ. ಪುಟ್ಟಸ್ವಾಮಿ

ಡಾ|| ಡಿ. ಡೊಮಿನಿಕ್

ಡಾ|| ಬಿ.ಯು. ಸುಮಾ

ಡಾ|| ಜಿ. ಪಾಂಡುನಾಯಕ್

ಎನ್. ಕೆ. ಹನುಮಂತಯ್ಯ

ವಿಳಾಸ: ಸ್ಫೂರ್ತಿಧಾಮ,
ಅಂಜನಾನಗರ, ಮಾಗಡಿ ರಸ್ತೆ,
ವಿಶ್ವನೀಡಂ ಅಂಚೆ
ಬೆಂಗಳೂರು-೫೬೦ ೦೯೧

PRINTED AND PUBLISHED BY
S.R. GOVINDU
ON BEHALF OF SPOORTHIDHAMA
ANJANA NAGAR, MAGADI ROAD
VISHWANEEDAM POST
BANGALORE - 560 091

✆ Editorial: 9448048306
✆ Circulation: 080-23480278, 9945264687
e-mail : samvaada@hotmail.com
honnapura@yahoo.co.in

EDITOR :
INDUDHARA HONNAPURA

ಒಳಪುಟಗಳಲ್ಲಿ



- ❑ ಪತ್ರಗಳು ೦೩
- ❑ ಅಂತರಂಗ ೦೫
- ❑ ಸಂಪಾದಕರೊಂದಿಗೆ ಸಂವಾದ ೦೬
- ❑ ಸ್ವಾತಂತ್ರ್ಯ : ಅಂಚಿನ ಸಮುದಾಯಗಳ ಕನ್ನಡಿ ಗಂಟು ೦೮
  - ❍ ಡಾ. ಬಿ. ಎಂ. ಪುಟ್ಟಯ್ಯ
- ❑ ಜಾತಿ, ರಾಜಕಾರಣ ಮತ್ತು ಸಾಮಾಜಿಕ ನ್ಯಾಯ ೧೨
  - ❍ ವೈ. ಮರಿಸ್ವಾಮಿ
- ❑ ದಲಿತ ಚಳುವಳಿ: ಉರಿಯುವ ನೆನಪುಗಳ ಚರಿತ್ರೆ ೧೪
  - ❍ ಡಾ. ಜಿ. ಎಸ್. ಶಿವರುದ್ರಪ್ಪ



- ❑ ಅಂಬೇಡ್ಕರ್ ಚಿಂತನೆ : ಬ್ರಾಹ್ಮಣ್ಯದ ವಿರುದ್ಧ ಸಂಘರ್ಷ ೧೬
  - ❍ ನಾ ದಿವಾಕರ
- ❑ ಡಾ. ಆನಂದ್ ತೇಲ್‌ತುಂಬ್ಡೆ ಸಂದರ್ಶನ ೨೦
  - ❍ ಶಿವಸುಂದರ್
- ❑ ಕಾಂಗ್ರೆಸ್‌ನ ಗೆಲುವು ಮತ್ತು ಭಾರತದ ಮನಸ್ಸು ೨೬
  - ❍ ಡಾ|| ಬಿ ಯು ಸುಮ
- ❑ ಬಾಣಲೆಯ ಬೆಂಕಿ ಹೆಚ್ಚುತ್ತದೆ! ೨೮
  - ❍ ಡಾ. ವಾಸು ಎಚ್ ವಿ
- ❑ ಜಾತಿ ವ್ಯವಸ್ಥೆ ಮತ್ತು ರಾಜಕಾರಣ ಭಾಗ ೨
  - ❍ ಡಾ. ಜೆ. ಸೋಮಶೇಖರ್ ೩೧





- ❑ ಪುಸ್ತಕ ಅವಲೋಕನ ೩೬
  - ❍ ನರಸಿಂಹ
- ❑ ಧರೆ ಹತ್ತಿ ಉರಿದರೆ... ೧೧ ನಮ್ಮ ಪ್ರಾಥಮಿಕ ಶಿಕ್ಷಣ ಎತ್ತ ಸಾಗಿದೆ!
  - ❍ ಡಾ. ಟಿ. ಆರ್ ಚಂದ್ರಶೇಖರ್ ೩೮
- ❑ ಬೌದ್ಧ ಸೌಂದರ್ಯ ಮೀಮಾಂಸೆ-೧೦ ಅಲ್ಲಮನ ವಚನಗಳಲ್ಲಿ ಪ್ರಕ್ರಿಯಾ ಮೀಮಾಂಸೆ
  - ❍ ಡಾ. ಎಸ್. ನಟರಾಜ್ ಬೂದಾಳು ೪೨
- ❑ ದಲಿತ್ ಡೈರಿ
  - ❍ ಚಂದ್ರಭಾನ್ ಪ್ರಸಾದ್/ಸತ್ಯಪ್ರಕಾಶ್ ೪೬
- ❑ ಬುದ್ಧಾಯಣ ೫೦
  - ❍ ಸಿ.ಎಚ್. ರಾಜಶೇಖರ್

ಕವನಗಳು : ❑ ಹೊರಟು ನಿಂತೆ ೧೧ ❑ ಕೊಲೆ ಮತ್ತು ಸಂಗೀತ ೧೯

ಮುಖಪುಟ ವಿನ್ಯಾಸ: ಮುರಳೀಧರ ರಾಠೋಡ್

(ಇಲ್ಲಿನ ಲೇಖನಗಳಲ್ಲಿ ಪ್ರಕಟವಾಗಿರುವ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದವು)

ದಲಿತರ ಮೇಲಿನ ಹಲ್ಲೆ ಹೊಸ ಕಾರಣಗಳಿಗಾಗಿ

ಮಾನ್ಯ ಸಂಪಾದಕರಿಗೆ,

ದಲಿತರ ಮೇಲೆ ನಡೆಯುತ್ತಿರುವ ಹಲ್ಲೆಗಳಿಗೆ ಇರುವ ಕಾರಣಗಳನ್ನು ಅಧ್ಯಯನ ಮಾಡುತ್ತಾ ಹೋದರೆ ಕೆಲ ಆಶ್ಚರ್ಯಕರ ಸಂಗತಿಗಳು ತಿಳಿದು ಬರುತ್ತವೆ. ಹಿಂದಿಗೂ-ಇಂದಿಗೂ ನಡೆಯುತ್ತಿರುವ ಹಲ್ಲೆಗಳ ಸ್ವರೂಪ ಒಂದೇ ಆಗಿದ್ದರೂ ಹಿಂದಿರುವ ಕಾರಣಗಳು ಮಾತ್ರ ಭಿನ್ನಾವಾಗಿವೆ. ಈ ಭಿನ್ನತೆಯನ್ನು ಅರ್ಥಮಾಡಿಕೊಳ್ಳಲು ಈ ಕೆಳಕಾಣಿಸಿದ ಉದಾಹರಣೆಗಳು ಸಹಾಯಕವಾಗಬಲ್ಲವೆಂದು ನಂಬಿದ್ದೇನೆ.

ಉದಾಹರಣೆ ಒಂದು: ಕೆಲ ತಿಂಗಳುಗಳ ಹಿಂದೆ ಉತ್ತರ ಕರ್ನಾಟಕದ ಹಳ್ಳಿಯೊಂದರ ಸವರ್ಣೀಯರು ಕೆಲ ದಲಿತ ಯುವಕರ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿದ್ದರು. ಅದಕ್ಕಿದ್ದ ಕಾರಣವೆಂದರೆ, ಸರಕಾರದ ನೆರವಿನಿಂದ ಆ ಹಳ್ಳಿಯಲ್ಲಿ ನಿರ್ಮಾಣವಾಗಿದ್ದ ರಂಗಮಂದಿರವೊಂದಿದ್ದು, ಅದನ್ನು ತಮ್ಮ ಕೆಲವು ಕಾರ್ಯಕ್ರಮಗಳಿಗ್ಗೆ ಬಳೆಸಿಕೊಳ್ಳಲು ದಲಿತ ಯುವಕರು ಅದರೊಳಗೆ ಪ್ರವೇಶಿಸಿದ್ದು. (ಸರಕಾರೀ ಸೌಲಭ್ಯವನ್ನು ತಾವೂ ಪಡೆಯಲು ಯತ್ನಿಸಿದ್ದು ದಲಿತರ ಅಪರಾಧವಾಗಿತ್ತು).

ಉದಾಹರಣೆ ಎರಡು: ಮೇಲ್ಜಾತಿಯವರೇ ಅಪಾರ ಸಂಖ್ಯೆಯಲ್ಲಿರುವ ಹಳ್ಳಿಯಲ್ಲಿ ನಡೆದ ಗ್ರಾಮ ಸಭೆಯೊಂದರಲ್ಲಿ ದಲಿತನೊಬ್ಬ ತನಗೆ ಆಶ್ರಯ ಮನೆ ನೀಡುವಲ್ಲಿ ವಂಚಿಸಿದ ಸವರ್ಣೀಯ ಪಂಚಾಯಿತಿ ಸದಸ್ಯನೊಬ್ಬನನ್ನು ಪ್ರಶ್ನಿಸಿ ಪ್ರತಿಭಟಿಸಿದ. ಅದೇ ರೀತಿ ಸಂಜೆ ಮೇಲ್ಜಾತಿಯವರು ಆ ದಲಿತನ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿದರು.

ಮೇಲಿನ ಎರಡೂ ಘಟನೆಗಳಿಂದ ಸ್ಪಷ್ಟವಾಗುವುದೇನೆಂದರೆ ದಲಿತರ ಎಚ್ಚರದ ಸ್ಥಿತಿಯನ್ನು ತಮ್ಮ ಹಕ್ಕುಗಳನ್ನು ಪಡೆಯಲೆತ್ನಿಸುವ ಅವರ ಪ್ರಯತ್ನವನ್ನು ಮೇಲ್ವರ್ಗಗಳೆಂದೂ ಸಹಿಸುವುದಿಲ್ಲ. ದಲಿತರ ಇಂತಹ ಸ್ವಾಭಿಮಾನೀ ಹೋರಾಟದ ಬಗ್ಗೆ ಮೇಲ್ಜಾತಿಗಳಿಗಿರಬಹುದಾದ ಅಸಹನೆಯೆ ಇಂತಹ ಹಲ್ಲೆಗಳಿಗೆ ಕಾರಣವಾಗಿದೆ.

ಹಿಂದೆಲ್ಲಾ ಪಾಳೇಗಾರಿಕೆಯ ಗತ್ತಿನಲ್ಲಿ ಮೆರೆಯುತ್ತಿದ್ದ ಮೇಲ್ಜಾತಿಗಳು ಅಸಹಾಯಕರಾದ ಮತ್ತು ತಮ್ಮ ಹಕ್ಕುಗಳ ಅರಿವಿರದ ಮುಗ್ಧ ದಲಿತ ಸಮುದಾಯದ ಮೇಲೆ ನಿರಂತರವಾಗಿ ಹಲ್ಲೆ ನಡೆಸುತ್ತಿದ್ದವು. ಅಂತಹ ಹಲ್ಲೆಗಳಿಗೆ ಕಾರಣವೆಂದರೆ ದಲಿತ ಸಮುದಾಯಗಳನ್ನು ಶಾಶ್ವತವಾಗಿ ತಮ್ಮ ಹಿಡಿತದಲ್ಲಿಟ್ಟುಕೊಳ್ಳುವುದಾಗಿತ್ತು. ಯಾಕೆಂದರೆ ಭಾರತೀಯ ಹಳ್ಳಿಗಳನ್ನು ಮೇಲ್ಜಾತಿಗಳು ಯಾವತ್ತಿಗೂ ತಮ್ಮ ಪಾಳೆಯ ಪಟ್ಟುಗಳೆಂದು ಭಾವಿಸಿದ್ದವು. ತಲತಲಾಂತರದಿಂದ ನಮ್ಮ ಸಾಂಪ್ರದಾಯಿಕ ಹಳ್ಳಿಗಳಲ್ಲಿ ಮೇಲ್ಜಾತಿಗಳು ಹೇಳಿದ್ದೇ ಕಾನೂನು, ಮಾಡಿದ್ದೇ ವಿಚಾರಣೆ, ನೀಡಿದ್ದೇ ಶಿಕ್ಷೆಯಾಗಿತ್ತು. ಅವರೇ ಸ್ವತಃ ಪೋಲೀಸರು, ಕೋರ್ಟು, ನ್ಯಾಯಾಧೀಶರು ಎಲ್ಲವೂ ಆಗಿದ್ದರು.

ಸ್ವಾತಂತ್ರ್ಯ ಬಂದ ನಂತರವೂ ನಮ್ಮ ಬಹುತೇಕ ಹಳ್ಳಿಗಳಲ್ಲಿ, ಪ್ರಜಾಪ್ರಭುತ್ವ ವ್ಯವಸ್ಥೆ ನಮಗೆ ನೀಡಿರುವ ಸಂವಿಧಾನವಾಗಲಿ, ಕಾರ್ಯಾಂಗ ನ್ಯಾಯಾಂಗಗಳಾಗಲಿ ಸ್ವತಂತ್ರ್ಯವಾಗಿ ಕರ್ತವ್ಯ ನಿರ್ವಹಿಸಲಾರದಂತಹ ಸ್ಥಿತಿಯೇ ಮುಂದುವರಿಯಿತು. ಅನಕ್ಷರತೆಯ ಅಂದಕಾರದಲ್ಲಿ ಮುಳುಗಿದ್ದ ನಮ್ಮ ಹಿಂದಿನ ದಲಿತ ಪೀಳಿಗೆಗೆ ತಮ್ಮ ಹಕ್ಕುಗಳ ಬಗ್ಗೆ ಅರಿವಾಗಲಿ, ಸಮಾನತೆಯ ಎಚ್ಚರವಾಗಲಿ ಇರಲಿಲ್ಲ. ಅಕಸ್ಮಾತ್ ಅಪ್ರಜ್ಞಾಪೂರ್ವಕವಾಗಿ ಒಬ್ಬ ದಲಿತನೇನಾದರೂ ವ್ಯವಸ್ಥೆಯ ವಿರುದ್ಧ ಸಿಡಿದೆದ್ದದ್ದು ಕಂಡು ಬಂದರೆ ಮೇಲ್ಜಾತಿಗಳು ಅವನನ್ನು ಸ್ಥಳೀಯವಾಗಿ ವಿಚಾರಣೆ ನಡೆಸಿ (ಕೆಲವೊಮ್ಮೆ ಅದೂ ಇಲ್ಲದೇ!) ಶಿಕ್ಷೆಗೆ ಗುರಿಪಡಿಸುತ್ತಿದ್ದರು.

ಆದರೆ ಸ್ವಾತಂತ್ರ್ಯಾನಂತರದ ವರ್ಷಗಳಲ್ಲಿ ಕೆಲಮಟ್ಟಿಗೆ ದಲಿತ ಸಮುದಾಯ ಅಕ್ಷರ ಲೋಕಕ್ಕೆ ಕಣ್ಣು ತೆರೆದುಕೊಳ್ಳಲು ಪ್ರಾರಂಭಿಸಿತು. ಜೊತೆಗೆ ಎಪ್ಪತ್ತರ ದಶಕದಲ್ಲಿ ನಾಡಿನಾದ್ಯಂತ ಸಂಚಲನ ಸೃಷ್ಟಿಸಿದ 'ದಲಿತ ಚಳುವಳಿ', ಆ ಸಮುದಾಯದಲ್ಲಿ ಹೊಸ ಅರಿವನ್ನು, ಹೊಸ ಎಚ್ಚರವನ್ನು ಮೂಡಿಸಲು ಯಶಸ್ವಿಯಾಯಿತು. ದಲಿತರಲ್ಲಿ ಹೆಚ್ಚಾದ ಅಕ್ಷರತೆ, ಇಂಗ್ಲೀಷ್ ವಿದ್ಯಾಭ್ಯಾಸದಿಂದ ಪಡೆದ ಹೊಸ ಚಿಂತನಾಕ್ರಮಗಳು, ಅವರಿಗೆ ತಮ್ಮ ಹಕ್ಕುಗಳ ಬಗ್ಗೆ ಅರಿವು ಮೂಡಿಸಿದ್ದೇ ಅಲ್ಲದೆ, ತಮ್ಮ ಅಸ್ತಿತ್ವವನ್ನು ಜಗತ್ತಿಗೆ ತೋರಿಸಿಕೊಡುವ ಅನಿವಾರ್ಯತೆ ಉಂಟಾಯಿತು. ದಲಿತರ ಇಂತಹ ಎಚ್ಚರದ ಸ್ಥಿತಿಯನ್ನು ಅರಗಿಸಿಕೊಳ್ಳಲಾಗದ ಮೇಲ್ಜಾತಿಗಳು ದಲಿತ ಸಮುದಾಯದ ಹಕ್ಕುಗಳನ್ನು ನಿರಾಕರಿಸುತ್ತಲೇ ಬಂದವು.

ಆದರೆ ನಮ್ಮ ದಲಿತ ಚಳುವಳಿಯ ಮೂಲ ಉದ್ದೇಶವೇ ದಲಿತರ ಸಾಕ್ಷರತೆ, ಆರ್ಥಿಕ ಸದೃಢತೆ, ಮತ್ತು ಸ್ವಾಭಿಮಾನಿ ಬದುಕಾಗಿದ್ದು, ಇದರಿಂದ ಪ್ರಭಾವಿತವಾದ ದಲಿತ ಸಮುದಾಯ ತನ್ನ ಮೂಲಭೂತ ಹಕ್ಕುಗಳಿಗೆ ಹಠಹಿಡಿದದ್ದರ ಪರಿಣಾಮವೇ, ಲೇಖನದ ಮೊದಲಿಗೆ ನಾನು ಹೇಳಿದ ಘಟನೆಗಳ ಸಂಭವಕ್ಕೆ ಕಾರಣ. ಯಾಕೆಂದರೆ ಅಷ್ಟು ಸುಲಭಕ್ಕೆ ತನ್ನ ಪಾಳೇಗಾರಿಕೆಯ ಗತ್ತು ಗೈರತ್ತುಗಳನ್ನು ಬಿಟ್ಟುಕೊಡದ ಮೇಲ್ಜಾತಿಗಳು ತಮ್ಮನ್ನು ಧಿಕ್ಕರಿಸಿ ನಿಂತ ದಲಿತರ ಮೇಲೆ ನಿರಂತರ ಹಲ್ಲೆ ನಡೆಸುತ್ತಲೇ ಬರುತ್ತಿವೆ. ತನ್ನ ಕಪಿಮುಷ್ಟಿಯಿಂದ ದಲಿತವರ್ಗ ಜಾರಿ ಹೋದರೆ ಎಲ್ಲಿ ತಮ್ಮ ಸಾಮಾಜಿಕ, ಆರ್ಥಿಕ, ರಾಜಕೀಯ, ಧಾರ್ಮಿಕ ಸ್ಥಾನಮಾನಗಳು ಪಲ್ಲಟಗೊಳ್ಳುತ್ತವೆಯೋ ಎಂಬ ಭೀತಿಯಿಂದ ಮೇಲ್ಜಾತಿಗಳು ಇವತ್ತಿಗೂ ದಲಿತರಲ್ಲಿ ಭಯ ಹುಟ್ಟಿಸಿ ಅವರನ್ನು ತಮ್ಮ ಶಾಶ್ವತ ಧಾಸ್ಯದಲ್ಲಿಡಲು ಹವಣಿಸುತ್ತಿವೆ. ಈ ಕಾರಣವಾಗಿಯೇ ಇವತ್ತು ದಲಿತರ ಮೇಲೆ ಹೊಸ ರೀತಿಯ ಹಲ್ಲೆಗಳು ನಡೆಯುತ್ತಿವೆ.

ಯಾವ ಹಲ್ಲೆಗಳನ್ನು ಎದುರಿಸುವ ಸಲುವಾಗಿ ದಲಿತರು ಎಚ್ಚೆತ್ತು ತಮ್ಮ ಹಕ್ಕುಗಳಿಗೆ ಹೋರಾಟವನ್ನು ಪ್ರಾರಂಭಿಸಿದರೋ, ಆ ಹೋರಾಟವೇ ಅವರ ಮೇಲೆ ಮತ್ತಷ್ಟು ಹಲ್ಲೆಗಳಿಗೆ ಕಾರಣವಾಗುತ್ತಿರುವುದು ಭಾರತೀಯ ಸಮಾಜ ತಲೆತಗ್ಗಿಸಬೇಕಾದ ವಿಚಾರವಾಗಿದೆ. ಆದರೆ ಸಾವಿರಾರು ವರ್ಷಗಳ ತನ್ನ ಅನಾಗರೀಕ ವರ್ತನೆಗೆ ಯಾವ ಪಶ್ಚತ್ತಾಪವನ್ನು ಪ್ರಕಟಿಸದ ಭಾರತೀಯ ಸಮಾಜ ಈ ತೆರವಾದ ಹಲ್ಲೆಗಳಿಗೆ ನಾಚಿಕೊಳ್ಳುವ ದೊಡ್ಡತನ ತೋರಿಸುತ್ತದೆಯೆಂದು ನನಗೆ ನಂಬಿಕೆಯಿಲ್ಲ.

ಕು. ಸ. ಮಧುಸೂದನ್
ರಂಗೇನಹಳ್ಳಿ

ಪತ್ರಾಗಾರ



ಕವಿಗೆ ಕೃತಜ್ಞತೆ

ಸಂಪಾದಕರಿಗೆ,

'ಏಪ್ರಿಲ್' ಸಂಚಿಕೆಯಲ್ಲಿನ ಶ್ರೀ ಕೃಷ್ಣಮೂರ್ತಿ ಬಿಳಿಗೆರೆ ಅವರ ಕೃಷಿ ಕವನಗಳು ನಿಜಕ್ಕೂ ಮನಸ್ಸಿಗೆ ಮುದ ನೀಡಿದವು. ನಾನು ಮತ್ತು ನನ್ನ ಮಗಳು ಎರಡೆರಡು ಬಾರಿ ಓದಿ ಆನಂದಿಸಿದೆವು.

ನಾವು ಇಂದು ತೋಟಗಳ ಸಾಲಿನಲ್ಲಿ ಬದುಕುವುದಕ್ಕೆ ಪ್ರತಿಯಾಗಿ ಗೂಟಗಳ ಸಾಲಿನಲ್ಲಿ ಬದುಕುತ್ತಿದ್ದೇವೆ. ನಮ್ಮ ತಲಪರಿಗೆಗಳೆಲ್ಲ ಬತ್ತಿ ಹೋಗಿವೆ. ಮಗ್ಗಲು ಸೊಪ್ಪನ್ನು ಕುರಿತು ಹಿಂದೆ ನಾನು ಪ್ರಬಂದವೊಂದನ್ನು ಬರೆದಿದ್ದೆ. ಅದನ್ನು ಪ್ರಕಟಿಸಿಲ್ಲ. ಅದು ಬೇರೆ ಮಾತು.

ಸರಿಸುಮಾರು 40-50ವರ್ಷಗಳ ಹಿಂದಕ್ಕೆ ಹೋಗಿ ನಮ್ಮ ಬಾಲ್ಯವನ್ನೆಲ್ಲ ಮತ್ತೊಮ್ಮೆ ನೆನಪುಮಾಡಿಕೊಳ್ಳಲು ಅನುವು ಮಾಡಿಕೊಟ್ಟ ಕವಿಗೆ ನನ್ನ ಕೃತಜ್ಞತೆ ಸಲ್ಲಿಸ ಬಯಸುತ್ತೇನೆ.

ನಿಜ, ಇಲ್ಲಿ 'ಕವಿತೆ'ಗಳಿಗಿರಬೇಕಾದ 'ತೂಕ' ಇರಲಿಕ್ಕಿಲ್ಲ!. ಅದು ಬೇಡ. ನಾಲ್ಕು ದಿನ ನನ್ನ ದುಗುಡಗಳನ್ನೆಲ್ಲ ಸ್ವಲ್ಪ ಮಟ್ಟಿಗಾದರೂ ಕಮ್ಮಿ ಮಾಡಿದ ಕವಿತೆಗಳಿಗೆ ನಾನು ತಲೆಬಾಗುತ್ತೇನೆ. ಮೆಲುಕು ಹಾಕಿಕೊಳ್ಳುವ ಕವನಗಳು ಇವು.

ಟಿ.ಆರ್.ಚಂದ್ರಶೇಖರ
ವಿದ್ಯಾರಣ್ಯ

ಚಂದಾ ವಿವರ

ಬಿಡಿ ಪ್ರತಿ ರೂ.೨೦/-

೧ ವರ್ಷಕ್ಕೆ ೩ ವರ್ಷಕ್ಕೆ ೫ ವರ್ಷಕ್ಕೆ

ವ್ಯಕ್ತಿಗಳು, ನೌಕರರು ಮತ್ತು ವೃತ್ತಿಪರರಿಗೆ
ರೂ.೨೦೦/- ರೂ.೫೦೦/- ರೂ.೮೦೦/-

ಸಂಘ-ಸಂಸ್ಥೆಗಳು/ಉದ್ಯಮಿಗಳಿಗೆ
ರೂ.೨೫೦/- ರೂ.೬೦೦/- ರೂ.೧೦೦೦

ವಿಶೇಷ ಹಿತೈಷಿ ಚಂದದಾರರಿಗೆ
ರೂ.೫೦೦/- ರೂ.೧೫೦೦/- ರೂ.೨೫೦೦/-

ಆಜೀವ ಚಂದಾ ರೂ.೫,000/-
ಪೋಷಕ ಚಂದಾ ರೂ.೧೦,000/-

ವಿ.ಸೂ: ಬೆಂಗಳೂರು ನಗರ ವ್ಯಾಪ್ತಿಯ ಹೊರಗಿನ ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ.
ಎಂ.ಓ./ಡಿ.ಡಿ. ಮಾತ್ರ ಕಳುಹಿಸಬೇಕು.

ವೈಚಾರಿಕತೆ ಕಳೆದುಕೊಂಡ ಪ್ರಗತಿಪರತೆ: ತಪ್ಪು ಆರೋಪ

ಪ್ರತಿಕ್ರಿಯೆ

ಅಯೋಧ್ಯೆ ಗಲಭೆಗಳ ಸಂದರ್ಭದಲ್ಲಿ ಪುತಿನ ಅವರಂತಹ ಸಂಪ್ರದಾಯಸ್ಥರೂ ಹಿಂದುತ್ವವಾದಿಗಳ ವಿರುದ್ಧ ದನಿ ಎತ್ತಿರುವುದನ್ನು ಕಡೆಗಣಿಸಲಾಗುವುದಿಲ್ಲ. ಪಾಪುಲರ್ ಫ್ರಂಟ್ ಆಫ್ ಇಂಡಿಯಾ ಮತ್ತಿತರ ಸಂಘಟನೆಗಳ ಬಗ್ಗೆ ಅನೇಕ ಭಿನ್ನಾಭಿಪ್ರಾಯಗಳಿರಬಹುದು. ಆದರೆ ಮುಸ್ಲಿಂ ಸಮುದಾಯದ ಯುವಕರು ಈ ರೀತಿ ಸಾರ್ವಜನಿಕವಾಗಿ ತಮ್ಮ ಪ್ರಜಾತಾಂತ್ರಿಕ ಹಕ್ಕುಗಳಿಗಾಗಿ, ಸಾಮಾಜಿಕ ಸಾಮರಸ್ಯಕ್ಕಾಗಿ ಹೋರಾಡುತ್ತಿರುವುದು ಸ್ವಾಗತಾರ್ಹವಲ್ಲವೇ? ಅವರ ಧಾರ್ಮಿಕ ಸಂಕೇತಗಳಿಗಿಂತಲೂ, ಸಾಮುದಾಯಿಕ ಚಿಂತನೆಗಳು ಮುಖ್ಯವಾಗುವುದಲ್ಲವೇ?

ಸಂಪಾದಕರಿಗೆ,

'ಸಂವಾದ' ಏಪ್ರಿಲ್ ೦೯ರ ಸಂಚಿಕೆಯಲ್ಲಿ ಪ್ರಕಟಗೊಂಡ ನನ್ನ ಕರ್ನಾಟಕದ ತಾಲಿಬಾನ್ ಪತ್ರಕ್ಕೆ ಸನ್ಮಾನ್ಯ ಡಿ.ಎಸ್. ನಾಗಭೂಷಣ್ ಅವರು ಗಂಭೀರವಾಗಿ ಪ್ರತಿಕ್ರಿಯೆ ವ್ಯಕ್ತಪಡಿಸಿದ್ದು, ಕೆಲವು ಗಹನವಾದ ಪ್ರಶ್ನೆಗಳನ್ನೂ ಎತ್ತಿದ್ದಾರೆ. ಓರ್ವ ಹಿರಿಯ ಲೇಖಕರಾದ ಶ್ರೀಯುತರ ಅಭಿಪ್ರಾಯಗಳನ್ನು ಮುಕ್ತ ಮನಸ್ಸಿನಿಂದ ಸ್ವೀಕರಿಸುತ್ತೇನೆ. ಭಿನ್ನಾಭಿಪ್ರಾಯಗಳಿಂದಲೇ ಚಿಂತನ-ಮಂಥನ ಪ್ರಕ್ರಿಯೆ ಚುರುಕಾಗುತ್ತದೆ ಎಂಬ ನಂಬಿಕೆಯಿಂದ ಶ್ರೀಯುತರು ಎತ್ತಿರುವ ಪ್ರಶ್ನೆಗಳಿಗೆ ಇಲ್ಲಿ ಯಾವುದೇ ಅಹಮಿಕೆ ಇಲ್ಲ ಎಂದು ಸ್ಪಷ್ಟ ಪಡಿಸುತ್ತಲೇ, ನನ್ನ ವ್ಯಾಖ್ಯಾನವನ್ನು ನೀಡಲು ಬಯಸುತ್ತೇನೆ.

ಮೊದಲನೆಯದಾಗಿ ನನ್ನ ಬರಹ ಲೇಖನವಲ್ಲ. ಪ್ರತಿಕ್ರಿಯೆ ವ್ಯಕ್ತಪಡಿಸುವ ಪತ್ರವಷ್ಟೆ. ಈ ಪತ್ರ ಮುಖೇನ ನಾನು ಆಡಳಿತಾರೂಢ ಪಕ್ಷದ ಸಾಂಸ್ಕೃತಿಕ ಸಂಘಟನೆಗಳ ಫ್ಯಾಸಿಸ್ಟ್ ಪ್ರವೃತ್ತಿಯನ್ನು ಖಂಡಿಸಿದ್ದೇನೆಯೇ ಹೊರತು ಇಡೀ ವಿಚಾರವನ್ನು ಕುರಿತ ವಿಶ್ಲೇಷಣೆ ಮಾಡಿಲ್ಲ. ಹಾಗಾಗಿ ನಡೆದ ಘಟನೆಯನ್ನು ಖಂಡಿಸುವಾಗ ಅದು ರಾಜಕೀಯ ಉದ್ದೇಶವನ್ನು ಹೊರ ಸೂಸಿರಲೂಬಹುದು. ಪಕ್ಷ ರಾಜಕೀಯದಲ್ಲಿ ತೊಡಗಿಸಿಕೊಳ್ಳದಿದ್ದರೂ, ಸೈದ್ಧಾಂತಿಕವಾಗಿ ರಾಜಕೀಯ ಅಭಿಪ್ರಾಯಗಳನ್ನು ಮಂಡಿಸುವಾಗಲೂ ಇದು ಸಂಭವ ಸಾಧ್ಯ. ನನ್ನ ಪ್ರಸ್ತುತ ಹೇಳಿಕೆ ಸಾಂದರ್ಭಿಕ ಪ್ರತಿಕ್ರಿಯೆಯಾದ್ದರಿಂದ "ಪಕ್ಕಾ ರಾಜಕೀಯ ಹೇಳಿಕೆ" ಯಾಗಿದ್ದಲ್ಲಿ ವಿಷಾದಿಸುವ ಅಗತ್ಯವಿಲ್ಲ.

ಆದರೆ ಸಂಘಪರಿವಾರದ ಕೃತ್ಯವನ್ನು ಖಂಡಿಸುವ ಭರದಲ್ಲಿ ಬುರ್ಖಾ ಧರಿಸುವುದನ್ನು ಸಮರ್ಥಿಸಲಾಗಿದೆ ಎಂಬ ಆರೋಪ ನಿರಾಧಾರ. ಬುರ್ಖಾ ತೊಡುವುದನ್ನು ಸಮರ್ಥಿಸುವಂತೆ ನಾನು ಎಲ್ಲಿಯೂ ಪ್ರಸ್ತಾಪಿಸಿಲ್ಲ. ಫತ್ವಾ ಎನ್ನುವ ಪದವನ್ನು ಬಳಸಿರುವುದು, ಸಂಘಪರಿವಾರದ ಆದೇಶವನ್ನು ಕುರಿತು ಮಾತ್ರ. ಪಂಜ ಗ್ರಾಮದ ಕಾಲೇಜಿನಲ್ಲಿ ಈ ರೀತಿಯ ಆದೇಶ ಹೊರಡಿಸಿರುವುದೂ ನಿಜವೇ ಅಲ್ಲವೇ. ಹಾಗೆಂದ ಮಾತ್ರಕ್ಕೆ ಬುರ್ಖಾ ತೊಡುವುದನ್ನೂ ಫತ್ವಾ ಜಾರಿಗೊಳಿಸಲಾಗಿದೆ ಎಂದು ಹೇಗೆ ಹೇಳಲಾಗುತ್ತದೆ?

ಇತ್ತೀಚಿನ ದಿನಗಳಲ್ಲಿ ಗ್ರಾಮೀಣ ಮತ್ತು ಪಟ್ಟಣ ಪ್ರದೇಶಗಳ ಮುಸ್ಲಿಂ ಸಮುದಾಯದಲ್ಲಿ ಮಹಿಳೆಯರು ಬುರ್ಖಾ ತೊಡುವುದು, ಪುರುಷರು ಟೋಪಿ ಧರಿಸಿ, ಗಡ್ಡ ಬಿಡುವುದು ಸಾಮಾನ್ಯವಾಗಿದ್ದರೆ, ಅದನ್ನು ಫತ್ವಾ ಮೂಲಕವೇ ಜಾರಿಗೊಳಿಸಲಾಗಿದೆ ಎಂದೇಕೆ ಭಾವಿಸಬೇಕು? ಹಾಗೊಂದು ವೇಳೆ ಜಾರಿಗೊಳಿಸಲಾಗಿದ್ದರೂ ಅದರ ಹಿಂದಿರುವ ವಾಸ್ತವಿಕ ಕಾರಣಗಳನ್ನೂ ಗ್ರಹಿಸಬೇಕಲ್ಲವೇ? ಪ್ರಗತಿಪರರ ದೃಷ್ಟಿಯಿಂದ ಇದು ಸ್ವಾಗತಾರ್ಹ ಬೆಳವಣಿಗೆಯೇ ಅಲ್ಲವೇ ಎಂಬ ಪ್ರಶ್ನೆಗಿಂತಲೂ ಒಂದು ಕುಟುಂಬದವರಂತೆ ಬದುಕಿ ಬಾಳುತ್ತಿದ್ದ ಜನಸಮುದಾಯಗಳ ನಡುವೆ ಭಿನ್ನತೆಯನ್ನು ಸೃಷ್ಟಿಸುವ ಧಾರ್ಮಿಕ ಸಂಕೇತಗಳು ಏಕಾಏಕಿ ಹೊರಹೊಮ್ಮಿ ಪ್ರಾಧಾನ್ಯತೆ ಪಡೆಯುತ್ತಿರುವುದಕ್ಕೆ ಕಾರಣವೇನು ಎಂದು ಯೋಚಿಸುವುದು ತರವಲ್ಲವೇ?

ಪ್ರಗತಿಪರರನ್ನು ಪ್ರತ್ಯೇಕವಾಗಿ. ಗುರುತಿಸುವ ಶ್ರೀಯುತರು "ಪ್ರಗತಿಪರರು ತಮ್ಮ ಪ್ರಗತಿಪರತೆಗೆ ಆಧಾರವಾದ ವೈಚಾರಿಕತೆಗೆ ತಿಲಾಂಜಲಿ ನೀಡುತ್ತಾ ರಾಜಕೀಯ ಕಾರ್ಯಕರ್ತರಾಗುತ್ತಿದ್ದಾರೆ" ಎಂದು ಆರೋಪಿಸುತ್ತಾರೆ. ಇದು ಸೀಮಿತ ದೃಷ್ಟಿಕೋನವೆನಿಸುತ್ತದೆ. ಬುರ್ಖಾ ಧರಿಸಬೇಕೆಂದು ಒತ್ತಾಯಿಸುವ ಸಾಂಪ್ರದಾಯಿಕತೆಯನ್ನು ಮತ್ತು ಅದರ ಹಿಂದಿನ ಶೋಷಣಾ ವ್ಯವಸ್ಥೆಯನ್ನು ಪ್ರಗತಿಪರರು ಎಲ್ಲಿಯೂ ಯಾವ ಸಂದರ್ಭದಲ್ಲೂ ಸಮರ್ಥಿಸಿಲ್ಲ. ಮುಸ್ಲಿಂ ಮಹಿಳೆಯರು ಮತ್ತು ಪುರುಷರು ಸ್ವಇಚ್ಛೆಯಿಂದ ತೊಡುವುದಾದಲ್ಲಿ ಅದನ್ನು ಆಕ್ಷೇಪಿಸುವುದು ಸರಿಯಲ್ಲ. ಒಂದು ವೇಳೆ ಧಾರ್ಮಿಕ ಮೂಲಭೂತವಾದಿಗಳ ಒತ್ತಾಯಕ್ಕೆ ಮಣಿದು ಧರಿಸುವುದಾದಲ್ಲಿ ಅದನ್ನು ವಿರೋಧಿಸಲೇಬೇಕಾಗುತ್ತದೆ. ಆದರೆ ಬುರ್ಖಾ ತೊಡುವುದನ್ನೇ, ಟೋಪಿ ತೊಟ್ಟು ಗಡ್ಡ ಬಿಡುವುದನ್ನೇ ಮೂಲಭೂತವಾದಿಗಳ ಲಕ್ಷಣ ಎಂದೆನಿಸುವುದು ತರವಲ್ಲ.

ಮುಖ ಲಕ್ಷಣಗಳಿಂದ, ವಸ್ತ್ರ ವಿನ್ಯಾಸಗಳಿಂದ, ಸಂಕೇತಗಳ ಮೂಲಕ ಮಾನವನ ಅಥವಾ ಸಮುದಾಯದ ಗುಣಲಕ್ಷಣಗಳನ್ನು ಗ್ರಹಿಸುವುದು ಬ್ರಾಹ್ಮಣ್ಯದ ಪರಂಪರೆಯಾಗುತ್ತದೆ. ಟೋಪಿ ತೊಟ್ಟು ಗಡ್ಡ ಬಿಟ್ಟ ಮುಸ್ಲಿಂ ಯುವಕರೆಲ್ಲರೂ ಮೂಲ ಭೂತವಾದಿಗಳೆಂದಾಗಲೀ, ಅನ್ಯಧರ್ಮ ದ್ವೇಷಿಗಳೆಂದಾಗಲೀ ಭಾವಿಸಲಾಗುವುದಿಲ್ಲ. ಇಂತಹವರ ಸಂಖ್ಯೆ ಹೆಚ್ಚಾಗುತ್ತಿರುವುದು ಸ್ವಾಗತಾರ್ಹವೇ ಅಲ್ಲವೇ ಎಂಬ ಪ್ರಶ್ನೆಗಿಂತಲೂ ಏಕೆ ಹೆಚ್ಚಾಗುತ್ತಿದೆ ಎಂಬ ಪ್ರಶ್ನೆ ಪ್ರಜ್ಞಾವಂತರನ್ನು ಕಾಡಬೇಕಾಗಿದೆ.

ಮತೀಯ ಮೂಲಭೂತವಾದವನ್ನು ಧಾರ್ಮಿಕ ಸ್ವಾತಂತ್ರ್ಯವೆಂದು ಅರ್ಥೈಸಲಾಗುವುದಿಲ್ಲ. ಆ ರೀತಿ ಯಾರಾದರೂ ಅರ್ಥೈಸಿದ್ದರೆ ಅದು ವೈಯ್ಯಕ್ತಿಕ ಅಭಿಪ್ರಾಯವಿರಬಹುದೇ ಹೊರತು ಇಡೀ ಪ್ರಗತಿಪರ ಸಮುದಾಯಕ್ಕೇ ಆರೋಪಿಸುವುದು ಸಲ್ಲದು. ಆದರೆ ಧಾರ್ಮಿಕ ಆಚರಣೆಗಳನ್ನು, ಸಂಕೇತಗಳನ್ನು, ಸಾಂಪ್ರದಾಯಿಕ ವಿಚಾರಗಳ ಸ್ವೀಕರಿಸುವಿಕೆಯನ್ನೇ ಮೂಲ ಭೂತವಾದವೆಂದು ಅರ್ಥೈಸುವುದು ತಪ್ಪಾಗುತ್ತದೆ.

ಅಯೋಧ್ಯೆ ಗಲಭೆಗಳ ಸಂದರ್ಭದಲ್ಲಿ ಪುತಿನ ಅಂತಹ ಸಂಪ್ರದಾಯಸ್ಥರೂ ಹಿಂದುತ್ವವಾದಿಗಳ ವಿರುದ್ಧ ದನಿ ಎತ್ತಿರುವುದನ್ನು ಕಡೆಗಣಿಸಲಾಗುವುದಿಲ್ಲ. ಪಾಪುಲರ್ ಫ್ರಂಟ್ ಆಫ್ ಇಂಡಿಯಾ ಮತ್ತಿತರ ಸಂಘಟನೆಗಳ ಬಗ್ಗೆ ಅನೇಕ ಭಿನ್ನಾಭಿಪ್ರಾಯಗಳಿರಬಹುದು. ಆದರೆ ಮುಸ್ಲಿಂ ಸಮುದಾಯದ ಯುವಕರು ಈ ರೀತಿ ಸಾರ್ವಜನಿಕವಾಗಿ ತಮ್ಮ ಪ್ರಜಾತಾಂತ್ರಿಕ ಹಕ್ಕುಗಳಿಗಾಗಿ, ಸಾಮಾಜಿಕ ಸಾಮರಸ್ಯಕ್ಕಾಗಿ ಹೋರಾಡುತ್ತಿರುವುದು ಸ್ವಾಗತಾರ್ಹವಲ್ಲವೇ? ಅವರ ಧಾರ್ಮಿಕ ಸಂಕೇತಗಳಿಗಿಂತಲೂ, ಸಾಮುದಾಯಿಕ ಚಿಂತನೆಗಳು ಮುಖ್ಯವಾಗುವುದಲ್ಲವೇ?

ಈಗಾಗಲೇ ಪ್ರಗತಿಪರರಲ್ಲಿನ ಮಡಿವಂತಿಕೆ ಮನೋಭಾವದಿಂದ, ಸೈದ್ಧಾಂತಿಕ ಅಸ್ಪೃಶ್ಯತೆಯಿಂದ ಪುರೋಗಾಮಿ ಚಳುವಳಿ ಸಾಕಷ್ಟು ಹಿನ್ನಡೆ ಅನುಭವಿಸಿದೆ. ಶ್ರೀಯುತ ನಾಗಭೂಷಣರು ಪ್ರಗತಿಪರರನ್ನು ಒಂದು ಚೌಕಟ್ಟಿನಲ್ಲಿ ಬಂಧಿಸಿ ತಲೆಕೆಳಗಾದ ಪ್ರಗತಿಪರತೆ ಎಂದು ದೂಷಿಸಿರುವುದು ಪ್ರಗತಿಪರರಲ್ಲಿನ ಒಂದು ನಿರ್ದಿಷ್ಟ ಗುಂಪಿಗೆ ಸಂಬಂಧಿಸಿದೆ ಎಂದು ಹೇಳಬೇಕಿಲ್ಲ. ಆದರೆ ಹಿಂದೂ ಕೋಮುವಾದಕ್ಕೆ ಪುಷ್ಠಿ ನೀಡುತ್ತಿರುವುದು ಪ್ರಗತಿಪರರಲ್ಲಿನ ಭಿನ್ನಾಭಿಪ್ರಾಯ ಮತ್ತು ಒಡಕುಗಳೇ ವಿನಹ ಕೆಲವು ನಿರ್ದಿಷ್ಟ ಪ್ರತಿಪಾದನೆಗಳಲ್ಲ.

ಯಾವುದೇ ಧಾರ್ಮಿಕ ಸಂಘಟನೆಗಳ ಸಾಂಪ್ರದಾಯಿಕತೆಯನ್ನು, ಫ್ಯಾಸಿಸ್ಟ್ ಪ್ರವೃತ್ತಿಯನ್ನು ಖಂಡಿಸುವುದು ಪ್ರಗತಿಪರರ ಲಕ್ಷಣವಾಗಿದ್ದು, ಕೆಲವು ಅಪಭ್ರಂಶಗಳನ್ನು ಹೊರತುಪಡಿಸಿದರೆ ಇದು ವ್ಯಕ್ತವಾಗಿಯೂ ಇದೆ. ಅಪಭ್ರಂಶಗಳೇ ಪ್ರಧಾನವಾಗಬೇಕಿಲ್ಲ. ಎಲ್ಲ ಪ್ರಗತಿಪರರ ಆಶಯ ಪ್ರಜಾತಂತ್ರದ ರಕ್ಷಣೆಯೇ ಆಗಿರುವುದರಿಂದ ಭಿನ್ನಾಭಿಪ್ರಾಯಗಳ ನಡುವೆಯೇ ಮುನ್ನಡೆಯೋಣ. ಭಾವನೆಗಳು ವ್ಯಕ್ತಿಗತವಾಗಿದ್ದರೂ, ಚಿಂತನೆಗಳು ಸಾಂಘಿಕವಾಗಿದ್ದಾಗ, ಪ್ರಜಾತಂತ್ರಕ್ಕೆ ಹೆಚ್ಚು ಒಳಿತಾಗುತ್ತದೆ.

ಡಿ.ಎಸ್. ನಾಗಭೂಷಣ್ ಓರ್ವ ಹಿರಿಯ ಲೇಖಕರು. ಅವರ ಲೇಖನ ಮತ್ತು ಪ್ರತಿಪಾದನೆಗಳನ್ನು ಮೆಚ್ಚುವವರಲ್ಲಿ ನಾನೂ ಒಬ್ಬ. ಅವರ ಅಭಿಪ್ರಾಯಗಳನ್ನು ಸ್ವೀಕರಿಸುತ್ತಲೇ ನನ್ನ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಿದ್ದೇನೆ. ವಾದ ಸರಣಿ ಮುಂದುವರೆಸುವ ಇಚ್ಛೆಯಂತೂ ನನಗಿಲ್ಲ.

ನಾ ದಿವಾಕರ, ಮೈಸೂರು

ಸಂಪಾದಕೀಯ

ಅಂತರಂಗ

ಬದುಕನ್ನು ಕಟ್ಟಿಕೊಡುವ ಜವಾಬ್ದಾರಿ

ಹದಿನೈದನೆ ಲೋಕಸಭಾ ಚುನಾವಣೆ ಮುಗಿದಿದೆ. ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರ ಅಧಿಕಾರದ ಗದ್ದುಗೆ ಏರಿ ಕಾರ್ಯಾರಂಭವನ್ನು ಮಾಡಿದೆ. ಎಲ್ಲಿ ಎನ್‌ಡಿಎ ಗೆದ್ದು ಅಧಿಕಾರ ಹಿಡಿದು ಬಿಡುತ್ತದೋ ಎಂದು ಆತಂಕಗೊಂಡಿದ್ದ ಅಹಿಂದ ಸಮುದಾಯ ಮತ್ತು ಇತರೆ ಪ್ರಗತಿಪರರೆಲ್ಲ ದೊಡ್ಡ ನಿಟ್ಟುಸಿರು ಬಿಟ್ಟು ನಿರುಮ್ಮಳವಾಗಿದ್ದಾರೆ.

ಈ ನಿರುಮ್ಮಳತೆಗೆ ಕಾರಣ ಇಲ್ಲದಿಲ್ಲ. ಚುನಾವಣಾ ಪೂರ್ವದಲ್ಲಿ ಎನ್‌ಡಿಎ ಅಂಗಪಕ್ಷಗಳು ಅದರಲ್ಲೂ ವಿಶೇಷವಾಗಿ ಬಿಜೆಪಿ ನಡೆದುಕೊಂಡ ರೀತಿ ಹಾಗಿತ್ತು. ಕಟ್ಟಾ ಹಿಂದುತ್ವವನ್ನು ಪ್ರತಿಪಾದಿಸುವ ಲಾಲ್ ಕೃಷ್ಣ ಅಡ್ವಾಣಿ ಒಂದು ಕಡೆ ಆರ್ಭಟಿಸಿದರೆ, ಮತ್ತೊಂದು ಕಡೆ ಗುಜರಾತ್ ನರಮೇಧದ ರೂವಾರಿ ನರೇಂದ್ರ ಮೋದಿ ಪ್ರಗತಿಪರರು ಮತ್ತು ಅಲ್ಪಸಂಖ್ಯಾತರ ವಿರುದ್ಧ ಘರ್ಜಿಸುತ್ತಿದ್ದರು. ಇದೇ ಸಂತಾನದ ಹೊಸ ಕುಡಿ ವರುಣ್ ಗಾಂಧಿಯಂತೂ ಈ ಇಬ್ಬರನ್ನೂ ಮೀರಿ ಹಿಂದುತ್ವ ಪ್ರತಿಪಾದಿಸದವರನ್ನೆಲ್ಲ ತಲೆ ಕತ್ತರಿಸುವ ಕಾರ್ಯಕ್ರಮ ಪ್ರಕಟಿಸುತ್ತಿದ್ದರು.

ಇದಕ್ಕೆ ಪರ್ಯಾಯವಾಗಿ ಸೌಮ್ಯ ಸ್ವಭಾವದ ಮನಮೋಹನ್ ಸಿಂಗ್, ಮನೆ ನಿಭಾಯಿಸುವ ಘಾಟಿ ಗೃಹಿಣಿಯಂತಿರುವ ಸೋನಿಯಾ ಗಾಂಧಿ, ವಿಧೇಯ ಮಕ್ಕಳಂತೆ ನಡೆದುಕೊಳ್ಳುವ ರಾಹುಲ್ ಗಾಂಧಿ ಹಾಗೂ ಪ್ರಿಯಾಂಕ ಗಾಂಧಿ–ಇವರೆಲ್ಲ ಎಲ್ಲ ಜನರನ್ನು ಪ್ರೀತಿಸುವ ಸಜ್ಜನ ಭಾರತೀಯರಂತೆ ತಮ್ಮನ್ನು ತಾವು ಬಿಂಬಿಸಿಕೊಳ್ಳ ತೊಡಗಿದರು. ಎನ್‌ಡಿಎ ಕೋಮುವಾದಿ ಮಧ್ಯಮ ವರ್ಗ ಹಾಗೂ ಮೇಲ್ವರ್ಗದ ವಶೀಕರಣಕ್ಕೆ ಪ್ರಯತ್ನಿಸಿದರೆ, ಯುಪಿಎ ಹಿಂದುಳಿದವರು, ದಲಿತರು, ಅಲ್ಪಸಂಖ್ಯಾತರು ಹಾಗೂ ಇತರೆ ಸಾಮಾನ್ಯ ಜನರ ಮನ ಗೆಲ್ಲಲು ಪ್ರಯತ್ನಿಸಿತು.

ವಿಚಿತ್ರ ಎಂದರೆ ಚುನಾವಣೆಗೆ ಮುನ್ನ ಎನ್‌ಡಿಎ ತನ್ನನ್ನು ಬಿಂಬಿಸಿಕೊಂಡ ಪರಿನೋಡಿದರೆ ಯಾರಿಗೂ ಯುಪಿಎ ಗೆಲ್ಲುವ ಭರವಸೆಯೇ ಇರಲಿಲ್ಲ. ಮಾಧ್ಯಮಗಳ ಸಮೀಕ್ಷೆಗಳು ಕೂಡ ಸರಿಯಾದ ಚಿತ್ರ ಕೊಡುವಲ್ಲಿ ವಿಫಲವಾಗಿದ್ದವು. ಒಂದೆರಡು ಮಾಧ್ಯಮಗಳು ಮಾತ್ರ ಯುಪಿಎ, ಎನ್‌ಡಿಎಗಿಂತ ಕೆಲವು ಸ್ಥಾನಗಳನ್ನು ಹೆಚ್ಚಿಗೆ ಪಡೆಯಬಹುದೆಂದು ಊಹಿಸಿದ್ದವು. ಅದರೆ ಫಲಿತಾಂಶ ಮಾತ್ರ ಎಲ್ಲರನ್ನು ಚಕಿತಗೊಳಿಸಿತು. ಆಶ್ಚರ್ಯವಾಗಿದ್ದು ಯುಪಿಎ ಗಳಿಸಿದ ಅಧಿಕ ಸ್ಥಾನಗಳಿಗಾಗಿ ಅಲ್ಲ. ಬದಲಾಗಿ ತೃತೀಯ ರಂಗದ ಹಿರಿಯಣ್ಣನಂತಿದ್ದ ಎಡಪಕ್ಷಗಳ ಕುಸಿತಕ್ಕೆ!

2004ರ ಚುನಾವಣೆಯಲ್ಲಿ ಉತ್ತಮ ಸಾಧನೆ ಮಾಡಿ ಕಾಂಗ್ರೆಸ್ ಬಿಜೆಪಿಗೆ ಪರ್ಯಾಯ ಒದಗಿಸುವ ಭರವಸೆ ನೀಡಿದ್ದ ಎಡ ಪಕ್ಷಗಳ ಸೋಲು ನಿಜಕ್ಕೂ ಆಘಾತಕಾರಿಯಾದುದು. ಕಳೆದ ಚುನಾವಣೆಯಲ್ಲಿನ ಎನ್‌ಡಿಎ ಘೋಷಣೆಗಳಾದ 'ಭಾರತ ಪ್ರಕಾಶಿಸುತ್ತಿದೆ' ಮತ್ತು 'ಸುಖಾನುಭವ'ಗಳು ಮುಗ್ಗರಿಸಿದ ನಂತರ ದೇಶಕ್ಕೆ ಎರಡು ಮಹತ್ವದ ಸಂದೇಶಗಳನ್ನು ಮತದಾರರು ನೀಡಿದ್ದರು. ಕೋಮುವಾದಿಗಳಿಗೆ ತಮ್ಮ ಅಸಹಕಾರದ ಪ್ರಕಟನೆ; ಮತ್ತು ಎಡ ಪಕ್ಷಗಳನ್ನು ಬೆಂಬಲಿಸುವ ಸೂಚನೆ. ಮೊದಲಿನ ಸಂದೇಶವನ್ನು ಅರ್ಥಮಾಡಿಕೊಳ್ಳುವಲ್ಲಿ ಎನ್‌ಡಿಎ ವಿಫಲವಾದ್ದರಿಂದ ಸೋತು ಸುಣ್ಣವಾಯಿತು. ಎರಡನೇ ಸಂದೇಶವನ್ನು ಪಾಲಿಸಲಾಗದ ಎಡ ಪಕ್ಷಗಳು ಕುಸಿದು ಕಂಗಲಾದವು.

ವಿಚಿತ್ರವೆಂದರೆ, ಈ ಬಾರಿ ಯುಪಿಎ ಉತ್ತಮ ಸಾಧನೆ ಮಾಡುವಲ್ಲಿ ಎಡ ಪಕ್ಷಗಳ ಪಾಲು ತುಸು ಹೆಚ್ಚಾಗಿಯೇ ಇದೆ. ಕಳೆದ ಐದು ವರ್ಷಗಳ ಅಡಳಿತದಲ್ಲಿ ಯುಪಿಎ ಹೆಚ್ಚು ಜನಪರವಾಗಿ ಕೆಲಸ ಮಾಡಲು ಇದೇ ಎಡ ಪಕ್ಷಗಳೇ ಕಾರಣ. ಗ್ರಾಮೀಣ ರೋಜ್‌ಗಾರ್ ಯೋಜನೆ, ಮಾಹಿತಿ ಹಕ್ಕು ಕಾಯಿದೆಯ ಸಮರ್ಪಕ ಜಾರಿ, ಅರಣ್ಯವಾಸಿಗಳ ಕಾಯಿದೆ, ಬ್ಯಾಂಕ್‌ಗಳ ಖಾಸಗೀಕರಣ ತಡೆಯಿಂದಾಗಿ ಆರ್ಥಿಕ ಕುಸಿತದ ದುಷ್ಪರಿಣಾಮಗಳಿಂದ ಭಾರತವನ್ನು ಬಚಾವ್ ಮಾಡಿದ್ದು, ಅಸಂಘಟಿತ ಕಾರ್ಮಿಕರ ರಕ್ಷಣಾ ಕಾಯ್ದೆ– ಇವೆಲ್ಲ ಎಡ ಪಕ್ಷಗಳ ಪ್ರಯತ್ನದಿಂದಾಗಿಯೇ ಆಗಿದ್ದು. ಈ ಎಲ್ಲ ಸಾಧನೆಗಳು ಕಾಂಗ್ರೆಸ್ ಮುಡಿಗೇರಿದ್ದರಿಂದ ಅದು ಜನಮತ ಗಳಿಸುವಲ್ಲಿ ಒಂದು ಹೆಜ್ಜೆ ಮುಂದೆ ಹೋಯಿತು.

ಎಡಪಕ್ಷಗಳು ಮಾಡಿದ ಇನ್ನೊಂದು ಮಹತ್ವದ ಕೆಲಸವೆಂದರೆ ತೃತೀಯ ರಂಗದ ರಚನೆ. ತೃತೀಯ ರಂಗದ ರಚನೆ, ಎನ್‌ಡಿಎ ತನ್ನ ಪ್ರಾಬಲ್ಯವನ್ನು ಹೆಚ್ಚಿಸಿಕೊಳ್ಳದಂತೆ ದೊಡ್ಡ ಆಘಾತವನ್ನೇ ನೀಡಿತು. ಎನ್‌ಡಿಎ ಪಾಲಾಗಲಿದ್ದ ಬಿಜು ಜನತಾದಳ, ಅಣ್ಣಾ ಡಿಎಂಕೆ, ತೆಲುಗು ದೇಶಂ ಮುಂತಾದ ಪಕ್ಷಗಳನ್ನು ತಡೆದದ್ದೇ ಎಡ ಪಕ್ಷಗಳು. ಯಾವ ನಿಲುವನ್ನೂ ಪ್ರಕಟಿಸದೆ ಲಾಭ ಬಂದತ್ತ ನೆಗೆಯಲು ಸಿದ್ಧವಾಗಿದ್ದ ಈ ಪಕ್ಷಗಳನ್ನು ತೃತೀಯ ರಂಗದ ಹೆಸರಿನಲ್ಲಿ ಎಡ ಪಕ್ಷಗಳು ತಮ್ಮತ್ತ ಸೆಳೆದುಕೊಳ್ಳದಿದ್ದರೆ ಯುಪಿಎಗೆ ನಿಜವಾದ ಸಂಕಟ ಎದುರಾಗುತ್ತಿತ್ತು.

ಇಷ್ಟೆಲ್ಲ ಸಾಧನೆ, ಮುಂಜಾಗ್ರತೆ ವಹಿಸಿದ ಎಡ ಪಕ್ಷಗಳನ್ನು ಮತದಾರರು ಹಿಮ್ಮೆಟ್ಟಿಸಿರುವುದು ಮಾತ್ರ ಆಶ್ಚರ್ಯದ ಸಂಗತಿ. ಎಡ ಪಕ್ಷಗಳು ನಿರೀಕ್ಷಿತ ಪಲಿತಾಂಶ ಪಡೆಯುವಲ್ಲಿ ವಿಫಲವಾದನಂತರ ಪರಸ್ಪರರ ಮೇಲೆ ಕೆಸರೆರಚಿಕೊಳ್ಳುವ ಕೆಲಸಕ್ಕೆ ಆ ಪಕ್ಷಗಳ ಮುಖಂಡರೇ ಮುಂದಾಗಿರುವುದು ವಿಚಿತ್ರ. ಕಾರಣಗಳೇನೇ ಇದ್ದರೂ ಎಡ ಪಕ್ಷಗಳ ಪ್ರಾಬಲ್ಯ ಕುಸಿದರೆ ಕಾಂಗ್ರೆಸ್, ಬಿಜೆಪಿಗಳು ಹದ್ದು ಮೀರಿ ವರ್ತಿಸುವ ಸಂಭವವೇ ಹೆಚ್ಚು.

ಕಾಂಗ್ರೆಸ್ ಅತಿದೊಡ್ಡ ಪಕ್ಷವಾಗಿ ಅಧಿಕಾರ ಹಿಡಿಯುವ ಕ್ಷಣ ಸಮೀಸುತ್ತಿದ್ದಂತೆ ದೇಶದ ಬಂಡವಾಳಿಗಾರರೆಲ್ಲ ತಾವೇ ಗೆದ್ದಂತೆ ಬೀಗುತ್ತಿದ್ದಾರೆ. ಷೇರು ಸೂಚ್ಯಂಕ ಏರುಗತಿಯಲ್ಲಿದ್ದು ಗೂಳಿಯ ಗುಟುರು ದೇಶದುದ್ದಗಲಕೂ ಕೇಳಿಸ ತೊಡಗಿದೆ. ಕಳೆದ ಸರ್ಕಾರದಲ್ಲಿ ಎಡ ಪಕ್ಷಗಳ ಕಾರಣಕ್ಕೆ ಹಗ್ಗ ಮೂಗುದಾರ ಬಿಗಿದುಕೊಂಡಿದ್ದ ಮನಮೋಹನ್ ಸಿಂಗ್ ಈಗ ಖಾಸಗೀಕರಣ–ಉದಾರೀಕರಣ ಹಾಗೂ ಜಾಗತೀಕರಣದ ಜಾಲ ಹಬ್ಬಿಸಲು ಕಾಲು ಕೆರೆದು ನಿಲ್ಲಬಹುದೆಂಬ ಆತಂಕ ಮೂಡಿದೆ. ಕಾಂಗ್ರೆಸ್ ಸ್ವಲ್ಪ ಎಚ್ಚರ ತಪ್ಪಿದರೂ ದೇಶದ ಬದುಕು ಪ್ರಪಾತಕ್ಕೆ ಬೀಳುವ ಅಪಾಯ ಇದೆ.

ಯುಪಿಎಗೆ ಸರ್ಕಾರ ರಚಿಸಿದ ಹೆಮ್ಮೆಯ ಜತೆಗೆ ಮುರಿದು ಬಿದ್ದಿರುವ ಭಾರತದ ಬದುಕನ್ನು ಕಟ್ಟಿಕೊಡುವ ಮಹತ್ವದ ಜವಾಬ್ದಾರಿ ಕೂಡ ಇದೆ. ದೇಶದ ಸಮಗ್ರತೆ ಹಾಗೂ ಆಂತರಿಕ ಭದ್ರತೆ ತೀವ್ರ ಅಪಾಯದಲ್ಲಿದೆ. ನೆರೆ ಹೊರೆಯ ದೇಶಗಳ ಆಂತರಿಕ ಪರಿಸ್ಥಿತಿ ಯಾವಾಗ ಸ್ಫೋಟಿಸಿದರೂ ಅದಕ್ಕೆ ಭಾರತ ತೆರಬೇಕಾದ ಬೆಲೆ ಅತ್ಯಂತ ದುಬಾರಿಯಾಗಬಹುದೆಂಬ ಆತಂಕ ಹೆಚ್ಚಾಗುತ್ತಿದೆ. ಪಾಕಿಸ್ಥಾನ, ಚೀನಾಗಳಂತೂ ಯಾವಾಗಲೂ ಬೆಂಕಿ ಮುಚ್ಚಿದ ಕೆಂಡದಂತಿವೆ. ಈಚಿನ ನೇಪಾಳದ ಬೆಳವಣಿಗೆ ಕೂಡ ಭಾರತದ ಪಾಲಿಗೆ ಭಯಾನಕವೇ.

ಇಂಥ ಬಿಕ್ಕಟ್ಟು ಮತ್ತು ಆತಂಕದ ಸಂದರ್ಭದಲ್ಲಿ ಯುಪಿಎ ಅಧಿಕಾರ ಹಿಡಿದಿದೆ. ಕೋಮುವಾದ ಹಿಮ್ಮೆಟ್ಟಿಸಿದ ಖುಷಿಯಲ್ಲಿರುವ ಮತದಾರರಿಗೆ ಬದುಕು ಭಾರವಾಗಿಸುವ ಸಂಕಟ ಎದುರಾಗದಂತೆ ನಡೆಯುವ ತುರ್ತು ಈಗ ಯುಪಿಎ ಮೇಲಿದೆ.

○ ಇಂದೂಧರ ಹೊನ್ನಾಪುರ

ಸಂಪಾದಕರೊಡನೆ ಸಂವಾದ

ಯಾರ ಹಂಗಿಗೂ ಒಳಗಾಗದ ಸ್ವಾಭಿಮಾನಿ

ಮಾನ್ಯ ಸಂಪಾದಕರಿಗೆ,

ಕನ್ನಡ ಸಂಸ್ಕೃತಿ ಚಿಂತಕರಾದ ಎಸ್.ಎಸ್. ಹಿರೇಮಠ್‌ರವರ ಕುರಿತ "ಅವರು ತಲ್ಲಣಗಳಲ್ಲೇ ತೀರಿಕೊಂಡರು" (ಏಪ್ರಿಲ್ 2009) 'ಸಂವಾದ' ಆ ಸಂಚಿಕೆಯಲ್ಲಿ ಪ್ರಕಟವಾದ ಲೇಖನ ಓದಿದೆ. ತಮ್ಮ ಅರವತ್ತನೇ ವಯಸ್ಸಿನಲ್ಲಿ ದಿನಾಂಕ -3-09 ರಂದು ನಿಧನರಾದ ಎಸ್. ಎಸ್. ಹಿರೇಮಠ್‌ರವರ ಕುರಿತು ಬರೆದಿರುವ ಈ ಲೇಖನ ಬಹಳ ಪರಿಣಾಮಕಾರಿಯಾಗಿದೆ. ಕೊಟ್ಟೂರಿನಲ್ಲಿ ನಿವೃತ್ತರಾಗಿ, ಕ್ಯಾನ್ಸರ್ ಪೀಡಿತರಾಗಿ ಹರೆಯದ ಮಗ ನಾಪತ್ತೆಯಾಗಿ, ಆರ್ಥಿಕ ಮುಗ್ಗಟ್ಟು, ಕೌಟುಂಬಿಕ ತಲ್ಲಣಗಳಲ್ಲೇ ಕೊನೆಯಾದ ಹಿರೇಮಠರು ನೇರ, ದಿಟ್ಟ ಮತ್ತು ಪ್ರಾಮಾಣಿಕರಾಗಿದ್ದರು.

ಅವರ ಬದ್ಧತೆಯನ್ನೇ ಅಲುಗಾಡಿಸುವ ಅವರ ಅಂತಿಮ ದಿನಗಳು ಯಾತನಾ ಶಿಬಿರಗಳಾಗಿದ್ದವು. ಅವರು ಅಂತಿಮ ದಿನಗಳಲ್ಲಿ ಅನುಭವಿಸಿದ ಎದೆ ನಡುಗಿಸುವ ಯಾತನೆಗಳ ಬಗ್ಗೆ ಓದಿ ಕಣ್ಣುಗಳು ತೇವವಾದವು. ಹಿರೇಮಠರ ಬದುಕು 3 ದಿನಗಳವರೆಗೂ ಮನದಲ್ಲಿ ವಿಷಾದ ಮೂಡಿಸಿತು. ಈ ಲೇಖನದ ಬದುಕು ಕೇವಲ ಹಿರೇಮಠ್‌ರದು ಮಾತ್ರವಲ್ಲ. ಬದಲಾಗಿ ಅವರೊಟ್ಟಿಗೆ ಬಂದ ಸಮಕಾಲೀನ ಎಲ್ಲಾ ಪ್ರಗತಿಪರ ಚಿಂತಕರು, ಹೋರಾಟಗಾರರು, ಮತ್ತು ಸಂಘಟಕರ ಬದುಕು ಕೂಡ ಇದೇ ಆಗಿದೆ.

ಎಸ್. ಎಸ್ ಹಿರೇಮಠರ ರೋಗಗ್ರಾಸ್ಥ ದೇಹದ ಯಾತನೆ ಒಂದು ಕಡೆಯಾದರೆ, ಹಣ ಕಾಸಿನ ಮುಗ್ಗಟ್ಟು ಮತ್ತೊಂದು ಕಡೆ, ಮಗದೊಂದು ಕಡೆ ನಾಪತ್ತೆಯಾದ ಹರೆಯದ ಮಗನ ಚಿಂತೆ ಅವರಿಗೆ ಕಾಡಿತ್ತು. ಇದು ಏಕಕಾಲದಲ್ಲಿ ಹಿರೇಮಠರ ಸ್ಥಿತಿಯೂ ಹೌದು. ಎಲ್ಲ ತತ್ವಬದ್ಧ ಚಿಂತಕರ ಸ್ಥಿತಿಯೂ ಹೌದು. ರಷ್ಯದ ಶ್ರೇಷ್ಠ ಚಿಂತಕ ಕಾರ್ಲ್‌ಮಾರ್ಕ್ಸ್ ಕೂಡ ಅತ್ಯಂತ ಬಡತನದಲ್ಲೇ ಬೆಳೆದವರು. ಕರ್ನಾಟಕದಲ್ಲಿ 70ರ ದಶಕದಲ್ಲಿ ಆರಂಭವಾದ ದಲಿತ, ಬಂಡಾಯ, ಸಮುದಾಯ ಮತ್ತು ಮಹಿಳಾ ಚಳುವಳಿಗಳಲ್ಲಿ ಬೆಳೆದು ಬಂದ ತತ್ವನಿಷ್ಠ ಚಿಂತಕರ ಸ್ಥಿತಿಯೂ ಇದಕ್ಕಿಂತ ಭಿನ್ನವಾಗಿಲ್ಲ.

ಒಂದು ಕಡೆ ಪ್ರಗತಿಪರ ಚಳುವಳಿ, ಹೋರಾಟ, ಸಂಘಟನೆಗಾಗಿ ಮನೆಯ ಮಕ್ಕಳ, ಅವರ ವಿದ್ಯಾಭ್ಯಾಸ, ಎಲ್ಲ ಜವಾಬ್ದಾರಿಗಳ ಜೊತೆ ಕೆಲವರು ಆರ್ಥಿಕ ಜವಾಬ್ದಾರಿಯನ್ನೂ ತಮ್ಮ ಹೆಂಡತಿಗೆ ಹೊರಿಸಿ, ತಿರುಗಾಟ, ಸಭೆ, ಸಮಾರಂಭ ಹೋರಾಟಗಳಲ್ಲೇ ಕಾಲ ಕಳೆಯುವ ಹಲವಾರು ಮಾರ್ಕ್ಸ್‌ವಾದಿ, ಸಮಾಜವಾದಿ, ಪ್ರಗತಿಪರ ಸಂಗಾತಿಗಳು ಇಂತಹದೇ ಸಂಧಿಗ್ಧಗಳಲ್ಲಿ ಸಿಲುಕಿದ್ದಾರೆ. ಈ ಹೋರಾಟಗಳೊಂದಿಗೆ ಗುರುತಿಸಿಕೊಂಡು ದುಡಿಯುತ್ತಿರುವ ಮಹಿಳೆಯರ ತಳಮಳ ಇನ್ನೊಂದು ಬಗೆಯದು. ಮನೆ-ಮಕ್ಕಳು, ದುಡಿಮೆಗಳನ್ನು ಸಮತೋಲನಗೊಳಿಸಲು ಹೆಣಗುತ್ತಿದ್ದಾರೆ. ಮಕ್ಕಳ ತಂದೆಯರಾಗಿ ಮಕ್ಕಳಿಗಾಗಿ ಸಮಯವಿಲ್ಲದ ತಮ್ಮ ಮನೆಯಲ್ಲಿ ತಾವೇ ಅಪರಿಚಿತರಾಗುತ್ತಿರುವ ನೋವು ತಂದೆಯದಾದರೆ, ತಮ್ಮ ಮಕ್ಕಳಿಗೆ ಅವಶ್ಯಕವಾದ ತಾಯಿಯ ಸಾಮಿಪ್ಯ ನೀಡಲಾಗದ ನಮ್ಮಂತಹ ಅಸಹಾಯಕ ತಾಯಂದಿರು ಇನ್ನೊಂದು ಕಡೆ ಇದ್ದಾರೆ. ಒಂದನ್ನು ಪಡೆದುಕೊಳ್ಳಲು ಹೋಗಿ ಇನ್ನೊಂದನ್ನು ಕಳೆದುಕೊಳ್ಳಬೇಕಾಗುವುದು ಸಹಜವಾಗಿದೆ.

ಮುಚ್ಚು ಮರೆಯಿಲ್ಲದ ಮೆದು ಮನಸಿನ ಹಿರೇಮಠರ ಜನ್ಮ ಜಾಲಾಡುವ ನೋವುಗಳು ಮನವನ್ನು ಕಲಕುತ್ತವೆ. ಒಬ್ಬ ಅಸಹಾಯಕ ಅಪ್ಪನಾಗುವ ಅವರ ದಾರುಣ ಸ್ಥಿತಿ ಆತ್ಮ ಹಿಂಡುತ್ತದೆ. ನೊಂದವರಿಗೆ, ಬಡವರಿಗೆ, ವಿದ್ಯಾರ್ಥಿಗಳಿಗೆ ತನು, ಮನ, ಧನ ನೀಡಿದವರಿಗೆ ಆರ್ಥಿಕ ಮುಗ್ಗಟ್ಟು ಪೀಡಿಸಿದ್ದು ಬೇಸರದ ಸಂಗತಿ. ಕೊನೆ ದಿನಗಳಲ್ಲಿ ತನ್ನ ಕುಟುಂಬದವರಿಗೆ ನೋಯಿಸಿದೆನೇನೋ ಎಂಬ 'ಅಪರಾಧಿ ಪ್ರಜ್ಞೆ' ಅವರಿಗೆ ಹಣ್ಣು ಮಾಡಿತ್ತು. ಇಂತಹ ಪ್ರಜ್ಞೆ ಮನೆಯನ್ನು ಅಲಕ್ಷ ಮಾಡಿದ ಲೇಖಕರ, ಚಿಂತಕರ ಮತ್ತು ಹೋರಾಟಗಾರರ ಅನುಭವ ಸತ್ಯವೂ ಆಗಿದೆ. ದೊಡ್ಡ ದೊಡ್ಡ ವಿಚಾರ ಕುರಿತು-ಸಿದ್ಧಾಂತ, ಸಮಾನತೆ, ರಾಷ್ಟ್ರ ಕುರಿತು ಮಾತನಾಡುವ ಕಾಂಮ್ರೇಡುಗಳಿಗೆ ತಾವು ತಮ್ಮ ಕುಟುಂಬವನ್ನು ನಿರ್ಲಕ್ಷಿಸುತ್ತಿರುವುದು ಅರಿವಿಗೆ ಬರುವುದೇ ಇಲ್ಲ. ಅರಿವಿಗೆ ಬಂದಾಗ ಕಾಲ ಮಿಂಚಿರುತ್ತದೆ. ಪರಿತಪಿಸುವ ಅಸಹಾಯಕತೆ ಮಾತ್ರ ಅವರಿಗೆ ಉಳಿದಿರುತ್ತದೆ. ಇದು ಬಹುತೇಕ ಪ್ರಗತಿಪರರ ಸ್ಥಿತಿಯೂ ಆಗಿದೆ.

ಮುಚ್ಚು ಮರೆಯಿಲ್ಲದ ಮೆದು ಮನಸಿನ ಹಿರೇಮಠರ ಜನ್ಮ ಜಾಲಾಡುವ ನೋವುಗಳು ಮನವನ್ನು ಕಲಕುತ್ತವೆ. ಒಬ್ಬ ಅಸಹಾಯಕ ಅಪ್ಪನಾಗುವ ಅವರ ದಾರುಣ ಸ್ಥಿತಿ ಆತ್ಮ ಹಿಂಡುತ್ತದೆ. ನೊಂದವರಿಗೆ, ಬಡವರಿಗೆ, ವಿದ್ಯಾರ್ಥಿಗಳಿಗೆ ತನು, ಮನ, ಧನ ನೀಡಿದವರಿಗೆ ಆರ್ಥಿಕ ಮುಗ್ಗಟ್ಟು ಪೀಡಿಸಿದ್ದು ಬೇಸರದ ಸಂಗತಿ. ಕೊನೆ ದಿನಗಳಲ್ಲಿ ತನ್ನ ಕುಟುಂಬದವರಿಗೆ ನೋಯಿಸಿದೆನೇನೋ ಎಂಬ 'ಅಪರಾಧಿ ಪ್ರಜ್ಞೆ' ಅವರಿಗೆ ಹಣ್ಣು ಮಾಡಿತ್ತು. ಇಂತಹ ಪ್ರಜ್ಞೆ ಮನೆಯನ್ನು ಅಲಕ್ಷ ಮಾಡಿದ ಲೇಖಕರ, ಚಿಂತಕರ ಮತ್ತು ಹೋರಾಟಗಾರರ ಅನುಭವ ಸತ್ಯವೂ ಆಗಿದೆ. ದೊಡ್ಡ ದೊಡ್ಡ ವಿಚಾರ ಕುರಿತು-ಸಿದ್ದಾಂತ, ಸಮಾನತೆ, ರಾಷ್ಟ್ರ ಕುರಿತು ಮಾತನಾಡುವ ಕಾಂಮ್ರೇಡುಗಳಿಗೆ ತಾವು ತಮ್ಮ ಕುಟುಂಬವನ್ನು ನಿರ್ಲಕ್ಷಿಸುತ್ತಿರುವುದು ಅರಿವಿಗೆ ಬರುವುದೇ ಇಲ್ಲ. ಅರಿವಿಗೆ ಬಂದಾಗ ಕಾಲ ಮಿಂಚಿರುತ್ತದೆ.

ಹಿರೇಮಠರ ಸಂಕಷ್ಟದ ಸ್ಥಿತಿಯಲ್ಲಿ ಅವರ ಉನ್ನತ ಅಧಿಕಾರದಲ್ಲಿರುವ ಸ್ನೇಹಿತರಾಗಲಿ, ಶಿಷ್ಯವೃಂದವೇ ಆಗಲಿ ಅವರ ಆರೋಗ್ಯ ಮತ್ತು ಆರ್ಥಿಕ ಸಹಕಾರ ನೀಡಬಹುದಿತ್ತು. ನಾಡಿನ ಲೇಖಕನಿಗೆ ಸರ್ಕಾರದ ಆರ್ಥಿಕ ಸಹಾಯ ಕೊಡಿಸಬಹುದಾಗಿತ್ತು. ಸ್ವಾಭಿಮಾನಿ, ಅಪ್ಪಟ ಹೋರಾಟಗಾರ ಹಿರೇಮಠರು ನಮ್ಮನ್ನಗಲಿದರು. ಕೊನೆಯ ದಿನಗಳಲ್ಲಿ ಅವರು ಅನುಭವಿಸಿದ ಮಾನಸಿಕ ಯಾತನೆ, ಕ್ಷೋಭೆ, ಹತಾಶೆಗಳು ನಮ್ಮನ್ನೂ ಪೀಡಿಸುತ್ತವೆ. ಇತ್ತೀಚೆಗೆ ನಮ್ಮನ್ನಗಲಿದ ಇನ್ನೊಬ್ಬ ಸಂಗಾತಿ ಕಾಂಮ್ರೇಡ್ ಎಂ.ಕೆ. ಭಟ್ಟರು ಸಹ ಇಂತಹದೇ ಹತಾಶೆಗೊಳಗಾಗಿ ಸಾವನ್ನಪ್ಪಿದ್ದರು. ನಮ್ಮೊಳಗಿನ ಒಂದೊಂದೇ ಹೋರಾಟದ ತಂತುಗಳು ಕಳಚಿಕೊಳ್ಳುತ್ತಿವೆ. ಒಬ್ಬೊಬ್ಬರೇ ಖಾಲಿಯಾಗುತ್ತಿದ್ದಾರೆ.

ಅವರಿಗೆ ಯಾರ ಕರುಣೆ, ಹಂಗುಗಳು ಬೇಡ- ಸ್ವಾಭಿಮಾನದ ಬದುಕು ಕೇಳುತ್ತಾರೆ. ಪೆನ್‌ಶನ್ ಫಿಕ್ಸ್ ಆಗದೇ ಕಂಡ ಕಂಡವರಲ್ಲಿ ಹಣಕಾಸಿನ ಸಹಾಯ ಕೇಳುತ್ತಿದ್ದ ಹಿರೇಮಠರ ಅಸಹಾಯಕತೆ ಅವರ ಸ್ನೇಹಿತರಿಗೆ, ಶಿಷ್ಯರಿಗೆ ಯಾಕೆ ಅರ್ಥವಾಗಲಿಲ್ಲ. ಯಾರ ಹಂಗಿಗೂ ಒಳಗಾಗದ ಸ್ವಾಭಿಮಾನಿ ಹಿರೇಮಠರ ಕುರಿತು ಒಂದು ಅಭಿನಂದನ ಗ್ರಂಥವೂ ತರಲಿಲ್ಲ. ಅವರು ಇಲ್ಲದ ಈ ಸಮಯದಲ್ಲಿ ಅವರ ಪೆನ್‌ಶೆನ್ ಸೆಟಲ್ ಮಾಡಿಸಿ, ಮನೆಯವರು ಮಕ್ಕಳಿಗೆ ಸಹಾಯಕ್ಕೆ ನಿಲ್ಲಬೇಕಿದೆ. ದಿಟ್ಟ ಹೋರಾಟಗಾರನ ನೆನಪಿಗೆ ಹನಿ ಕಣ್ಣೀರು ಸುರಿಸಿದರೆ ಸಾಕೆ? ಅವರ ನೆನಪಿಗೊಂದು "ಸ್ಮರಣ ಸಂಚಿಕೆ" ತರುವುದು ಸೂಕ್ತವಲ್ಲವೆ? ಸಂಗಾತಿ ಹಿರೇಮಠರಿಗೆ ನನ್ನ ನಮನಗಳನ್ನು ಈ ಮೂಲಕ ಸಲ್ಲಿಸುವೆ.

ಜೀವ ಜಾಲಾಡಿದ ರಹಮತ್‌ರ ಲೇಖನ ನನ್ನಿಂದ ಈ ಪ್ರತಿಕ್ರಿಯೆ ಬರೆಯುವಂತೆ ಮಾಡಿತು. ನಮ್ಮ ಆತ್ಮಕ್ಕೆ ನಾವೇ ಪ್ರಶ್ನಿಸಿಕೊಳ್ಳುವಂತೆ ಮಾಡಿತು. ಲೇಖಕರಿಗೂ ಮತ್ತು ಇಂತಹ ಲೇಖಗಳನ್ನು ಪ್ರಕಟಿಸುವ ತಮಗೂ ಧನ್ಯವಾದಗಳು.

ಕೆ.ಷರೀಫಾ
ಹರಿಹರ

ಸತ್ಯಕ್ಕೆ ದೂರವಾದ ಕೆಲವು ವಿಷಯಗಳು

ಮಾನ್ಯರೇ,

ವಿನಯ ಪೂರ್ವಕ ನಮಸ್ಕಾರಗಳು

'ಸಂವಾದ' ಏಪ್ರಿಲ್ 2009ರ ಸಂಚಿಕೆಯಲ್ಲಿ ಡಾ.ರಹಮತ್ ತರೀಕೆರೆಯವರು ಶ್ರೀ. ಎಸ್.ಎಸ್.ಹಿರೇಮಠರ ಬಗ್ಗೆ ಬರೆದ ಲೇಖನ "ತಲ್ಲಣಗಳಲ್ಲೇ ತೀರಿಕೊಂಡರು", ಕೆಲವು ವಿಷಯ ಸತ್ಯಕ್ಕೆ ದೂರವಾಗಿವೆ.

ಶ್ರೀ ಎಸ್.ಎಸ್. ಹಿರೇಮಠರು ಸೀನಿಯರ ಪ್ರಕಾರ ಪ್ರಿನ್ಸಿಪಾಲ ಆಗಿರುವರು "ಕೊನೆಯ ದಿನಗಳಲ್ಲಿ ರಾಜಕೀಯ ವಸೂಲಿ ಮಾಡಿದರು", ಎಂದು ಬರೆದಿರುವರು. ಪ್ರಿನ್ಸಿಪಾಲರಾಗಲು ಹಿಂದೆ ತಾತ್ವಿಕವಾಗಿ ವಿರೋಧಿಸಿದ ರಾಜಕಾರಣಿಗಳ ಮೂಲಕವೇ ಒಂದು ಮಾತು ಹೇಳಿಸಿದರೆಂದೂ ಕೇಳಿದೆ" ಎಂದು ಬರೆದಿರುವರು. ಆ ರಾಜಕೀಯ ವ್ಯಕ್ತಿ ಯಾರು? ಪ್ರಿನ್ಸಿಪಾಲ ಎನ್ನುವಂಥದು ಹೇಳಿ ಮಾಡಿಕೊಳ್ಳುವಂಥದಲ್ಲ? ಸಿನಿಯಾರಿಟಿ ರೀತಿ ಪ್ರಕಾರ ಬರುವಂಥದು ಬಂದಿತ್ತು.

ಸಂಗ್ರಾಂ ಅವರ ಬಗ್ಗೆ ಬರೆದಿರುವರು ಅವನು ಆರೋಗ್ಯವಾಗಿದ್ದಾನೆ. ಕನ್ನಡದಲ್ಲಿ M.A. ಮಾಡಿರುವನು B.Sc ಕಂಪ್ಯೂಟರ್ ಸಾಯನ್ಸ್ ಒಂದು ತಿಂಗಳಲ್ಲಿ ಮುಗಿಯುತ್ತದೆ. "ನನ್ನ ಕವನಗಳು" ಒಂದು ಕವನ ಸಂಕಲನವನ್ನು ಹೊರ ತಂದಿರುವನು, "ಕನ್ನಡ ಪುಸ್ತಕ ಪ್ರಾಧಿಕಾರದವರು ಯುವ ಬರಹಗಾರರ ಪ್ರೋತ್ಸಾಹದ ಅಡಿ ಆಯ್ಕೆಯಾದ ಕೃತಿ' ಪ್ರೋತ್ಸಾಹ ಧನ ಕೊಟ್ಟಿರುವರು. ಅನೇಕ ಪತ್ರಿಕೆಗಳಲ್ಲಿ ಅವನ ಕವನ ಪ್ರಕಟವಾಗಿವೆ. ಸಾರ್ವಜನಿಕ ಗ್ರಂಥಾಲಯ ಕರ್ನಾಟಕ ಸರ್ಕಾರ 300 ಪುಸ್ತಕ ಕೊಂಡಿದೆ. ಎಸ್.ಎಸ್.ಹಿರೇಮಠರು ಪ್ರಿನ್ಸಿಪಾಲರು ಆಗಿದ್ದಾಗಲೇ ಅವರ ಕಾಲೇಜಿನಲ್ಲಿ ಕನ್ನಡ ಲಕ್ಚರರ್ Post ತುಂಬಿದರು (ಅಪಾಯಿಂಟ್ ಮಾಡಿಕೊಂಡರು) ಸಂಗ್ರಾಂನಿಗೆ ಕನ್ನಡ ಲಕ್ಚರರ್. Post (Temparury) ವಸೂಲಿ ಹಚ್ಚಿ ಕೊಡಿಸಬಹುದಿತ್ತು. ಕೊಡಿಸಲಿಲ್ಲ! ಮಗ (ಸಂಗ್ರಾಂ) B.SC ಸೇರಿದ.

ಶ್ರೀ ಎಸ್. ಎಸ್. ಹಿರೇಮಠರು ಹಳ್ಳಿಗೆ ತಾಯಿ ಜತೆ ಇರಲು Time Pass ಆಗದ್ದಕ್ಕೆ ಬಂದುಳಿದರು. ತೋಟ ಮಾಡಿಸಬೇಕೆಂದು ಹೊಲದಲ್ಲಿ ಕೆಲಸ ಮಾಡಹತ್ತಿದರು. ಹಿತ್ತಲಲ್ಲಿ (ಬೋರ್ ಹಾಕಿಸಿ) ಬಾಳೆ, ತೆಂಗು, ಹಣ್ಣಿನ ಗಿಡ ಹಚ್ಚಿದರು. ಧಾರವಾಡ ಕೃಷಿ ಮೇಳಕ್ಕೆ ಹೋಗಿ ಬೀಜ ತಂದರು. ಬೀಜ ಬಿತ್ತಿಸಿದರು(ತರಕಾರಿ). ತರಕಾರಿ ತುಂಬ ಚನ್ನಾಗಿ ಬೆಳೆದಿತ್ತು. ತರಕಾರಿ ತಿನ್ನಲಾಗಲಿಲ್ಲ!

ರಿಟೈರ್ ಆದ ಮೇಲೆ ದಿನ ಹೇಗೆ ಕಳೆಯಬೇಕೆಂದು (ಕೆಲಸವಿಲ್ಲದೆ) ಮೊದಲೆ ಚಿಂತಿಸುತ್ತಿದ್ದರು. ಕೆಲವು ತಿಂಗಳು ಓದುವುದು ಬರೆಯುವುದು ಬಿಟ್ಟೇ ಬಿಟ್ಟಿದ್ದರು. ಕೊನೆ ಕೊನೆಗೆ ಬರೆಯ ಹತ್ತಿದರು ಅಕ್ಷರ ದುಂಡಾಗಲಿಲ್ಲ! ಸಹಿನೂ ಬದಲಾಗ ಹತ್ತಿತ್ತು. ಕೊನೆಗೆ ಏನೋ ಹೇಳಬೇಕು ಬರೆಯಬೇಕು ಅಂದರೆ ಬರೆಯಲಾಗಲಿಲ್ಲ! 1/4 ತಿಂಗಳು ಆಸ್ಪತ್ರೆಯಲ್ಲೇ ಕಳೆದರು. ತಾವು ಇಷ್ಟು ಬೇಗ ಸಾಯಬಹುದೆಂಬ ಕಲ್ಪನೆ ಕೂಡ ಇರಲಿಲ್ಲ ಅವರಿಗೂ, ನಮಗೂ..

ಶ್ರೀ ಎಸ್.ಎಸ್. ಹಿರೇಮಠರು ಪ್ರಿನ್ಸಿಪಾಲರಾಗಿ ಕೊಟ್ಟೂರೇಶ್ವರ ಕಾಲೇಜಿನಲ್ಲಿ 40 ವರ್ಷಗಳಲ್ಲಿ ಸಾಧಿಸಲಾಗದ ಕೆಲಸಗಳನ್ನು 4 ವರ್ಷಗಳಲ್ಲಿ ಮಾಡಿದರು. ಕಾಲೇಜ್ ಕಟ್ಟಡ, ಕಾಲೇಜಿನ ಜಾಗದ ರಿಕಾರ್ಡಗಳು ಸರಿ ಇರಲಿಲ್ಲ. ಸುತ್ತ ಮುತ್ತಲಿನ ಜನರ ಜತೆ ಹೊಡದಾಡಿ ರಿಕಾರ್ಡಗಳನ್ನು ಸರಿ ಮಾಡಿದರು. ಅದಕ್ಕೆ ತುಂಬ ಕಷ್ಟ ಪಟ್ಟಿರುವರು, ರಂಗ ಮಂಟಪ, Library, ಲೇಡಿಸ್ ಹಾಸ್ಟೇಲ್, ಅನೇಕ ಕ್ಲಾಸ್ ರೂಮ್‌ಗಳನ್ನು ಕಟ್ಟಿಸಿದರು. ಹಳೆಯ ಕಟ್ಟಡಗಳನ್ನು ದುರಸ್ಥೀಕರಣಗೊಳಿಸಿದರು, B.B.M ಕೋರ್ಸ್ ಶುರು ಮಾಡಿದರು. ಕೈತೋಟ ಮಾಡಿಸಿದರು. (ತಾವೇ ತೋಟದಲ್ಲಿ ಕಳೆ ತೆಗೆಯುತ್ತಿದ್ದರು). ಕಾಲೇಜನಲ್ಲಿ ಶಿಸ್ತನ್ನು ತರಲು ಪ್ರಯತ್ನಿಸಿದರು. ಹಾಗಾಗಿ ಕೆಲವು ಜನರ ವಿರೋಧವನ್ನು ಕಟ್ಟಿಕೊಂಡರು. ಇನ್ನೂ ಅನೇಕ ಕೆಲಸಗಳನ್ನು ಮಾಡಿದರು. ಕಾಲೇಜ್ ಅಧ್ಯಕ್ಷರಾದ ಶ್ರೀ ಅರವಿ ಬಸವನಗೌಡರ(ಕಂಪ್ಲಿ) ಅವರ ಪಾತ್ರವೂ ದೊಡ್ಡದಿದೆ.

ಯೋಗಿತ ಎಸ್. ಹಿರೇಮಠ
ಸಾಣಿಕೊಪ್ಪ

ಹೃದಯ ಸ್ಪರ್ಶಿ

ಮಾನ್ಯ ಸಂಪಾದಕರಿಗೆ,

ಎಸ್.ಎಸ್. ಹಿರೇಮಠರ ಬಗ್ಗೆ ಹೃದಯ ಸ್ಪರ್ಶಿಯಾಗಿ ಬರೆದ ರಹಮತ್ ತರೀಕೆರೆ ಅವರ ಲೇಖನ ಓದಿದೆ. ದುಃಖ ಒತ್ತರಿಸಿಕೊಂಡು ಬಂತು. ನಾನು ಹಂಪಿ ಕನ್ನಡ ವಿಶ್ವವಿದ್ಯಾನಿಲಯದ ಆಡಳಿತ ಮಂಡಳಿ ಸದಸ್ಯನಾಗಿದ್ದ ಮೂರು ವರುಷ, ಅವರ ಸಂಪರ್ಕ, ಸಹವಾಸ ನನಗೆ ಆಗದಿದ್ದುದಕ್ಕೆ ಪರಿತಪಿಸುತ್ತಿದ್ದೇನೆ. ಅವರ ಶ್ರೀಮತಿಯವರಾದರೂ ಇದ್ದಿರಬೇಕಲ್ಲ. ಅವರ ಕಥೆ ಏನು? ಅವರು ಸಂಕಟದಲ್ಲಿದ್ದರೆ ಆರ್ಥಿಕವಾಗಿ ನಾವು ಕೈಲಾದದ್ದು ಮಾಡಬೇಕಾದ್ದು ಕರ್ತವ್ಯವಲ್ಲವೇ?

ಡಾ. ಜಯಪ್ರಕಾಶ ಮಾವಿನಕುಳಿ
ಉಡುಪಿ

ಸೃಜನಾತ್ಮಕ ಹಾಗೂ ವೈಚಾರಿಕ ಸಾಹಿತ್ಯ ಕೃತಿಗಳನ್ನು ವಿಮರ್ಶೆಗಾಗಿ

ಸಂವಾದ

ಆಹ್ವಾನಿಸುತ್ತದೆ.

ಪ್ರಕಾಶಕರು / ಲೇಖಕರು ಪ್ರಕಟಿತ ಕೃತಿಯ ೨ ಪ್ರತಿಗಳನ್ನು ಕಳುಹಿಸಿಕೊಡಬೇಕಾಗಿ ಕೋರಲಾಗಿದೆ.

ವಿಳಾಸ:
ಸಂಪಾದಕರು 'ಸಂವಾದ' ಮಾಸಪತ್ರಿಕೆ,
ಸ್ಫೂರ್ತಿಧಾಮ, ಅಂಜನಾಗರ,
ವಿಶ್ವನೀಡಂ ಅಂಚೆ, ಬೆಂಗಳೂರು-೫೬೦ ೦೯೦
ದೂರವಾಣಿ : ೩೨೮ ೭೯೪೩/೯೪೪೮೦೪೮೩೦೬

ಸ್ವಾತಂತ್ರ್ಯ: ಅಂಚಿನ ಸಮುದಾಯಗಳ ಕನ್ನಡಿ ಗಂಟು

ಡಾ. ಬಿ.ಎಂ. ಪುಟ್ಟಯ್ಯ

ಸ್ವಾತಂತ್ರ್ಯ ಎಂಬುದರ ಸ್ವರೂಪ ವಾಸ್ತವವಾಗಿ ಏನು? ಎಂಬ ಪ್ರಶ್ನೆಯನ್ನು ಸುಲಭವಾಗಿ ಕೇಳಬಹುದಾದರೂ ಅದನ್ನು ಉತ್ತರಿಸುವುದು ಅಥವಾ ವಿವರಿಸುವುದು ಕಷ್ಟ. ಇದುವರೆಗೆ ಅದರ ತಿರುಳನ್ನು ಮುಚ್ಚಿಟ್ಟು ತೊಗಟೆಯನ್ನು ವಿವರಿಸಲಾಗಿದೆ. ಅಥವಾ ಅದರ ತೊಗಟೆಯನ್ನೇ ತಿರುಳು ಎಂದು ನಂಬಿಸಲಾಗಿದೆ, ನಂಬಲಾಗಿದೆ. ಸ್ವಾತಂತ್ರ್ಯ ಎಂಬುದನ್ನು ಯಾರ ನೆಲೆಯಲ್ಲಿ ನಿಂತು, ಯಾರ ಹಿತಾಸಕ್ತಿಗೆ ಅನುಗುಣವಾಗಿ ಮತ್ತು ಯಾರ ಹಿತಾಸಕ್ತಿಗೆ ವಿರುದ್ಧವಾಗಿ ಅದನ್ನು ವಿವರಿಸುತ್ತೇವೋ ಅದಕ್ಕೆ ತಕ್ಕಂತೆ ಅದರ ಸ್ವರೂಪ ವಿಸ್ತರಿಸುತ್ತಾ, ಸಂಕೀರ್ಣವಾಗುತ್ತ ಹೋಗುತ್ತದೆ. ಅಥವಾ ಸ್ವಾತಂತ್ರ್ಯ ಎಂಬುದನ್ನು ವಿವರಿಸುವ ಮೂಲಕ ಯಾರ ಹಿತಾಸಕ್ತಿಯನ್ನು ಪ್ರತಿನಿಧಿಸಲಾಗುತ್ತಿದೆ ಮತ್ತು ಯಾರ ಹಿತಾಸಕ್ತಿಯನ್ನು ಪ್ರತಿನಿಧಿಸುತ್ತಿಲ್ಲ ಎಂಬ ಪ್ರಶ್ನೆ ಕೂಡ ಬರುತ್ತದೆ.

ಹಿರಿಯರೆ ಮತ್ತು ಸ್ನೇಹಿತರೆ,

ನಾನು ಪ್ರಸ್ತುತ ವಿಷಯವನ್ನು ಕುರಿತು ತಮ್ಮೊಂದಿಗೆ ನಾಲ್ಕು ಅಂಶಗಳನ್ನು ಮಂಡಿಸುತ್ತಿದ್ದೇನೆ. ಮೊದಲನೆಯದು 'ಸ್ವಾತಂತ್ರ್ಯ ಮತ್ತು ಅಂಚಿನ ಸಮುದಾಯಗಳ' ವ್ಯಾಖ್ಯಾನಕ್ಕೆ ಸಂಬಂಧಿಸಿದ ತಾತ್ವಿಕ ತೊಡಕನ್ನು ಕುರಿತದ್ದು. ಎರಡನೆಯದು ಅಂಚಿನ ಸಮುದಾಯಗಳು ಮತ್ತು ಪ್ರಧಾನ ಸಮುದಾಯಗಳ ನಡುವಿನ ವೈರುಧ್ಯವನ್ನು ಕುರಿತದ್ದು. ಮೂರನೆಯದು ಅಂಚಿನ ಸಮುದಾಯಗಳ ನಡುವಿನ ವೈರುಧ್ಯವನ್ನು ಕುರಿತದ್ದು. ನಾಲ್ಕನೆಯದು ಅಂಚಿನ ಸಮುದಾಯಗಳಿಗೆ ಬೇಕಾಗಿರುವುದು ಸ್ವಾತಂತ್ರ್ಯವೊ ಅಥವಾ ಸಮಾನತೆಯೊ ಎಂಬುದನ್ನು ಕುರಿತದ್ದು.

ಭಾಗ – ೧, ತಾತ್ವಿಕತೆ

ತೊಡಕು

೧. 'ಸ್ವಾತಂತ್ರ್ಯ: ಅಂಚಿನ ಸಮುದಾಯಗಳ ಕನ್ನಡಿ ಗಂಟು' ಎಂಬ ವಿಷಯವು ಪೂರ್ವತೀರ್ಮಾನದ ಸ್ವರೂಪದಲ್ಲಿದೆ. ಹಾಗಾಗಿ ಇದು ನಿರೂಪಕನಿಂದ ವಿವರಣೆ, ಉದಾಹರಣೆ ಹಾಗೂ ಸಮರ್ಥನೆಗಳನ್ನು ಬಯಸುತ್ತಿದೆ. ಹೀಗೆ ಪೂರ್ವನಿರ್ಧಾರಿತ ವಿಷಯವೊಂದು ನಿರೂಪಕನಿಂದ ವಿವರಣೆ ಹಾಗೂ ಸಮರ್ಥನೆಯನ್ನು ಬಯಸಿದಾಗ ನಿರೂಪಣೆಗೆ ತಾತ್ವಿಕವಾಗಿ ಒಂದು ಕಡೆ ಅತ್ಯಂತ ಸುಲಭವೂ ಅದೇ ಕಾಲಕ್ಕೆ ಮತ್ತೊಂದು ಕಡೆ ಅತ್ಯಂತ ಕಷ್ಟವೂ ಎದುರಾಗುತ್ತದೆ. ಅತ್ಯಂತ ಸುಲಭ ಯಾಕೆಂದರೆ ವಿಷಯವು ವೈರುಧ್ಯಗಳಿಲ್ಲದ, ಸಂಕೀರ್ಣಗಳಿಲ್ಲದ ಸರಳ ರೇಖೆಯ ಮಾದರಿಯಲ್ಲಿ ಇರುವುದರಿಂದ ಅದನ್ನು ಸಮರ್ಥಿಸುವುದು ಸುಲಭ ಎಂಬುದು. ಕಷ್ಟ ಯಾಕೆಂದರೆ ಇಷ್ಟು ಸರಳವಾಗಿರುವ, ಏಕಮುಖವಾಗಿರುವ ವಿಷಯವನ್ನು ಒಳಹೊಕ್ಕು ಅದರೊಳಗಿನ ವೈರುಧ್ಯಗಳನ್ನು ಹಾಗೂ ಸಂಕೀರ್ಣಗಳನ್ನು ಗ್ರಹಿಸುವುದು/ ನೋಡುವುದು ಹೇಗೆ ಎಂಬುದು.

೨. ಮೊದಲನೆಯ ಸುಲಭದ ಸಮರ್ಥನೆಯ ಮಾದರಿಯು ನಿರೂಪಕನ ಆಲೋಚನೆ ಹಾಗೂ ನಂಬಿಕೆಯನ್ನು ಬಳಸಿಕೊಳ್ಳುತ್ತಿದೆಯೊ ಅಥವಾ ದುಡಿಸಿಕೊಳ್ಳುತ್ತಿದೆಯೊ ಎಂಬ ತೊಡಕು ಎದುರಾಗುತ್ತದೆ. ಬಳಸಿಕೊಳ್ಳುವಿಕೆ ಹಾಗೂ ದುಡಿಸಿಕೊಳ್ಳುವಿಕೆ ವೈಚಾರಿಕ ಹಾಗೂ ತಾತ್ವಿಕ ಪ್ರಕ್ರಿಯೆಯಲ್ಲಿ ಬೇರೆ ಬೇರೆ; ಅವೆರಡೂ ಒಂದೇ ಅಲ್ಲ. ಎರಡನೆಯ ಮಾದರಿಯು ನಿರೂಪಕನಿಂದ ಯಾವ ನೆಲೆಯಿಂದ/ ಯಾರ ನೆಲೆಯಿಂದ ಪ್ರಸ್ತುತ ವಿಷಯದ ವೈರುಧ್ಯಗಳನ್ನು ಗ್ರಹಿಸಬೇಕು ಎಂಬ ದೃಷ್ಟಿಕೋನದ ತೊಡಕನ್ನು ಮುಂದಿಡುತ್ತದೆ.

'ಸ್ವಾತಂತ್ರ್ಯ' ಎಂಬುದನ್ನು ಕುರಿತು

೧. ಸ್ವಾತಂತ್ರ್ಯ ಎಂಬುದರ ಸ್ವರೂಪ ವಾಸ್ತವವಾಗಿ ಏನು? ಎಂಬ ಪ್ರಶ್ನೆಯನ್ನು ಸುಲಭವಾಗಿ ಕೇಳಬಹುದಾದರೂ ಅದನ್ನು ಉತ್ತರಿಸುವುದು ಅಥವಾ ವಿವರಿಸುವುದು ಕಷ್ಟ. ಇದುವರೆಗೆ ಅದರ ತಿರುಳನ್ನು ಮುಚ್ಚಿಟ್ಟು ತೊಗಟೆಯನ್ನು ವಿವರಿಸಲಾಗಿದೆ. ಅಥವಾ ಅದರ ತೊಗಟೆಯನ್ನೇ ತಿರುಳು ಎಂದು ನಂಬಿಸಲಾಗಿದೆ, ನಂಬಲಾಗಿದೆ. ಸ್ವಾತಂತ್ರ್ಯ ಎಂಬುದನ್ನು ಯಾರ ನೆಲೆಯಲ್ಲಿ ನಿಂತು, ಯಾರ ಹಿತಾಸಕ್ತಿಗೆ ಅನುಗುಣವಾಗಿ ಮತ್ತು ಯಾರ ಹಿತಾಸಕ್ತಿಗೆ ವಿರುದ್ಧವಾಗಿ ಅದನ್ನು ವಿವರಿಸುತ್ತೇವೋ ಅದಕ್ಕೆ ತಕ್ಕಂತೆ ಅದರ ಸ್ವರೂಪ ವಿಸ್ತರಿಸುತ್ತಾ, ಸಂಕೀರ್ಣವಾಗುತ್ತ ಹೋಗುತ್ತದೆ. ಅಥವಾ ಸ್ವಾತಂತ್ರ್ಯ ಎಂಬುದನ್ನು ವಿವರಿಸುವ ಮೂಲಕ ಯಾರ ಹಿತಾಸಕ್ತಿಯನ್ನು ಪ್ರತಿನಿಧಿಸಲಾಗುತ್ತಿದೆ ಮತ್ತು ಯಾರ ಹಿತಾಸಕ್ತಿಯನ್ನು ಪ್ರತಿನಿಧಿಸುತ್ತಿಲ್ಲ ಎಂಬ ಪ್ರಶ್ನೆ ಕೂಡ ಬರುತ್ತದೆ.

ಹೀಗೆ 'ಸ್ವಾತಂತ್ರ್ಯ'ವನ್ನು ಕುರಿತು ಪರಸ್ಪರ ವಿರುದ್ಧ ಮುಖಗಳ ನಿರೂಪಣೆ ಸಾಧ್ಯವಾಗುವುದಾದರೆ ಅದು 'ಸ್ವಾತಂತ್ರ್ಯ' ಎಂಬುದರ ಪರಿಕಲ್ಪನೆಗೆ ಸಂಬಂಧಿಸಿದ ಸಂಗತಿಯೊ ಅಥವಾ 'ಸ್ವಾತಂತ್ರ್ಯ' ಎಂಬುದನ್ನು ಎಂತಹ ಸಾಮಾಜಿಕ ಪರಿಸ್ಥಿತಿ ಯಲ್ಲಿ ನಿರೂಪಿಸಲಾಗುತ್ತಿದೆ ಎಂಬ ವಸ್ತುಸ್ಥಿತಿಗೆ ಸಂಬಂಧಿಸಿದ ಸಂಗತಿಯೊ? ಎಂಬ ಪ್ರಶ್ನೆ

ಮುಖ್ಯವಾಗಿ ಕಾಡುತ್ತದೆ. ಹಾಗಾಗಿ 'ಸ್ವಾತಂತ್ರ್ಯ' ಎಂಬುದಕ್ಕೆ ಏಕಕಾಲಕ್ಕೆ 'ಎಲ್ಲರನ್ನೂ' ಪ್ರತಿನಿಧಿಸುವ ಅಥವಾ ಎಲ್ಲರಿಗೂ ಅನ್ವಯವಾಗುವ ಸಾರ್ವತ್ರಿಕವಾದ ನಿರೂಪಣೆ ಸಾಧ್ಯವಿಲ್ಲ. ಯಾಕೆಂದರೆ 'ಸ್ವಾತಂತ್ರ್ಯ' ಎಂಬುದಕ್ಕೆ 'ಎಲ್ಲರನ್ನೂ' ಏಕ ಕಾಲಕ್ಕೆ ತರತಮಗಳಿಲ್ಲದೆ ಪ್ರತಿನಿಧಿಸಲು ಸಾಧ್ಯವಿಲ್ಲ. ಆದ್ದರಿಂದ ಸ್ವಾತಂತ್ರ್ಯ ಎಂಬುದು ಒಂದು ಸಾಪೇಕ್ಷ ಪರಿಕಲ್ಪನೆ ಮತ್ತು ವರ್ಗ/ಜಾತಿ ಪಕ್ಷಪಾತಿ ಪರಿಕಲ್ಪನೆ.

೨. ಸ್ವಾತಂತ್ರ್ಯ ಎಂಬುದು ಅಂಚಿನ ಸಮುದಾಯಗಳಿಗೆ ಬೇಕಾಗಿರುವ ಅಂತಿಮ ಗುರಿಯೊ ಅಥವಾ ಗುರಿಯನ್ನು ಮುಟ್ಟಲು ಸಾಗುವ ದಾರಿಯಲ್ಲಿ ಅದೊಂದು ಹಕ್ಕೊ ಎಂಬ ಪ್ರಶ್ನೆ ಏಳುತ್ತದೆ. ಮುಂದೆ ಇದನ್ನು ಚರ್ಚಿಸಲಾಗುವುದು.

೩. ಸ್ವಾತಂತ್ರ್ಯ ಎಂಬುದನ್ನು 'ಸ್ವತಂತ್ರ', 'ಸ್ವ–ತಂತ್ರ' ಎಂಬುದಾಗಿ ವಿಸ್ತರಿಸಿಕೊಳ್ಳೋಣ. ಇಲ್ಲಿ 'ಸ್ವ' ಎಂದರೆ ತನಗೆ ತಾನೇ, ತಮಗೆ ತಾವೇ ಎಂದೂ ವಿವರಿಸಿಕೊಳ್ಳಬಹುದು. 'ತಂತ್ರ' ಎಂದರೆ ವಿಧಾನ, ಉಪಾಯ, ಕ್ರಮ, ಪದ್ಧತಿ, ದಾರಿ (ಇಂಗ್ಲಿಶ್‌ನಲ್ಲಿ ಮೆಥೆಡ್) ಎಂಬುದಾಗಿ ವಿವರಿಸಿಕೊಳ್ಳಬಹುದು. ಇಲ್ಲಿ 'ಸ್ವ' ಎಂಬುದಕ್ಕೆ ಎಷ್ಟು ಮಹತ್ವ ಇದೆಯೊ ಹಾಗೆಯೇ 'ತಂತ್ರ' ಎಂಬುದಕ್ಕೂ ಅಷ್ಟೇ ಮಹತ್ವ ಇದೆ. ಇಲ್ಲಿ 'ಸ್ವ' ಎಂಬುದು ವ್ಯಕ್ತಿಗೆ, ಸಮೂಹಕ್ಕೆ, ಸಮುದಾಯಕ್ಕೆ, ಕುಟುಂಬಕ್ಕೆ, ಜಾತಿಗೆ, ವರ್ಗಕ್ಕೆ, ಪ್ರದೇಶಕ್ಕೆ, ದೇಶಕ್ಕೆ ಸಂಬಂಧಿಸಿದುದು. ಈ ಆಯಾಮದಲ್ಲಿ ಇದು ವ್ಯಕ್ತಿ, ವ್ಯಕ್ತಿಸಮೂಹ ಹಾಗೂ ಪ್ರದೇಶ ಸೂಚಕ. ತಂತ್ರ ಅಥವಾ ವಿಧಾನ ಎಂಬುದು ಯಾವ ವಿಧಾನವನ್ನು ಅನುಸರಿಸಿದರೆ ತನ್ನ/ತಮ್ಮ ಇಚ್ಛೆಗಳು, ಅಗತ್ಯಗಳು, ಆಸೆಗಳುಕ್ರಿಯೆ ಆಗುತ್ತವೊ, ಭೌತಿಕ ರೂಪ (ಮೆಟೀರಿಯ ಲೈಸ್) ಪಡೆಯುತ್ತವೊ, ಸಾಮಾಜಿಕವಾಗಿ ಅನುಷ್ಠಾನಕ್ಕೆ ಬರುತ್ತವೊ ಅದು.

ಅಷ್ಟು ಮಾತ್ರವಲ್ಲ; ಆ ವಿಧಾನದ ಬಗೆಗಿನ ಜ್ಞಾನ ಅಥವಾ ತಿಳುವಳಿಕೆ. ವಿಧಾನ ಮತ್ತು ಜ್ಞಾನಗ ಳನ್ನು ಬಳಸುವುದು ನಿರ್ಣಾಯಕವಾಗಿ ಒಂದು ಹಕ್ಕು. ಇದನ್ನೇ ಮತ್ತೊಂದು ಕೋನದಿಂದ ವಿವರಿಸುವುದಾದರೆ ಭೌತಿಕ ಪರಿಸ್ಥಿತಿಯ ಆಧಾರದಲ್ಲೆ ಇಚ್ಛೆಗಳು, ಅಗತ್ಯಗಳು ಹಾಗೂ ಆ ಕುರಿತ ಜ್ಞಾನ ನಿರ್ಮಾಣವಾಗುತ್ತಿರುತ್ತವೆ. ಹಾಗಾಗಿ ಅಂಚಿನ ಸಮುದಾಯಗಳ ಭೌತಿಕ ಪರಿಸ್ಥಿತಿಯನ್ನು ಮುಚ್ಚಿಟ್ಟು ಮತ್ತು ಅದಕ್ಕೆ ವಿರುದ್ಧವಾಗಿ ಅವರ ಇಚ್ಛೆ, ಅಗತ್ಯ, ಜ್ಞಾನ ಹಾಗೂ ಹಕ್ಕುಗಳನ್ನು ವಿವರಿಸಲು ಆಗುವುದಿಲ್ಲ. ಇಲ್ಲಿ ವ್ಯಕ್ತಿ/ವ್ಯಕ್ತಿಸಮೂಹ, ವಿಧಾನ ಮತ್ತು ಅದರ ಬಗೆಗಿನ ಜ್ಞಾನವನ್ನು ಹಾಗೂ ಅವುಗಳನ್ನು ಬಳಸುವ ಹಕ್ಕು ಇವು ಪ್ರತ್ಯೇಕ ಎಂದು ತಿಳಿಯಬಾರದು.

೪. ಬದುಕಿನ ಅಗತ್ಯಗಳನ್ನು ಪೂರೈಸಿಕೊಳ್ಳುವುದು ಮಾತ್ರವಲ್ಲ; ಆ ಮೂಲಕ ಬದುಕನ್ನೇ ಬದಲಾಯಿಸಿಕೊಳ್ಳಲು ವಿಧಾನ ಮತ್ತು ಜ್ಞಾನವನ್ನು ಹಕ್ಕಾಗಿ ಉಪಯೋಗಿಸಿಕೊಂಡು ಪರಿಸ್ಥಿತಿಯನ್ನು ಬದಲಾಯಿಸುವುದು ಸ್ವಾತಂತ್ರ್ಯ. ಪರಿಸ್ಥಿತಿಯನ್ನು ಬದಲಾಯಿಸುವ ಮೂಲಕ ವಿಧಾನ ಮತ್ತು ಜ್ಞಾನವನ್ನು ಹಕ್ಕಾಗಿ ಬದಲಾಯಿಸುವುದು ಸ್ವಾತಂತ್ರ್ಯ. ಆದರೆ ಬದಲಾಯಿಸಿಕೊಳ್ಳಲುಬೇಕಾದ ಪರಿಸ್ಥಿತಿಯನ್ನೇ ಕೆಡಿಸಿದರೆ, ಅದಕ್ಕೆ ಬಳಸಲುಬೇಕಾದ ವಿಧಾನ, ಜ್ಞಾನ ಮತ್ತು ಹಕ್ಕುಗಳನ್ನೇ ಕಿತ್ತುಕೊಂಡರೆ, ಆಗ ಸ್ವಾತಂತ್ರ್ಯ ಎಂಬುದು ಹುಸಿಯಾಗುತ್ತದೆ, ನಕಲಿಯಾಗುತ್ತದೆ.

ಅಂಚಿನ ಸಮುದಾಯಗಳು ಎಂದು ಕರೆಯಲಾಗುವ ಚಲನಶೀಲ ಸಾಮಾಜಿಕ ವಸ್ತುಸ್ಥಿತಿಯು ವೈರುಧ್ಯ, ಸಂಕೀರ್ಣ, ಅಸಮಾನತೆ ಮತ್ತು ಶ್ರೇಣೀಕರಣಗಳಿಲ್ಲದ ಏಕ ಘನಾಕೃತಿಯದಲ್ಲ. ಹಾಗಾಗಿ ಅಂಚಿನ ಸಮುದಾಯಗಳ ಒಳಗೆ ನೂರಾರು ಜಾತಿ, ಉಪಜಾತಿ, ಪಂಗಡ ಮುಂತಾದ ಶ್ರೇಣೀಕರಣಗಳು, ಜಾತಿ ಅಪಮಾನಗಳು ಜೊತೆಗೆ ಆರ್ಥಿಕ ಅಸಮಾನತೆಗಳು ಇವೆ. ಅದೇ ರೀತಿ ಸ್ತ್ರೀ ಪುರುಷರ ನಡುವೆ ಲಿಂಗ ತಾರತಮ್ಯಗಳಿವೆ. ಆದ್ದರಿಂದ ಇವುಗಳನ್ನು ಪರಿಗಣಿಸದೆ; ಇವನ್ನು ಮುಚ್ಚಿಟ್ಟು ಅಂಚಿನ ಸಮುದಾಯಗಳನ್ನು ಇಡಿಯಾಗಿ ಒಂದೇ ಎಂದು ಗ್ರಹಿಸಲು ಬರುವುದಿಲ್ಲ. ಅಂಚಿನ ಸಮುದಾಯಗಳ ನೆಲೆಯಲ್ಲಿ ನಿಂತು 'ಸ್ವಾತಂತ್ರ್ಯ' ಎಂಬುದನ್ನು ವಿಶ್ಲೇಷಿಸುವಾಗ, ಅಂಚಿನ ಸಮುದಾಯಗಳಲ್ಲದ ಪ್ರಧಾನ ಅಥವಾ ಮುಖ್ಯ ಸಮುದಾಯಗಳ ಪ್ರಸ್ತಾಪ ಚರ್ಚೆಗೆ ಬರುತ್ತದೆ.

ಅಂಚಿನ ಸಮುದಾಯಗಳನ್ನು ಕುರಿತು

೧. ಅಂಚಿನ ಸಮುದಾಯಗಳು ಎಂದು ಕರೆಯಲಾಗುವ ಚಲನಶೀಲ ಸಾಮಾಜಿಕ ವಸ್ತುಸ್ಥಿತಿಯು ವೈರುಧ್ಯ, ಸಂಕೀರ್ಣ, ಅಸಮಾನತೆ ಮತ್ತು ಶ್ರೇಣೀಕರಣಗಳಿಲ್ಲದ ಏಕಘನಾಕೃತಿಯದಲ್ಲ. ಹಾಗಾಗಿ ಅಂಚಿನ ಸಮುದಾಯಗಳ ಒಳಗೆ ನೂರಾರು ಜಾತಿ, ಉಪಜಾತಿ, ಪಂಗಡ ಮುಂತಾದ ಶ್ರೇಣೀಕರಣಗಳು, ಜಾತಿ ತರಮತಗಳು, ಜಾತಿ ಅಪಮಾನಗಳು ಜೊತೆಗೆ ಆರ್ಥಿಕ ಅಸಮಾನತೆಗಳು ಇವೆ. ಅದೇ ರೀತಿ ಸ್ತ್ರೀ ಪುರುಷರ ನಡುವೆ ಲಿಂಗ ತಾರತಮ್ಯಗಳಿವೆ. ಆದ್ದರಿಂದ ಇವುಗಳನ್ನು ಪರಿಗಣಿಸದೆ; ಇವನ್ನು ಮುಚ್ಚಿಟ್ಟು ಅಂಚಿನ ಸಮುದಾಯಗಳನ್ನು ಇಡಿಯಾಗಿ ಒಂದೇ ಎಂದು ಗ್ರಹಿಸಲು ಬರುವುದಿಲ್ಲ.

೨. ಅಂಚಿನ ಸಮುದಾಯಗಳ ನೆಲೆಯಲ್ಲಿ ನಿಂತು 'ಸ್ವಾತಂತ್ರ್ಯ' ಎಂಬುದನ್ನು ವಿಶ್ಲೇಷಿಸುವಾಗ, ಅಂಚಿನ ಸಮುದಾಯಗಳಲ್ಲದ ಪ್ರಧಾನ ಅಥವಾ ಮುಖ್ಯ ಸಮುದಾಯಗಳ ಪ್ರಸ್ತಾಪ ಚರ್ಚೆಗೆ ಬರುತ್ತದೆ. ಆ ಪ್ರಧಾನ ಸಮುದಾಯಗಳಿಗೂ ಮತ್ತು ಸ್ವಾತಂತ್ರ್ಯಕ್ಕೂ ಇರುವ ಸಂಬಂಧದ ಸ್ವರೂಪ ಯಾವುದು ಎಂಬುದು ಚರ್ಚೆಗೆ ಬರುತ್ತದೆ.

೩. ಅಂಚಿನ ಸಮುದಾಯಗಳ ನೆಲೆಯಲ್ಲಿ ನಿಂತು, ಸ್ವಾತಂತ್ರ್ಯ ಮತ್ತು ಪ್ರಧಾನ ಸಮುದಾಯಗಳನ್ನು ವಿಶ್ಲೇಷಿಸುವಾಗ ಸ್ವಾತಂತ್ರ್ಯ ಮತ್ತು ಪ್ರಧಾನ ಸಮುದಾಯಗಳಿಗೆ ಯಾವುದೇ ವೈರುಧ್ಯಗಳು ಇಲ್ಲ ಎಂಬ ಸರಳ ಭಾವನೆ ಹುಟ್ಟಿಬಿಡುತ್ತದೆ. ಈ ಸರಳ ಗ್ರಹಿಕೆ ಎರಡು ಬಗೆಯ ವೈರುಧ್ಯಗಳನ್ನು ಮುಂದಿಡುತ್ತದೆ. ೧. ಪ್ರಧಾನ ಸಮುದಾಯಗಳ ಸ್ವಾತಂತ್ರ್ಯಕ್ಕೂ ಮತ್ತು ಅಂಚಿನ ಸಮುದಾಯಗಳ ಸ್ವಾತಂತ್ರ್ಯಕ್ಕೂ ಇರುವ ಸಂಬಂಧದ ಸ್ವರೂಪ. ಇದನ್ನು ಪ್ರಧಾನ ವೈರುಧ್ಯ ಎಂದು ಕರೆಯೋಣ. ೨. ಅಂಚಿನ ಸಮುದಾಯಗಳೊಳಗೇ ಇರುವ ಶ್ರೇಣೀಕರಣಗಳಿಗೂ ಮತ್ತು ಸ್ವಾತಂತ್ರ್ಯಕ್ಕೂ ಇರುವ ಸಂಬಂಧದ ಸ್ವರೂಪ. ಇದನ್ನು ಪ್ರಧಾನವಲ್ಲದ ಅಥವಾ ಎರಡನೇ ವೈರುಧ್ಯ ಎಂದು ಕರೆಯೋಣ.

ಭಾಗ ೨

ಅಂಚಿನ ಸಮುದಾಯಗಳು ಮತ್ತು ಪ್ರಧಾನ ಸಮುದಾಯಗಳ ನಡುವಿನ ವೈರುಧ್ಯ

೧. ಸ್ವಾತಂತ್ರ್ಯ ಎಂಬುದು ಯಾರ ನಿಯಂತ್ರಣ, ಅಡೆತಡೆ ಮತ್ತು ದಬ್ಬಾಳಿಕೆಗಳಿಲ್ಲದೆ ಭೌತಿಕ ಹಾಗೂ ಸಾಮಾಜಿಕ ಪರಿಸ್ಥಿತಿಗಳನ್ನು ಬದುಕಿನ ಅಗತ್ಯಗಳನ್ನಾಗಿ ಮಾರ್ಪಡಿಸಿಕೊಳ್ಳುವ ವಿಧಾನ. ಜೊತೆಗೆ ಅವುಗಳನ್ನು ಮಾರ್ಪಡಿಸಿಕೊಳ್ಳುವ ಜ್ಞಾನ ಮತ್ತು ಹಕ್ಕುಗಳ ಅನುಷ್ಠಾನ. ಭೌತಿಕ ಹಾಗೂ ಸಾಮಾಜಿಕ ಪರಿಸ್ಥಿತಿಗಳು, ವಿಧಾನ ಮತ್ತು ಜ್ಞಾನಗಳು ಬದಲಾಗುತ್ತಾ ಹೋಗುತ್ತವೆ. ಆದರೆ ಪರಿಸ್ಥತಿ, ವಿಧಾನ ಮತ್ತು ಜ್ಞಾನಗಳ ಮೇಲೆ (೧) ಬೇರೆಯವರು ಅಥವಾ ಹೊರಗಿನವರು ಹಸ್ತಕ್ಷೇಪ ಮಾಡಿ, ದಬ್ಬಾಳಿಕೆ ಮಾಡಿ; ಅವರು (೨) ತಮ್ಮ ಹಿತಾಸಕ್ತಿಗಾಗಿ ಬಲಾತ್ಕಾರವಾಗಿ ಇವನ್ನು ಬದಲಾಯಿಸಿದರೆ ಅಥವಾ ನಾಶಪಡಿಸಿದರೆ, (೩) ಹಾಗೆ ನಾಶಪಡಿಸಿದ ಜಾಗಕ್ಕೆ ತಮ್ಮದನ್ನು ಜಾರಿಮಾಡಿ, ಅವಕ್ಕೆ ಬೇರೆ ಹೆಸರು ಕೊಟ್ಟರೆ, ಆಗ ಸ್ವಾತಂತ್ರ್ಯ ಎಂಬುದು ಹುಸಿಯಾಗುತ್ತದೆ, ನಕಲಿ ಆಗುತ್ತದೆ. ಉದಾಹರಣೆಗೆ, (೧) ಬ್ರಿಟೀಶರು ದಬ್ಬಾಳಿಕೆಯಿಂದ (೨) ತಮ್ಮ ಬಂಡವಾಳಶಾಹಿ ಕೈಗಾರಿಕೆಯ ಮಾರುಕಟ್ಟೆಯನ್ನು ವಿಸ್ತರಿಸುವ ಸಲುವಾಗಿ ಇಲ್ಲಿಯ ವಿವಿಧ ಉತ್ಪಾದನೆಯ ವಿಧಾನಗಳನ್ನು ನಾಶಪಡಿಸಿದರು. ಜೊತೆಗೆ ಆ ವಿಧಾನಗಳ ಜ್ಞಾನವನ್ನೂ ನಾಶಪಡಿಸಿದರು. (೩) ತಮ್ಮ ಉತ್ಪಾದನ ವಿಧಾನವನ್ನು ಹಾಗೂ ಆ ಕುರಿತ ಜ್ಞಾನವನ್ನು ಆಧುನಿಕತೆ, ನಾಗರೀಕತೆ ಎಂದು ಕರೆದರು. ವಸಾಹತು ಸುಲಿಗೆಯಿಂದ ಮೊದಲುಗೊಂಡು, ಸಾಮ್ರಾಜ್ಯಶಾಹಿ ಸುಲಿಗೆಯವರೆಗೆ ಈ ವಿನ್ಯಾಸ ನಿರಂತರವಾಗಿ ಮುಂದುವರಿದಿದೆ. ಅವರ ಉತ್ಪಾದನ ವಿಧಾನ ಹಾಗೂ ಆ ಕುರಿತ ಜ್ಞಾನವು ಶೋಷಣೆಯನ್ನು ಮುಂದುವರಿಸುವ ಸ್ವರೂಪದ್ದಾಗಿದೆ. ಹಾಗಾಗಿ

ಪ್ರೀತಿ

ಮಂಜಿನಲ್ಲಿ ಸೇರಿದ್ದರೆ
ಕರಗಿ ಹೋಗುತ್ತಿತ್ತು,
ಬೆಂಕಿಗೆ ಬಿದ್ದಿದ್ದರೆ
ಬರಿದು ಹೋಗುತ್ತಿತ್ತು,
ನನ್ನದೆಗೆ ಬಿದ್ದು
ಅದೀಗ ಕಾವ್ಯವಾಗಿದೆ.

○ ದಯಾನಂದ

ಸುಲಿಗೆಯನ್ನು ಸುಧಾರಣೆ ಎಂತಲೂ, ಅವನತಿಯನ್ನು ಅಭಿವೃದ್ಧಿ ಎಂತಲೂ, ವಿಗತಿಯನ್ನು ಪ್ರಗತಿ ಎಂತಲೂ ಬಣ್ಣಿಸಲಾಗುತ್ತಿದೆ. ೬೦ರ ದಶಕದ ಹಸಿರು ಕ್ರಾಂತಿ, ೮೦ರ ದಶಕದ ಹೊಸ ಆರ್ಥಿಕ ನೀತಿ, ಹೊಸ ಕೃಷಿ ನೀತಿ, ಹೊಸ ಕೈಗಾರಿಕಾ ನೀತಿ, ಹೊಸ ಶಿಕ್ಷಣ ನೀತಿ ಮುಂತಾದವುಗಳನ್ನು ಈ ಹಿನ್ನೆಲೆಯಲ್ಲೇ ಗ್ರಹಿಸಬೇಕು. ಆ ನೀತಿಗಳಲ್ಲಿ ಅಭಿವೃದ್ಧಿಗೆ ಸಂಬಂಧಿಸಿದ ಯಾವುದೇ ಹೊಸ ಕಾರ್ಯಕ್ರಮಗಳೂ ಇರಲಿಲ್ಲ. ಬದಲಾಗಿ ಕೃಷಿ, ಕೈಗಾರಿಕೆ, ಶಿಕ್ಷಣ ಮುಂತಾದ ಕ್ಷೇತ್ರಗಳಲ್ಲಿ ಶೋಷಣೆಯನ್ನು ಮುಂದುವರಿಸುವ ಹೊಸ ವಿಧಾನಗಳು ಹಾಗೂ ಹೊಸ ತಂತ್ರಗಳು ಇದ್ದವು ಅಷ್ಟೆ. ೯೦ರ ದಶಕದ ನಂತರ ಚತುಷ್ಪಥ ರಸ್ತೆಗಳು, ನದಿಗಳ ಜೋಡಣೆ, ಟೌನ್‌ಶಿಪ್, ಮಾಸ್ಟರ್ ಪ್ಲಾನ್, ನೀರಿನ ಸಂಸ್ಕರಣ, ಮೆಟ್ರೊ, ಪ್ರವಾಸೋದ್ಯಮ ಅಭಿವೃದ್ಧಿ ಇವುಗಳನ್ನು ಏಕಮುಖವಾಗಿ ಕೈಗೊಳ್ಳಲಾಗುತ್ತಿದೆ. ಚತುಷ್ಪಥ ರಸ್ತೆಗಳಲ್ಲಿ ತಿರುಗಾಡುವ ವಾಹನಗಳಿಂದ ದಿನ ನಿತ್ಯ ಲಕ್ಷಲಕ್ಷ ರೂಪಾಯಿ ಹಣವನ್ನು ನೇರವಾಗಿ ಸುಲಿಗೆ ಮಾಡುತ್ತಿದ್ದಾರೆ. ಇದು ಸುಲಿಗೆ, ಇದು ಕ್ರೂರ ಶೋಷಣೆ, ಇದು ಅನ್ಯಾಯ ಎಂದು ಯಾರಿಗೂ ಅನಿಸುತ್ತಿಲ್ಲ. ಯಾಕೆಂದರೆ ಸುಲಿಗೆಕೋರರು ಸುಲಿಗೆಯನ್ನು ಸುಧಾರಣೆ ಎಂದು ಬಣ್ಣಿಸಿದ್ದಾರೆ. ಪ್ರಜಾ ಪ್ರಭುತ್ವ ವ್ಯವಸ್ಥೆಯಲ್ಲಿ ರಸ್ತೆಗಳು ಸಾರ್ವಜನಿಕ ಸೊತ್ತು ಎಂಬುದು ನಿಯಮ. ಅಂದರೆ ಅದರಲ್ಲಿ ಯಾರು ಬೇಕಾದರೂ ದುಡ್ಡು ಕೊಡದೆ ತಿರುಗಾಡಬಹುದು ಎಂಬುದು ತತ್ವ. ಆದರೆ ಇದೇ ಪ್ರಜಾಪ್ರಭುತ್ವದಲ್ಲಿ ಆಳುವ ಸರಕಾರವೇ ಮುಂದೆ ನಿಂತು ರಸ್ತೆಯಲ್ಲಿ ತಿರುಗಾಡುವ ವಾಹನಗಳಿಂದ ಹಣ ವಸೂಲು ಮಾಡುತ್ತಿರುವುದು ಹಗಲು ದರೋಡೆ ಎಂದು ಯಾಕೆ ಅನಿಸುತ್ತಿಲ್ಲ? ಈ ಎಲ್ಲವನ್ನು ಸಾಮ್ರಾಜ್ಯಶಾಹಿ ಮತ್ತು ಆಳುವ ವರ್ಗಗಳು ಪ್ರಧಾನ ಸಮುದಾಯಗಳ ಮೂಲಕ ಜಾರಿಗೊಳಿಸುತ್ತಿವೆ. ಇದಕ್ಕೆ ಎರಡು ಸೂಕ್ಷ್ಮ ಉದಾಹರಣೆ ಕೊಡಬಹುದು.

ಒಂದು:

ಬಳ್ಳಾರಿ ಮತ್ತು ಹೊಸಪೇಟೆಯ ನಡುವೆ ಮೈನ್ಸ್ ತುಂಬಿದ ಲಾರಿಗಳು ಓಡಾಡುತ್ತವೆ. ಆ ರಸ್ತೆ ಚನ್ನಾಗಿದ್ದರೆ ಓಡಾಡುವ ಲಾರಿಗಳು ಕುಲುಕುವುದಿಲ್ಲ. ರಸ್ತೆಗಳಲ್ಲಿ ಗುಂಡಿಗಳಾದರೆ ಮೈನ್ಸ್ ತುಂಬಿದ ಲಾರಿಗಳು ಓಡಾಡುವಾಗ ಕುಲುಕುತ್ತವೆ. ಅವುಗಳಿಗೆ ತುಂಬಿದ್ದ ಮೈನ್ಸ್‌ನ ಕಿವುರು ಕೆಳಗೆ ಬೀಳುತ್ತದೆ. ಅಂಚಿನ ಸಮುದಾಯದವರು ಅದನ್ನು ಸಂಗ್ರಹಿಸಿಕೊಳ್ಳುತ್ತಾರೆ. ಆದ್ದರಿಂದ ಅವರು ಆ ರಸ್ತೆಯ ರಿಪೇರಿಯನ್ನು ವಿರೋಧಿಸುತ್ತ ಬಂದಿದ್ದಾರೆ ಎಂಬ ಅಭಿಪ್ರಾಯವಿದೆ. ಈಗ ಪ್ರಶ್ನೆ ಇರುವುದು ಪ್ರಧಾನ ಸಮುದಾಯಗಳು ಅವರನ್ನು ಇನ್ನೂ ಯಾಕೆ ಆ ಸ್ಥಿತಿಯಲ್ಲಿ ಇಟ್ಟಿವೆ ಎಂಬ ಪ್ರಶ್ನೆ ಎದುರಾಗುತ್ತದೆ.

ಎರಡು:

'ಡಾಂಬರು ಬಂದುದು' ಎಂಬುದು ದೇವನೂರ ಮಹಾದೇವ ಅವರ ಒಂದು ಕಥೆ. ಊರಿಗೆ ಡಾಂಬರು ಬಂದುದರಿಂದ ಯಾರು ಯಾರಿಗೆ ಏನೇನು ಲಾಭ ಆಯಿತು, ಯಾರನ್ನು ಅದು ಕೆರಳಿಸಿತು ಇತ್ಯಾದಿ ಹಲವು ಬೆಳವಣಿಗೆಗಳನ್ನು ಕಥೆ ಅತ್ಯಂತ ಶಕ್ತಿಶಾಲಿಯಾಗಿ ನಿರೂಪಿಸಿದೆ. ಆ ಮಾತಿರಲಿ. ಈಗ ಮುಖ್ಯ ವಿಷಯ, ಆ ಕತೆಯೊಳಗೆ 'ಯಾವಳೊ ಒಬ್ಬಳು ತೂತು ಮಡಿಕೆಗೆ ಟಾರನ್ನು ಮೆತ್ತಿ ನೀರು ಸೋರುವುದು ನಿಂತುಹೋಯ್ತಂತೆ. ಅದಾದ ಮೇಲೆ ಟಾರನ್ನು ಇಟ್ಟುಕೊಂಡವರ ಹತ್ತಿರ ಹೋಗಿ 'ನನಗೂ ಒಂದಿಷ್ಟು ಟಾರು ಕೊಡು ಎಂದು ಕೇಳುವ ಪರಿಪಾಠ ಬೆಳೆಯಿತಂತೆ' ಎಂಬುದಾಗಿ ಕಥೆ ನಿರೂಪಿಸಿದೆ. ಈ ಭಾಗವನ್ನು ಓದಿದರೆ ಸಹಜವಾಗಿ ನಗು ಬರುತ್ತದೆ. ಆದರೆ ಆ ವಸ್ತುಸ್ಥಿತಿಯ ಹಿಂದೆ ಅತ್ಯಂತ ವಿಷಾಧ ಮಡುಗಟ್ಟಿದೆ. ಮತ್ತೆ ಕೇಂದ್ರ ವಿಷಯಕ್ಕೆ ಬರುವುದಾದರೆ ಪ್ರಗತಿ, ಅಭಿವೃದ್ಧಿ, ಆಧುನೀಕರಣ ಮುಂತಾದುವುಗಳಿಂದ ಪ್ರಧಾನ ಸಮುದಾಯಗಳು ಪಡೆಯುತ್ತಿರುವ ಲಾಭ ಒಂದಾದರೆ; ಅಂಚಿನ ಸಮುದಾಯಗಳ ಪಾಲಿಗೆ ಅದು ತೂತು ಮಡಿಕೆಗೆ ಟಾರು ಮೆತ್ತಿಕೊಳ್ಳುವ ಸ್ಥಿತಿಯದಾಗಿದೆ. ಮೇಲಿನ ಎರಡೂ ವಸ್ತುಸ್ಥಿತಿಗಳು ಪ್ರಧಾನ ಸಮುದಾಯಗಳು ಮತ್ತು ಅಂಚಿನ ಸಮುದಾಯಗಳ ನಡುವಿನ ಪ್ರಧಾನ ವೈರುಧ್ಯವನ್ನು ಸೂಚಿಸುತ್ತಿವೆ.

೯೦ರ ದಶಕದ ನಂತರ ಅಂಚಿನ ಸಮುದಾಯಗಳು ಎಂದಿಲ್ಲದ ಬಿಕ್ಕಟ್ಟನ್ನು ಎದುರಿಸುತ್ತಿವೆ. ಅವರ ಪಾರಂಪರಿಕ ವೃತ್ತಿಗಳು, ಕಸುಬುಗಳು ಸಂಪೂರ್ಣ ನೆಲಕಚ್ಚಿವೆ. ಅವರ ಉತ್ಪಾದನೆಗಳಿಗೆ ಯಾವುದೇ ಬೇಡಿಕೆ ಇಲ್ಲದಂತಾಗಿದೆ. ಕೃಷಿ ವಲಯದಲ್ಲಿ ನಿರುದ್ಯೋಗ ಸೃಷ್ಟಿಯಾಗಿದೆ. ತುತ್ತು ಅನ್ನದ ಕೂಲಿಗಾಗಿ ವಲಸೆ, ಅರೆ ವಲಸೆ ಹಾಗೂ ಗುಳೆ ಹೋಗುವ ಪರಿಸ್ಥಿತಿ ದಿನದಿಂದ ದಿನಕ್ಕೆ ಹೆಚ್ಚುತ್ತಲೇ ಸಾಗಿದೆ. ಮತ್ತೊಂದು ಕಡೆ, ಆದಿವಾಸಿ ಬುಡಕಟ್ಟು ಜನರನ್ನು ರಾಷ್ಟ್ರೀಯ ಉದ್ಯಾನವನ, ಮೀಸಲು ಅರಣ್ಯ, ವಿಶೇಷ ಆರ್ಥಿಕ ವಲಯ, ಬೃಹತ್ ಕೈಗಾರಿಕೆ ಮುಂತಾದುವುಗಳ ಹೆಸರಿನಲ್ಲಿ ನಿರ್ದಯವಾಗಿ ಒಕ್ಕಲೆಬ್ಬಿಸಲಾಗುತ್ತಿದೆ. ಕೊನೇ ಪಕ್ಷ ಎಂತಹ ಬದುಕು ಎಂಬುದು ಹೋಗಲಿ, ಹೇಗಾದರೂ ಮಾಡಿ ಬದುಕುತ್ತಿದ್ದ ಅವರ ಬದುಕುವ ಹಕ್ಕನ್ನೇ ಅಭಿವೃದ್ಧಿಯ ಹೆಸರಿನಲ್ಲಿ ಕಿತ್ತುಕೊಳ್ಳಲಾಗಿದೆ. ಇನ್ನು ಅವರ ಪರಿಸ್ಥಿತಿಯ ಎದುರು 'ಸ್ವಾತಂತ್ರ್ಯ' ಎಂಬುದು ಕೇವಲ ಒಂದು ಜೋಕ್ ಅಷ್ಟೆ.

'ಡಾಂಬರು ಬಂದುದು' ಎಂಬುದು ದೇವನೂರ ಮಹಾದೇವ ಅವರ ಒಂದು ಕಥೆ. ಊರಿಗೆ ಡಾಂಬರು ಬಂದುದರಿಂದ ಯಾರು ಯಾರಿಗೆ ಏನೇನು ಲಾಭ ಆಯಿತು, ಯಾರನ್ನು ಅದು ಕೆರಳಿಸಿತು ಇತ್ಯಾದಿ ಹಲವು ಬೆಳವಣಿಗೆಗಳನ್ನು ಕಥೆ ಅತ್ಯಂತ ಶಕ್ತಿಶಾಲಿಯಾಗಿ ನಿರೂಪಿಸಿದೆ. ಆ ಮಾತಿರಲಿ. ಈಗ ಮುಖ್ಯ ವಿಷಯ, ಆ ಕತೆಯೊಳಗೆ 'ಯಾವಳೊ ಒಬ್ಬಳು ತೂತು ಮಡಿಕೆಗೆ ಟಾರನ್ನು ಮೆತ್ತಿ ನೀರು ಸೋರುವುದು ನಿಂತು ಹೋಯ್ತಂತೆ. ಅದಾದ ಮೇಲೆ ಟಾರನ್ನು ಇಟ್ಟುಕೊಂಡವರ ಹತ್ತಿರ ಹೋಗಿ 'ನನಗೂ ಒಂದಿಷ್ಟು ಟಾರು ಕೊಡು ಎಂದು ಕೇಳುವ ಪರಿ ಪಾಠ ಬೆಳೆಯಿತಂತೆ' ಎಂಬುದಾಗಿ ಕಥೆ ನಿರೂಪಿಸಿದೆ. ಈ ಭಾಗವನ್ನು ಓದಿದರೆ ಸಹಜವಾಗಿ ನಗು ಬರುತ್ತದೆ. ಆದರೆ ಆ ವಸ್ತುಸ್ಥಿತಿಯ ಹಿಂದೆ ಅತ್ಯಂತ ವಿಷಾಧ ಮಡುಗಟ್ಟಿದೆ.

ಭಾಗ ೩

ಅಂಚಿನ ಸಮುದಾಯಗಳ ಒಳಗಿನ ವೈರುಧ್ಯ

ಅಂಚಿನ ಸಮುದಾಯಗಳು ಆರ್ಥಿಕ, ಸಾಮಾಜಿಕ ವಿಷಯಗಳಲ್ಲಿ ಒಂದೇ ರೀತಿ ಇಲ್ಲ. ಈ ಕಾರಣದಿಂದ ಇವುಗಳ ನಡುವೆಯೇ 'ಸ್ವಾತಂತ್ರ್ಯ' ಎಂಬುದು ಕನ್ನಡಿಯ ಗಂಟಾಗಿದೆ. ತಮ್ಮ ಇಚ್ಛೆ ಹಾಗೂ ಅಗತ್ಯಗಳನ್ನು ಭೌತಿಕ ರೂಪಕ್ಕೆ ಬದಲಾಯಿಸಿಕೊಳ್ಳುವಾಗ ಒಂದು ಅಂಚಿನ ಸಮುದಾಯ ಮತ್ತೊಂದು ಅಂಚಿನ ಸಮುದಾಯದ ಮೇಲೆ ಶೋಷಣೆ, ದಬ್ಬಾಳಿಕೆ ಮಾಡುವ ಪರಿಸ್ಥಿತಿ ನಮ್ಮ ಮುಂದಿದೆ. ಕೊನೇ ಪಕ್ಷ ಪೊಲೀಸ್ ಸ್ಟೇಶನ್‌ಗಳಲ್ಲಿ ದಾಖಲಾಗುವ ಕೇಸುಗಳನ್ನು ಗಮನಿಸಿದರೆ ಈ ವಸ್ತುಸ್ಥಿತಿಯ ನಿಜರೂಪ ಗೊತ್ತಾಗುತ್ತದೆ. ಮದುವೆ ಮತ್ತು ಊಟಕ್ಕೆ ಸಂಬಂಧಿಸಿದ ವಿಷಯಗಳಲ್ಲಿ ಈ ತಾರತಮ್ಯ ಇನ್ನೂ ಗಟ್ಟಿಯಾಗಿ ಮುಂದುವರಿದಿದೆ. ಆರ್ಥಿಕ ಮತ್ತು ಸಾಮಾಜಿಕ ಅಸಮಾನತೆಯ ಸಂಗತಿಗಳು ಇದರಲ್ಲಿ ಒಂದರಿಂದ ಒಂದು ಬೇರ್ಪಡಿಸದಂತೆ ಸೇರಿಕೊಂಡಿವೆ. ಹಾಗಾಗಿ ಇವು ಸಮಾನತೆ ಮತ್ತು ಮಾನವ ಘನತೆಯ ಪ್ರಶ್ನೆಯನ್ನು ಹುಟ್ಟುಹಾಕಿವೆ. ಅಂಚಿನ ಸಮುದಾಯಗಳ ನಡುವೆಯೇ ಸಮಾನತೆ ಎಂಬುದು ಕಾಲಕಸವಾಗಿ ಹೋಗಿದೆ. ಹಾಗಾಗಿ ಪ್ರತಿಯೊಂದು ಅಂಚಿನ ಸಮುದಾಯಗಳೂ ಈ ಸಮಾನತೆಗಾಗಿ ತಮ್ಮ ಅನನ್ಯತೆಯ ಮೂಲಕ ಹೋರಾಟ ಮಾಡುತ್ತಿವೆ. ಆ ಮೂಲಕ ಅವು ಇಡುತ್ತಿರುವ ಹಕ್ಕೊತ್ತಾಯಗಳು ಏನೇ ಇರಲಿ. ಆದರೆ ಹೀಗೆ ಸಮುದಾಯ ಸಮುದಾಯಗಳ ನಡುವಿನ ಈ ವೈರುಧ್ಯತೆಯನ್ನು ಪ್ರಧಾನ ಸಮುದಾಯಗಳು (ಆಳುವ ವರ್ಗ) ತಮ್ಮ ಹಿತಾಸಕ್ತಿಗೆ ಯಶಸ್ವಿಯಾಗಿ ಬಳಸಿಕೊಳ್ಳುತ್ತಿವೆ. ಇನ್ನೂ ಮುಖ್ಯವಾಗಿ ಈ ಸಮುದಾಯಗಳ ನಡುವೆಯೇ ಶತ್ರುತ್ವದ ಸಂಬಂಧವನ್ನು ಸೃಷ್ಟಿ ಮಾಡಿವೆ.

ಭಾಗ ೪

ಅಂಚಿನ ಸಮುದಾಯಗಳಿಗೆ ಬೇಕಾಗಿರುವುದು ಸ್ವಾತಂತ್ರ್ಯವೊ? ಸಮಾನತೆಯೊ?

ಎರಡನೇ ಪ್ರಪಂಚ ಯುದ್ಧದ ಸಮಯದಲ್ಲಿ ಸಮಾಜವಾದಿ ಶಕ್ತಿಗಳು ಸಾಮ್ರಾಜ್ಯಶಾಹಿಗೆ ನುಂಗಲಾರದ ತುತ್ತಾಗಿದ್ದವು. ಆಗ ಸಾಮ್ರಾಜ್ಯಶಾಹಿ ತನ್ನ ಲೂಟಿಯ ಹಳೆಯ ವಿಧಾನಗಳನ್ನು ಬದಲಾಯಿಸಿಕೊಂಡು ಹೊಸ ವಿಧಾನಗಳನ್ನು ಜಾರಿಗೆ ತರಲು ಕುತಂತ್ರ ನಡೆಸಿತು. ಆ ಕುತಂತ್ರ ಹಾಗೂ ಹುನ್ನಾರಗಳನ್ನು ೧೯೪೪ರ ಬ್ರಿಟನ್ ವುಡ್ ಅಗ್ರಿಮೆಂಟಿನಲ್ಲಿ ಅದು ಕಂಡುಕೊಂಡಿತು. ನಂತರ ಅದು ಲೂಟಿ ಮಾಡಲು ಹೊಸ ವಿಧಾನಗಳನ್ನು ಬಳಸಿಕೊಂಡು, ನವವಸಾಹತು ಲೂಟಿಯನ್ನು ಮುಂದುವರಿಸಿತು. ವಸಾಹತು ಶೋಷಣೆಯ ವಿರುದ್ಧ ಹೋರಾಟ ನಡೆಸುತ್ತಿದ್ದ ದೇಶಗಳಿಗೆ 'ಸ್ವಾತಂತ್ರ್ಯ' ಎಂಬುದನ್ನು ಘೋಷಿಸಿಕೊಳ್ಳಲು ಅದು ಅನುಮತಿ ನೀಡಿತು. ಇದಕ್ಕೆ ಬಹುದೊಡ್ಡ ಉದಾಹರಣೆ ಎಂದರೆ, ಯಾವುದೇ ಸ್ವಾತಂತ್ರ್ಯ ಹೋರಾಟ ಮಾಡದ ಬರ್ಮಾ ದೇಶವೂ ಸ್ವಾತಂತ್ರ್ಯ ಘೋಷಿಸಿಕೊಂಡಿತು. ಆ ಅನುಮತಿಯ ಹಿಂದೆ ಇದ್ದ ನಿಜ ಸತ್ಯ ನವವಸಾಹತು ಲೂಟಿಯ ಹುನ್ನಾರ ಹಾಗೂ ಕಾರ್ಯತಂತ್ರ, ಇದನ್ನೇ ವಸಾಹತು

ದೇಶಗಳ ಆಳುವ ವರ್ಗಗಳು 'ಸ್ವಾತಂತ್ರ್ಯ' ಎಂದು ಕರೆದುಕೊಂಡವು. ಸಂಭ್ರಮಿಸಿದವು. ವಾಸ್ತವವಾಗಿ ಅದು ಸಾಮ್ರಾಜ್ಯಶಾಹಿಯ ನವವಸಾಹತು ಲೂಟಿಗೆ ಸಿಕ್ಕಿದ ಸ್ವಾತಂತ್ರ್ಯವೇ ಹೊರತು; ಶೋಷಿತ ದೇಶಗಳ ಅಂಚಿನ ಸಮುದಾಯಗಳಿಗೆ ಸಿಕ್ಕಿದ ಸ್ವಾತಂತ್ರ್ಯ ಅಲ್ಲ. ಹಾಗಿದ್ದರೆ ಆಳುವ ವರ್ಗಗಳ ಹೊಸ ಲೂಟಿಯ, ಹೊಸ ಶೋಷಣೆಯ ವಿಧಾನಗಳನ್ನೇ ಅಂಚಿನ ಸಮುದಾಯಗಳು ತಮ್ಮ 'ಸ್ವಾತಂತ್ರ್ಯ' ಎಂದು ನಂಬಬೇಕೊ ಎಂಬ ಪ್ರಶ್ನೆ ಎದುರಾಗುತ್ತಿದೆ. ಯಾಕೆಂದರೆ 'ಅಂಚಿನ ಸಮುದಾಯಗಳು ಮುಖ್ಯವಾಹಿನಿಗೆ ಬರಬೇಕು' ಎಂದು ಹೇಳುವ ಮೂಲಕ ನಯವಾಗಿ ಆಧುನಿಕ ಶೋಷಣೆಯನ್ನು ಮುಂದುವರಿಸಲಾಗಿದೆ. ಸಾಮ್ರಾಜ್ಯಶಾಹಿ ಮಾರುಕಟ್ಟೆಯ ವಿಸ್ತರಣೆಯನ್ನೇ, ಅದರ ಲಾಭದ ಕಾರ್ಯತಂತ್ರಗಳನ್ನೇ 'ಆಧುನಿಕತೆ', 'ಮುಖ್ಯವಾಹಿನಿ' ಎಂದು ಕರೆಯಲಾಗುತ್ತಿದೆ. ಎಲ್ಲಾ ಬಗೆಯ ಅಸಮಾನತೆ ಹಾಗೂ ಶೋಷಣೆಯನ್ನು ಹಾಗೇ ಮುಂದುವರಿಸಲಾಗಿದೆ. ಜೊತೆಗೆ ಇವನ್ನು ಹೊಸ ವಿಧಾನಗಳಲ್ಲಿ ಮುಂದುವರಿಸಲಾಗುತ್ತಿದೆ. ಅಂದರೆ 'ಮುಖ್ಯವಾಹಿನಿ' ಎಂಬುದರಲ್ಲೆ ಶೋಷಣೆಯ ಆಧುನಿಕ ರೂಪಗಳಿವೆ, ವಿಧಾನಗಳಿವೆ.

ಅಂಚಿನ ಸಮುದಾಯಗಳು ತಮಗೆ ಸಮಾನತೆಬೇಕೆಂದು ಆಲೋಚಿಸುತ್ತಿವೆ, ಹೋರಾಡುತ್ತಿವೆ. ಈ ಆಲೋಚನೆ ಮತ್ತು ಹೋರಾಟದಲ್ಲಿ ಅವು 'ಸ್ವಾತಂತ್ರ್ಯ' ಎಂಬುದನ್ನು ಒಂದು ಹಕ್ಕಾಗಿ ಬಳಸುತ್ತಿವೆ. ಈಗ ಅವರ ಈ ಹಕ್ಕುಗಳನ್ನೇ ಕಿತ್ತುಕೊಳ್ಳಲಾಗುತ್ತಿದೆ. ಈ ಕ್ರಿಯೆ ಶುರುವಾದ ಮೇಲೆ ಹಕ್ಕುಗಳಿಗಾಗಿ ಹೋರಾಡುವ ಸ್ಥಿತಿ ನಿರ್ಮಾಣವಾಗಿದೆ. ಹೀಗೆ ಹೋರಾಡುವ ಮೂಲಕ ಸಮಾನತೆಯನ್ನು ಸಾಧಿಸುವುದು ಸಮುದಾಯಗಳ ಗುರಿಯಾಗಿದೆ. ಸಮಾನತೆಗಾಗಿ ನಡೆಸುವ ಹೋರಾಟದಲ್ಲಿ ಸ್ವಾತಂತ್ರ್ಯ ಎಂಬುದು ಒಂದು ಹಕ್ಕು. ಅದಕ್ಕಾಗಿಯೇ ಸಂವಿಧಾನದಲ್ಲಿ 'ಸ್ವಾತಂತ್ರ್ಯದ ಹಕ್ಕು' ಎಂದು ಕರೆಯಲಾಗಿದೆ.

ಅಸಮಾನತೆ, ಅನ್ಯಾಯ ಮತ್ತು ಶೋಷಣೆ ಇರುವ ವ್ಯವಸ್ಥೆಯಲ್ಲಿ, ಅಂಚಿನ ಮತ್ತು ಶೋಷಿತ ಸಮುದಾಯಗಳು ಸಮಾನತೆಗಾಗಿ ಹೋರಾಟ ನಡೆಸುತ್ತಿವೆ. ಇಂತಹ ಸಮಯದಲ್ಲಿ ಸಮಾನತೆಗಾಗಿ ನಡೆಸುವ ಹೋರಾಟಗಳನ್ನು ಬದಿಗೆ ಸರಿಸಿ, ಹಕ್ಕುಗಳಿಗಾಗಿ ನಡೆಸುವ ಹೋರಾಟಗಳನ್ನು ಹೆಚ್ಚು ಜನಪ್ರಿಯಗೊಳಿಸಲಾಗುತ್ತಿದೆ. ಈ ಹಕ್ಕುಗಳಿಗಾಗಿ ನಡೆಸುತ್ತಿರುವ ಹೋರಾಟಗಳು ಅಸಮಾನತೆ ಮತ್ತು ಶೋಷಣೆಯನ್ನು ಎರಡನೆಯ ಪ್ರಶ್ನೆಯನ್ನಾಗಿ ಪರಿಗಣಿಸುತ್ತಿವೆ. ಈ ಮೂಲಕ ಅತ್ಯಂತ ಅಪಾಯಕಾರಿ ವಾತಾವರಣವನ್ನು ನಿರ್ಮಾಣ ಮಾಡಲಾಗಿದೆ. ಶೋಷಿತ ಸಮುದಾಯಗಳಿಗೆ ಈಗ ಬೇಕಾಗಿರುವುದು ಕೇವಲ ಹಕ್ಕುಗಳ ರೂಪದ 'ಸ್ವಾತಂತ್ರ್ಯ' ಮಾತ್ರವಲ್ಲ; ಎಲ್ಲಾ ಬಗೆಯ ಅಸಮಾನತೆ ಮತ್ತು ಶೋಷಣೆಗಳು ಇಲ್ಲದ ಸಮಾನತೆ ಬೇಕಾಗಿದೆ. ಅಂಚಿನ ಸಮುದಾಯಗಳು ಇದಕ್ಕಾಗಿ ಆಲೋಚಿಸುವ ಮತ್ತು ಹೋರಾಡುವ ಅಗತ್ಯವಿದೆ.

* * *

೨೦೦೮ರ ಡಿಸೆಂಬರ್ ೨೪, ೨೫ರಂದು ಮೈಸೂರಿನ ರಂಗಾಯಣದಲ್ಲಿ ನಡೆಸಿದ ರಾಷ್ಟ್ರೀಯ ನಾಟಕೋತ್ಸವ ಮತ್ತು 'ಸ್ವಾತಂತ್ರ್ಯ ಹಾಗೂ ರಂಗಭೂಮಿ' ಎಂಬ ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಮಂಡಿಸಿದ ಪ್ರಬಂಧ. ಈ ಕುರಿತು ಆಲೋಚಿಸಲು ಕಾರಣರಾದ ಕಾ. ತ. ಚಿಕ್ಕಣ್ಣ ಅವರಿಗೆ ವಂದನೆಗಳು. □

ಹೊರಟು ನಿಂತೆ:



ಸಾಕ್ರಟೀಸ ರಕ್ತದಲ್ಲಿ ಹರಿದಂತೆ
ಬುದ್ಧ ಬೆಸೆದುಕೊಂಡಂತೆ
ಕಾಫ್ಕ ಕತೆಗಳ ತೇಪೆ ಹಜ್ಜದಂತೆ
ಗೊತ್ತು ಗುರಿಯಿಲ್ಲದೆ ಹೊರಟು ನಿಂತೆ
ಅರ್ಧಚಂದ್ರ ಪ್ರಯೋಗಾರ್ಥ ನೌಕರಿಗಾಗಿ!

ಕವಿತೆ ಕಥೆಗಳ ಕಟ್ಟು ಹೊತ್ತು
ಸರಿ ರಾತ್ರಿ ಲಾರಿಯಲಿ ತುಂಬಿ ಸರಂಜಾಮು
ಕಣ್ತುಂಬ ಒಲವ ವಿರಹದಲಿ ಬಂಧ ಕಳಚಿ
ಬಂದಾಗ ಮುಂಜಾನೆ ಘಮಘಮಿಸುತ್ತಿತ್ತು!

ಬಸಿರ ಒಳಗಿಂದ; ಮೊಟ್ಟೆಯೊಡೆದ ಮರಿಯಾಗಿಸಿ
ಮತ್ತೊಂದು ಜಗವನ್ನು ನೋಡಲು
ಎದೆತುಂಬಾ ಬೆಳಕನ್ನು ಪಡೆಯಲು
ತೊಡೆಮುರಿದ 'ಅಹಂ' ಅನ್ನು ತೊರೆಯಲು
ಕನಸುಗಳನು ಬೆಚ್ಚಗಿಡಲು
ಹದವಾದ ನೆಲದೊಳಗೆ ಬಚ್ಚಿಡಲು
ಇಬ್ಬನಿಗಳ ಗೆಳೆತನ ಬೆಸೆಯಲು
ಹೊರಟು ಬಂದಿದ್ದು
ಅರ್ಧ ಚಂದ್ರ ಪ್ರಯೋಗಾರ್ಥ ನೌಕರಿಗಾಗಿ!

ನಾನೆಲ್ಲಿ ಇರುವ ನೆಲವೇ
ತಪೋಭುವಿ
ಕಾವ್ಯ ಸೃಷ್ಟಿಯಗವಿ
ಗಾಳಿ ನೀರು ಸಂಭಾವಿ ನನಗದು
ಗೇಣು ಹೊಟ್ಟೆಗೆ, ಅಪ್ಪಿಕೊಂಡ ಬಳ್ಳಿಗಳಿಗೆ
ಒಪ್ಪಿಕೊಂಡ ಬದುಕ ಅಗುಳಿಗೆ
ನೊಂದ ಮನಕೆ; ಇಂದು ನಾಳೆಗಳಿಗೆ
'ಬಂಧ' ಕೆಡವಿದ ಒಲವಿಗೆ!

○ ಟಿ. ಎಸ್. ರಾಜೇಂದ್ರಪ್ರಸಾದ್

ಜಾತಿ ರಾಜಕಾರಣ ಮತ್ತು ಸಾಮಾಜಿಕ ನ್ಯಾಯ

ವೈ. ಮರಿಸ್ವಾಮಿ

ರಾಜಕೀಯ ಕ್ಷೇತ್ರದಲ್ಲಿ ಸಾಮಾಜಿಕ ನ್ಯಾಯ/ ರಾಜಕೀಯ ಮೀಸಲಾತಿ ಅನುಷ್ಠಾನಗೊಂಡ ನಂತರ ಪ್ರಬಲ ಜಾತಿಗಳ ರಾಜಕೀಯ ಪಟ್ಟುಗಳಿಗೆ ಮತ್ತು ಅಧಿಕಾರ ರಾಜಕಾರಣಕ್ಕೆ ಪ್ರಬಲ ಹೊಡೆತವೇನೂ ಬೀಳಲಿಲ್ಲ. ಈ ಜಾತಿಗಳು ಆಯಾ ಕ್ಷೇತ್ರಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿರುವ ಜಾತಿಯ, ತಮ್ಮ ನಿಷ್ಠಾವಂತ ಹಿಂಬಾಲಕರಿಗೆ ಟಿಕೆಟ್ ಕೊಡಿಸಿ ಗೆಲುವು ತಂದುಕೊಡುವುದರ ಮೂಲಕ ರಿಮೋಟ್ ಕಂಟ್ರೋಲ್ ವ್ಯವಸ್ಥೆಯನ್ನು ರೂಢಿಸಿಕೊಂಡವು. ಪರಿಶಿಷ್ಟ ಜಾತಿಗಳಲ್ಲಿ ತಮ್ಮ ಜನಸಂಖ್ಯೆ, ಶೈಕ್ಷಣಿಕ ಮತ್ತು ಆರ್ಥಿಕ ಹಿಂದುಳಿದಿರುವಿಕೆಯ ಕಾರಣದಿಂದ ನಿರ್ಲಕ್ಷ್ಯಕ್ಕೊಳಗಾಗಿರುವ ಡೋಹರ, ಮೇದಾರ, ಮೋಚಿಗಾರ, ಕೊರಮ ಮುಂತಾದ ಜಾತಿಗಳು ಜಾತಿಬಲವಿಲ್ಲದ ಕಾರಣದಿಂದಲೇ ರಾಜಕೀಯವಾಗಿ ಮೂಲೆ ಗುಂಪಾಗುವಂತಾಗಿದೆ.

ಜಾತಿ ಭಾರತೀಯ ಸಮಾಜದ ವಿಶಿಷ್ಟ ಮತ್ತು ವಾಸ್ತವಿಕ ಗುಣಲಕ್ಷಣ. ಮನುವಿನ ಶ್ರೇಣೀಕೃತ ಚಾತುರ್‌ವರ್ಣದ ವ್ಯವಸ್ಥೆಯಲ್ಲಿ ಮೇಲಿರುವ ಜಾತಿಗಳು ಸಾಮಾಜಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ, ಸಾಂಸ್ಕೃತಿಕವಾಗಿ ಮತ್ತು ಧಾರ್ಮಿಕವಾಗಿ ಸಂಘಟಿತವಾಗಿ, ವಿವಿಧ ರಾಜಕೀಯ ಪಕ್ಷಗಳ ನಾಯಕತ್ವವನ್ನು ವಹಿಸುವುದರ ಮುಖಾಂತರ ತಮ್ಮ ಮೂಗಿನ ನೇರಕ್ಕೆ ದೇಶದ ರಾಜಕಾರಣವನ್ನು ನಡೆಸಿಕೊಂಡು ಬಂದಿವೆ. ಮನುವಿನ ಸಾಮಾಜಿಕ ವ್ಯವಸ್ಥೆಯಲ್ಲಿ ಕೆಳಹಂತದಲ್ಲಿರುವ ಜಾತಿಗಳು ಹಾಗೂ ಜಾತಿ ವ್ಯವಸ್ಥೆಯಿಂದ ದೂರವಿರುವ ಪಂಚಮ ಅಥವಾ ಅಸ್ಪೃಶ್ಯ ಜಾತಿಗಳು ಮೇಲ್ಜಾತಿ ನಾಯಕತ್ವದ ವಿವಿಧ ರಾಜಕೀಯ ಪಕ್ಷಗಳ ಕೀಲು ಕುದುರೆಗಳಂತಾಗಿವೆ.

ಅಧಿಕಾರ ರಾಜಕಾರಣದಲ್ಲಿ ಪ್ರಬಲ ಜಾತಿಗಳ ಏಕಸ್ವಾಮ್ಯವನ್ನು ಮುರಿದು ಸಾಮಾಜಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ ಹಿಂದುಳಿದಿರುವ, ಧಾರ್ಮಿಕವಾಗಿ ಮತ್ತು ರಾಜಕೀಯವಾಗಿ ಅಸಂಘಟಿತವಾಗಿರುವ ಜಾತಿಗಳಿಗೆ ಸೂಕ್ತ ರಾಜಕೀಯ ಪ್ರಾತಿನಿಧ್ಯವನ್ನು ಕಲ್ಪಿಸುವ ನಿಟ್ಟಿನಲ್ಲಿ ಸಾಮಾಜಿಕ ನ್ಯಾಯದ ಪರಿಕಲ್ಪನೆ(ರಾಜಕೀಯ ಮೀಸಲಾತಿ ಅತ್ಯಂತ ಮಹತ್ವದ್ದಾಗಿದೆ. ಡಾ.ಬಿ.ಆರ್. ಅಂಬೇಡ್ಕರ್ ಮತ್ತು ಗಾಂಧಿಯವರ ನಡುವೆ 1932ರಲ್ಲಿ ನಡೆದ ಪೂನಾ ಒಪ್ಪಂದದ ಪರಿಣಾಮವಾಗಿ ಅಸ್ಪೃಶ್ಯ ಜಾತಿಗಳಿಗೆ ರಾಜಕೀಯ ಮೀಸಲಾತಿ ದೊರೆಯಿತು. ಈ ಮೀಸಲಾತಿಯನ್ನು ಪಡೆದುಕೊಳ್ಳಲು ಹಿಂದುಳಿದ ಜಾತಿಗಳು ವಿ.ಪಿ.ಸಿಂಗ್‌ರವರ ಸರ್ಕಾರ ಮಂಡಲ್ ವರದಿಯನ್ನು ಜಾರಿಗೆ ತರುವವರೆಗೆ ಕಾಯಬೇಕಾಯಿತು.

ರಾಜಕೀಯ ಕ್ಷೇತ್ರದಲ್ಲಿ ಸಾಮಾಜಿಕ ನ್ಯಾಯ/ ರಾಜಕೀಯ ಮೀಸಲಾತಿ ಅನುಷ್ಠಾನಗೊಂಡ ನಂತರ ಪ್ರಬಲ ಜಾತಿಗಳ ರಾಜಕೀಯ ಪಟ್ಟುಗಳಿಗೆ ಮತ್ತು ಅಧಿಕಾರ ರಾಜಕಾರಣಕ್ಕೆ ಪ್ರಬಲ ಹೊಡೆತವೇನೂ ಬೀಳಲಿಲ್ಲ. ಈ ಜಾತಿಗಳು ಆಯಾ ಕ್ಷೇತ್ರಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿರುವ ಜಾತಿಯ, ತಮ್ಮ ನಿಷ್ಠಾವಂತ ಹಿಂಬಾಲಕರಿಗೆ ಟಿಕೆಟ್ ಕೊಡಿಸಿ ಗೆಲುವು ತಂದುಕೊಡುವುದರ ಮೂಲಕ ರಿಮೋಟ್ ಕಂಟ್ರೋಲ್ ವ್ಯವಸ್ಥೆಯನ್ನು ರೂಢಿಸಿಕೊಂಡವು. ಪರಿಶಿಷ್ಟ ಜಾತಿಗಳಲ್ಲಿ ತಮ್ಮ ಜನಸಂಖ್ಯೆ, ಶೈಕ್ಷಣಿಕ ಮತ್ತು ಆರ್ಥಿಕ ಹಿಂದುಳಿದಿರುವಿಕೆಯ ಕಾರಣದಿಂದ ನಿರ್ಲಕ್ಷ್ಯಕ್ಕೊಳಗಾಗಿರುವ ಡೋಹರ, ಮೇದಾರ, ಮೋಚಿಗಾರ, ಕೊರಮ ಮುಂತಾದ ಜಾತಿಗಳು ಜಾತಿಬಲವಿಲ್ಲದ ಕಾರಣದಿಂದಲೇ ರಾಜಕೀಯವಾಗಿ ಮೂಲೆ ಗುಂಪಾಗುವಂತಾಗಿದೆ. ಉಪ್ಪಾರ, ಅಗಸ, ಗಾಣಿಗ, ಕಬ್ಬೇರ, ಬೆಸ್ತ ಇತ್ಯಾದಿ ಜಾತಿಗಳು ಈ ಕಾರಣದಿಂದಲೇ ಹಿಂದುಳಿದ ಜಾತಿಗಳ ರಾಜಕೀಯ ಮೀಸಲಾತಿಯಲ್ಲಿ ತಮ್ಮ ಪಾಲನ್ನು ಪಡೆಯಲು ನಿಶ್ಯಕ್ತವಾಗಿವೆ. ಮುಸ್ಲಿಮ್ ಸಮುದಾಯವನ್ನು ಹೊರತು ಪಡಿಸಿ, ಇತರೆ ಧಾರ್ಮಿಕ ಅಲ್ಪಸಂಖ್ಯಾತ, ಸಮುದಾಯಗಳಾದ ಕ್ರೈಸ್ತ, ಪಾರ್ಸಿ, ಸಿಖ್ ಸಮುದಾಯಗಳು ರಾಜ್ಯದಲ್ಲಿ ರಾಜಕೀಯವಾಗಿ ತಮ್ಮ ಅಸ್ತಿತ್ವವನ್ನು ಪ್ರತಿಪಾದಿಸುವುದರಲ್ಲಿ ವಿಫಲವಾಗಿವೆ.

ದೇಶದ ಜನಸಂಖ್ಯೆಯಲ್ಲಿ ಶೇ. 50ಕ್ಕಿಂತಲೂ ಅಧಿಕ ಸಂಖ್ಯೆಯಲ್ಲಿರುವ ಮಹಿಳೆಯರಿಗೆ ನಿರಂತರವಾಗಿ ರಾಜಕೀಯ ಕ್ಷೇತ್ರದಲ್ಲಿ ಅವಕಾಶವನ್ನು ನಿರಾಕರಿಸುತ್ತ ಬರಲಾಗಿದೆ. ಮಹಿಳೆಯರಿಗೆ ಶೆ. 33ರಷ್ಟು ಮೀಸಲಾತಿಯನ್ನು ಒದಗಿಸುವುದರ ಕುರಿತು ಹಲವಾರು ವರ್ಷಗಳಿಂದ ಕೇವಲ ಒಣ ಚರ್ಚೆ ನಡೆಯತ್ತಿದೆ. ಆಂತರಿಕವಾಗಿ ಎಲ್ಲಾ ರಾಜಕೀಯ ಪಕ್ಷಗಳು ಮಹಿಳಾ ಮೀಸಲಾತಿಗೆ ವಿರುದ್ಧವಾಗಿದ್ದು. ಮಹಿಳಾ ಕುಲದ ಮತಗಳನ್ನು ಕಬಳಿಸಲು ಈ ವಿಷಯವನ್ನು ಶಾಶ್ವತವಾಗಿ ಜೀವಂತವಾಗಿಡಲು ಪಣತೊಟ್ಟಂತೆ ವರ್ತಿಸುತ್ತಿವೆ. ಲೈಂಗಿಕ ಅಲ್ಪಸಂಖ್ಯಾತರು, ಭಾಷಾ ಅಲ್ಪಸಂಖ್ಯಾತರು, ಹಿಜಡಾಗಳು(ಮಂಗಳಮುಖಿಯರು) ಮತ್ತು ವಿಕಲಚೇತನರು ಪಕ್ಷ ರಾಜಕಾರಣದಲ್ಲಿ ನಿರಂತರವಾಗಿ ಕಳೆದು ಹೋಗುತ್ತಿದ್ದಾರೆ.

ಈ ದೇಶವನ್ನು ಸುಮಾರು 50 ವರ್ಷಗಹಳಿಗೂ ಹೆಚ್ಚು ಕಾಲ ದೇಶವನ್ನಾಳಿದ ಕಾಂಗ್ರೆಸ್ ಪಕ್ಷ, ದಲಿತ ಹಿಂದುಳಿದ ಮತ್ತು ಧಾರ್ಮಿಕ ಅಲ್ಪಸಂಖ್ಯಾತ ಸಮುದಾಯದಗಳನ್ನು ತನ್ನ ಮತಬ್ಯಾಂಕನ್ನಾಗಿ ಬಳಸಿಕೊಂಡು ಬೀಸಾಡಿದೆ. ಇಂದಿರಾಗಾಂಧಿಯವರ ಹತ್ಯೆಯ ನಂತಹ ಪ್ರಧಾನಮಂತ್ರಿಯಾಗಬೇಕಾಗಿದ್ದ ಬಾಬು ಜಗಜೀವನ್ ರಾಮ್‌ರವರಿಗೆ ಕಾಂಗ್ರೆಸ್ ಮಾಡಿದ ಧೋಖಾ ಕ್ಷಮಿಸಲಾಗದ್ದು. ರಾಜ್ಯದಲ್ಲಿ ಮುಖ್ಯಮಂತ್ರಿಗಳಾಗಬೇಕಾದ ಅರ್ಹತೆಯನ್ನು ಹೊಂದಿದ್ದ ಎನ್. ರಾಚಯ್ಯ, ಬಿ.ರಾಚಯ್ಯ, ಬಿ.ಬಸವಲಿಂಗಪ್ಪ ಮತ್ತು ಕೆ.ಹೆಚ್. ರಂಗನಾಥ್‌ರವರಿಗೆ



ಈ ಪಕ್ಷ ಕೊಟ್ಟ ಒಳ ಪೆಟ್ಟುಗಳು ಇಂದಿಗೂ ದಲಿತರನ್ನು ಬಾಧಿಸುತ್ತಿವೆ. ಈ ಪಟ್ಟಿಗೆ ಇತ್ತೀಚೆಗೆ ಸೇರ್ಪಡೆಯಾದ ಹೆಸರು ಮಲ್ಲಿಕಾರ್ಜುನ ಖರ್ಗೆಯವರದು. ನಿರಂತರವಾಗಿ ಆರೇಳು ಸಲ ಸಂಸತ್ ಸದಸ್ಯರಾಗಿ ಆಯ್ಕೆಯಾಗಿ, ಕೇಂದ್ರ ಸಚಿವರಾಗಿ ಅಪಾರ ಜನಪ್ರಿಯತೆಯನ್ನು ಪಡೆದಿರುವ ಜಾಫರ್‌ಶರೀಫ್‌ರಂತಹ ಹಿರಿಯ ರಾಜಕಾರಣಿಯನ್ನು, ಅವರು ಮುಸ್ಲಿಮ್ ಸಮುದಾಯಕ್ಕೆ ಸೇರಿದವರೆನ್ನುವ ಏಕೈಕ ಕಾರಣಕ್ಕೆ ಮುಖ್ಯಮಂತ್ರಿ ಅಭ್ಯರ್ಥಿಯನ್ನಾಗಿ ಪ್ರತಿಬಿಂಬಿಸಲಿಲ್ಲ. ದಿವಂಗತ ದೇವರಾಜ ಅರಸು ಅವರ ಅವಧಿಯನ್ನು ಹೊರತು ಪಡಿಸಿ ಬೇರ್‍ಯಾವ ಸಂದರ್ಭದಲ್ಲಿ ಕಾಂಗ್ರೆಸ್ ತಳಸಮುದಾಯಗಳಿಗೆ, ಶೋಷಿತರಲ್ಲೇ ಶೋಷಿತರಾಗಿರುವವರಿಗೆ, ಹಿಂದುಳಿದವರಲ್ಲೇ ಹಿಂದುಳಿದಿರುವ ಜಾತಿಗಳಿಗೆ ರಾಜಕೀಯ ಸಮಾನತೆಯನ್ನು ಒದಗಿಸಿಲ್ಲ.

ಕಾಂಗ್ರೆಸ್‌ಗೆ ಪರ್ಯಾಯವಾಗಿ ರಾಜ್ಯದಲ್ಲಿ ಬೆಳೆದು ಬಂದ ಜನತಾ ಪಕ್ಷ- ಜನತಾದಳದಂತಹ ರಾಜಕೀಯ ಪಕ್ಷಗಳು ಬ್ರಾಹ್ಮಣ, ಒಕ್ಕಲಿಗ ಮತ್ತು ಲಿಂಗಾಯತ ಜಾತಿಗಳ ರಾಜಕೀಯ ನಾಯಕರಿಗೆ ರಾಜಕೀಯ ಅಧಿಕಾರವನ್ನು ಹಿಡಿಯಲು ಅನುವು ಮಾಡಿಕೊಟ್ಟವೇ ಹೊರತು, ಕಾಂಗ್ರೆಸ್ ಧೋರಣೆಯಿಂದ ಅಧಿಕಾರದಿಂದ ವಂಚಿತವಾಗಿದ್ದ ಜಾತಿಗಳಿಗೆ ಸಾಮಾಜಿಕ ನ್ಯಾಯವನ್ನು ಒದಗಿಸಲಿಲ್ಲ. ಪರಸ್ಪರ ಕಾಲೆಳೆಯುವ ಜಗಳಗಂಟರ ಪಕ್ಷವೆಂದೇ ಹೆಸರಾಗಿದ್ದ ಜನತಾದಳ ಈ ಮೂರೂ ಜಾತಿಗಳ ಅಧಿಕಾರ ದಾಹಕ್ಕಾಗಿ ಛಿದ್ರ ಛಿದ್ರವಾಗಿ, ಈಗ ಕೊನೆಗೆ ಹೆಚ್.ಡಿ. ದೇವೇಗೌಡರ 'ಪ್ರವೇಟ್ ಲಿಮಿಟೆಡ್ ಕಂಪನಿಯಾಗಿ' ಉಳಿದಿದೆ. ಜಾತ್ಯಾತೀತ ಜನತಾದಳದಲ್ಲಿ ಜಾತೀಯತೆಯೇ ತುಂಬಿ ತುಳುಕುತ್ತಿದ್ದು, ಜಾತ್ಯಾತೀತ ಮೌಲ್ಯಗಳನ್ನು ದುರ್ಬೀನು ಹಾಕಿಕೊಂಡು ಹುಡುಕಬೇಕಾಗಿದೆ. ಮುಖ್ಯಮಂತ್ರಿ ಸ್ಥಾನದಿಂದ ಅಹಿಂದ ನಾಯಕ ಸಿದ್ಧರಾಮಯ್ಯನವರನ್ನು ಈ ಪಕ್ಷದ ಅಪ್ಪ-ಮಕ್ಕಳು ನಡೆಸಿಕೊಂಡ ರೀತಿ, ಇತ್ತೀಚೆಗೆ ವಿಧಾನ ಪರಿಷತ್ ಉಪಸಭಾಪತಿ ಸ್ಥಾನದ ಪ್ರಬಲ ಆಕಾಂಕ್ಷಿಯಾಗಿದ್ದ ಅಬ್ದುಲ್ ಅಜೀಮ್ ಅವರ ಸದ್ದಡಗಿಸಿ ಸ್ವಜಾತಿಯ ಪುಟ್ಟಣ್ಣಯ್ಯನವರಿಗೆ ಆ ಸ್ಥಾನ ದಕ್ಕುವಂತೆ ನೋಡಿಕೊಂಡದ್ದು, ಈ ಪಕ್ಷದ ಜಾತ್ಯಾತೀತ ಧೋರಣೆಯ ಎರಡು ಸ್ಯಾಂಪಲ್‌ಗಳಷ್ಟೇ!

ಮನು ಸಂವಿಧಾನವನ್ನೇ ತನ್ನ ಪಕ್ಷದ ಸಿದ್ಧಾಂತವನ್ನಾಗಿರಿಸಿಕೊಂಡಿರುವ ಬಿ.ಜೆ.ಪಿ. ಆರಂಭದಿಂದಲೂ ಮೀಸಲಾತಿ ಪರಿಕಲ್ಪನೆಯನ್ನು, ಸಾಮಾಜಿಕ ನ್ಯಾಯವನ್ನು ವಿರೋಧಿಸುತ್ತ ಬಂದಿದೆ. ಮಂಡಲ್ ವರದಿಯ ಅನುಷ್ಠಾನವನ್ನು ವಿರೋಧಿಸಿ ಸಂಘ ಪರಿವಾರ ಮತ್ತು ಬಿ.ಜೆ.ಪಿ. ನಡೆಸಿದ ದೊಂಬಿ-ಗಲಭೆ, ಅರುಣ್ ಶೌರಿ ಎನ್ನುವ ತಲೆತಿರುಕ 'ವರ್ಷಿಪ್ ಆಫ್ ಫಾಲ್ಸ್ ಗಾಡ್ಸ್' ಎನ್ನುವ ಕೃತಿ ಬರೆದು ಅಂಬೇಡ್ಕರರ ವಿರುದ್ಧ ಕಾರಿಕೊಂಡದ್ದು ಹಾಗೂ ಇತ್ತೀಚೆಗೆ ಮನೋಹರ ಮಸ್ಕಿ ಎನ್ನುವ ರಾಜ್ಯದ ವಿಧಾನ ಪರಿಷತ್ ಸದಸ್ಯನೊಬ್ಬ, ಅಂಬೇಡ್ಕರ್ ಸಂವಿಧಾನ ರಚಿಸಲಿಲ್ಲ. ಅವರು ಸಂವಿಧಾನ ರಚನಾ ಸಭೆಗೆ ಕೇವಲ ಅಧ್ಯಕ್ಷರಾಗಿದ್ದರು ಮತ್ತು ಆ ಸಮಿತಿ ಸಂವಿಧಾನವನ್ನು ರಚಿಸಿದೆ" ಎಂದು ಹೇಳಿರುವ ಘಟನೆ ಬಿ.ಜೆಪಿ ಸಂಪೂರ್ಣವಾಗಿ ಈ ದೇಶದ ಅಸ್ಪೃಶ್ಯ ಜಾತಿಯ ಡಾ.ಬಿ.ಆರ್. ಅಂಬೇಡ್ಕರ್ ಬರೆದ ಸಾಮಾಜಿಕ ನ್ಯಾಯದ ಪರಿಕಲ್ಪನೆಯ ಪ್ರತೀಕವಾಗಿರುವ ಭಾರತೀಯ ಸಂವಿಧಾನಕ್ಕೆ ವಿರುದ್ಧವಾಗಿದೆ ಎನ್ನುವುದರಲ್ಲಿ ಯಾವುದೇ ಅನುಮಾನವುಳಿದಿಲ್ಲ.

ಬ್ರಾಹ್ಮಣ, ಬನಿಯ ಮತ್ತು ಮಾರ್ವಾಡಿಗಳಂತಹ ಈ ದೇಶದ ಜನಸಂಖ್ಯೆಯಲ್ಲಿ ಶೆ. 15ರಷ್ಟಿರುವ ಜಾತಿಗಳ ಹಿತಾಸಕ್ತಿಗಳನ್ನು ರಕ್ಷಿಸುವ ಸಂಘಪರಿವಾರದ ರಾಜಕೀಯ ವೇದಿಕೆಯಾಗಿರುವ ಬಿ.ಜೆ.ಪಿ., ಸಂಸದೀಯ ಪ್ರಜಾಪ್ರಭುತ್ವದಲ್ಲಿ ಬಹುಸಂಖ್ಯಾತ ಜಾತಿಗಳ ಬೆಂಬಲವಿಲ್ಲದೆ ರಾಜಕೀಯ ಅಧಿಕಾರವನ್ನಿಡಿಯಲು ಸಾಧ್ಯವಿಲ್ಲ ಎನ್ನುವ ಕಾರಣದಿಂದ, ಅನಿವಾರ್ಯವಾಗಿ ಇತರೆ ಜಾತಿಗಳನ್ನು ಓಲೈಸಲು ಹಿಂದುತ್ವದ 'ಅಲ್ಪಸಂಖ್ಯಾತ-ಬಹುಸಂಖ್ಯಾತ' ಎನ್ನುವ ಒಡೆದಾಳುವ ಕೋಮುವಾದಿ ರಾಜಕಾರಣವನ್ನು ಮಾಡುತ್ತಿದೆ.

ಕಾಂಗ್ರೆಸ್, ಜೆ.ಡಿ.ಎಸ್., ಬಿ.ಜೆ.ಪಿ., ಮುಂತಾದ ಮುಖ್ಯವಾಹಿನಿಯಲ್ಲಿರುವ ರಾಜಕೀಯ ಪಕ್ಷಗಳು, ರಾಜಕೀಯವಾಗಿ ಸಂಘಟಿತವಾಗಿರುವ ಜಾತಿಗಳ ನಿಯಂತ್ರಣದಲ್ಲಿದ್ದು, ಅಧಿಕಾರ ರಾಜಕಾರಣಕ್ಕೆ ಬೇಕಾದ 'ಮಾಂತ್ರಿಕ ಸಂಖ್ಯೆ'ಗಳನ್ನಾಗಿ ದಲಿತ, ಹಿಂದುಳಿದ ಮತ್ತು ಧಾರ್ಮಿಕ ಅಲ್ಪ ಸಂಖ್ಯಾತ ಸಮುದಾಯಗಳನ್ನು ಹಾಗೂ ಆ ಸಮುದಾಯಗಳ ನಾಯಕರನ್ನು ದಾಳವನ್ನಾಗಿ ಬಳಸಿಕೊಳ್ಳಲಾಗುತ್ತಿದೆ. ಕರ್ನಾಟಕದಲ್ಲಿ ಬಿ.ಜೆ.ಪಿ ಲಿಂಗಾಯತರ ಮತ್ತು ಬ್ರಾಹ್ಮಣರ ಪಕ್ಷವಾಗಿ, ಜೆ.ಡಿ.ಎಸ್., ಒಕ್ಕಲಿಗರ ಪಕ್ಷವಾಗಿ ಹಾಗೂ ಕಾಂಗ್ರೆಸ್ ದಲಿತ, ಹಿಂದುಳಿದ ಮತ್ತು ಧಾರ್ಮಿಕ ಅಲ್ಪಸಂಖ್ಯಾತರ ಪಕ್ಷವಾಗಿ (ಪ್ರಸ್ತುತ ಲೋಕಸಭಾ ಚುನಾವಣೆಗೆ ಸೀಮಿತವಾಗಿ) ಗುರುತಿಸಿಕೊಂಡಿವೆ.

ಕಾಂಗ್ರೆಸ್, ಜೆ.ಡಿ.ಎಸ್., ಬಿ.ಜೆ.ಪಿ., ಮುಂತಾದ ಮುಖ್ಯವಾಹಿನಿಯಲ್ಲಿರುವ ರಾಜಕೀಯ ಪಕ್ಷಗಳು, ರಾಜಕೀಯವಾಗಿ ಸಂಘಟಿತವಾಗಿರುವ ಜಾತಿಗಳ ನಿಯಂತ್ರಣದಲ್ಲಿದ್ದು, ಅಧಿಕಾರ ರಾಜಕಾರಣಕ್ಕೆ ಬೇಕಾದ 'ಮಾಂತ್ರಿಕ ಸಂಖ್ಯೆ'ಗಳನ್ನಾಗಿ ದಲಿತ, ಹಿಂದುಳಿದ ಮತ್ತು ಧಾರ್ಮಿಕ ಅಲ್ಪ ಸಂಖ್ಯಾತ ಸಮುದಾಯಗಳನ್ನು ಹಾಗೂ ಆ ಸಮುದಾಯಗಳ ನಾಯಕರನ್ನು ದಾಳವನ್ನಾಗಿ ಬಳಸಿಕೊಳ್ಳಲಾಗುತ್ತಿದೆ. ಕರ್ನಾಟಕದಲ್ಲಿ ಬಿ.ಜೆ.ಪಿ ಲಿಂಗಾಯತರ ಮತ್ತು ಬ್ರಾಹ್ಮಣರ ಪಕ್ಷವಾಗಿ, ಜೆ.ಡಿ.ಎಸ್., ಒಕ್ಕಲಿಗರ ಪಕ್ಷವಾಗಿ ಹಾಗೂ ಕಾಂಗ್ರೆಸ್ ದಲಿತ, ಹಿಂದುಳಿದ ಮತ್ತು ಧಾರ್ಮಿಕ ಅಲ್ಪಸಂಖ್ಯಾತರ ಪಕ್ಷವಾಗಿ (ಪ್ರಸ್ತುತ ಲೋಕಸಭಾ ಚುನಾವಣೆಗೆ ಸೀಮಿತವಾಗಿ) ಗುರುತಿಸಿಕೊಂಡಿವೆ.

ಈ ಸಲದ ಲೋಕಸಭಾ ಚುನಾವಣೆಯ 28 ಲೋಕಸಭಾ ಟಿಕೆಟ್‌ಗಳಲ್ಲಿ ಬಿ.ಜೆ.ಪಿ 8 ಟಿಕೆಟ್‌ಗಳನ್ನು (ಶೇ. 33) ಲಿಂಗಾಯತರಿಗೆ, ರಾಜ್ಯದ ಜನಸಂಖ್ಯೆಯಲ್ಲಿ ಕೇವಲ ಶೇ. 3.81 ರಷ್ಟಿರುವ ಬ್ರಾಹ್ಮಣರಿಗೆ 3 ಟಿಕೆಟ್‌ಗಳನ್ನು ಕೊಟ್ಟಿದೆ. ಧಾರ್ಮಿಕ ಅಲ್ಪಸಂಖ್ಯಾತರಿಗೆ ಒಂದೂ ಟಿಕೆಟ್ ಕೊಡದೆ, ತನ್ನ 'ಬೇರ್ಪಡಿಸುವಿಕೆಯ ರಾಜಕಾರಣವನ್ನು' (Exclusive Politics) ಮುಂದುವರಿಸಿದೆ. ಜೆ.ಡಿಎಸ್. ಕೇವಲ 18 ಕ್ಷೇತ್ರಗಳಲ್ಲಿ ಸ್ಪರ್ಧಿಸಿದ್ದು, ಅದರಲ್ಲಿ 5 ಟಿಕೆಟ್‌ಗಳನ್ನು ಒಕ್ಕಲಿಗರಿಗೆ ಕೊಟ್ಟಿದೆ. ಮಹಿಳೆಯರಿಗೆ ಮತ್ತು ಕ್ರೈಸ್ತರಿಗೆ ಒಂದೂ ಟಿಕೆಟ್ ಕೊಟ್ಟಿಲ್ಲ. ಕಾಂಗ್ರೆಸ್ ಲಿಂಗಾಯತರಿಗೆ 5, ಒಕ್ಕಲಿಗರಿಗೆ 4, ಹಿಂದುಳಿದವರಿಗೆ 8, ಕ್ರೈಸ್ತ-ಮುಸಲ್ಮಾನರಿಗೆ ತಲಾ ಎರಡು ಟಿಕೆಟ್‌ಗಳನ್ನು ಕೊಟ್ಟು, ಟಿಕೆಟ್ ಹಂಚಿಕೆಯಲ್ಲಿ ಸಾಮಾಜಿಕ ನ್ಯಾಯವನ್ನು ಕಾಯ್ದುಕೊಳ್ಳುವ ಪ್ರಯತ್ನ ಮಾಡಿದೆ.

ರಾಜ್ಯದ ಒಕ್ಕಲಿಗ, ಲಿಂಗಾಯತ ಮತ್ತು ಬ್ರಾಹ್ಮಣ ಪಕ್ಷಾತೀತವಾಗಿ ತಮ್ಮ ಜನಸಂಖ್ಯೆಗಿಂತಲೂ ಹೆಚ್ಚಿನ ಸಂಖ್ಯೆಯಲ್ಲಿ ರಾಜಕೀಯ ಅಧಿಕಾರವನ್ನು, ಸ್ಥಾನಮಾನಗಳನ್ನು ಇತಿಹಾಸದುದ್ದಕ್ಕೂ ಪಡೆದುಕೊಂಡು ಬಂದಿವೆ. ಇದಕ್ಕೆ ಉದಾಹರಣೆಯಾಗಿ ಕಳೆದ ವಿಧಾನಸಭೆಯಲ್ಲಿ ಗೆದ್ದು ಬಂದ ಶಾಸಕರ ಜಾತಿವಾರು ಅಂಕಿ-ಅಂಶಗಳು ಇಲ್ಲಿವೆ.

ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳಿಗೆ ಕಡ್ಡಾಯವಾಗಿ ಮೀಸಲು ಕ್ಷೇತ್ರಗಳಿಗೆ ಟಿಕೆಟ್ ಕೊಡಲೇಬೇಕಾದ ಕಾರಣದಿಂದ, ಈ ವರ್ಗಗಳಿಂದ 54 ಜನ ಶಾಸಕರು ಆರಿಸಿ ಬಂದಿದ್ದಾರೆ. ಲಿಂಗಾಯತ, ಒಕ್ಕಲಿಗ ಮತ್ತು ಬ್ರಾಹ್ಮಣ ಜಾತಿಗಳಿಗೆ ಸೇರಿದ ಶಾಸಕರ ಸಂಖ್ಯೆ 120 ರಷ್ಟಿದ್ದು, ಇದು ಒಟ್ಟು ಶಾಸಕರ ಸಂಖ್ಯಾ ಬಲದ ಶೇ. 60 ಕ್ಕಿಂತಲೂ ಹೆಚ್ಚು. ರಾಜ್ಯದ ಶೇ. 32 ರಷ್ಟಿರುವ ಹಿಂದುಳಿದ ಜಾತಿಗಳ 35 ಶಾಸಕರಿದ್ದು, ಹಿಂದುಳಿದ ಜಾತಿಗಳಿಗೆ ದೊಡ್ಡ ಮಟ್ಟದಲ್ಲಿ ಸಾಮಾಜಿಕ ಅನ್ಯಾಯವಾಗಿದೆ. ಧಾರ್ಮಿಕ ಅಲ್ಪಸಂಖ್ಯಾತರಿಗೆ ಹಾಗೂ ಒಟ್ಟಾರೆಯಾಗಿ ಮಹಿಳೆಯರಿಗೆ ರಾಜಕೀಯ ದ್ರೋಹವೆಸಗಲಾಗಿದೆ. ಪರಿಶಿಷ್ಟ ಪಂಗಡದ ರಾಜಕೀಯ ಮೀಸಲಾತಿಯನ್ನು ಬೇಡ/

(18ನೇ ಪುಟಕ್ಕೆ)

ಜಾತಿ	ಜನಸಂಖ್ಯೆ (ಶೇಕಡವಾರು)	ಶಾಸಕರ ಸಂಖ್ಯೆ	ಬಿ.ಜೆ.ಪಿ	ಕಾಂಗ್ರೆಸ್	ಜೆ.ಡಿ.ಎಸ್
ಲಿಂಗಾಯತ	15.42	59	39	17	4
ಒಕ್ಕಲಿಗ	10.64	52	17	20	15
ಬ್ರಾಹ್ಮಣ	3.81	11	9	1	1
ಹಿಂದುಳಿದ ಜಾತಿಗಳು	32.00	35	16	14	4
ಪ.ಜಾತಿ/ ಪ.ವರ್ಗ	18.67	54	29	18	3
ಧಾರ್ಮಿಕ ಅಲ್ಪಸಂಖ್ಯಾತರು	12.23	11	ಆಂಗ್ಲೋ ಇಂಡಿಯನ್ –1 (ನಾಮ ನಿರ್ದೇಶಿತ)	9	1

ದಲಿತ ಚಳವಳಿ: ಉರಿಯುವ ನೆನಪುಗಳ ಚರಿತ್ರೆ

ಡಾ॥ ಜಿ.ಎಸ್. ಶಿವರುದ್ರಪ್ಪ

ಬಾಬಾಸಹೇಬ್ ಅಂಬೇಡ್ಕರ್ ಅವರ ಜೀವನ-ಸಾಧನೆ-ವಿಚಾರಗಳನ್ನು ರಾಜ್ಯಾದ್ಯಂತ ಪರಿಚಯ ಮಾಡಿಕೊಡಲು ಹದಿನೆಂಟು ವರ್ಷಗಳ ಹಿಂದೆ (1990-91) ಅಂಬೇಡ್ಕರ್ ಶತಮಾನೋತ್ಸವದ ಸಂದರ್ಭದಲ್ಲಿ, ಸಮಿತಿಯೊಂದು ರಚಿತವಾಯಿತು. ಆ ಸಮಿತಿ ಈಗ ಒಂದು ಟ್ರಸ್ಟ್ ಆಗಿ, ಸ್ಫೂರ್ತಿಧಾಮ ಎಂಬ ಸಂಸ್ಥೆಯನ್ನು ಸ್ಥಾಪಿಸಿ ಹಿಂದುಳಿದ ಹಾಗೂ ನಿರ್ಲಕ್ಷಿತರ ಯೋಗ ಕ್ಷೆಮಕ್ಕಾಗಿ ಶ್ರಮಿಸುತ್ತಿದೆ. ಪ್ರತಿ ವರ್ಷ ಅಂಬೇಡ್ಕರ್ ಜನ್ಮದಿನೋತ್ಸವನ್ನು ಅರ್ಥಪೂರ್ಣವಾಗಿ ಆಚರಿಸುತ್ತಿದೆ. ಈ ವರ್ಷದಿಂದ ಪರಿಣತರಿಂದ ಅಂಬೇಡ್ಕರ್ ಸಂಸ್ಮರಣಾ ವಿಶೇಷೋಪನ್ಯಾಸ ಮತ್ತು ದಲಿತ ಹಾಗೂ ನಿರ್ಲಕ್ಷಿತರಿಗಾಗಿ ಜೀವನವಿಡೀ ದುಡಿದ ವ್ಯಕ್ತಿಯೊಬ್ಬರಿಗೆ ಒಂದು ಲಕ್ಷ ರೂಪಾಯಿ ಪ್ರಶಸ್ತಿ, ಮತ್ತು ಗಣನೀಯವಾದ ಸೇವೆ ಸಲ್ಲಿಸಿದ ಐದು ಮಂದಿಗೆ 20 ಸಾವಿರ ಬೋಧಿವರ್ಧನ ಪ್ರಶಸ್ತಿ. ಸ್ಫೂರ್ತಿಧಾಮದ ಅಧ್ಯಕ್ಷರಾದ ಶ್ರೀ.ಎಸ್.ಮರಿಸ್ವಾಮಿ ಅಭಿನಂದನೀಯರು ಯಾವುದೇ ಧರ್ಮದ ಅಥವಾ ಸಾಮಾಜಿಕ ಚಳುವಳಿಯ -ಮೌಲಿಕತೆಯನ್ನರಿಯಲು ನಾವು ಕೇಳಬೇಕಾದ ಪ್ರಶ್ನೆಗಳೆಂದರೆ. ಅದು ಮನುಷ್ಯರೆಲ್ಲರ ,ಸಮಾನತೆಯ ಪರವಾಗಿದೆಯೆ? ಅಥವಾ ತರ-ತಮಗಳನ್ನು ನಿರಂತರವಾಗಿ ಉಳಿಸಿಕೊಂಡು ಬರುವ ಜಾತಿ ಪದ್ಧತಿಗೆ ವಿರೋಧವಾಗಿದೆಯೆ?

ಎರಡು: ಮಹಿಳೆಯರನ್ನು ಕುರಿತು ಅದು ತಾಳುವ ನಿಲುವುಗಳೇನು?

ಮೂರು: ಅಸ್ಪೃಶ್ಯತೆಯನ್ನು ಕುರಿತು ಅದರ ಪ್ರತಿಕ್ರಿಯೆಗಳೇನು?

ನಾಲ್ಕು: ಇದರ ಲೋಕಗ್ರಹಿಕೆಯ ಸ್ವರೂಪವೇನು?

ಐದು: ಅದು ಪ್ರತಿಪಾದಿಸುವ ವೈಚಾರಿಕತೆಯ ಲಕ್ಷಣಗ ಳೇನು?

ಈ ಪ್ರಶ್ನೆಗಳಿಗೆ ಈ ಹೊತ್ತೂ ಸರಿಯಾದ ಉತ್ತರ ದೊರೆಯುವುದೆಂಬ ಭರವಸೆಯಿಲ್ಲ. ಈ ಪ್ರಶ್ನೆಗಳಿಗೆ ಬೌದ್ಧ ಹಾಗೂ ಶರಣ ಧರ್ಮಗಳು ತಮ್ಮ ರಚನೆ ಹಾಗೂ ವರ್ತನೆಗಳಿಂದ ಸಾಕಷ್ಟು ತೃಪ್ತಿಕರವಾದ ಉತ್ತರಗಳನ್ನು ನೀಡಿವೆ ಎನ್ನಬಹುದು.

ಬುದ್ಧ ಭಾರತದ ಮೊಟ್ಟ ಮೊದಲ ಬಂಡಾಯಗಾರ. ವಿಚಾರವಾದಿ ಮಾನವತಾವಾದಿ ಹಾಗೂ ಸಮಾಜ ಸುಧಾರಕ ಅಧ್ಯಾತ್ಮದಲ್ಲಿ ಅದುವರೆಗೂ ಅಗ ತ್ಯವೆಂದು ಭಾವಿಸಲಾದ ದೇವರು -ಗುರು-ಶಾಸ್ತ್ರಗಳ ಅವಲಂಬನೆ ಹಾಗೂ ನಿರ್ದೇಶನಗಳನ್ನು ದಿಟ್ಟತನದಿಂದ ನಿರಾಕರಿಸಿ ಧಾರ್ಮಿಕ ದೃಷ್ಟಿಗೆ ಒಂದು ಬಗೆಯ ಸ್ವಾವಲಂಬನೆಯನ್ನು ಧೈರ್ಯವನ್ನು ಸ್ವತಂತ್ರವಾಗಿ ವಿಚಾರ ಮಾಡುವ ಪ್ರವೃತ್ತಿಯನ್ನು ತಂದುಕೊಟ್ಟವನು ಬುದ್ಧ. ಮನುಷ್ಯರೆಲ್ಲರ ಸಮಾನತೆಯ ಪರವಾಗಿರುವ ಬುದ್ಧ ಹಿಂದೂ ಧರ್ಮದ ಚಾತುರ್ವರ್ಣ ವ್ಯವಸ್ಥೆಯನ್ನು ತಿರಸ್ಕರಿಸಿ, ಅಂದಿನ ಸಮಾಜದ ವಿವಿಧ ಸ್ತರಗಳಿಂದ ಬಂದವರಿಗೆಲ್ಲ ತನ್ನ ಧರ್ಮದಲ್ಲಿ ಆಶ್ರಯ ಕೊಟ್ಟವನು. ಮನುಷ್ಯರೆಲ್ಲರ ಸಮಾನತೆಯನ್ನು ಪ್ರೀತಿ, ಕರುಣೆಯ ಮೂಲಕ ಒಂದು ಮೌಲ್ಯವೆಂಬಂತೆ ಎತ್ತಿ ಹಿಡಿದವನು. ಮೊದಮೊದಲು ಮಹಿಳೆಯರನ್ನು ತನ್ನ ಸಂಘಕ್ಕೆ ಸೇರಿಸಿಕೊಳ್ಳಲು ಹಿಂಜರಿದರೂ, ಆನಂತರ ಭಿಕ್ಷುಕಿಯರ ಸಂಘವೊಂದನ್ನು ವ್ಯವಸ್ಥೆಗೊಳಿಸಿ ಬಹುಸಂಖ್ಯೆಯ ಮಹಿಳೆಯರಿಗೆ ಅಶ್ರಯ ನೀಡಿದನು. ತನ್ನ ಸಂಘಕ್ಕೆ ಸೇರಿದವರಿಗೆ ಹೇಳಿದ ಬುದ್ಧ: ಈ ಸಂಘಕ್ಕೆ ಸೇರಿದ ನೀವೆಲ್ಲಾ ಸಮಾನರು. ಕಡಲನ್ನು ಸೇರುವ ಮೊದಲು ವಿವಿಧ ನಾಮ-

ಬೆಂಗಳೂರಿನ 'ಸ್ಫೂರ್ತಿಧಾಮ'ದಲ್ಲಿ ಅಂಬೇಡ್ಕರ್ ಹಬ್ಬದ ಅಂಗವಾಗಿ ನಡೆದ ಸಮಾರಂಭದಲ್ಲಿ ರಾಷ್ಟ್ರಕವಿ ಡಾ॥ ಜಿ.ಎಸ್ ಶಿವರುದ್ರಪ್ಪ ಅವರು ಆಚರಿಯ ಬುದ್ಧರಕ್ಷಿತ ಅವರಿಗೆ ನೀಡಲಾದ 'ಬೋಧಿವೃಕ್ಷ ಪ್ರಶಸ್ತಿ' ಯನ್ನು ಬಂತೆ ಆನಂದ ಅವರಿಗೆ ವಿತರಿಸಿದರು. 'ಸ್ಫೂರ್ತಿಧಾಮ'ದ ಅಧ್ಯಕ್ಷ ಶ್ರೀ ಎಸ್. ಮರಿಸ್ವಾಮಿ ಅವರು ಉಪಸ್ಥಿತರಿದ್ದರು.

ಬುದ್ಧ ಭಾರತದ ಮೊಟ್ಟ ಮೊದಲ ಬಂಡಾಯಗಾರ. ವಿಚಾರವಾದಿ ಮಾನವತಾ ವಾದಿ ಹಾಗೂ ಸಮಾಜ ಸುಧಾರಕ. ಅಧ್ಯಾತ್ಮದಲ್ಲಿ ಅದುವರೆಗೂ ಅಗತ್ಯ ವೆಂದು ಭಾವಿಸಲಾದ ದೇವರು-ಗುರು-ಶಾಸ್ತ್ರಗಳ ಅವಲಂಬನೆ ಹಾಗೂ ನಿರ್ದೇಶನಗಳನ್ನು ದಿಟ್ಟ ತನದಿಂದ ನಿರಾಕರಿಸಿ ಧಾರ್ಮಿಕ ದೃಷ್ಟಿಗೆ ಒಂದು ಬಗೆಯ ಸ್ವಾವಲಂಬನೆ ಯನ್ನು ಧೈರ್ಯವನ್ನು ಸ್ವತಂತ್ರವಾಗಿ ವಿಚಾರ ಮಾಡುವ ಪ್ರವೃತ್ತಿಯನ್ನು ತಂದುಕೊಟ್ಟವನು ಬುದ್ಧ. ಮನುಷ್ಯರೆಲ್ಲರ ಸಮಾನ ತೆಯ ಪರವಾಗಿರುವ ಬುದ್ಧ ಹಿಂದೂ ಧರ್ಮದ ಚಾತು ರ್ವರ್ಣ ವ್ಯವಸ್ಥೆಯನ್ನು ತಿರ ಸ್ಕರಿಸಿ, ಅಂದಿನ ಸಮಾ ಜದ ವಿವಿಧ ಸ್ತರಗಳಿಂದ ಬಂದವರಿಗೆಲ್ಲ ತನ್ನ ಧರ್ಮ ದಲ್ಲಿ ಆಶ್ರಯ ಕೊಟ್ಟವನು. ಮನುಷ್ಯರೆಲ್ಲರ ಸಮಾನ ತೆಯನ್ನು ಪ್ರೀತಿ, ಕರುಣೆಯ ಮೂಲಕ ಒಂದು ಮೌಲ್ಯ ವೆಂಬಂತೆ ಎತ್ತಿ ಹಿಡಿದವನು.

ರೂಪಗಳನ್ನುಳ್ಳ ನದಿಗಳು, ಕಡಲನ್ನು ಸೇರಿದ ಮೇಲೆ ಅವು ಸಮುದ್ರವೇ ಆಗುವಂತೆ ನೀವೆಲ್ಲ ಸಮಾನರು ಧರ್ಮ ಎಂದರೆ ಬಹುಜನ ಹಿತವನ್ನು, ಬಹುಜನ ಸುಖವನ್ನು ವರ್ಧಿಸುವಂಥದು.

ಇಷ್ಟು ಉದಾರವಾದ, ಇಷ್ಟು ವೈಚಾರಿಕವಾದ ಇಷ್ಟು ಮಾನವೀಯವಾದ ಬೌದ್ಧ ಧರ್ಮವನ್ನು ಯಾಕೆ ಡಾ. ಅಂಬೇಡ್ಕರ್ ಅವರು ತಮ್ಮ ಬದುಕಿನ ತುದಿಯಲ್ಲಿ ತಮ್ಮ ಆಶ್ರಯ ಸ್ಥಾನವನ್ನಾಗಿ ಮಾಡಿಕೊಂಡರೆಂಬುದನ್ನು ಅವರ ದಲಿತ ಜೀವನದ ದಾರುಣವಾದ ಹಿನ್ನೆಲೆಯಿಂದ ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ.

ಬುದ್ಧನ ಅನಂತರ ದಕ್ಷಿಣ ಭಾರತದ ಕರ್ನಾಟಕದಲ್ಲಿ ಮತ್ತೊಂದು ವೈಚಾರಿಕ ಸ್ಫೋಟವನ್ನು ತಂದವರು 12ನೇ ಶತಮಾನದ ಬಸವಣ್ಣನವರು ಸಾಮಾಜಿಕ ಅಸಮಾನತೆಯನ್ನು ಸ್ಫೋಟಿಸಲು ಬಸವಣ್ಣನವರು ಸಿಡಿಮದ್ದನ್ನಾಗಿ ಬಳಸಿದ್ದು ಅಂದಿನ ಶ್ರೇಣೀಕೃತ ಸಮಾಜದ ನಾಲ್ಕು ಮತ್ತು ಐದನೇ ಸ್ತರದ ಶೂದ್ರ ಶಕ್ತಿಯನ್ನು, ಬುದ್ಧನಿಗೂ ಬಸವನಿಗೂ ಇರುವ ವೈಚಾರಿಕ ಸಾಮ್ಯ ಬೆರಗುಗೊಳಿಸುವಂಥದು. ಬುದ್ಧನದು ದೇವರನ್ನು ನಿರಾಕರಿಸಿದ ಮಾನವ ಕೇಂದ್ರಿತ ಧರ್ಮವಾದರೆ, ಬಸವಣ್ಣನವರದು ದೇವರನ್ನು ಇರಿಸಿಕೊಂಡು, ದೇವಸ್ಥಾನವನ್ನು ತಿರಸ್ಕರಿಸಿದ ಒಂದು ವ್ಯವಸ್ಥೆ. ಬುದ್ಧನಂತೆ ವೇದಶಾಸ್ತ್ರಗಳ ಅಧಿಕಾರವನ್ನು ನಿರಾಕರಿಸಿ ಸಮಾಜದ ಎಲ್ಲ ಸ್ತರದ -ಅದರಲ್ಲಿಯೂ ಶ್ರಮ ಸಂಸ್ಕೃತಿಯ ಕಸುಬುಗಾರರನ್ನು ಒಂದು ಸಮಾನತೆಯ ನೆಲೆಯಲ್ಲಿ ಸಂಘಟಿಸಿ, ಅವರಲ್ಲಿ ವೈಚಾರಿಕತೆ ಮತ್ತು ಪ್ರತಿಭಟನೆಯ ಕೆಚ್ಚನ್ನು ಪ್ರಚೋದಿಸಿದ್ದು ಬಸವ ಕೇಂದ್ರಿತ ಶರಣ ಚಳುವಳಿ. ಬುದ್ಧನಂತೆ, ಬಸವಣ್ಣನೂ ಮಹಿಳೆಯರಿಗೆ ತನ್ನ ಧರ್ಮದಲ್ಲಿ ಮುಕ್ತ ಅವಕಾಶಗಳನ್ನು ಕಲ್ಪಿಸಿ, ಕಠಿಣ ಶ್ರೇಣೀಕರಣವನ್ನು ವರ್ಣ ಸಂಕರದ ಮೂಲಕ ಸ್ಫೋಟಿಸಿ ತತ್ಕಾಲಕ್ಕಾದರೂ ಸಮಾನತೆಯ ಕನಸನ್ನು ನನಸನ್ನಾಗಿ ಮಾಡಿದನು.

ಇನ್ನು ಡಾ. ಅಂಬೇಡ್ಕರ್ ಅವರು ಇಪ್ಪತ್ತನೆ ಶತಮಾನದ ವಸಾಹತುಶಾಹಿ ಸಂದರ್ಭದಲ್ಲಿ ಬುದ್ಧ-ಬಸವರ ಹೋರಾಟವನ್ನು ವಿಭಿನ್ನ ಆಯಾಮಗಳಲ್ಲಿ ಮುಂದುವರಿಸಿದರು. 20ನೇ ಶತಮಾನದ ಈ ಕಾಲಘಟ್ಟದಲ್ಲಿ ಹಿಂದೂ ಧರ್ಮದ ಬಹುಮಟ್ಟಿಗೆ ಹಿಂದಿನ ಪಾಠಗಳೆಲ್ಲವನ್ನು ಮರೆತು ಪ್ರತಿಗಾಮಿಯಾಗಿತ್ತು. ಅದರಲ್ಲೂ ಶತಶತಮಾನಗಳಿಂದ ಎಲ್ಲ ಮೇಲು ವರ್ಗದವರಿಂದಲೂ, ಹಿಂಸೆ-ಅವಮಾನ-ಶೋಷಣೆಗಳಿಗೆ ಒಳಗಾಗಿದ, ದಲಿತ ಅಥವಾ ಅಸ್ಪೃಶ್ಯ ವರ್ಗಕ್ಕೆ ಸೇರಿದ ಅಂಬೇಡ್ಕರ್ ಅವರು ಆಧುನಿಕ ಶಿಕ್ಷಣವನ್ನು ಪಡೆದ ಕಣ್ಣುಗಳ ಮೂಲಕ ಕಂಡ ವಾಸ್ತವ ಮತ್ತು ಚರಿತ್ರೆ ಧಗಧಗಿಸುವ ಅನುಭವಗಳಿಂದ ಯಾತನಾಮಯವಾಗಿತ್ತು.

ಅದು ಕೇವಲ ಹಸಿವು ಬಡತನಗಳಿಗೆ ಸೀಮಿತವಾದುದಲ್ಲ; ತಮ್ಮ ಹುಟ್ಟಿನ ಕಾರಣದಿಂದ ಒಂದು ಸಮುದಾಯ ಪಡಬೇಕಾಗಿ ಬಂದ ಕೀಳರಿಮೆ ಅಥವಾ ಅಸ್ಪೃಶ್ಯತೆಯ ಅನುಭವದ ಪ್ರಶ್ನೆ, ಇಂಥ ದಲಿತವರ್ಗವನ್ನು ಸಂಘಟಿಸಿ ಅವರನ್ನು ಸ್ವಾಭಿಮಾನಿ ಮನುಷ್ಯರನ್ನಾಗಿ ಮಾಡಿಹೋರಾಟಕ್ಕೆ ಸಜ್ಜು ಹೊಳಿಸಿದ ದಲಿತ ಧ್ವನಿಯಾಗಿ ಅಂಬೇಡ್ಕರ್ ನಿಂತರೆನ್ನುವುದು ಮುಖ್ಯವಾದ ಸಂಗತಿಯಾಗಿದೆ.

ಮನುಷ್ಯರ ಅಸಮಾನತೆಯನ್ನು ಬಸವ ಬುದ್ಧರಿಗಿಂತ ಮತ್ತು 19ನೇ ಕೊನೆಯಲ್ಲಿ ಬಂದ ಕೆಳವರ್ಗದ ಚಿಂತಕರಾದ ನಾರಾಯಣಗುರು, ಜ್ಯೋತಿಬಾ ಫುಲೆ ಇವರಿಗಿಂತ ಭಿನ್ನವಾಗಿ ಮತ್ತು ತೀವ್ರವಾಗಿ ಅಂಬೇಡ್ಕರ್ ವಿರೋಧಿಸಿದರು. ಅದರಲ್ಲೂ ಚಾತುರ್ವರ್ಣದ ಚೌಕಟ್ಟಿನೊಳಗೆ ಚರ್ಚಿತವಾಗುತ್ತಿದ್ದ ಅಸ್ಪೃಶ್ಯತೆಯ ಸಮಸ್ಯೆಗಳಿಗೆ ಒಂದು ರಾಷ್ಟ್ರೀಯ ಸ್ವರೂಪದ ಪ್ರಮುಖ್ಯತೆಯನ್ನು ತಂದುಕೊಟ್ಟರು. ಅಂದು ಗಾಂಧಿಯವರು ಹೂಡಿದ್ದ ಭಾರತೀಯ ಸ್ವಾತಂತ್ರ್ಯ ಚಳುವಳಿಗೆ ಸಮಾನಾಂತರವಾಗಿ ಅಂಬೇಡ್ಕರ್ ಹುಟ್ಟು ಹಾಕಿದ ದಲಿತ ಸ್ವಾಭಿಮಾನೀ ಚಳುವಳಿ ಮೂಲತಃ ಉರಿಯುವ ನೆನಪುಗಳ ಚರಿತ್ರೆಯನ್ನು ತನ್ನ ಒಸಲಲ್ಲಿ ಅಡಗಿಸಿಕೊಂಡ ಶೋಷಿತ ವರ್ಗದ ಪ್ರತಿಭಟನೆಯಾಗಿದೆ.

ಗಾಂಧಿಯವರು ವಿದೇಶೀ ವಸ್ತ್ರಗಳನ್ನು ದಹಿಸುವುದರ ಮೂಲಕ, ಬ್ರಿಟಿಷ್ ಸಾಮ್ರಾಜ್ಯ ಶಾಹಿಯನ್ನು ಧಿಕ್ಕರಿಸಿದರೆ, ಅಸಮಾನತೆಯನ್ನು ಸುಭದ್ರವಾಗಿ ನೆಲೆಗೊಳಿಸುವ, ದಲಿತವರ್ಗ ಹಾಗೂ ಮಹಿಳೆಯರ ವಿಚಾರದಲ್ಲಿ ಅಮಾನವೀಯವಾದ ನಿಲುವುಗಳನ್ನು ಪ್ರತಿಪಾದಿಸುವ ಮನುಧರ್ಮ ಶಾಸ್ತ್ರಕ್ಕೆ ಬೆಂಕಿ ಹಚ್ಚಿ ಸುಡುವುದರ ಮೂಲಕ ಇಡೀ ಹಿಂದೂ ಧರ್ಮವನ್ನು ಅಂಬೇಡ್ಕರ್ ಧಿಕ್ಕರಿಸಿದ ಕ್ರಮ, ಈ ಎರಡು ಹೋರಾಟಗಳ ನಡುವಿನ ವ್ಯತ್ಯಾಸವನ್ನು ಗುರಿಯನ್ನು ಸ್ಪಷ್ಟ ಪಡಿಸುತ್ತದೆ.

ಗಾಂಧಿಯವರು ವಿದೇಶೀ ವಸ್ತ್ರಗಳನ್ನು ದಹಿಸುವುದರ ಮೂಲಕ, ಬ್ರಿಟಿಷ್ ಸಾಮ್ರಾಜ್ಯ ಶಾಹಿಯನ್ನು ಧಿಕ್ಕರಿಸಿದರೆ, ಅಸಮಾನತೆಯನ್ನು ಸುಭದ್ರವಾಗಿ ನೆಲೆಗೊಳಿಸುವ, ದಲಿತವರ್ಗ ಹಾಗೂ ಮಹಿಳೆಯರ ವಿಚಾರದಲ್ಲಿ ಅಮಾನವೀಯವಾದ ನಿಲುವುಗಳನ್ನು ಪ್ರತಿಪಾದಿಸುವ ಮನುಧರ್ಮ ಶಾಸ್ತ್ರಕ್ಕೆ ಬೆಂಕಿ ಹಚ್ಚಿ ಸುಡುವುದರ ಮೂಲಕ ಇಡೀ ಹಿಂದೂ ಧರ್ಮವನ್ನು ಅಂಬೇಡ್ಕರ್ ಧಿಕ್ಕರಿಸಿದ ಕ್ರಮ, ಈ ಎರಡು ಹೋರಾಟಗಳ ನಡುವಿನ ವ್ಯತ್ಯಾಸವನ್ನು ಗುರಿಯನ್ನು ಸ್ಪಷ್ಟ ಪಡಿಸುತ್ತದೆ. ಗಾಂಧಿಯವರ ಹೋರಾಟ ಪರಕೀಯ ಪ್ರಭುತ್ವವನ್ನು ಕಿತ್ತೆಸೆದು ಈ ದೇಶಕ್ಕೆ ಸ್ವಾತಂತ್ರ್ಯವನ್ನು ತಂದುಕೊಡುವ ಉದ್ದೇಶದ್ದಾಗಿದ್ದರೆ, ಅಂಬೇಡ್ಕರ್ ಅವರಿಗೆ ಈ ದೇಶದ ಶೋಷಕ ಸಮುದಾಯದ ವಿಮೋಚನೆ ಮೊದಲ ಆದ್ಯತೆಯಾಗಿತ್ತು.

ಗಾಂಧಿಯವರ ಹೋರಾಟ ಪರಕೀಯ ಪ್ರಭುತ್ವವನ್ನು ಕಿತ್ತೆಸೆದು ಈ ದೇಶಕ್ಕೆ ಸ್ವಾತಂತ್ರ್ಯವನ್ನು ತಂದುಕೊಡುವ ಉದ್ದೇಶದ್ದಾಗಿದ್ದರೆ, ಅಂಬೇಡ್ಕರ್ ಅವರಿಗೆ ಈ ದೇಶದ ಶೋಷಕ ಸಮುದಾಯದ ವಿಮೋಚನೆ ಮೊದಲ ಆದ್ಯತೆಯಾಗಿತ್ತು. ಯಾಕೆಂದರೆ ಯಾವ ನಾಡಿನ ಸ್ವಾತಂತ್ರ್ಯಕ್ಕೆ ಗಾಂಧೀಜಿ ಹೋರಾಡುತ್ತಿದ್ದರೂ ಆ ನಾಡಿನ ಬಹು ಸಂಖ್ಯಾತ ಶೋಷಿತ ವರ್ಗ, ವಿವಿಕ್ತರಾಗಿ, ಶಾಪಗ್ರಸ್ಥರಂತೆ ಬದುಕುತ್ತಿರುವಾಗ, ತಮ್ಮನ್ನು ಈ ಸ್ಥಿತಿಯಲ್ಲಿ ನಡೆಸಿಕೊಳ್ಳುತ್ತಿರುವ ಈ ದೇಶವನ್ನಾಗಲೀ, ಅದರ ಧಾರ್ಮಿಕ ನಿಲುವುಗಳನ್ನಾಗಲಿ ತಮ್ಮದೆಂದುಕೊಳ್ಳುವುದು ಹೇಗೆ ಸಾಧ್ಯ?

ಈ ಒಂದು ಮನಃಸ್ಥಿತಿಯಲ್ಲಿ ಅಂಬೇಡ್ಕರ್, 'ನನಗೆ ನನ್ನದೆ ಆದ ಒಂದು ತಯ್ನಾಡಿದೆಯೆ? ಇಲ್ಲ ಇಲ್ಲ. ಹಂದಿ ನಾಯಿಗಳಿಗಿಂತಲೂ ಕಡೆಯಾಗಿ ಬದುಕುವ ನನ್ನ ಜನಕ್ಕೆ, ಕುಡಿಯಲು ಒಂದು ತೊಟ್ಟು ನೀರಿಗೂ ದೂರವಿರುವ ಜನಕ್ಕೆ ಇದು ತಾಯ್ನಾಡೆ? ದೇವಾಲಯ ಪ್ರವೇಶವನ್ನು ನಿರಾಕರಿಸುವ, ಅಸಮಾನತೆಯ ಮೂಲ ತತ್ವವಾಗಿರುವ ಈ ಧರ್ಮ ನನ್ನದೆ? – ಎಂದು ಪ್ರಶ್ನಿಸಿದ್ದು ಸಹಜವಾಗಿದೆ ಹೀಗೆ ಹಿಂದೂ ಧರ್ಮ ಹಾಗೂ ದಲಿತರ ನಡುವೆ ಸಂವಾದದ ಸಾಧ್ಯತೆಗಳನ್ನು ನಿರ್ದಾಕ್ಷಿಣ್ಯವಾಗಿ ನಿರಾಕರಿಸಿದ ಅಂಬೇಡ್ಕರ್, ತಮಗೆ ನಿರಾಕೃತವಾದ ಮಾನವ ಹಕ್ಕುಗಳನ್ನು ಗಳಿಸಿಕೊಳ್ಳುವ, ಪರಂಪರಾಗತವಾದ ಮಾನಸಿಕ ದಾಸ್ಯದಿಂದ ಬಿಡುಗಡೆ ಪಡೆದುಕೊಳ್ಳುವ 'ದಲಿತ ವಿಮೋಚನೆಯಿಂದಲೆ ರಾಷ್ಟ್ರದ ವಿಮೋಚನೆಗೆ ಅಥವಾ ಭಾರತೀಯ ಸ್ವಾತಂತ್ರ್ಯಕ್ಕೆ ನಿಜವಾದ ಅರ್ಥ ಬರುತ್ತದೆ–ಎನ್ನುವುದು ಅಂಬೇಡ್ಕರ್ ಅವರ ನಿಲುವಾಗಿತ್ತು.

ಕಾರ್ಮಿಕ ವರ್ಗದ ವಿಮೋಚನೆಯಾಗದೆ ಇಡೀ ಮಾನವ ಸಮಾಜದ ವಿಮೋಚನೆ ಸಾಧ್ಯವಿಲ್ಲ ಎಂದು ಕಾರ್ಲ್ ಮಾರ್ಕ್ಸ್ ನಂಬಿದ ಹಾಗೆ ದಲಿತರ ವಿಮೋಚನೆ ಆಗದೆ ಇಡೀ ಭಾರತೀಯ ಸಮಾಜದ ವಿಮೋಚನೆ ಸಾಧ್ಯವಿಲ್ಲವೆಂದು ಅಂಬೇಡ್ಕರ್ ಭಾವಿಸಿದ್ದರು. ದಲಿತರ ವಿಮೋಚನೆಯಿಂದ ಆರೋಗ್ಯ ಪೂರ್ಣವಾದ ಸಮಾಜ ವನ್ನು ಕಟ್ಟಬೇಕಾದರೆ ಮೊದಲು ಜಾತಿ ಪದ್ಧತಿ ತೊಲಗಬೇಕು ಎಂಬುದನ್ನು ಬದುಕಿನ ಉದ್ದಕ್ಕೂ ಪ್ರತಿಪಾದಿಸಿದ ಅಂಬೇಡ್ಕರ್, -ಜಾತಿ, ಮತಗಳು ಹೀಗೆ ಮನುಷ್ಯರ ನಡುವಣ ಸಮಾನತೆ/ಮಾರಕವಾಗಲು ಶಾಸ್ತ್ರಗಳೇ ಆಧಾರವಾಗಿರುವುದರಿಂದ, ಮೊದಲು ಅವುಗಳನ್ನು ಕುರಿತ ನಂಬಿಕೆಗಳನ್ನು ಮಣ್ಣು ಗೂಡಿಸಬೇಕು, ಶಾಸ್ತ್ರ ಸ್ಮೃತಿಗಳು ಪವಿತ್ರವೆಂಬ ಭಾವನೆ ತೊಲಗಬೇಕು, ಪರಂಪರಾಗತವಾದ ಪೌರೋಹಿತ್ಯವನ್ನು, ತಪ್ಪಿಸಿ ಆ ವೃತ್ತಿಯನ್ನು ಸಾರ್ವತ್ರಿಕಗೊಳಿಸಬೇಕು ಎಂದು ಕರೆನೀಡಿದವರು.

ಈ ಹೊತ್ತಿನ ಕಲುಷಿತ ಹಾಗೂ ಅಸ್ವಸ್ಥ ಜಗತ್ತಿನ ನಡುವೆ ಅಂಬೇಡ್ಕರ್ ಅವರ ಈ ಕ್ರಾಂತಿಕಾರಕ ವಿಚಾರಗಳು ಎಷ್ಟೊಂದು ಪ್ರಸ್ತುತವಾಗಿವೆ ಎಂಬುದನ್ನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಮುಖ್ಯವಾದ ಮಾತೆಂದರೆ ಸ್ವಾತಂತ್ರ್ಯ ಬಂದು ಇಷ್ಟು ವರ್ಷಗಳಾದರೂ, ದಲಿತರ ಬದುಕಿನಲ್ಲಿ ನಿರೀಕ್ಷಿತ ಪ್ರಮಾಣದ ಬದಲಾವಣೆಗಳಾಗಿಲ್ಲ. ದಲಿತರು ತಮಗೆ ಸಲ್ಲಬೇಕಾದ ಸಾಮಾಜಿಕ ನ್ಯಾಯಕ್ಕೆ ಮತ್ತು ಸಮಾನ ಅವಕಾಶಗಳಿಗೆ ಹೋರಾಟ ನಡೆಯಿಸಬೇಕಾದ ಪರಿಸ್ಥಿತಿ ಮುಂದುವರಿಸಿರುವುದು ಒಂದು ವಿಪರ್ಯಾಸವಾಗಿದೆ.

(ಏಪ್ರಿಲ್ 14, 2009ರಂದು ಬೆಂಗಳೂರಿನ 'ಸ್ಫೂರ್ತಿಧಾಮ'ದಲ್ಲಿ ಅಂಬೇಡ್ಕರ್ ಹಬ್ಬದ ಅಂಗವಾಗಿ ನಡೆದ 'ಬೋಧಿವೃಕ್ಷ ಪ್ರಶಸ್ತಿ' ವಿತರಣಾ ಸಮಾರಂಭದಲ್ಲಿ ಪ್ರಶಸ್ತಿ ವಿತರಿಸಿ ಮಾಡಿದ ಭಾಷಣ) □

ಅಂಬೇಡ್ಕರ್ ಚಿಂತನೆ:

ಬ್ರಾಹ್ಮಣ್ಯದ ವಿರುದ್ಧ ಸಂಘರ್ಷ

ನಾ ದಿವಾಕರ

ತಮ್ಮ ಯೌವ್ವನಾವಸ್ಥೆಯಲ್ಲೇ ಅಂಬೇಡ್ಕರ್ ಅವರು ತಮ್ಮ ಸಮುದಾಯದ ನಾಯಕರಾಗಿ ಹೊರಹೊಮ್ಮುವ ಸ್ಪಷ್ಟ ಸೂಚನೆಗಳನ್ನು ನೀಡಿದ್ದರು. ಅವರ ತಂದೆಯೂ ಮಗನನ್ನು ಸಮಾಜ ಸೇವೆಯಲ್ಲಿ ತೊಡಗುವಂತೆ ಪ್ರೋತ್ಸಾಹಿಸುತ್ತಿದ್ದರು. ತನ್ನ ವ್ಯಾಸಂಗದೊಂದಿಗೇ ಸಮಾಜ ಸೇವೆಯನ್ನೂ ಮುಂದುವರೆಸುವುದಾಗಿ ಅಂಬೇಡ್ಕರ್ ಬರೋಡದ ಮಹಾರಾಜರಿಗೆ ಆಶ್ವಾಸನೆ ನೀಡಿದ್ದರು. ಒಂದು ಅಸ್ಪೃಶ್ಯ ಸಮುದಾಯದಲ್ಲಿ ಜನಿಸಿದ ವ್ಯಕ್ತಿ ಅತ್ಯುನ್ನತ ಮಟ್ಟದ ವ್ಯಾಸಂಗವನ್ನು ಲಂಡನ್ನಿನಲ್ಲಿ ಮುಗಿಸಿ ೧೯೨೦ರಲ್ಲಿ ಭಾರತಕ್ಕೆ ಹಿಂದಿರುಗಿದಾಗ, ಜೀವನೋಪಾಯಕ್ಕಾಗಿ ಸಂಪಾದಿಸುವುದರೊಡನೆ ರಾಜಕೀಯ ಕ್ಷೇತ್ರವನ್ನು ಪ್ರವೇಶಿಸುವುದೂ ಅಂಬೇಡ್ಕರ್‌ಗೆ ಅನಿವಾರ್ಯವಾಗಿತ್ತು. ಈ ಕಾಲಘಟ್ಟದಲ್ಲಿ ಭಾರತೀಯ ಸಮಾಜ ಪ್ರಕ್ಷುಬ್ಧತೆಯಿಂದ ಕೂಡಿತ್ತು. ಮಹಾತ್ಮ ಗಾಂಧೀಜಿಯವರ ನೇತೃತ್ವದಲ್ಲಿ ರಾಷ್ಟೀಯವಾದಿ ಚಳುವಳಿ ತೀವ್ರತೆ ಪಡೆದುಕೊಂಡಿತ್ತು.

ಸಾಮಾನ್ಯವಾಗಿ ಅಂಬೇಡ್ಕರ್ ಹೆಸರಿತ್ತಿದರೆ ಮೂಗು ಮುರಿಯುವ ಮೇಲ್ಜಾತಿಯವರ ಮನದಾಳದಲ್ಲಿ ಅಂಬೇಡ್ಕರ್ ಬಗ್ಗೆ ಇರುವ ದ್ವೇಷ ವೈಷಮ್ಯಗಳಿಗೆ ಮೀಸಲಾತಿ ನೀತಿಯೂ ಒಂದು ಕಾರಣ. ಮೀಸಲಾತಿ ನೀತಿಯ ಪರಿಣಾಮವಾಗಿ ನಮಗೆ ಸರ್ಕಾರಿ ಹುದ್ದೆಗಳಲ್ಲಿ ಅವಕಾಶ ದೊರೆಯುತ್ತಿಲ್ಲ, ಶಿಕ್ಷಣ ಸಂಸ್ಥೆಗಳಲ್ಲಿ ನಮಗಿಂತಲೂ ಕಡಿಮೆ ಅಂಕಗಳಿಸಿದವರಿಗೂ ಸೀಟು ದೊರೆಯುತ್ತದೆ ಎಂದು ವಾದಿಸುವ ಪ್ರತಿಭೆಯ ಸಮರ್ಥಕರಲ್ಲಿ ಮೀಸಲಾತಿ ಒಂದು ಸಾಮಾಜಿಕ ತೊಡಕು. ಈ ಆಕ್ರೋಶಗಳು ಮೇಲ್ನೋಟಕ್ಕೆ ಕಾಣದಿದ್ದರೂ ಆಂತರ್ಯದಲ್ಲಿ ಮೀಸಲಾತಿ ಸೌಲಭ್ಯ ಪಡೆದವರ ಬಗ್ಗೆ ಇರುವ ಅಸಡ್ಡೆ ಅನುಭವಿಸಿದವರಿಗೆ ಮಾತ್ರ ವೇದ್ಯವಾಗುತ್ತದೆ. ಮೇಲ್ಜಾತಿಯವರ, ವಿಶೇಷವಾಗಿ ದ್ವಿಜ ಸಂಪ್ರದಾಯದವರ ಮನದಾಳದಲ್ಲಿನ ಈ ಮನೋಭಾವದ ಹಿಂದೆಯೇ ಅಂಬೇಡ್ಕರ್ ಬ್ರಾಹ್ಮಣ ವಿರೋಧಿ ಎಂಬ ಭಾವನೆ ಸುಪ್ತವಾಗಿರುವುದು ಸ್ಪಷ್ಟ. ಈ ತಪ್ಪುಕಲ್ಪನೆಯನ್ನು ಹೋಗಲಾಡಿಸಬೇಕಾದ ಅನಿವಾರ್ಯತೆ ಇದೆಯೇ ಎನ್ನುವುದಕ್ಕಿಂತಲೂ, ತಪ್ಪು ಕಲ್ಪನೆಗಳಿಂದ ಉದ್ಭವಿಸುವ ಸಾಮಾಜಿಕ ಸಂಘರ್ಷಗಳನ್ನು ತಡೆಗಟ್ಟುವ ದೃಷ್ಟಿಯಿಂದ ವಾಸ್ತವವನ್ನು ಗ್ರಹಿಸುವುದು ಅನಿವಾರ್ಯ. ಈ ನಿಟ್ಟಿನಲ್ಲಿ ಈ ಲೇಖನ.

ತಮ್ಮ ಯೌವ್ವನಾವಸ್ಥೆಯಲ್ಲೇ ಅಂಬೇಡ್ಕರ್ ಅವರು ತಮ್ಮ ಸಮುದಾಯದ ನಾಯಕರಾಗಿ ಹೊರಹೊಮ್ಮುವ ಸ್ಪಷ್ಟ ಸೂಚನೆಗಳನ್ನು ನೀಡಿದ್ದರು. ಅವರ ತಂದೆಯೂ ಮಗನನ್ನು ಸಮಾಜ ಸೇವೆಯಲ್ಲಿ ತೊಡಗುವಂತೆ ಪ್ರೋತ್ಸಾಹಿಸುತ್ತಿದ್ದರು. ತನ್ನ ವ್ಯಾಸಂಗದೊಂದಿಗೇ ಸಮಾಜಸೇವೆಯನ್ನೂ ಮುಂದುವರೆಸುವುದಾಗಿ ಅಂಬೇಡ್ಕರ್ ಬರೋಡದ ಮಹಾರಾಜರಿಗೆ ಆಶ್ವಾಸನೆ ನೀಡಿದ್ದರು. ಒಂದು ಅಸ್ಪೃಶ್ಯ ಸಮುದಾಯದಲ್ಲಿ ಜನಿಸಿದ ವ್ಯಕ್ತಿ ಅತ್ಯುನ್ನತ ಮಟ್ಟದ ವ್ಯಾಸಂಗವನ್ನು ಲಂಡನ್ನಿನಲ್ಲಿ ಮುಗಿಸಿ ೧೯೨೦ರಲ್ಲಿ ಭಾರತಕ್ಕೆ ಹಿಂದಿರುಗಿದಾಗ, ಜೀವನೋಪಾಯಕ್ಕಾಗಿ ಸಂಪಾದಿಸುವುದರೊಡನೆ ರಾಜಕೀಯ ಕ್ಷೇತ್ರವನ್ನು ಪ್ರವೇಶಿಸುವುದೂ ಅಂಬೇಡ್ಕರ್‌ಗೆ ಅನಿವಾರ್ಯವಾಗಿತ್ತು.

ಈ ಕಾಲಘಟ್ಟದಲ್ಲಿ ಭಾರತೀಯ ಸಮಾಜ ಪ್ರಕ್ಷುಬ್ಧತೆಯಿಂದ ಕೂಡಿತ್ತು. ಮಹಾತ್ಮ ಗಾಂಧೀಜಿಯವರ ನೇತೃತ್ವದಲ್ಲಿ ರಾಷ್ಟ್ರೀಯವಾದಿ ಚಳುವಳಿ ತೀವ್ರತೆ ಪಡೆದುಕೊಂಡಿತ್ತು. ಸೋವಿಯತ್ ಸಂಘದಲ್ಲಿ ನಡೆದ ಶ್ರಮಿಕ ವರ್ಗಗಳ ಕ್ರಾಂತಿಯಿಂದ ಪ್ರೇರೇಪಿತವಾದ ಕಾರ್ಮಿಕ ಚಳುವಳಿ ಚಿಗುರೊಡೆಯುತ್ತಿತ್ತು. ಇದೇ ವೇಳೆಯಲ್ಲಿ ಹೆಚ್ಚು ಸಂಘಟಿತವಲ್ಲದ, ಸಿದ್ಧಾಂತ ಮತ್ತು ನಾಯಕತ್ವಗಳಿಗಾಗಿ ಹುಡುಕಾಡುತ್ತಿದ್ದ ಬಲಿಷ್ಟವಾದ ಜಾತಿ ದಮನಿತರ ಚಳುವಳಿಯೂ ವ್ಯಾಪಕವಾಗಿ ಹರಡಿತ್ತು. ಮಾರ್ಕ್ಸ್‌ವಾದಿಗಳು ಮತ್ತು ರಾಷ್ಟ್ರೀಯವಾದಿಗಳ ಪ್ರಬಲ ಚಳುವಳಿಗಳ ಬೆನ್ನಲ್ಲೇ ದಲಿತರು ಮತ್ತು ಬ್ರಾಹ್ಮಣೇತರರ ಚಳುವಳಿಗಳು ತೀವ್ರತೆ ಪಡೆದುಕೊಂಡು ರಾಜಕೀಯ ರಂಗ ಪ್ರವೇಶಿಸಿದ್ದವು. ಹತ್ತೊಂಬತ್ತನೆಯ ಶತಮಾನದಿಂದಲೇ ದೇಶಾದ್ಯಂತ ದಲಿತ ಚಳುವಳಿಗಳು ಪ್ರಾರಂಭವಾಗಿದ್ದವು. ಶಿಕ್ಷಣಕ್ಕಾಗಿ, ವ್ಯವಸಾಯ ಭೂಮಿಗಾಗಿ, ದೇವಾಲಯ ಪ್ರವೇಶಕ್ಕಾಗಿ, ಸಾರ್ವಜನಿಕ ಸೌಲಭ್ಯಗಳ ಮುಕ್ತ ಉಪಯೋಗಕ್ಕಾಗಿ ಹೋರಾಟಗಳು ರೂಪುಗೊಂಡಿದ್ದವು. ಅನೇಕ ಸಮಾಜ ಸುಧಾರಣಾ ಸಂಸ್ಥೆಗಳು, ಕ್ರೈಸ್ತ ಮಿಷನರಿಗಳು ಈ ಹೋರಾಟಗಳಿಗೆ ನೈತಿಕ ಬೆಂಬಲ ನೀಡಿದ್ದವು. ೧೮೭೩ರಲ್ಲಿ ಸ್ಥಾಪಿತವಾದ ಮಹಾತ್ಮ ಜ್ಯೋತಿ ಬಾ ಫುಲೆಯವರ ಸತ್ಯ ಶೋಧಕ ಸಮಾಜ್ ಮಹಾರಾಷ್ಟ್ರದ ದಲಿತರಿಗೆ ಬೆಂಗಾವಲಾಗಿತ್ತು. ಮಹರ್ ಸಮುದಾಯದ ಜನತೆ ಸೇನೆಯಲ್ಲಿ ನೇಮಕಾತಿ ಮಾಡಿಕೊಳ್ಳಲು ಆಗ್ರಹಿಸಿ ಹೋರಾಟ ಕೈಗೊಂಡಿದ್ದರು. ಅಲ್ಪ ಸ್ವಲ್ಪ ಆದಾಯವನ್ನು ಹೊಂದಿದ್ದ ಮಹರ್ ಸಮುದಾಯ ಮಹಾರಾಷ್ಟ್ರದ ಪ್ರಥಮ ಸಂಘಟಿತ ಶೋಷಿತ ಸಮುದಾಯವಾಗಿತ್ತು. ಸಾರ್ವಜನಿಕ ಕೆರೆಗಳ ನೀರನ್ನು ಉಪಯೋಗಿಸಲು ಅನೇಕ ಹೋರಾಟಗಳು ನಡೆದಿದ್ದವು.

೧೯೧೭–೧೮ರ ನಂತರದಲ್ಲಿ ರಾಷ್ಟ್ರವಾದಿ ಚಳುವಳಿಯೂ ಅಸ್ಪೃಶ್ಯತೆಯ ಸಮಸ್ಯೆಯನ್ನು ಕೈಗೆತ್ತಿಕೊಳ್ಳಲಾರಂಭಿಸಿತ್ತು. ೧೯೧೭ರ ಕಾಂಗ್ರೆಸ್ ಅಧಿವೇಶನದಲ್ಲಿ ಪ್ರಪ್ರಥಮ ಬಾರಿಗೆ ಅಸ್ಪೃಶ್ಯತೆಯ ವಿರುದ್ಧ ನಿರ್ಣಯ ಕೈಗೊಳ್ಳಲಾಗಿತ್ತು. ಈ ಅವಧಿಯಲ್ಲಿ ಮಹಾರಾಷ್ಟ್ರದಲ್ಲಿ ಪ್ರಬಲವಾದ ಸಮಾಜ ಸುಧಾರಕ ಸಂಘಟನೆ ಹಿಂದುಳಿದ ವರ್ಗಗಳ ಮಂಡಳಿ ಮೇಲ್ಜಾತಿಯ ವಿಥಲ್ ರಾಮ್‌ಜಿ ಶಿಂಧೆಯವರ ನೇತೃತ್ವದಲ್ಲಿ ಹಿಂದೂ ಧರ್ಮದ ಸುಧಾರಣೆಗಾಗಿ ಶ್ರಮಿಸುತ್ತಿತ್ತು. ಮಹಾರಾಷ್ಟ್ರದ ಬ್ರಾಹ್ಮಣೇತರ ಪಕ್ಷದ ಕಟ್ಟಾ ವಿರೋಧಿಯಾಗಿದ್ದ ಶಿಂಧೆ ಅಸ್ಪೃಶ್ಯರನ್ನು ಹಿಂದೂ ಧರ್ಮದಲ್ಲಿ ಒಳಗೊಳ್ಳುವ ನಿಟ್ಟಿನಲ್ಲಿ ಕಾರ್ಯತತ್ಪರರಾಗಿದ್ದರು. ಮೇಲ್ಜಾತಿಯವರ ಸುಧಾರಣಾ ಯತ್ನಗಳು ಅಸ್ಪೃಶ್ಯತೆಯನ್ನು ನಿವಾರಿ

ಸುವ ನಿಟ್ಟಿನಲ್ಲಿ ಮೂರು ಸಂದರ್ಭಗಳಲ್ಲಿ ವ್ಯಕ್ತವಾಗಿದ್ದವು. ೧೯೧೭-೧೮ರ ಅವಧಿಯಲ್ಲಿ ನಡೆದ ಮೂರು ಅಸ್ಪೃಶ್ಯತಾ ನಿವಾರಣಾ ಸಮಾವೇಶಗಳಲ್ಲಿ ಅಂಬೇಡ್ಕರ್ ಅವರನ್ನು ಸನ್ಮಾನಿಸುವ ಯೋಚನೆ ಫಲಪ್ರದವಾಗಲಿಲ್ಲ. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್‌ಗಳು ನೀಡಿದ್ದ ಸುಧಾರಣಾ ಶಿಫಾರಸುಗಳನ್ನು ಇಲ್ಲಿ ಬೆಂಬಲಿಸಲಾಗಿತ್ತು. ಎರಡನೆ ಸಮಾವೇಶದಲ್ಲಿ ದಲಿತರ ಮತಾಂತರವನ್ನು ವಿರೋಧಿಸಲಾಗಿತ್ತು. ಮೂರನೆಯ ಸಮಾವೇಶದಲ್ಲಿ ಗಾಂಧೀಜಿಯವರು ಉಪಸ್ಥಿತರಿದ್ದರೂ ಅಸ್ಪೃಶ್ಯ ಸಮುದಾಯಗಳನ್ನು ಪ್ರತಿನಿಧಿಸುವ ಯಾವುದೇ ಲಕ್ಷಣಗಳು ಕಂಡು ಬರಲಿಲ್ಲ.

ಏತನ್ಮಧ್ಯೆ ಪ್ರಬಲವಾಗಿ ಬೆಳೆಯುತ್ತಿದ್ದ ಬ್ರಾಹ್ಮಣೇತರ ಚಳುವಳಿಗಳು ಅಸ್ಪೃಶ್ಯರ ಬೆಂಬಲ ಗಳಿಸಿದ್ದವು. ಸತ್ಯ ಶೋಧಕ ಸಮಾಜ ಬಹುತೇಕ ಗ್ರಾಮಗಳಲ್ಲಿ ಕಾರ್ಯನಿರತವಾಗಿತ್ತು. ಬ್ರಾಹ್ಮಣರ ಅಧಿಪತ್ಯ ಮತ್ತು ಜಾತಿ ವ್ಯವಸ್ಥೆಯನ್ನು ಧಿಕ್ಕರಿಸಿದ ಈ ಸಂಘಟನೆ ಶೂದ್ರರು ಮತ್ತು ಅತಿ ಶೂದ್ರರು(ದಲಿತರು) ಭಾರತದ ಮೂಲ ನಿವಾಸಿಗಳೆಂದೂ, ಆರ್ಯರ ಆಗಮನದ ನಂತರ ಗುಲಾಮಗಿರಿಗೆ ಒಳಗಾದರೆಂದೂ ಪ್ರತಿಪಾದಿಸಿತ್ತು. ಈ ಪ್ರತಿಪಾದನೆ ಬ್ರಾಹ್ಮಣೇತರ ಚಳುವಳಿಗಳ ಮೂಲಮಂತ್ರವಾಗಿ ಪರಿಣಮಿಸಿ, ಮದ್ರಾಸಿನಲ್ಲಿ ಪ್ರಬಲವಾಗಿದ್ದ ಚಳುವಳಿಗಳಿಗೂ ವೇದಿಕೆಯನ್ನು ಒದಗಿಸಿತ್ತು. ೧೯೧೭ರ ವೇಳೆಗೆ ಬ್ರಾಹ್ಮಣೇತರ ಚಳುವಳಿಗಳು ರಾಜಕೀಯ ಪ್ರವೇಶ ಮಾಡಿದ್ದವು. ಕೊಲ್ಹಾಪುರದ ಮಹಾರಾಜ ಶಾಹು ಛತ್ರಪತಿ ಕ್ಷತ್ರಿಯನೆಂಬ ಅಹಮಿಕೆಯಿಂದ ಆಳಿದರೂ, ಬ್ರಾಹ್ಮಣ್ಯದ ವಿರೋಧಿಯಾಗಿದ್ದುದು, ಮಹಾರಾಷ್ಟ್ರದಲ್ಲಿ ಅನೇಕ ಸುಧಾರಣಾ ಕ್ರಮಗಳನ್ನು ಕೈಗೊಳ್ಳಲು ಪೂರಕವಾಗಿತ್ತು. ಅನೇಕ ಬ್ರಾಹ್ಮಣೇತರರು ಆಡಳಿತ ಕಛೇರಿಗಳಲ್ಲಿ ನೇಮಕಗೊಂಡರು. ಇದೇ ಅವಧಿಯಲ್ಲೇ ಸರ್ಕಾರಿ ನೌಕರಿಯಲ್ಲಿ ಮೀಸಲಾತಿಯೂ ಜಾರಿಗೆ ಬಂದಿತ್ತು. ಶಾಹು ಮಹಾರಾಜರು ಅಸ್ಪೃಶ್ಯರಿಗೆ ಪ್ರತ್ಯೇಕ ಹಾಸ್ಟೆಲುಗಳನ್ನು ನಿರ್ಮಿಸಿದ್ದೇ ಅಲ್ಲದೆ ಸಣ್ಣ ಚಹಾ ಮಳಿಗೆಗಳನ್ನು ಸ್ಥಾಪಿಸಲೂ ನೆರವು ನೀಡಿದ್ದರು.

ಬಹುತೇಕ ಬ್ರಾಹ್ಮಣರ ನೇತೃತ್ವದಲ್ಲಿ ಜಾತಿ ವ್ಯವಸ್ಥೆಯ ವಿರುದ್ಧ ನಡೆಯುತ್ತಿದ್ದ ಚಳುವಳಿಗಳು ಯುವಕ ಅಂಬೇಡ್ಕರ್ ಅವರ ಮೇಲೆ ಗಾಢವಾದ ಪರಿಣಾಮ ಬೀರಿತ್ತು. ಶಿಂಧೆ ಮುಂತಾದ ನಾಯಕರು ತಮ್ಮ ಅಸ್ಪೃಶ್ಯತಾ ವಿರೋಧಿ ಚಳುವಳಿಯಲ್ಲಿ ಅಸ್ಪೃಶ್ಯರಿಗೆ ಯಾವುದೇ ಅವಕಾಶ ನೀಡದಿದ್ದುದು ಮತ್ತು ಅಸ್ಪೃಶ್ಯರೊಡನೆ ಸಹ ಭೋಜನದಲ್ಲಿ ಪಾಲ್ಗೊಳ್ಳದಿದ್ದುದು ಅಂಬೇಡ್ಕರ್ ಅವರನ್ನು ಶಾಹು ಮಹರಾಜರ ಕಡೆಗೆ ಸೆಳೆದಿತ್ತು. ೧೯೨೦ರಲ್ಲಿ ಪ್ರಥಮ ಬಾರಿಗೆ ಶಾಹು ಮಹಾರಾಜರನ್ನು ಭೇಟಿಯಾದ ಅಂಬೇಡ್ಕರ್, ಅವರು ಅಸ್ಪೃಶ್ಯರೊಡನೆ ಬೆರೆಯುತ್ತಿದ್ದುದನ್ನು ಕಂಡು ಅವರಿಂದ ಪ್ರಭಾವಿತರಾಗಿದ್ದರು. ೧೯೨೦ರ ಮಾನ್‌ಗಾಂವ್ ಸಮಾವೇಶದಲ್ಲಿ ಅಂಬೇಡ್ಕರ್ ಅವರನ್ನು ಸತ್ಕರಿಸಿದ ಶಾಹು ಮಹಾರಾಜ್ ಅಂಬೇಡ್ಕರ್ ಅವರಿಗೆ ಧನಸಹಾಯ ಮಾಡಿದ್ದೂ ಅಲ್ಲದೆ ಉನ್ನತ ವ್ಯಾಸಂಗಕ್ಕೆ ಲಂಡನ್ನಿಗೂ ಕಳುಹಿಸಿದ್ದರು. ತನ್ನನ್ನು ಸಮಾನ ಮನೋಭಾವದಿಂದ ಕಾಣುತ್ತಿದ್ದ ಶಾಹು ಅವರೊಡನೆ ಅಂಬೇಡ್ಕರ್ ಮುಕ್ತವಾಗಿ ಜಾತಿ ವ್ಯವಸ್ಥೆ ಮತ್ತು ಬ್ರಾಹ್ಮಣ್ಯವಾದದ ಬಗ್ಗೆ ಚರ್ಚಿಸುತ್ತಿದ್ದರು. ಅಂಬೇಡ್ಕರ್ ಮತ್ತು ಶಾಹು ಮಹಾರಾಜ್ ಎದುರಿಸುತ್ತಿದ್ದ ಅಪಮಾನಗಳು ವಿಭಿನ್ನ ಲಕ್ಷಣಗಳನ್ನು ಹೊಂದಿದ್ದರೂ, ಈರ್ವರಲ್ಲೂ ಸಮಾನ ಮನೋ

ಬಹುತೇಕ ಬ್ರಾಹ್ಮಣರ ನೇತೃತ್ವದಲ್ಲಿ ಜಾತಿ ವ್ಯವಸ್ಥೆಯ ವಿರುದ್ಧ ನಡೆಯುತ್ತಿದ್ದ ಚಳುವಳಿಗಳು ಯುವಕ ಅಂಬೇಡ್ಕರ್ ಅವರ ಮೇಲೆ ಗಾಢವಾದ ಪರಿಣಾಮ ಬೀರಿತ್ತು. ಶಿಂಧೆ ಮುಂತಾದ ನಾಯಕರು ತಮ್ಮ ಅಸ್ಪೃಶ್ಯತಾ ವಿರೋಧಿ ಚಳುವಳಿಯಲ್ಲಿ ಅಸ್ಪೃಶ್ಯರಿಗೆ ಯಾವುದೇ ಅವಕಾಶ ನೀಡದಿದ್ದುದು ಮತ್ತು ಅಸ್ಪೃಶ್ಯರೊಡನೆ ಸಹ ಭೋಜನದಲ್ಲಿ ಪಾಲ್ಗೊಳ್ಳದಿದ್ದುದು ಅಂಬೇಡ್ಕರ್ ಅವರನ್ನು ಶಾಹು ಮಹರಾಜರ ಕಡೆಗೆ ಸೆಳೆದಿತ್ತು. ೧೯೨೦ರಲ್ಲಿ ಶಾಹು ಮಹಾರಾಜರನ್ನು ಭೇಟಿಯಾದ ಅಂಬೇಡ್ಕರ್, ಅವರು ಅಸ್ಪೃಶ್ಯರೊಡನೆ ಬೆರೆಯುಂಂಂಂತ್ತಿದ್ದುದನ್ನು ಕಂಡು ಅವರಿಂದ ಪ್ರಭಾವಿತರಾಗಿದ್ದರು.

ಭಾವ ವ್ಯಕ್ತವಾಗುತ್ತಿತ್ತು. ಹಾಗಾಗಿಯೇ ತಮ್ಮ ಪ್ರಾರಂಭಿಕ ದಿನಗಳಲ್ಲಿ ಬ್ರಾಹ್ಮಣರಿಂದ ಹೆಚ್ಚಿನ ಬೆಂಬಲ ಗಳಿಸಿದರೂ, ಅಂಬೇಡ್ಕರ್ ಅವರಿಗೆ ಬ್ರಾಹ್ಮಣೇತರರಲ್ಲಿ ಹೆಚ್ಚಿನ ಸಾಂಗತ್ಯ ಗೋಚರಿಸುತ್ತಿತ್ತು.

೧೯೨೩ರಲ್ಲಿ ಲಂಡನ್‌ನಿಂದ ಹಿಂದಿರುಗಿದ ಬಳಿಕ ಅಂಬೇಡ್ಕರ್ ಅವರ ಕಾರ್ಯವೈಖರಿಯೇ ಬದಲಾಗಿತ್ತು. ಅವರ ಮನೆಯ ಮುಂದೆ ಜಮಾಯಿಸುತ್ತಿದ್ದ ಸಮುದಾಯದ ಜನತೆ ಕಾರ್ಯ ಚಟುವಟಿಕೆಗಳಿಗಾಗಿ ಚಡಪಡಿಸುತ್ತಿದ್ದರು. ಈ ಸಂದರ್ಭದಲ್ಲೇ ಅಂಬೇಡ್ಕರ್ ೧೯೨೪ರ ಮಾರ್ಚ್ ೯ರಂದು ಬಹಿಷ್ಕೃತ ಹಿತಕಾರಿಣಿ ಸಭಾ ಎಂಬ ಸಂಘಟನೆಯನ್ನು ಆರಂಭಿಸಿದರು. ಈ ಸಂಘಟನೆಯಲ್ಲಿ ಚಮನ್‌ಲಾಲ್ ಸೆಟಲ್‌ವಾಡ್, ಕೆ.ಎಫ್. ನಾರಿಮನ್ ಮುಂತಾದವರು ಸಕ್ರಿಯರಾಗಿದ್ದರು. ಶಿಕ್ಷಣ, ಆರ್ಥಿಕ ಪ್ರಗತಿ, ದಮನಿತ ಜನಸಮುದಾಯಗಳ ಹಿತಾಸಕ್ತಿಗಳ ರಕ್ಷಣೆ ಈ ಸಭಾದ ಮುಖ್ಯ ಧ್ಯೇಯಗಳಾಗಿದ್ದವು. ಈ ಸಂಘಟನೆಯ ಮೂಲಕ ಸಮೂಹ ನಾಯಕರಾಗಿ ಬೆಳೆದ ಅಂಬೇಡ್ಕರ್ ಉತ್ತಮ ವಾಗ್ಮಿಯಾಗಿಯೂ ಹೊರಹೊಮ್ಮಿದ್ದರು. ಅಧಿಕಾರಶಾಹಿಯಲ್ಲಿ ಅಧಿಪತ್ಯ ಸಾಧಿಸಿದ್ದ ಬ್ರಾಹ್ಮಣ ಸಮುದಾಯವನ್ನು ತೀವ್ರವಾಗಿ ಖಂಡಿಸುತ್ತಲೇ, ಅಸ್ಪೃಶ್ಯರಿಗೆ ಮತ್ತು ಶೂದ್ರರಿಗೆ ನೀಡಲಾಗುತ್ತಿದ್ದ ಮೀಸಲಾತಿಯನ್ನು ಅಂಬೇಡ್ಕರ್ ಸಮರ್ಥಿಸುತ್ತಿದ್ದರು. ಇದೇ ವೇಳೆಗೆ ಶಾಸನ ಸಮಿತಿಯಲ್ಲೂ ಅಸ್ಪೃಶ್ಯರ ಪರವಾದ ದನಿ ಮೊಳಗಲಾರಂಭಿಸಿತ್ತು. ಸಾರ್ವಜನಿಕ ಸ್ಥಳಗಳನ್ನು ಅಸ್ಪೃಶ್ಯರಿಗೆ ಮುಕ್ತವಾಗಿಸಲು ಶಾಸನವನ್ನು ಹೊರಡಿಸಲಾಯಿತು. ೧೯೨೬ರಲ್ಲಿ ಬಾಂಬೆ ಶಾಸನ ಸಮಿತಿಗೆ ನೇಮಿಸಲ್ಪಟ್ಟ ಅಂಬೇಡ್ಕರ್ ಸಮಿತಿಯ ಅನೇಕ ಚರ್ಚೆಗಳಲ್ಲಿ ಭಾಗವಹಿಸುವ ಮೂಲಕ ಅಸ್ಪೃಶ್ಯರ ಸಮಸ್ಯೆಗಳನ್ನು ಮುಂದಿಡುತ್ತಿದ್ದರು.

ಇದೇ ಸಂದರ್ಭದಲ್ಲಿ ಅಸ್ಪೃಶ್ಯರ ಮಹತ್ತರ ಹೋರಾಟವೊಂದು ರೂಪುಗೊಳ್ಳುತ್ತಿತ್ತು. ಮಾನವನ ಅತ್ಯಮೂಲ್ಯ ಅವಶ್ಯಕತೆಯಾದ ನೀರು ಅಸ್ಪೃಶ್ಯರಿಗೆ ಅಲಭ್ಯವಾಗಿತ್ತು. ಕಾರಣ ಮೇಲ್ಜಾತಿಯವರು ಅಸ್ಪೃಶ್ಯರನ್ನು ಅಶುದ್ಧರೆಂದು ಪರಿಗಣಿಸುತ್ತಿದ್ದರು. ಕೊಂಕಣ ಪ್ರಾಂತ್ಯದ ಮಹಾಡ್ ಎಂಬ ಸಣ್ಣ ಪಟ್ಟಣದಲ್ಲಿ ಪುರಸಭೆ ಸಾರ್ವಜನಿಕ ಕೆರೆಯನ್ನು ಅಸ್ಪೃಶ್ಯರಿಗೂ ಮುಕ್ತವಾಗಿಸಿ ಆದೇಶ ಹೊರಡಿಸಿತ್ತು. ಈ ಪಟ್ಟಣದಲ್ಲಿ ಮುಂಬೈನಿಂದ ವಲಸೆ ಬರುವ ದಲಿತರು, ಮೇಲ್ಜಾತಿಗಳವರು ಹೆಚ್ಚಿನ ಸಂಖ್ಯೆಯಲ್ಲಿದ್ದರು. ಅಂಬೇಡ್ಕರ್ ಅವರಿಗೆ ದಲಿತರು ಮಾತ್ರವಲ್ಲದೆ ಪ್ರಗತಿಪರ ಮೇಲ್ಜಾತಿಯವರ ಬೆಂಬಲವೂ ಇತ್ತು. ಇವರಲ್ಲಿ ಅನಂತರಾವ್ ಚಿತ್ರೆ, ಸುರೇಂದ್ರನಾಥ್ ಟಿಪ್ನಿಸ್, ಸಹಸ್ರಬುದ್ಧಿ , ಎನ್.ಎಂ.ಜೋಷಿ ಪ್ರಮುಖರಾಗಿದ್ದರು.

೧೯೨೭ರ ಮಾರ್ಚ್ ೧೯-೨೦ರಂದು ಬಹಿಷ್ಕೃತ ಹಿತರಕ್ಷಣಾ ಸಭೆಯು ಮಹಾಡ್‌ನಲ್ಲಿ ಜಿಲ್ಲಾ ಸಮಾವೇಶ ಏರ್ಪಡಿಸಿತ್ತು. ಸಮಾವೇಶದ ಎರಡನೇ ದಿನ ಚಿತ್ರೆಯವರ ಸೂಚನೆಯ ಮೇರೆಗೆ ಸಾರ್ವಜನಿಕ ಕೆರೆಯಲ್ಲಿ ಅಸ್ಪೃಶ್ಯರು ನೀರು ಕುಡಿಯುವ ಕಾರ್ಯಕ್ರಮ ಹಮ್ಮಿಕೊಳ್ಳಲು ನಿರ್ಧರಿಸಲಾಯಿತು. ೧೫೦೦ಕ್ಕೂ ಹೆಚ್ಚು ಜನ ನೀರು ಕುಡಿಯಲಾರಂಭಿಸಿದರು. ಈ ಸುದ್ದಿ ಪಟ್ಟಣದಲ್ಲಿ ಹರಡುತ್ತಿದ್ದಂತೆಯೇ ಮೇಲ್ಜಾತಿ ಹಿಂದೂಗಳು ಎಲ್ಲೆಂದರಲ್ಲಿ ಜಮಾಯಿಸಲಾರಂಭಿಸಿದರು. ದಲಿತರು ದೇವಾಲಯಕ್ಕೂ ಪ್ರವೇಶಿಸುತ್ತಾರೆಂಬ ಭೀತಿಯಿಂದ ಮೇಲ್ಜಾತಿ ಹಿಂದೂಗಳು ಅಸ್ಪೃಶ್ಯರ ಮೇಲೆ ಆಕ್ರಮಣ ಆರಂಭಿಸಿದರು. ಆಕ್ರಮಣದಲ್ಲಿ ಅನೇಕ ಅಸ್ಪೃಶ್ಯರು ಏಟು ತಿನ್ನಬೇಕಾಯಿತು. ನಂತರ ಬ್ರಾಹ್ಮಣರು ಕೆರೆಯ ಶುದ್ಧೀಕರಣ ಕ್ರಿಯೆಯನ್ನು ಏರ್ಪಡಿಸಿದ್ದರು.

ಈ ಪ್ರಕರಣ ಮತ್ತು ಆಕ್ರಮಣ ಇಡೀ ಮಹಾರಾಷ್ಟ್ರದಲ್ಲಿ ಸಂಚಲನ ಉಂಟುಮಾಡಿತ್ತು. ದಲಿತ ಸಮುದಾಯದ ಹೋರಾಟಗಳಿಗೆ ಮಹಾಡ್ ಒಂದು ಲಾಂಛನ ಕೇಂದ್ರವಾಗಿ ಪರಿಣಮಿಸಿತು. ದೇಶಾದ್ಯಂತ ದಲಿತ ಸಮುದಾಯಗಳಿಗೆ ಈ ಹೋರಾಟ ಹೊಸ ಹುರುಪು ತಂದಿತ್ತು. ೧೯೨೭ರ ಡಿಸೆಂಬರ್‌ನಲ್ಲಿ ಅಂಬೇಡ್ಕರ್ ನೀರಿನ ಹಕ್ಕಿಗಾಗಿ ಸತ್ಯಾಗ್ರಹ ಸಮಾವೇಶ ಪ್ರಾರಂಭಿಸಿದರು. ಇದೇ ಸಮಯದಲ್ಲಿ ಪ್ರಾರಂಭವಾದ ಬಹಿಷ್ಕೃತ ಭಾರತ್ ಪತ್ರಿಕೆ ಅಸ್ಪೃಶ್ಯರ ಅನೇಕ ಸಮಸ್ಯೆಗಳನ್ನು ಪ್ರಕಟಿಸಲಾರಂಭಿಸಿತು. ಆರ್ಯಸಮಾಜದ ಶುದ್ಧೀಕರಣ ಚಳುವಳಿಯನ್ನು ಈ ಪತ್ರಿಕೆಯ ಮೂಲಕ ಖಂಡಿಸಲಾಗುತ್ತಿತ್ತು. ಪ್ರಾರಂಭದಲ್ಲಿ ಜಾತಿ ರಹಿತ ಆರ್ಯಸಮಾಜದ ಸ್ಥಾಪನೆಗಾಗಿ ನಡೆಯುತ್ತಿದ್ದ ಶುದ್ಧೀಕರಣ ಕ್ರಿಯೆ ಕ್ರಮೇಣ ಅಸ್ಪೃಶ್ಯರನ್ನು ಹಿಂದೂ ಧರ್ಮದಲ್ಲಿ ಸಮೀಕರಿಸುವ ಯತ್ನವಾಗಿ ಮಾರ್ಪಟ್ಟಿದ್ದು ತೀವ್ರ ಟೀಕೆಗೊಳಗಾಯಿತು. ಇದೇ ಸಂದರ್ಭದಲ್ಲಿ ಕೆಲವು ನಾಯಕರು ಸತ್ಯಾಗ್ರಹ ಸಮಾವೇಶದಲ್ಲಿ ಯಾವುದೇ ಬ್ರಾಹ್ಮಣರಿಗೆ ಅವಕಾಶ ನೀಡಕೂಡದು ಎಂದು ಆಗ್ರಹಿಸಿದರು. ಆದರೆ ಈ ವಾದವನ್ನು ತಿರಸ್ಕರಿಸಿದ ಅಂಬೇಡ್ಕರ್ "ನಮ್ಮ ಚಳುವಳಿಯು ಬ್ರಾಹ್ಮಣ್ಯದ ವಿರುದ್ಧ ಮತ್ತು ಬ್ರಾಹ್ಮಣ ಧರ್ಮದ ವಿರುದ್ಧವೇ ಹೊರತು, ಬ್ರಾಹ್ಮಣರ ವಿರುದ್ಧವಲ್ಲ" ಎಂದು ಹೇಳಿದ್ದರು. ನಂತರದಲ್ಲಿ ಮತಾಂತರದ ಪ್ರಶ್ನೆ ಉದ್ಭವಿಸಿದಾಗ, ಇಸ್ಲಾಂಗೆ ಮತಾಂತರ ಹೊಂದುವ ಸಲಹೆಗಳೂ ಕೇಳಿಬಂದವು. ಆದರೆ ಅಂಬೇಡ್ಕರ್ ಅವರು "ಮೊದಲು ನಾವು ಹಿಂದೂ ಧರ್ಮಕ್ಕೆ ಸೇರಿದವರೇ ಇಲ್ಲವೇ ಎಂದು ನಿರ್ಧರಿಸೋಣ" ಎಂದು ಹೇಳುವ ಮೂಲಕ ಇಡೀ ಚರ್ಚೆಗೆ ಹೊಸ ಆಯಾಮವನ್ನು ಒದಗಿಸಿದ್ದರು.

೧೯೨೭ರ ಡಿಸೆಂಬರ್ ೨೩ರಂದು ಸತ್ಯಾಗ್ರಹ ಸಮಾವೇಶದ ವೇಳೆಗೆ ಮಹಾಡ್‌ನಲ್ಲಿ ೧೫ ಸಾವಿರಕ್ಕೂ

ಹೆಚ್ಚು ದಲಿತರು ಸೇರಿದ್ದರು. ಆದರೆ ಜಿಲ್ಲಾ ನ್ಯಾಯಾಧೀಶರು ಕೆರೆಯನ್ನು, ನೀರನ್ನು ಬಳಸದಂತ ನಿಷೇದಾಜ್ಞೆ ಹೊರಡಿಸಿದ್ದರು. ಈ ಆಜ್ಞೆಯನ್ನು ಪಾಲಿಸಿದ ಅಂಬೇಡ್ಕರ್ ವಿಚಲಿತರಾಗದೆ, ಮತ್ತೊಂದು ವಿಶಿಷ್ಟ ಹೋರಾಟವನ್ನು ಹಮ್ಮಿಕೊಂಡಿದ್ದರು. ಪುರೋಹಿತಶಾಹಿ ಹಿಂದೂ ಧರ್ಮದ ಪವಿತ್ರ ಶಾಸನ ಗ್ರಂಥವಾದ ಮನುಸ್ಮೃತಿಯನ್ನು ದಹಿಸುವ ಕಾರ್ಯಕ್ರಮವನ್ನು ಅಂಬೇಡ್ಕರ್ ಏರ್ಪಡಿಸಿದರು. ಈ ನಿರ್ಣಯವನ್ನು ಮಂಡಿಸಿದವರು ಸಹಸ್ರಬುದ್ಧಿ ಎಂಬ ಬ್ರಾಹ್ಮಣರಾದರೆ, ಅನುಮೋದಿಸಿದವರು ಚಂಬಾರರಾದ ರಾಜಭೋಜ್ ಅವರಾಗಿದ್ದರು. ಸಮಾವೇಶದ ಪ್ರಥಮ ದಿನದ ರಾತ್ರಿ ಮನುಸ್ಮೃತಿಯನ್ನು ದಹಿಸಲಾಗಿತ್ತು. ಮೂರನೆಯ ದಿನ ಆಕ್ರಮಣಶೀಲ ಮೆರವಣಿಗೆಯನ್ನು ಏರ್ಪಡಿಸಲಾಗಿತ್ತು. ಭಕ್ತಿ ಸಂತರು, ಗಾಂಧೀಜಿ, ಅಗರ್‌ಕರ್ ಮತ್ತು ಶಾಹುಮಹಾರಾಜ್ ಅವರ ಬಗ್ಗೆ ಘೋಷಣೆಗಳನ್ನು ಕೂಗಲಾಯಿತು. ನಂತರದಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಅಂಬೇಡ್ಕರ್ ಅಸ್ಪೃಶ್ಯ ಮಹಿಳೆಯರನ್ನು ಕುರಿತು, ಕೆಳಜಾತಿಗಳಂತೆ ಬೆಳ್ಳಿಯ ಒಡವೆಗಳನ್ನು ಧರಿಸುವ ಪವೃತ್ತಿಯನ್ನು ಕೈಬಿಟ್ಟು ತಮ್ಮ ಜಾತಿ ಸಂಕೇತಗಳು ಗೋಚರಿಸದಂತೆ, ಮೇಲ್ಜಾತಿಯವರ ರೀತಿ ಉಡುಪು ಧರಿಸಲು, ಮಕ್ಕಳಿಗೆ ತಪ್ಪದೆ ಶಿಕ್ಷಣ ನೀಡಲು ಕರೆ ನೀಡಿದ್ದರು. ಈ ಹಂತದಿಂದ ಮಹಾಡ್ ಅಂಬೇಡ್ಕರ್ ಅವರ ಹೋರಾಟಗಳ ಕೇಂದ್ರ ಬಿಂದುವಾಯಿತು. ಅಸ್ಪೃಶ್ಯರ ಭಾಗವಹಿಸುವಿಕೆ ಮತ್ತು ಕೆಲವು ಮೇಲ್ಜಾತಿಯವರ ಬೆಂಬಲ ಅಂಬೇಡ್ಕರ್‌ಗೆ ಪ್ರೋತ್ಸಾಹದಾಯಕವಾಗಿತ್ತು.

ಹಿಂದೂ ಧರ್ಮದ ಪವಿತ್ರ ಶಾಸ್ತ್ರದ ವಿರುದ್ಧ ನಡೆದ ಈ ಸಂಘರ್ಷದೊಡನೆಯೇ, ಸಾರ್ವಜನಿಕ ಸ್ಥಳಗಳನ್ನು ಮತ್ತು ಅವಕಾಶಗಳನ್ನು ಬಳಸುವಲ್ಲಿ ದಲಿತರಿಗೆ ಸಮಾನ ಅವಕಾಶಗಳಿಗಾಗಿ ಹೋರಾಟಗಳು ತೀವ್ರವಾಗತೊಡಗಿತು. ೧೯೨೦ರ ದಶಕದಲ್ಲಿ ಅಸ್ಪೃಶ್ಯರಲ್ಲಿ ತಮ್ಮ ಹಕ್ಕುಗಳ ಬಗ್ಗೆ ಹೆಚ್ಚಿನ ಪ್ರಜ್ಞೆ ಮೂಡಲಾರಂಭಿಸಿತು. ಗುರುವಾಯೂರಿನಲ್ಲಿ ದೇವಾಲಯದ ಮುಂದೆ ಹಾದು ಹೋಗುವ ರಸ್ತೆಯಲ್ಲಿ ದಲಿತರಿಗೆ ಪ್ರವೇಶವಿರಲಿಲ್ಲ. ಪೆರಿಯಾರ್ ರಾಮಸ್ವಾಮಿ ಅವರ ನೇತೃತ್ವದಲ್ಲಿ ದಲಿತರು ಈ ರಸ್ತೆಯನ್ನು ಹಾದು ಹೋಗುವ ಹಕ್ಕಿಗಾಗಿ ಹೋರಾಟ ನಡೆಸಿದ್ದರು. ಪುಣೆಯ ಪಾರ್ವತಿ ದೇವಸ್ಥಾನ ಮತ್ತು ನಾಸಿಕ್‌ನಲ್ಲಿರುವ ರಾಮ ದೇವಾಲಯದಲ್ಲೂ ದಲಿತರ ಪ್ರವೇಶಕ್ಕಾಗಿ ಹೋರಾಟ ರೂಪುಗೊಂಡಿತು. ಈ ಹೋರಾಟಗಳಲ್ಲಿ ನೇರವಾಗಿ ಭಾಗವಹಿಸದಿದ್ದರೂ, ಅಂಬೇಡ್ಕರ್ ಸೆಕ್ಯುಲರ್ ಪ್ರಜಾ ಹಕ್ಕುಗಳಿಗಾಗಿ ಮತ್ತು ಹಿಂದೂ ಧರ್ಮದ ನಿರಾಕರಣೆಗಾಗಿ ವೇದಿಕೆ ಸಿದ್ಧಪಡಿಸುತ್ತಿದ್ದರು. ಈ ಹಂತದಲ್ಲೇ ಅಸ್ಪೃಶ್ಯರನ್ನು ಹಿಂದೂ ಧರ್ಮದಲ್ಲಿ ಸಮೀಕರಿಸುವ ಗಾಂಧೀಜಿಯವರ ಯತ್ನಗಳನ್ನು ಅಂಬೇಡ್ಕರ್ ತೀವ್ರವಾಗಿ ಟೀಕಿಸಲಾರಂಭಿಸಿದರು.

ಈ ಹಂತದಲ್ಲಿ ಆರ್ಯರ ಆಗಮನದ ವಾದವನ್ನು ಸಂಪೂರ್ಣವಾಗಿ ಒಪ್ಪದ ಅಂಬೇಡ್ಕರ್ ಹಿಂದೂ ಧರ್ಮವನ್ನೂ ಸಂಪೂರ್ಣವಾಗಿ ಖಂಡಿಸುತ್ತಿರಲಿಲ್ಲ. ಬದಲಾಗಿ ಭಕ್ತಿಪಂಥ, ತುಕಾರಾಂ, ಜ್ಞಾನೇಶ್ವರ್ ಮುಂತಾದ ಸಮಾಜ ಸುಧಾರಕರ ಬಗ್ಗೆ ಗಾಢವಾದ ಅಧ್ಯಯನವನ್ನು ಆರಂಭಿಸಿದ್ದರು. ತಮ್ಮದೇ ಆದ ವಿಶ್ಲೇಷಣೆ ಮತ್ತು ವ್ಯಾಖ್ಯಾನವನ್ನು ಮಂಡಿಸುವ ಧ್ಯೇಯವನ್ನು ಹೊಂದಿದ್ದ ಅಂಬೇಡ್ಕರ್ ತಮ್ಮ ಅಧ್ಯಯನ ಮತ್ತು ಅನುಭವಗಳನ್ನೇ ಆಧಾರವಾಗಿರಿಸಿಕೊಂಡಿದ್ದರು. ತಮ್ಮ ತಂದೆಯವರ ಕಬೀರ್ ಪಂಥದ ಅನುಭವಗಳನ್ನು ಅಭ್ಯಸಿಸುತ್ತ ಕಬೀರ್‌ದಾಸ್ ಅವರ ತೀವ್ರಗಾಮಿತ್ವ ಹೇಗೆ ಬ್ರಾಹ್ಮಣವಾದದ ಚೌಕಟ್ಟಿನಲ್ಲಿ ಸಿಲುಕಿ ಹೋಗಿತ್ತು ಎಂಬ ಅಂಶವನ್ನೂ ಅಂಬೇಡ್ಕರ್ ಗ್ರಹಿಸಿದ್ದರು. ಅವರ ಮುಂದಿನ ಚಿಂತನಾ ಕ್ರಮವೂ ಇದರಿಂದಲೇ ಪ್ರಭಾವಿತವಾಗಿತ್ತು.

ಮುಂಬೈ ಶಾಸನ ಸಮಿತಿಯಲ್ಲಿ ಅಂಬೇಡ್ಕರ್ ಪ್ರಬಲ ದನಿಯಾಗಿ ಹೊರಹೊಮ್ಮಿದ್ದರು. ಅಸ್ಪೃಶ್ಯರ ಪರವಾದ ಅನೇಕ ಶಾಸನಗಳನ್ನು ಅನುಷ್ಠಾನಗೊಳಿಸುವಲ್ಲಿ ಅಂಬೇಡ್ಕರ್ ಮಹತ್ವದ ಪಾತ್ರ ವಹಿಸಿದ್ದರು. ೧೯೨೭ರ ಸೆಪ್ಟೆಂಬರ್‌ನಲ್ಲಿ, ಮೇಲ್ಜಾತಿಯ ಹಿಂದೂಗಳು, ಕ್ರೈಸ್ತರು, ಅಸ್ಪೃಶ್ಯರನ್ನೊಳಗೊಂಡ ಸಮತಾ ಸಮಾಜ್ ಸಂಘವನ್ನು ಸ್ಥಾಪಿಸಿದ ಅಂಬೇಡ್ಕರ್ ಸಹಭೋಜನ ಮತ್ತು ಅಂತರ್ಜಾತಿ ವಿವಾಹಕ್ಕಾಗಿ ಪ್ರಚಾರ ಕೈಗೊಂಡಿದ್ದರು. ಅಂತರ್ಜಾತಿ ವಿವಾಹದ ಕಾರ್ಯಕ್ರಮ ಫಲಪ್ರದವಾಗಲಿಲ್ಲ. ಈ ಹಂತದಲ್ಲಿ ಅಸ್ಪೃಶ್ಯರ ವಿವಾಹದಲ್ಲಿ, ಮನಃಪೂರ್ವಕವಾಗಿ ಅಲ್ಲದಿದ್ದರೂ, ಸಂದರ್ಭಕ್ಕನುಗುಣವಾಗಿ ವೈದಿಕ ಸಂಪ್ರದಾಯಗಳನ್ನು ಅನುಸರಿಸಲೂ ಸೂಚಿಸಿದ್ದರು. ಬಹುಶಃ ಈ ಹಂತದಲ್ಲಿ ಅಂಬೇಡ್ಕರ್ ಹಿಂದೂ ಧರ್ಮದ ಎಲ್ಲ ಸ್ವರೂಪಗಳನ್ನು ವಿರೋಧಿಸುತ್ತಿರಲಿಲ್ಲ ಎನಿಸುತ್ತದೆ.

ನಂತರದ ದಿನಗಳಲ್ಲಿ ಅಂಬೇಡ್ಕರ್ ಅವರು ಕೈಗೊಂಡ ಹೋರಾಟಗಳು ಹಿಂದೂ ಧರ್ಮವನ್ನು ಸಾರಾಸಗಟಾಗಿ ನಿರಾಕರಿಸುವ ನಿಟ್ಟಿನಲ್ಲಿ ಸಾಗಿದ್ದು ಈಗ ಇತಿಹಾಸ. ಆದರೆ ಜಾತಿವ್ಯವಸ್ಥೆಯ ವಿರುದ್ಧದ ತಮ್ಮ ಹೋರಾಟದಲ್ಲಿ ಅಂಬೇಡ್ಕರ್ ಅವರಿಗೆ ಸ್ಪಷ್ಟತೆ ಇದ್ದು, ಯಾವುದೇ ಸಮುಯದಾಯದ ವಿರುದ್ಧ ದ್ವೇಷವನ್ನು ಪ್ರಕಟಪಡಿಸುತ್ತಿರಲಿಲ್ಲ ಎಂಬ ಅಂಶವನ್ನು ಗಮನಿಸಬೇಕಾಗಿದೆ. ಅಂಬೇಡ್ಕರ್ ಬ್ರಾಹ್ಮಣ ದ್ವೇಷಿ, ದಲಿತರ ಪರ ಎಂದಾಕ್ಷಣ ಬ್ರಾಹ್ಮಣ ವಿರೋಧಿ ಎಂದು ಅರ್ಥೈಸುವ ಆಧುನಿಕ ಚಿಂತಕರು ಈ ಸತ್ಯವನ್ನು ಗ್ರಹಿಸಿದರೆ ಒಳಿತು. □

ಜಾತಿ ರಾಜಕಾರಣ ಮತ್ತು ಸಾಮಾಜಿಕ ನ್ಯಾಯ

(13ನೇ ಪುಟದಿಂದ)

ನಾಯಕ/ವಾಲ್ಮೀಕಿ ಎಂಬ ಪರ್ಯಾಯ ಹೆಸರುಗಳಿಂದ ಕರೆಯಲ್ಪಡುವ ಒಂದೇ ಜಾತಿಯವರು ಕಬಳಿಸಿರುವುದು ಮತ್ತು ಪರಿಶಿಷ್ಟ ಜಾತಿ ಕೋಟಾದಡಿ ಅಸ್ಪೃಶ್ಯೇತರ ಜಾತಿಗಳು ಅತಿ ಹೆಚ್ಚು ಪ್ರಾತಿನಿಧ್ಯ ಗಿಟ್ಟಿಸಿರುವುದು ಹಾಗೂ ಅಸ್ಪೃಶ್ಯ ಜಾತಿಗಳಿಗಿಂತಲೂ ಕಡೆಯಾಗಿರುವ ಜಾತಿಗಳು ಸಂಪೂರ್ಣವಾಗಿ ನಿರ್ಲಕ್ಷ್ಯಕ್ಕೊಳಗಾಗಿರುವುದು, ಒಳಮೀಸಲಾತಿಯ ಅಗತ್ಯವನ್ನು ಒತ್ತಿ ಹೇಳುತ್ತಿವೆ.

ರಾಜ್ಯದ ಜನಸಂಖ್ಯೆಯಲ್ಲಿ ಶೇ. 3.81ರಷ್ಟಿರುವ ಬ್ರಾಹ್ಮಣ ಜಾತಿಯ 11 ಜನ ಶಾಸಕರಿದ್ದು, ಅವರಲ್ಲಿ 9 ಮಂದಿ ಬಿ.ಜೆ.ಪಿ.ಯವಾಗಿರುವುದು ಹಾಗೂ ಆ 9 ಜನರಲ್ಲಿ-3 ಜನ (ವಿ.ಎಸ್.ಆಚಾರ್ಯ, ಸುರೇಶ್ ಕುಮಾರ್ ಮತ್ತು ವಿಶ್ವೇಶ್ವರ ಹೆಗಡೆ ಕಾಗೇರಿ) ಕ್ಯಾಬಿನಟ್ ದರ್ಜೆಯ ಸಚಿವರಗಿರುವುದು, ಬಿ.ಜೆಪಿ, ಯಾರ ಪರವಾಗಿದೆ ಎನ್ನುವುದರ ಸಂಕೇತವಾಗಿದೆ. ಬಿಜೆಪಿಯಿಂದ 29 ಜನ ಶಾಸಕರು ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಗಳಿಗೆ ಸೇರಿದವರಾಗಿದ್ದು, ಅವರಲ್ಲಿ ಶೇ. 75% ಜನ ಅಸ್ಪೃಶ್ಯೇತರ/ಆದಿವಾಸಿಯೇತರ ಜಾತಿಗಳಿಗೆ ಸೇರಿರುವುದರಿಂದ ಬಿ.ಜೆ.ಪಿ ಮೂಲ ಅಸ್ಪೃಶ್ಯರನ್ನು/ಆದಿವಾಸಿಗಳನ್ನು ಯಾವ ಧೋರಣೆಯಿಂದ ಕಾಣುತ್ತಿದೆ ಎನ್ನುವುದರ ಸ್ಪಷ್ಟ ನಿಲುವಾಗಿದೆ. ಮನೋಹರ ಮಸ್ಕಿಯಂತಹ ನಾಲಾಯಕ್ ಬಿ.ಜೆ.ಪಿ. ರಾಜಕಾರಣಿಯೊಬ್ಬ ಅಂಬೇಡ್ಕರ್ ಸಂವಿಧಾನವನ್ನೇ ರಚಿಸಲಿಲ್ಲ ಎಂದು ಹೇಳಿಕೆ ನೀಡಿದಾಗ, ಆ ಹೇಳಿಕೆಯನ್ನು ಖಂಡಿಸುವ ಕನಿಷ್ಟ ಪ್ರಯತ್ನವನ್ನೂ ಮಾಡದ ಬಿ.ಜೆ.ಪಿ ದಲಿತ ನಾಯಕ ಡಿ.ಎಸ್. ವೀರಯ್ಯ ಮತ್ತು ಅಖಿಲ ಭಾರತ ದಲಿತ ಕ್ರಿಯಾವೇದಿಕೆಯ ಅಧ್ಯಕ್ಷ ಚಿ.ನಾ.ರಾಮು ಯಾರ ಪರವಾಗಿದ್ದಾರೆ ಎನ್ನುವುದನ್ನು ಸೂಚಿಸುತ್ತದೆ.

ಸ್ವಾತಂತ್ರ್ಯ ನಂತರದ 61 ವರ್ಷಗಳನಂತರವೂ ಕೂಡ ಭಾರತದಲ್ಲಿ ಸಂಘಟಿತ ಪ್ರಬಲ ಜಾತಿಗಳ ಅಧಿಕಾರ ರಾಜಕಾರಣ ಎಗ್ಗಿಲ್ಲದೆ ಮುನ್ನಡೆಯುತ್ತಿದೆ. ಈ ಜಾತಿಗಳು ದಲಿತ, ಆದಿವಾಸಿ, ಹಿಂದುಳಿದ ಮತ್ತು ಧಾರ್ಮಿಕ ಅಲ್ಪಸಂಖ್ಯಾತ ಸಮುದಾಯಗಳಲ್ಲಿ ಹೆಚ್ಚು ಜನಸಂಖ್ಯೆಯನ್ನು ಹೊಂದಿರುವ ಸಮುದಾಯಗಳಿಗೆ ಮಾತ್ರ ರಾಜಕೀಯ ಪ್ರಾತಿನಿಧ್ಯವನ್ನು ಕಲ್ಪಸುವುದರ ಮೂಲಕ ಇತರೆ ಶೋಷಿತ ಸಮುದಾಯಗಳಿಗೆ ವಂಚನೆ ಮಾಡುತ್ತಿವೆ. ರಾಜಕೀಯದ ಆಗುಹೋಗುಗಳನ್ನು, ಪಕ್ಷದಲ್ಲಿನ ಉನ್ನತ ಸ್ಥಾನಮಾನಗಳನ್ನು, ಸಚಿವರ ಖಾತೆಗಳನ್ನು ನಿಗಮ/ಮಂಡಳಿಗಳ ಅಧ್ಯಕ್ಷರನ್ನು ನಿರ್ಧರಿಸುವ ಪ್ರಬಲ ಜಾತಿಗಳು, ಹಣ್ಣಿನ ರಸವನ್ನು ಹೀರಿ-ಸಿಪ್ಪೆಯನ್ನು ಎಸೆಯುವಂತೆ ನಾಮ್‌ಕಾವಸ್ತೆ ಹುದ್ದೆಗಳನ್ನು, ಖಾತೆಗಳನ್ನು, ನಿಗಮ/ಮಂಡಳಿಗಳ ಅಧ್ಯಕ್ಷಗಿರಿಯನ್ನು ಇತರೆ ಜಾತಿಗಳಿಗೆ ಎಸೆಯುತ್ತಿವೆ.

ಅಮೇರಿಕಾದ ಕಪ್ಪು ಜನಾಂಗಕ್ಕೆ ಸೇರಿದ ಬರಾಕ್ ಒಬಮಾರಂತಹ ಶೋಷಿತ ಕಪ್ಪು ಜನಾಂಗದ ವ್ಯಕ್ತಿ, ಅಲ್ಲಿನ ಅಧ್ಯಕ್ಷರಾಗಿ ಆಯ್ಕೆಗೊಂಡಂತೆ, ಭಾರತದ ಶೋಷಿತರಲ್ಲಿ ಶೋಷಿತ ಸಮುದಾಯಕ್ಕೆ ಸೇರಿದ ವ್ಯಕ್ತಿ/ಮಹಿಳೆ ಈ ದೇಶದ ಪ್ರಧಾನಿಯಾದಾಗಲೇ/ಈ ರಾಜ್ಯದ ಮುಖ್ಯಮಂತ್ರಿಯದಾಗಲೇ ಸಂಸದೀಯ ಪ್ರಜಾಪ್ರಭುತ್ವಕ್ಕೊಂದು ಮೆರುಗು. ಬಿ.ಜೆ.ಪಿ, ಕಾಂಗ್ರೆಸ್ ಮತ್ತು ಜೆ.ಡಿಎಸ್. ನಂತಹ ರಾಜಕೀಯ ಪಕ್ಷಗಳಿಂದ ಈ ರಾಜಕೀಯ ಪವಾಡ ನಿರೀಕ್ಷಿಸಬಹುದೇ? ಬಿ.ಎಸ್.ಪಿ.ಯಂತಹ ಪರ್ಯಾಯ ರಾಜಕೀಯ ಚಳುವಳಿಯಿಂದ ರಾಷ್ಟ್ರಮಟ್ಟದಲ್ಲಿ ಒಂದು ಹೊಸ ಸಾಮಾಜಿಕ ಪರಿವರ್ತನೆ ಸಾಧ್ಯವೇ? ರಾಜ್ಯ ಮಟ್ಟದಲ್ಲಿ ಅಹಿಂದ ಮಾದರಿಯ ಪರ್ಯಾಯ ರಾಜಕಾರಣದ ಅಗತ್ಯವಿಲ್ಲವೆ?

ಈ ಪ್ರಶ್ನೆಗಳ ಕುರಿತು ಚಳುವಳಿಯ ಮುಖಂಡರು, ಬುದ್ಧಿ ಜೀವಿಗಳು ಮತ್ತು ಪ್ರಗತಿಪರ ಜಾತ್ಯಾತೀತ ಮನಸ್ಸುಗಳು ಚಿಂತಿಸಿ ತೀರ್ಮಾನಕ್ಕೆ ಬರುವ ಅಗತ್ಯವಿದೆ. □



ಕೊಲೆ ಮತ್ತು ಸಂಗೀತ

ಆತ ನಿಟ್ಟುಸಿರಾಗಿ ನಿರೀಕ್ಷೆಗಳಿಗೆ
ನೇಣು ಬಿಗಿದುಕೊಳ್ಳುತ್ತಿರುವಾಗ
ತಾಯಿಗೆ ನಿದ್ರೆ ಬಂದಿಲ್ಲ.
ಎಚ್ಚರವೂ ಇಲ್ಲ
ಅಣ್ಣ ತಂಗಿಯರು ಕಣ್ಣುಮುಚ್ಚಿಕೊಂಡಿಲ್ಲ
ನೋಡುತ್ತಲೂ ಇಲ್ಲ.
ನಾನು ದೂರದ ಹೊಲದ ಮಧ್ಯದಲ್ಲಿ
ಕಿರುಚಿಕೊಂಡೆ
''ಇದು ಅಸಹಾಯಕತೆ'
ಶಬ್ಧಕ್ಕೆ ಹೊಲದ ಬಾವಿಯಲ್ಲಿದ್ದ ಕಪ್ಪೆಯೊಂದು
ಜಿಗಿಯಿತು.
ಒಂದು ಸುತ್ತು ನೀರಿನ ಅಲೆ. ನಿಶ್ಯಬ್ಧ.
ಭೂಮಿ ನೋವಿನಿಂದ ಮುಲುಗಿಕೊಂಡು
ಮಗ್ಗುಲು ಬದಲಿಸಿ ಮಲಗಿತು ನೀರವ.

ನಾನು ಅಲ್ಲಿಂದಲೇ ಹೇಳಿದೆ
ಅಣ್ಣ,
ಭತ್ತದಲ್ಲಿ ಹಾಲಿಲ್ಲ. ಕಬ್ಬಿನಲ್ಲಿ ರಸವಿಲ್ಲ.
ಕಣ್ಣಲ್ಲಿ ಈರುಳ್ಳಿ ನೀರು, ಮೂಗಿಗೆ ಮೆಣಸಿನ
ಹೊಗೆ
ಬಿಟಿ ಬೀಜದಲ್ಲಿ ಮೊಳಕೆಯೊಡೆದದ್ದು ಸಾಲದ
ಹಾವು
ತಿನ್ನುವ ಗೋಧಿ ಹೊಲದಲ್ಲಿ
ಬಿತ್ತಲು ಕೊಟ್ಟದ್ದು ಗುಲಾಬಿ ಹೂವು
ಕ್ಯಾನ್ಸರ್ ಭೂತಕ್ಕೆ ಅಡಿಕೆ ಬಲಿ
ಮರ ರುಂಡದ ಹಾರ

ನಿಜ; ನೀನು ಋಣ ಮುಕ್ತನಲ್ಲ. ಖಜಾನೆಯ
ರೆಕಾರ್ಡಿನಲ್ಲಿ
ಆದರೆ ಇಡೀ ಸಾಗುವಳಿ ಭೂಮಿಯನ್ನು ನಿನ್ನ
ಒಂದೇ ಹೆಜ್ಜೆ ಕೆಳಗೆ ತರಬಲ್ಲ
ವಾಮನ ನೀನು ಬೆಳೆಯಲಿಲ್ಲ
ಯಾರ ಹೆಜ್ಜೆಯ ಕೆಳಗೆ ನಿನ್ನ ಹೊಲ?
ಯಾರ ತಾಂಡವ ನೃತ್ಯಕ್ಕೆ
ಬೆನ್ನು ಮೂಳೆ ನೆಲ?

ನಿಜ; ನಿಜ,
ನಿನ್ನ ಕೊರಳ ಹಗ್ಗದಲ್ಲಿ
ಮನಮೋಹನ-ಬುಷ್‌ರ ಬೆರಳಚ್ಚು ಸಿಗುವುದಿಲ್ಲ
ನೀನು ಕೆಳಗಿನ ಟೇಬಲ್ ಒದೆಯುವಾಗ
ಯಾವ ಖುರ್ಚಿಯೂ ಬೀಳುವುದಿಲ್ಲ
ನಿನ್ನ ನಿಟ್ಟುಸಿರು, ನಿರಾಸೆ, ಕೊನೆ ಉಸಿರಿಗೆ
ಒಪ್ಪಂದದ ಯಾವ ಅಕ್ಷರಗಳೂ,
ವ್ಯಾಕರಣಗಳೂ,
ಜಘಗಳೂ ಬದಲಾಗುವುದಿಲ್ಲ

ಹಾಗಾಗಿ, ನಾನು ಕೋರ್ಟಿಗೆ ಹೋಗುವುದಿಲ್ಲ
ನಿನ್ನ ಋಣಮುಕ್ತ ಮಾಡಲು
ಕಡತಗಳಿಗೆ ಮೊರೆಯಿಡುವುದಿಲ್ಲ
ನಾನು ಬದುಕಲು ನಿನ್ನ ಕೊನೆದಿನ ಪರಾಕೂಡ
ಕೊಡುವುದಿಲ್ಲ
ಅಥವಾ ನಾನು ನಿನ್ನ ಭೇಟಿಯಾಗುವುದಿಲ್ಲ
ಹಾಗೆ;
ಸ್ವರ್ಗದಲ್ಲೋ-ನರಕದಲ್ಲೋ

ನಿನ್ನ ಕೊಲೆಯ ಬೆರಳಚ್ಚುಗಳು
ಈ ನೆಲದ ಹೊಲದಲ್ಲಿ ಮೂಡಿವೆ
ನಿನ್ನ ಕೊಲೆಗಾರನ ಮಂಪರು ಪರೀಕ್ಷೆ
ಬೆಲೆಯಿಲ್ಲದ ಬೆಳಗಳಲ್ಲಿ
ಸೊರಗಿದ ಗಿಡಗಳಲ್ಲಿದೆ.
ಈ ಕತ್ತಲೆಯ-ಆದರೆ ಕೋಳಿಕೂಗುತ್ತಿರುವ
ನಾಲ್ಕು ಗಂಟೆ ಮುಂಜಾವಿನಲ್ಲಿ
ನಿನ್ನ ಕೊಲೆಯ ಸಾಂಧರ್ಭಿಕ ಸಾಕ್ಷಿ ಇದೆ.
ನಿನ್ನ ಅಣ್ಣತಮ್ಮಂದಿರು-ಅಕ್ಕತಂಗಿಯರಿಗೆ
ಕೊಲೆಯ ಕಾರಣಗಳು ತಿಳಿದಿವೆ.
ನಿನ್ನ ತಾಯಿಯ ಹೃದಯದಲ್ಲಿ ಅದರ ವೇದನೆ
ಇದೆ.
ಕಾನೂನುಗಳಲ್ಲಿಲ್ಲದ ನ್ಯಾಯ ಹೊಲದ
ಆತ್ಮದಲ್ಲಿದೆ ಜೀವದಲ್ಲಿದೆ
ರಣರಂಗ ಕೂಡ ಅಲ್ಲೇ ಇದೆ.

ನೇಗಿಲುಗಳಲ್ಲಿ
ಹೊಲದ ನಕ್ಷತ್ರಗಳ ಮೇಲೆ
ನಿನ್ನದೇ ಸಹಿ ಹಾಕಬೇಕು.
ಮತ್ತು ಅಲ್ಲಿ ಬೆಳೆ ತೊನೆಯುವಾಗ
ದಿನಗಟ್ಟಲೇ ಸಂಗೀತ ನುಡಿಸಬೇಕು
ಮತ್ತು ಮನೆಮಂದಿಯೆಲ್ಲ ಅಂಚಲ್ಲಿ ನಿಂತು
'ಮುತ್ತಿನ ನೀರಿನ ಎರಕಾವ' ಸವಿಯಬೇಕು!

❍ ಅಪ್ಪು

(ಪಶ್ಚಿಮ ಘಟ್ಟದ ರೈತರ ಹೊಲಗಳಿಂದ)

ಡಾ. ಆನಂದ್ ತೇಲ್‌ತುಂಬ್ಡೆಯವರ ಸಂದರ್ಶನ:

'ದಲಿತರು ವರ್ಗ ಆಧಾರದಲ್ಲಿ ಸಮೀಕರಣಗೊಳ್ಳಬೇಕು'

ಸಂದರ್ಶನ:
ಶಿವಸುಂದರ್

ಈ ಪುಸ್ತಕವು ದೌರ್ಜನ್ಯವೊಂದರ ಕೇಸ್ ಸ್ಟಡಿ ಮಾತ್ರವಲ್ಲ. ಇದು ಆ ಪ್ರಕರಣದ ಬಗೆಗಿನ ಅಧ್ಯಯನವೂ ಆಗಿರುವಂತೆ ಅಂಥ ದೌರ್ಜನ್ಯವು ಸಂಭವಿಸುವ ನಮ್ಮ ಸಮಾಜದ, ಪ್ರಭುತ್ವದ ಬಗೆಗಿನ ಅಧ್ಯಯನವೂ ಆಗಿದೆ. ದಲಿತ ಚಳವಳಿಯ ಪರಿಸ್ಥಿತಿ, ಪ್ರಭುತ್ವದ ಮತ್ತು ಸಾಮಾಜಿಕ ಡೈನಮಿಕ್ಸ್‌ನ ಅಂಶಗಳೂ ಬೆರೆತು ಒಂದು ದೌರ್ಜನ್ಯವು ಸಂಭವಿಸುತ್ತದೆ. ಹಾಗೆ ನೋಡಿದರೆ ಖೈರ್ಲಾಂಜಿಯು ದಲಿತರ ಮೇಲಿನ ದೌರ್ಜನ್ಯಗಳ ಪ್ರಕರಣಗಳಲ್ಲೇ ಅತಿ ವಿಶಿಷ್ಟವಾದ ಪ್ರಕರಣವಾಗಿದೆ. ಖೈರ್ಲಾಂಜಿಯು ಇಂದು ನಮ್ಮ ಸಮಾಜದಲ್ಲಿ ಜಾತಿ ಅಭಿವ್ಯಕ್ತಗೊಳ್ಳುತ್ತಿರುವ ರೀತಿ, ದಲಿತ ಚಳವಳಿಗಳ ಪರಿಸ್ಥಿತಿ, ನಾಗರೀಕ ಸಮಾಜ, ಪ್ರಭುತ್ವ ಮತ್ತು ಮಾಧ್ಯಮಗಳ ಬದಲಾಗುತ್ತಿರುವ ಪಾತ್ರಗಳೆಲ್ಲದರ ಒಟ್ಟು ಮೊತ್ತವಾಗಿದೆ. ಹೀಗಾಗಿ ಖೈರ್ಲಾಂಜಿ ದೌರ್ಜನ್ಯವನ್ನು ಅರ್ಥ ಮಾಡಿ ಕೊಳ್ಳುವುದೆಂದರೆ ಸಮಾಜ ಮತ್ತು ಪ್ರಭುತ್ವವನ್ನು ಅರ್ಥ ಮಾಡಿಕೊಳ್ಳುವುದೇ ಆಗಿದೆ.

ಖೈರ್ಲಾಂಜಿ ಪುಸ್ತಕದ ಮೂಲ ಇಂಗ್ಲಿಷ್ ಲೇಖಕರಾದ ಡಾ. ಆನಂದ್ ತೇಲ್‌ತುಂಬ್ಡೆಯವರು ದಲಿತ ಚಳವಳಿ, ದಲಿತ ಸಮಸ್ಯೆ ಮತ್ತದರ ವಿಮೋಚನೆಗಳ ಬಗ್ಗೆ ದಶಕಗಳಿಂದಲೂ ಚಿಂತಿಸುತ್ತಾ ಬರೆಯುತ್ತಾ ಬಂದಿರುವ ಈ ದೇಶದ ಮಹತ್ವದ ಚಿಂತಕರು ಮತ್ತು ಲೇಖಕರು. ಆದರೆ ಅವರ ಬರಹಗಳು ಕನ್ನಡಕ್ಕೆ ಬಂದಿರುವುದು ಬಹಳ ಕಡಿಮೆ. ಅವರ 'ಅಂಬೇಡ್ಕರ್ ಮತ್ತು ಮುಸ್ಲಿಮರು' ಎಂಬ ಲೇಖನವು ಕನ್ನಡದಲ್ಲಿ ಪುಸ್ತಕ ರೂಪದಲ್ಲಿ ಬಂದಿರುವುದು ಬಿಟ್ಟರೆ 'ಖೈರ್ಲಾಂಜಿ'ಯ ಕನ್ನಡಕ್ಕೆ ಬರುತ್ತಿರುವ ಅವರ ಮೊಟ್ಟ ಮೊದಲ ಕೃತಿ. ಈ ಹಿನ್ನೆಲೆಯಲ್ಲಿ ಈ ಪುಸ್ತಕದಲ್ಲಿರುವ ಅವರ ಎಲ್ಲಾ ಚಿಂತನೆಗಳನ್ನು ಸಾರಾಂಶದಲ್ಲಿ ಅರ್ಥ ಮಾಡಿಕೊಳ್ಳಲು ಮತ್ತು ದಲಿತ ಚಳವಳಿ ಮತ್ತು ವಿಮೋಚನೆ ಹಾಗೂ ಜಾಗತೀಕರಣ, ಭಾರತ ದೇಶದಲ್ಲಿ ಸಾಮಾಜಿಕ ಕ್ರಾಂತಿಯಂಥ ವಿಷಯಗಳ ಬಗೆಗಿನ ಅವರ ಚಿಂತನೆಯನ್ನು ಕನ್ನಡ ಓದುಗರಿಗೆ ಪರಿಚಯ ಮಾಡಿಕೊಡಲು ಡಾ. ಆನಂದ್ ತೇಲ್ ತುಂಬ್ಡೆಯವರ ಜೊತೆ ಮಾಡಲಾದ ಸಂದರ್ಶನವಿದು. ಡಾ. ಆನಂದ್ ತೇಲ್ ತುಂಬ್ಡೆಯವರು ಡಾ. ಬಿ.ಆರ್ ಅಂಬೇಡ್ಕರ್ ಅವರ ಮೊಮ್ಮಗಳ ಗಂಡ; ಪ್ರಕಾಶ್ ಅಂಬೇಡ್ಕರ್ ಅವರ ಭಾವ.

ಶಿವಸುಂದರ್: ಖೈರ್ಲಾಂಜಿಯ ಬಗ್ಗೆ ಇಂಥ ಒಂದು ಪುಸ್ತಕವನ್ನು ಬರೆಯ ಬೇಕೆಂದು ನಿಮಗೆ ಏಕೆ ಅನಿಸಿತು?

ಡಾ. ಆನಂದ್ ತೇಲ್‌ತುಂಬ್ಡೆ: ಖೈರ್ಲಾಂಜಿಯ ಹಿಂದೆಯೂ ದಲಿತರ ಮೇಲೆ ಹಲವು ದೌರ್ಜನ್ಯಗಳು ನಡೆದಿದೆ. ಆದರೆ ಈ ಬಗ್ಗೆ ಬಂದ ವರದಿಗಳೆಲ್ಲವೂ ಪತ್ರಿಕಾ ವರದಿಗಳಿಗಿಂತ ಹೆಚ್ಚಿನದಾದ ವಿಶ್ಲೇಷಣೆಯನ್ನು ಮಾಡಲಿಲ್ಲ. ಸಮಾಜದ ಯಾವ ವಿದ್ಯಮಾನಗಳಿಂದ ಇಂಥ ದೌರ್ಜನ್ಯಗಳು ಸಂಭವಿಸುತ್ತಿವೆ ಮತ್ತು ಇದರ ಮೂಲಗಳೇನು ಎಂಬ ಬಗ್ಗೆ ವಿಶ್ಲೇಷಣೆ ಮಾಡಿಲ್ಲ.

ಈ ಪುಸ್ತಕವು ದೌರ್ಜನ್ಯವೊಂದರ ಕೇಸ್ ಸ್ಟಡಿ ಮಾತ್ರವಲ್ಲ. ಇದು ಆ ಪ್ರಕರಣದ ಬಗೆಗಿನ ಅಧ್ಯಯನವೂ ಆಗಿರುವಂತೆ ಅಂಥ ದೌರ್ಜನ್ಯವು ಸಂಭವಿಸುವ ನಮ್ಮ ಸಮಾಜದ, ಪ್ರಭುತ್ವದ ಬಗೆಗಿನ ಅಧ್ಯಯನವೂ ಆಗಿದೆ. ದಲಿತ ಚಳವಳಿಯ ಪರಿಸ್ಥಿತಿ, ಪ್ರಭುತ್ವದ ಮತ್ತು ಸಾಮಾಜಿಕ ಡೈನಮಿಕ್ಸ್‌ನ ಅಂಶಗಳೂ ಬೆರೆತು ಒಂದು ದೌರ್ಜನ್ಯವು ಸಂಭವಿಸುತ್ತದೆ. ಹಾಗೆ ನೋಡಿದರೆ ಖೈರ್ಲಾಂಜಿಯು ದಲಿತರ ಮೇಲಿನ ದೌರ್ಜನ್ಯಗಳ ಪ್ರಕರಣಗಳಲ್ಲೇ ಅತಿ ವಿಶಿಷ್ಟವಾದ ಪ್ರಕರಣವಾಗಿದೆ. ಖೈರ್ಲಾಂಜಿಯು ಇಂದು ನಮ್ಮ ಸಮಾಜದಲ್ಲಿ ಜಾತಿ ಅಭಿವ್ಯಕ್ತಗೊಳ್ಳುತ್ತಿರುವ ರೀತಿ, ದಲಿತ ಚಳವಳಿಗಳ ಪರಿಸ್ಥಿತಿ, ನಾಗರೀಕ ಸಮಾಜ, ಪ್ರಭುತ್ವ ಮತ್ತು ಮಾಧ್ಯಮಗಳ ಬದಲಾಗುತ್ತಿರುವ ಪಾತ್ರಗಳೆಲ್ಲದರ ಒಟ್ಟು ಮೊತ್ತವಾಗಿದೆ. ಹೀಗಾಗಿ ಖೈರ್ಲಾಂಜಿ ದೌರ್ಜನ್ಯವನ್ನು ಅರ್ಥ ಮಾಡಿಕೊಳ್ಳುವುದೆಂದರೆ ಸಮಾಜ ಮತ್ತು ಪ್ರಭುತ್ವವನ್ನು ಅರ್ಥ ಮಾಡಿಕೊಳ್ಳುವುದೇ ಆಗಿದೆ. ಖೈರ್ಲಾಂಜಿಯನ್ನು ಅರ್ಥ ಮಾಡಿಕೊಳ್ಳುವುದೆಂದರೆ ಈ ದೇಶದ ಜಾತಿವ್ಯವಸ್ಥೆಯನ್ನೂ ಮತ್ತು ಅದುಬದಲಾಗುವ ಬಗೆಯನ್ನೂ ಅರ್ಥಮಾಡಿಕೊಳ್ಳುವುದೇ ಆಗಿದೆ. ಆದ್ದರಿಂದಲೇ ಈ ಪುಸ್ತಕ.

ಶಿವಸುಂದರ್: ದಲಿತರ ಮೇಲಿನ ದೌರ್ಜನ್ಯಗಳು ಇತ್ತೀಚೆಗೆ ಹೆಚ್ಚಾಗಿವೆ ಎಂದು ನೀವು ಭಾವಿಸುತ್ತೀರಾ?

ಡಾ. ಆನಂದ್ ತೇಲ್‌ತುಂಬ್ಡೆ: ಹೌದು. ದಲಿತರ ದೌರ್ಜನ್ಯಗಳ ಮೇಲಿನ ಟ್ರೆಂಡ್ ಏನು ಎಂದು ಅರ್ಥ ಮಾಡಿಕೊಳ್ಳಬೇಕೆಂದರೆ ಒಂದು ದೀರ್ಘವಾದ ಕಾಲಾವಧಿಯಲ್ಲಿ ಅದರ ಬಗೆಗಿನ ಬೆಳವಣಿಗೆಗಳೇನು ಎಂದು ವಿಶ್ಲೇಷಿಸಬೇಕು. ಈ ಕಾಲಾವಧಿಯ ಅಂಕಿ ಅಂಶಗಳನ್ನಿಟ್ಟು ನೋಡಿದರೆ ದಲಿತರ ಮೇಲೆ ದೌರ್ಜನ್ಯಗಳು ಹೆಚ್ಚುತ್ತಿರುವುದನ್ನು ಕಾಣುತ್ತೇವೆ. ಜಾತಿ ದೌರ್ಜನ್ಯವನ್ನು ನಮ್ಮ ಸಮಾಜದಲ್ಲಿ ಜಾತೀಯತೆಯ ಆಚರಣೆಗೆ ಒಂದು ಮಾನದಂಡವಾಗಿ ಪರಿಗಣಿಸಿ, ಜಾತಿಯ ಮೇಲೆ ಜಾಗತೀಕರಣದ ಪರಿಣಾಮವೇನೆಂದು ತಿಳಿಯಲು ನಾನು ಈ ಅಂಕಿಅಂಶಗಳನ್ನು ಅಧ್ಯಯನ ಮಾಡಿದ್ದೇನೆ. ಆಗ ಸ್ಪಷ್ಟವಾಗಿ ತಿಳಿದು ಬಂದದ್ದೇನೆಂದರೆ, 1981ರಿಂದ 1990ರ ಅವಧಿಗೆ ಹೋಲಿಸಿದಲ್ಲಿ 1991ರಿಂದ 2000ರ ಅವಧಿಯಲ್ಲಿ ಜಾತಿ ದೌರ್ಜನ್ಯಗಳು ಹೆಚ್ಚಾಗಿದೆ. ನಂತರ 2001ರಿಂದ 2006ರವರೆಗಿನ ಅವಧಿಯಲ್ಲೂ ದೌರ್ಜನ್ಯಗಳಲ್ಲಿ ಏರಿಕೆಯಾಗಿದೆ. ಇದು ಸಂಖ್ಯೆಗಳಲ್ಲಿ ಆಗಿರುವ ಹೆಚ್ಚಳ. ಇದರೊಂದಿಗೆ ಗುಣಾತ್ಮಕವಾಗಿಯೂ ಜಾತಿ ದೌರ್ಜನ್ಯಗಳ ಸ್ವರೂಪದಲ್ಲಿ ಕೆಲವು ಬದಲಾವಣೆಗಳು ಸಂಭವಿಸುತ್ತಿದೆ. ಈ ಹಿಂದಿನಂತಲ್ಲದೆ ಈಗ ಜಾತಿ ದೌರ್ಜನ್ಯಗಳು ಒಂದು ಸಾಮೂಹಿಕ ಕಾರ್ಯಾಚರಣೆಯ ಸ್ವರೂಪ ಪಡೆದುಕೊಂಡಿದೆ. ಎಲ್ಲರಿಗೂ ಪರಿಚಯವಿರುವ ಜಝ್ಝೂರ್, ಗೋಹನಾ, ಖೈರ್ಲಾಂಜಿ ಮುಂತಾದ ಪ್ರಕರಣಗಳನ್ನೇ ನೋಡಿ. ಇವೆಲ್ಲಾ ಒಂದು ಬಗೆಯ ವಿಪರೀತ ಹಿಂಸಾನಂದ ಹೊಂದಿರುವ, ಹಾಡು ಹಗಲೇ ಕಾನೂನು ಕಟ್ಟಳೆಗಳನ್ನೆಲ್ಲಾ ಉಲ್ಲಂಘಿಸುವ (ಜಝ್ಝಾರ್‌ನಲ್ಲಂತೂ ಪೊಲೀಸ್ ಸ್ಟೇಷನ್ ಎದುರಿನಲ್ಲಿ ಪೊಲೀಸರ ಎದುರಿಗೇ, ಹಾಡು ಹಗಲಿನಲ್ಲೇ ದಲಿತರನ್ನು ಕೊಚ್ಚಿ ಕೊಲ್ಲಲಾಯಿತು), ಘನ ಘೋರ ಅಟ್ಟಹಾಸದಿಂದ ನಡೆದಿವೆ. ಇಷ್ಟೊಂದು ಕುಖ್ಯಾತಿ ಪಡೆಯದ ಇನ್ನೂ ಹಲ



ವಾರು ದೌರ್ಜನ್ಯಗಳು ನಡೆದ ಸಂದರ್ಭಗಳಲ್ಲೂ ಸತ್ಯ ಶೋಧನೆಗಳಲ್ಲಿ ಭಾಗಿಯಾಗಿ ರುವ ನನಗೆ ಈ ದೌರ್ಜನ್ಯಗಳ ಲ್ಲಿನ ತೀವ್ರತೆಯಲ್ಲಿ ಒಂದು ಗುಣಾತ್ಮಕ ಬೆಳವಣಿಗೆಯೂ ಕಂಡು ಬಂದಿದೆ.

ಈ ಹೆಚ್ಚಳಕ್ಕೆ ಮುಖ್ಯ ಕಾರಣವನ್ನು ಕಳೆದೆರಡು ದಶಕಗ ಳಲ್ಲಿ ನಮ್ಮ ರಾಜಕೀಯ ಆರ್ಥಿಕತೆಯಲ್ಲಿ ಆಗಿರುವ ಸ್ಥಿತ್ಯಂತರ ವನ್ನು ಅರ್ಥ ಮಾಡಿಕೊಳ್ಳುವ ಮೂಲಕ ಗ್ರಹಿಸಬಹುದು. ಈ ಸ್ಥಿತ್ಯಂತರವನ್ನು ನವ ಉದಾರವಾದಿ ಜಾಗತೀಕರಣದೆಡೆ ಆಗಿರುವ ಸ್ಥಿತ್ಯಂತರವೆಂದು ಗುರುತಿಸಲಾಗುತ್ತದೆ. ಈ ಅವಧಿಯಲ್ಲಿ ವಿಶ್ವದಾದ್ಯಂತ ಸಂಕುಚಿತವಾದಿ ಮತಾಂಧತೆ ಮತ್ತದರ ಆಕ್ರಮಣ ಶೀಲತೆ, ಧರ್ಮಭ್ರಾಂತಿ, ಐಡೆಂಟಿಟಿ (ಅಸ್ಮಿತೆ)ಯ ತಿಕ್ಕಾಟಗಳು, ಮತ್ತಿತರ ಎಲ್ಲಾ ಬಗೆಯ ಪ್ರತಿಗಾಮಿ ಸಿದ್ಧಾಂತಗಳು ಪ್ರಪಂಚದೆಲ್ಲೆಡೆ ವ್ಯಾಪಕವಾಗಿ ಹರಡುತ್ತಿರುವುದನ್ನು ಎಲ್ಲರೂ ಒಪ್ಪಿಕೊಳ್ಳುತ್ತಿದ್ದಾರೆ. ಆಧುನಿಕತೆಯ ಹರಡುವಿಕೆಯು ಸೃಷ್ಟಿಸಿದ ಒತ್ತಡದಿಂದ ಕಳೆದ ಒಂದೂವರೆ ಶತಮಾನದಿಂದ ಅಡಗಿ ಕುಳಿತಿದ್ದ ಈ ಸಿದ್ಧಾಂತಗಳು ಈಗ ಹೆಡೆ ಎತ್ತುತ್ತಿವೆ.

ಇದು ಮೂಲಭೂತವಾಗಿ ನವ ಉದಾರವಾದ ಪ್ರಣೀತ ವ್ಯವಸ್ಥೆ ಜೀವನದಲ್ಲಿ ಹುಟ್ಟು ಹಾಕುತ್ತಿರುವ ಸಂಕ್ಷೋಭೆಗಳಿಂದಾಗಿಯೇ ಸಂಭವಿಸುತ್ತಿದೆ.ಅದು ಬಿತ್ತುತ್ತಿರುವ ಅತಿ ವ್ಯಕ್ತಿವಾದ, ಬಲವಿದ್ದವರು ಮಾತ್ರ ಬದುಕಬೇಕೆಂಬ ಸಾಮಾಜಿಕ ಡಾರ್ವಿನಿಸಂ ಮತ್ತು ಮಾರುಕಟ್ಟೆಯಿಂದಲೇ ಎಲ್ಲಾ ಎನ್ನುವ ಮೂಲಭೂತವಾದಗಳು ಎಲ್ಲರಲ್ಲೂ ಅಭದ್ರತೆಗಳನ್ನು ಹೆಚ್ಚಿಸುತ್ತಿದೆ.ಸಮಾಜವು ಬಿಡಿಬಿಡಿ ವ್ಯಕ್ತಿಗಳಾಗಿ ವಿಘಟಿತಗೊಂಡು ಜಗತ್ತು ಒಂದು ಜೂಜು ಅಡ್ಡೆಯಾಗಿ ಬಿಟ್ಟಿದೆ. ಆದ್ದರಿಂದಲೇ ಇಲ್ಲಿ ಮಂತ್ರಜಾಲ ಮತ್ತು ಪವಾಡಗಳು ಹೆಚ್ಚಿನ ಮಹತ್ವವನ್ನು ಪಡೆದುಕೊಳ್ಳುತ್ತವೆ. ಹೀಗಾಗಿ ನಿಸ್ಸಹಾಯಕ ವ್ಯಕ್ತಿಗಳು ಪರಿಚಿತ ದೈವದಲ್ಲಿ, ದೇವಮಾನವರಲ್ಲಿ, ಈವರೆಗೆ ಮೌಢ್ಯವೆಂದು ದೂರವಿಟ್ಟಿದ್ದ ಮತ್ತಿತರ ಕಂದಾಚಾರಗಳಲ್ಲಿ ಆಶ್ರಯವನ್ನು ಅರಸುವಂತೆ ಮಾಡುತ್ತದೆ.

ಭಾರತದ ಸಂದರ್ಭದಲ್ಲಿ ನವ ಉದಾರವಾದಿ ಆರ್ಥಿಕ ನೀತಿಗಳ ಜೊತೆಜೊತೆಗೆ ಕೋಮುವಾದವೂ ಬೆಳೆದುಕೊಂಡು ಬಂದಿರುವುದನ್ನು ಸರಿಯಾಗಿಯೇ ಗುರ್ತಿಸಲಾಗಿದೆ. ಆದರೆ ಗುರುತಿಸಲಾಗದಿರುವ ಪ್ರಮುಖ ವಿಚಾರವೆಂದರೆ ಈ ಕೋಮುವಾದದ ಸಾರವಿರುವುದು ಜಾತಿಯಲ್ಲೇ ಎಂಬುದು. ಕ್ರಿಶ್ಚಿಯಾನಿಟಿ ಹಾಗೂ ಇಸ್ಲಾಮ್‌ಗೆ ಮತಾಂತರವಾದವರು ಕೆಳಜಾತಿಯವರು ಎಂಬುದರಲ್ಲೇ ಕೋಮುವಾದದ ಮೂಲವಿದೆ. ಈ ವಿವರಣೆಯನ್ನು ಸಾಮಾನ್ಯವಾಗಿ ಎಲ್ಲರೂ ಒಪ್ಪಿಕೊಳ್ಳುತ್ತಾರೆ.

ಜಾತಿ ದೌರ್ಜನ್ಯಗಳಲ್ಲಿ ಆಗಿರುವ ಹೆಚ್ಚಳಕ್ಕೆ ಇರುವ ನಿರ್ದಿಷ್ಟ ಕಾರಣಗಳಿಗೆ, ಸ್ವಾತಂತ್ರ್ಯಾನಂತರದಲ್ಲಿ ನಾವು ಅನುಸರಿಸಿದ ಅಭಿವೃದ್ಧಿ ಮಾದರಿಯ ಗತಿನಿಯಮಗಳು ವಿಶಾಲ ಹಿನ್ನೆಲೆಯನ್ನು ಒದಗಿಸುತ್ತವೆ. ಮೇಲೆ ಹೇಳಲಾದ ನವ ಉದಾರವಾದಿ ಸ್ಥಿತ್ಯಂತರವೂ ಅದರ ಭಾಗವೇ ಆಗಿದೆ. ನನ್ನ ಅಧ್ಯಯನದಲ್ಲಿ ಈಗ ಹೆಚ್ಚುತ್ತಿರುವ ಜಾತಿ ದೌರ್ಜನ್ಯಗಳ ಹೆಚ್ಚಳಕ್ಕೆ ಈ ಕೆಳಗಿನ ಆಯಾಮಗಳು ತಮ್ಮ ಕೊಡುಗೆಯನ್ನು ನೀಡುತ್ತವೆ ಎಂದು ಕಂಡುಕೊಂಡಿದ್ದೇನೆ:

ಅಂಬೇಡ್ಕರ್‌ವಾದಿ ದಲಿತ ಚಳವಳಿಯ ಕಾರಣದಿಂದಾಗಿ ದಲಿತರು ತಮಗಾಗಿರುವ ಅನ್ಯಾಯಗಳ ಬಗ್ಗೆ ಮತ್ತು ತಮ್ಮ ಮಾನವ ಹಕ್ಕುಗಳ ಬಗ್ಗೆ ಪಡೆದುಕೊಂಡ ಜಾಗೃತಿ. ಅಂಬೇಡ್ಕರ್‌ವಾದಿ ಚಳವಳಿಯು ಏರುಗತಿಯಲ್ಲಿ ಇದ್ದಷ್ಟು ಕಾಲವೂ, ಅಂದರೆ ಸುಮಾರು 1970ರ ಮಧ್ಯಭಾಗದವರೆಗೂ ಜಾತಿವಾದಿ ಶಕ್ತಿಗಳು ಹಿಂದ್ಸರಿದಿದ್ದವು. ಆದರೆ ಅದು ಎಲ್ಲಾ ಕ್ಷೇತ್ರಗಳಲ್ಲೂ ವಿಘಟನೆಗೊಳ್ಳುತ್ತಾ ದಲಿತ ಚಳವಳಿಗಳು ಸ್ಪಷ್ಟವಾಗಿ ಕುಸಿಯುತ್ತಿದ್ದಂತೆ ಅದರ ದಿಕ್ಕು ಬದಲಾಯಿತು.

ಗ್ರಾಮೀಣ ಭಾರತದ ಕೃಷಿಕ OBC ಜಾತಿಗಳ ಸಾಪೇಕ್ಷ ಸಬಲೀಕರಣ ಹಾಗೂ ರಾಜಕೀಯ ಸದೃಢೀಕರಣ:

ಇದು ಸ್ವಾತಂತ್ರ್ಯೋತ್ತರ ಭಾರತದ ಅಭಿವೃದ್ಧಿಯ ಡೈನಮಿಕ್ಸ್‌ಗಳಿಂದಾಗಿ ಉಂಟಾದ ಪ್ರಮುಖ ಪರಿಣಾಮ. ಪ್ರಭುತ್ವವು ಜಾರಿಗೆ ತಂದ ಅರೆಬರೆ ಭೂಸುಧಾರಣೆಗಳು ಒಂದೆಡೆ ಹಳ್ಳಿಗಳಿಂದ ಮೇಲ್ಜಾತಿ ಭೂಮಾಲಿಕರನ್ನು ಹೊರಗಟ್ಟಿದರೂ OBC ಜಾತಿಗಳಿಗೆ ಭೂಒಡೆತನವನ್ನು ನೀಡಿ ಗ್ರಾಮೀಣ ಪ್ರದೇಶದ ಅಧಿಕಾರವನ್ನು ಈ ಜಾತಿಗಳಿಗೆ ಹಸ್ತಾಂತರಿಸಿತು. ಹಸಿರು ಕ್ರಾಂತಿಯು ಹಳ್ಳಿಗಳಲ್ಲಿ ಅರೆ-ಬಂಡವಾಳಶಾಹಿ ಸಂಬಂಧಗಳನ್ನು ಸೃಷ್ಟಿಸಿದ್ದು ಮಾತ್ರವಲ್ಲದೆ ಹಲವು ಬಗೆಯಲ್ಲಿ ಈ ಜಾತಿಗಳಿಗೆ ಆರ್ಥಿಕ ಸಮೃದ್ಧಿಯನ್ನು ತಂದುಕೊಟ್ಟು ಈ ಜಾತಿಗಳನ್ನು ಮತ್ತಷ್ಟು ಸಶಕ್ತಗೊಳಿಸಿತು. ಆದರೆ ಈ ಪ್ರಕ್ರಿಯೆಯು ದಲಿತರು ತಮ್ಮ ಜಾತಿ ಕಸುಬುಗಳನ್ನೂ ಕಳೆದುಕೊಂಡು ಈ OBC ಜಾತಿಗಳ ಮೇಲೆ ಇನ್ನಷ್ಟು ಅವಲಂಬಿತರನ್ನಾಗಿ ಮಾಡಿದ್ದರಿಂದ ಅದು ದಲಿತರನ್ನು ಮತ್ತಷ್ಟು ದುರ್ಬಲಗೊಳಿಸಿತು. ಅಲ್ಲದೆ ರಾಜಕೀಯವಾಗಿ 'ಚಲಾಯಿಸಿದ ಮತಗಳಲ್ಲಿ ಯಾರು ಹೆಚ್ಚು ಓಟು ಪಡೆಯುತ್ತಾರೋ ಅವರು ಅಧಿಕಾರ ಪಡೆಯುವ'(first-past-the-post type) ಎಂಬ

ಭಾರತದ ಸಂದರ್ಭದಲ್ಲಿ ನವ ಉದಾರವಾದಿ ಆರ್ಥಿಕ ನೀತಿಗಳ ಜೊತೆಜೊತೆಗೆ ಕೋಮುವಾದವೂ ಬೆಳೆದುಕೊಂಡು ಬಂದಿರುವುದನ್ನು ಸರಿಯಾಗಿಯೇ ಗುರ್ತಿಸಲಾಗಿದೆ. ಆದರೆ ಗುರುತಿಸಲಾಗದಿರುವ ಪ್ರಮುಖ ವಿಚಾರವೆಂದರೆ ಈ ಕೋಮುವಾದದ ಸಾರವಿರುವುದು ಜಾತಿಯಲ್ಲೇ ಎಂಬುದು. ಕ್ರಿಶ್ಚಿಯಾನಿಟಿ ಹಾಗೂ ಇಸ್ಲಾಮ್‌ಗೆ ಮತಾಂತರವಾದವರು ಕೆಳಜಾತಿಯವರು ಎಂಬುದರಲ್ಲೇ ಕೋಮುವಾದದ ಮೂಲವಿದೆ. ಈ ವಿವರಣೆಯನ್ನು ಸಾಮಾನ್ಯವಾಗಿ ಎಲ್ಲರೂ ಒಪ್ಪಿಕೊಳ್ಳುತ್ತಾರೆ. ಜಾತಿ ದೌರ್ಜನ್ಯಗಳಲ್ಲಿ ಆಗಿರುವ ಹೆಚ್ಚಳಕ್ಕೆ ಇರುವ ನಿರ್ದಿಷ್ಟ ಕಾರಣಗಳಿಗೆ, ಸ್ವಾತಂತ್ರ್ಯಾನಂತರದಲ್ಲಿ ನಾವು ಅನುಸರಿಸಿದ ಅಭಿವೃದ್ಧಿ ಮಾದರಿಯ ಗತಿ ನಿಯಮಗಳು ವಿಶಾಲ ಹಿನ್ನೆಲೆಯನ್ನು ಒದಗಿಸುತ್ತವೆ.

ಚುನಾವಣಾ ಪದ್ಧತಿಯನ್ನು ಅನುಸರಿಸಿದ್ದರಿಂದ ರಾಜಕೀಯ ಅಧಿಕಾರ ಹಿಡಿಯಬೇಕೆನ್ನುವವರಿಗೆ ಡಿಲ್ಲಿಯಿಂದ ಹಳ್ಳಿಯವರೆಗೆ ರಾಜಕೀಯ ಸಂಬಂಧ ಇರಲೇಬೇಕಾಯಿತು. ಇದು ಈ ಜಾತಿಗಳ ನಾಯಕತ್ವ ಹಿಡಿದಿರುವವರು ಮಧ್ಯಸ್ಥ ಜಾತಿಗಳನ್ನು ಸಧೃಢೀಕರಿಸಿಕೊಂಡು ಒಂದು ಮತಬ್ಯಾಂಕನ್ನೇ ಸೃಷ್ಟಿಸಿಕೊಳ್ಳುವಂತೆ ಮಾಡಿತು. ಅವರ ಆಶೊತ್ತರಗಳು ಹೆಚ್ಚಿದಂತೆ ಅವುಗಳು ಪ್ರಾದೇಶಿಕ ಪಕ್ಷಗಳನ್ನೂ ಸ್ಥಾಪಿಸಕೊಂಡು ರಾಜಕೀಯ ಕ್ಷೇತ್ರದಲ್ಲಿ ಸ್ಪರ್ಧೆಯನ್ನು ತೀವ್ರಗೊಳಿಸಿದರು.ಮಾತ್ರವಲ್ಲದೆ ಈ ಪ್ರಕ್ರಿಯೆಯು OBC ಜಾತಿಗಳನ್ನು ರಾಜಕೀಯವಾಗಿಯೂ ಸಬಲೀಕರಿಸಿತು. ಆದರೆ ಇದೇ ಪ್ರಕ್ರಿಯೆಯಲ್ಲಿಯೇ ದಲಿತರು ಆರ್ಥಿಕವಾಗಿಯೂ, ರಾಜಕೀಯವಾಗಿಯೂ ಸಂಪೂರ್ಣವಾಗಿ ಮತ್ತು ಸಾಪೇಕ್ಷವಾಗಿ ದುರ್ಬಲಗೊಂಡಿದ್ದನ್ನೂ ಕಾಣಬಹುದು. ಆದರೆ ವಿಪರ್ಯಾಸವೆಂಬಂತೆ ಇದೇ ಸಮಯದಲ್ಲಿ ಅವರ ಸಾಮಾಜಿಕ ಮತ್ತು ಆರ್ಥಿಕ ಅತ್ಮಾಭಿಮಾನ ಮತ್ತು ಸ್ವಪ್ರತಿಪಾದನೆಗಳು ಹೆಚ್ಚಿದ್ದರಿಂದ ಗ್ರಾಮೀಣ ಪ್ರದೇಶದಲ್ಲಿ ಬಿಗುವಿನ ವಾತಾವರಣ ನಿರ್ಮಾಣಗೊಂಡಿತು.

ಮೀಸಲಾತಿಗಳ ಡೈನಮಿಕ್ಸ್:

ಮೀಸಲಾತಿಗಳು ದಲಿತರ ಬದುಕಿನಲ್ಲಿ 1980ರ ದಶಕದವರೆಗೂ ಒಂದು ಗುರುತರ ಬದಲಾವಣೆಯನ್ನು ತಂದಿತು. ಆದರೆ ಅದರ ಜೊತೆಜೊತೆಗೇ ಇತರರಲ್ಲಿ ಅನಗತ್ಯವಾದ ಹಗೆತನವನ್ನೂ ಹುಟ್ಟುಹಾಕಿದವು. ಅದೇನೇ ಇದ್ದರೂ ವರ್ಷಗಳು ಉರುಳಿದಂತೆ ಮೀಸಲಾತಿಯ ಹಿಂದಿನ ವಿವೇಕವು ಬಹುಮಟ್ಟಿಗೆ ಒಪ್ಪಿತವಾಗುತ್ತಾ ಬಂದಿತ್ತು. 1990ರಲ್ಲಿ ವಿ.ಪಿ. ಸಿಂಗ್‌ರು ಒಂದು ರಾಜಕೀಯ ತಂತ್ರದ ಭಾಗವಾಗಿ OBCಗಳಿಗೆ ಮೀಸಲಾತಿಯನ್ನು ಜಾರಿಗೊಳಿಸುವ ಮೂಲಕ ಮೀಸಲಾತಿ ಚರ್ಚೆಯನ್ನು ಒಂದು ವಿಕೃತ ರೂಪದಲ್ಲಿ ಮತ್ತೆ ಮುನ್ನೆಲೆಗೆ ತಂದಿದ್ದಂತೂ ನಿಜ. ಈ ಎರಡು ಬಗೆಯ ಮೀಸಲಾತಿಗಳು ಭಿನ್ನ ಭಿನ್ನವಾಗಿದ್ದರೂ ವಾದ ವಿವಾದಗಳಲ್ಲಿ ಎರಡು ಒಂದೇ ಬಗೆಯ ಮೀಸಲಾತಿಗಳೆಂಬಂತೆ ಚರ್ಚೆಗಳು ನಡೆದವು; ದಲಿತರನ್ನು ಮೀಸಲಾತಿವಾದಿಗಳೆಂದೂ ಇತರರನ್ನು (ಮಂಡಲ್ ಲಾಭ ಪಡೆದವರನ್ನೊ ಒಳಗೊಂಡು) ವಿರೋಧಿಗಳೆಂದೂ ಗುರುತಿಸಲಾಯಿತು. ಅಲ್ಲಿಂದಾಚೆಗೆ ಮೀಸಲಾತಿಗಳ ರಾಜಕೀಯವು ಅದನ್ನೊಂದು ಸರ್ವರೋಗ ನಿವಾರಣಿಯೆಂಬಂತೆ ಪ್ರತಿಪಾದಿಸುತ್ತಿರುವುದರಿಂದ ಇಡೀ ಮೀಸಲಾತಿಯ ಪರಿಕಲ್ಪನೆಯೇ ಪ್ರಶ್ನೆಗೊಳಗಾಗಿದೆ. ಪಡಿಸಿದೆ. ಒಂದೆಡೆ ಎಸ್‌ಸಿ –ಎಸ್‌ಟಿ ಮೀಸಲಾತಿಯ ಲಾಭವೂ ಸಹ ಆ ಸಮುದಾಯದ ಒಂದು ಅತಿ ಸಣ್ಣ ವಿಭಾಗಕ್ಕೆ ಮಾತ್ರ ದಕ್ಕಿದೆ. ಆದರೆ ಆ ನಂತರ ಇದೇ ಸಮುದಾಯವೇ ಮೀಸಲಾತಿಯ ಲಾಭದ ಮೇಲೆ ಸಂಪೂರ್ಣ ಏಕಸ್ವಾಮ್ಯ ಸಾಧಿಸಿ ಇಡಿ ದಲಿತ ಸಮುದಾಯವನ್ನು ಹಿಂದಿಕ್ಕಿದೆ. ಆದರೆ ಮೀಸಲಾತಿಯ ರಾಜಕೀಯ ಹುಟ್ಟಿಸುತ್ತಿರುವ ಹೊರೆಯನ್ನು ಮಾತ್ರ ಇದೇ ಸಮುದಾಯವೇ ಹೊರಬೇಕಾಗಿದೆ. ತಮಗಾಗಿರುವ ಎಲ್ಲಾ ಬಗೆಯ ವಂಚನೆಗಳಿಗೂ 'ಮೀಸಲಾತಿಯಿಂದ ಕೊಬ್ಬಿ ಮೆರೆಯುತ್ತಿರುವ ಈ ಸಮುದಾಯವೇ ಕಾರಣವೆಂದು' ತಿಳಿಯಲಾಗುತ್ತದೆ. ಈ ಆತಂಕವೇ ಮುಂದೆ ನಡೆಯುವ ಸಂಭಾವ್ಯ ಜಾತಿ ದೌರ್ಜನ್ಯಗಳಿಗೆ ತುಪ್ಪವನ್ನು ಸುರಿಯುತ್ತದೆ.

ದಲಿತರ ದುರ್ಬಲೀಕರಣ:

ದಲಿತರ ಮೇಲೆ ಹೂಡಲಾದ ಇಡೀ ಹೂಡಿಕೆಯು ದಲಿತ ಉದ್ಯೋಗಿಗಳ ಒಂದು ಸ್ತರವನ್ನು ಸೃಷ್ಟಿಸುವ ಕಡೆ ಕೇಂದ್ರೀಕರಣಗೊಂಡಿದೆ. ಆದರೆ ವರ್ಗದ ದೃಷ್ಟಿ

[illegible] ತನ್ನ ಬೇರುಗಳಿಂದ ಸಂಬಂಧ ಕಡಿದು [illegible], ದಲಿತ ವಿಮೋಚನೆಯ ಬಗೆಗಿನ ಇಡೀ ಚರ್ಚೆಯನ್ನು ತನ್ನ ಸ್ವಂತ ಹಿತಾಸಕ್ತಿಗೆ [illegible]ವ ರೀತಿಯಲ್ಲಿ ಹೈಜಾಕ್ ಮಾಡಿಬಿಟ್ಟಿರುವುದು ಪರಿಸ್ಥಿತಿಯ ವ್ಯಂಗ್ಯ. ದಲಿತ ರಾಜಕಾರಣವು ಆರಂಭದ ದೆಸೆಯಿಂದಲೂ ಆಳುವ ವರ್ಗಗಳ ಒಳಸೆಳೆತಕ್ಕೆ ಹಾಗೂ ಅದರ ಪರಿಣಾಮದಿಂದುಂಟಾದ ವಿಘಟಗೆ ಪಕ್ಕಾಗಿ ತೀವ್ರವಾಗಿ ಬಾಧಿಸಲ್ಪಟ್ಟಿದೆ. ಅಳಿದುಳಿದ ದಲಿತ ಚಳವಳಿಯು ಯಾವ ಕಾರಣಕ್ಕೂ ರ್‍ಯಾಡಿಕಲ್ ನಿಲುವುಗಳ ಕಡೆ ವಾಲದೆ ಪ್ರತಿಗಾಮಿ ದಿಕ್ಕಿನಲ್ಲೇ ಇರುವಂತೆ ಸ್ಥಾಪಿತ ಹಿತಾಸಕ್ತಿಗಳು ನೋಡಿಕೊಂಡಿದ್ದಾರೆ. ಇದು ದಲಿತರನ್ನು ರಾಜಕೀಯವಾಗಿ ಮತ್ತಷ್ಟು ದುರ್ಬಲಗೊಳಿಸಿದೆ.

ಜಾಗತೀಕರಣ:

ಜಾಗತೀಕರಣವು ಪ್ರಪಂಚದಾದ್ಯಂತ ಪ್ರತಿಗಾಮಿ ಪಂಥಗಳಿಗೆ ಜೀವ ತುಂಬುತ್ತಿರುವುದು ಮಾತ್ರವಲ್ಲದೆ ಅತ್ಯಂತ ತಳಪದರಗಳ ಜನರು ಸಂಪೂರ್ಣ ನೆಲಕಚ್ಚುವ ಮಟ್ಟಕ್ಕೆ ನೇರವಾಗಿಯೇ ದಾಳಿ ನಡೆಸಿದೆ. ಭಾರತದ ತಳ ಪದರದಲ್ಲಿ ದಲಿತರೇ ಇರುವುದರಿಂದ ಅವರೇ ಜಾಗತೀಕರಣದಿಂದ ಅತೀ ಹೆಚ್ಚು ಭಾದಿತರಾಗಿದ್ದಾರೆ. ಅಸಂಘಟಿತ ಕ್ಷೇತ್ರದಲ್ಲಿ ದೊಡ್ಡ ಪ್ರಮಾಣದಲ್ಲಿ ಉಂಟಾದ ಉದ್ಯೋಗ ನಷ್ಟ, ಸಾರ್ವಜನಿಕ ಕ್ಷೇತ್ರದಲ್ಲಿ ಸಂಭವಿಸುತ್ತಿರುವ ಉದ್ಯೋಗಗಳ ಖೋತಾ, ತನ್ಮೂಲಕ ಮೀಸಲಾತಿಯಡಿಯಲ್ಲಿ ಉದ್ಯೋಗಗಳು ಭರ್ತಿಯಾಗದೇ ಇರುವುದು, ಜನಸಮೂಹವನ್ನು ಸಬಲೀಕರಿಸುವ ಶಿಕ್ಷಣದಿಂದ ಹೊರಗಿಟ್ಟ ಶಿಕ್ಷಣದ ವ್ಯಾಪಾರೀಕರಣ, ಗ್ರಾಮೀಣ ಆರ್ಥಿಕತೆಯ ಕೃಷಿ ಹಾಗೂ ಕೃಷಿಯೇತರ ಕ್ಷೇತ್ರಗಳಲ್ಲಿ ಬರಿದುಗೊಂಡ ಹೂಡಿಕೆಗಳು ಸಹ ದಲಿತರಿಗೇ ಎಲ್ಲರಿಗಿಂತ ಹೆಚ್ಚು ಪೆಟ್ಟು ನೀಡುತ್ತಿರುವುದು, ದಲಿತರ ಮೇಲಿನ ಶೋಷಣೆ ಹಾಗೂ ಅವರ ದುಮ್ಮಾನಗಳನ್ನು ಮತ್ತಷ್ಟು ಹೆಚ್ಚಿಸುತ್ತಿರುವ ಅನೌಪ ಚಾರಿಕ ಕ್ಷೇತ್ರದ ಬೆಳವಣಿಗೆ.... ಇವೆಲ್ಲವೂ ದಲಿತರನ್ನು ಊಹಿಸಲಾರದ ಪ್ರಮಾಣದಲ್ಲಿ ದುರ್ಬಲಗೊಳಿಸಿವೆ.

1936ರಷ್ಟು ಹಿಂದೆಯೇ ಅಂಬೇಡ್ಕರ್ ವಿಶ್ಲೇಷಿಸಿದಂತೆ ಸವರ್ಣೀಯ ಹಿಂದೂಗಳಿಗೂ ಮತ್ತು ದಲಿತರಿಗೂ ಬಲಾಬಲಗಳಲ್ಲಿ ಇರುವ ವ್ಯತ್ಯಾಸವೇ ದಲಿತರ ಮೇಲೆ ದೌರ್ಜನ್ಯಗಳು ನಡೆಯಲು ಪ್ರಧಾನ ಕಾರಣ. ದಲಿತರು ದುರ್ಬಲರಾಗಿರುವುದರಿಂದ ಇತರರು ಅವರ ಮೇಲೆ ದೌರ್ಜನ್ಯವೆಸಗಲು ಅಂಜುವುದಿಲ್ಲ.

ಶಿವಸುಂದರ್: ನಿಮ್ಮ ಪ್ರಕಾರ ದಲಿತರ ಮೇಲಿನ ದೌರ್ಜನ್ಯಗಳು ನಡೆದಾಗ ನಾಗರಿಕ ಸಮಾಜವು ಯಾವ ಪ್ರಮುಖ ಅಂಶಗಳನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ?

ಡಾ. ಆನಂದ್ ತೇಲ್‌ತುಂಬ್ಡೆ: ಭಾರತದ ನಾಗರಿಕ ಸಮಾಜದ ಪ್ರಮುಖ ಸಮಸ್ಯೆ ಏನೆಂದರೆ ಅದು ದಲಿತ ಪರವಾದ ಸಹಾನುಭೂತಿಯನ್ನು ಹೊಂದಿಲ್ಲ. ಆ ಅರ್ಥದಲ್ಲಿ ಅದು ದಲಿತರ ವಿಷಯಕ್ಕೆ ಸಂಬಂಧಪಟ್ಟಂತೆ ನಾಗರಿಕವಾಗಿಲ್ಲ. ಯಾವ ಜಾತಿಮನೋಭಾವಗಳ ಕಾರಣದಿಂದ ದಲಿತರು ಅಪಮಾನವನ್ನು ಅನುಭವಿಸುತ್ತಾರೋ ಅದೇ ಮನೋಭಾವವನ್ನೇ ಇವರೂ ಹೊಂದಿರುತ್ತಾರೆ. ನಾಗರಿಕ ಸಮಾಜದ ಹೆಸರಿನಲ್ಲಿ ಏನಾದರೂ ಅಲ್ಪ ಸ್ವಲ್ಪ ಸಕಾರಾತ್ಮಕವಾದ ಕಾಳಜಿ ವ್ಯಕ್ತಗೊಂಡಿದ್ದರೆ ಅದು ಅಲ್ಲಿರುವ ಕೆಲ ಪ್ರಗತಿಪರ ವ್ಯಕ್ತಿಗಳ ಕಾರಣದಿಂದಾಗಿಯಷ್ಟೇ.

ನಿಮ್ಮ ನಿರ್ಧಿಷ್ಟ ಪ್ರಶ್ನೆಗೆ ಹೇಳುವುದಾದೆ, ನಾನು ಮೇಲೆ ವಿವರಿಸಿದ ರೀತಿಯಲ್ಲಿ ಜಾತಿದೌರ್ಜನ್ಯಕ್ಕೆ ಕಾರಣವಾದ ಸಮಾಜದ ಡೈನಮಿಕ್ಸ್ ಅನ್ನು ಅದು ಪರಿಗಣನೆಗೆ ತೆಗೆದುಕೊಳ್ಳುವುದಿಲ್ಲ. ಒಂದೋ ಅದು ಜಾತಿ ದೌರ್ಜನ್ಯದ ಮೇಲು ಮೇಲಿನ ಗುಣಲಕ್ಷಣಗಳನ್ನಷ್ಟೇ ಗಣನೆಗೆ ತೆಗೆದುಕೊಳ್ಳುತ್ತದೆ. ಇಲ್ಲವೇ ಜಾತಿ ಆಯಾಮವನ್ನೇ ಸಂಪೂರ್ಣವಾಗಿ ಕಡೆಗಣಿಸಿಬಿಡುತ್ತದೆ. ಈ ಎರಡೂ ಬಗೆಯ ಪ್ರತಿ ಸ್ಪಂದನೆಗಳು ಒಂದೇ ನಾಣ್ಯದ ಎರಡು ಮುಖಗಳಂತೆ. ಮೊದಲನೆಯದು ಅದನ್ನು ಅತ್ಯಂತ ಘೋರ ಕೃತ್ಯವೆಂದು ಮಾತ್ರ ಪರಿಗಣಿಸಿದರೆ ಎರಡನೆಯ ಬಗೆಯದು ಜಾತಿ ದೌರ್ಜನ್ಯಗಳಲ್ಲಿ 'ಜಾತಿ'ಯನ್ನು ಹೊರಗಿಟ್ಟು ಅವು ಕೇವಲ ಮೃಗೀಯ (ಮೃಗಗಳು ಅಂತಹ ಪ್ರವೃತ್ತಿಯನ್ನು ಎಂದೂ ಹೊಂದಿರುವುದಿಲ್ಲವಾದರೂ) ಪ್ರವೃತ್ತಿಯ ಉತ್ಪತ್ತಿ ಎಂಬಂತೆ ನೋಡಿಬಿಡುತ್ತದೆ. ಹಲವು ಸಂವೇದನಾಶೀಲ ವ್ಯಕ್ತಿಗಳು ಕೂಡ ಖೈರ್ಲಾಂಜಿ ಘಟನೆಯನ್ನೇಕೆ ಜಾತಿಯ ಹಿನ್ನೆಲೆಯಲ್ಲಿ ನೋಡಬೇಕು ಎಂದು ನನ್ನನ್ನು ಕೇಳಿರುವುದಿದೆ. ಅದು ಒಂದು ಅಪರಾಧವಾಗಿಯೇ ಅತ್ಯಂತ ದುಷ್ಟ ಕೃತ್ಯವಾಗಿರುವಾಗ ಅದಕ್ಕೆ ಜಾತಿ ಬಣ್ಣ ಏಕೆ ಹಚ್ಚಬೇಕು ಎಂಬುದು ಅವರ ಪ್ರಶ್ನೆ. ನ್ಯಾಯಾಧೀಶರು ಹೇಳಿದ್ದೂ ಇದನ್ನೇ. ಆದರೂ ವಾಸ್ತವ ಸಂಗತಿಯೇನೆಂದರೆ ಖೈರ್ಲಾಂಜಿಯು ಇಂದು ಜಾತಿಯು ಯಾವ ರೀತಿಯಲ್ಲಿ ಅಸ್ತಿತ್ವದಲ್ಲಿದೆ ಎಂಬುದನ್ನು ಅತ್ಯಂತ ನೈಜರೂಪದಲ್ಲೆ ಬೆತ್ತಲೆಗೊಳಿಸಿದೆ. ಇದನ್ನು ನೋಡಲು ನಿರಾಕರಿಸುವ ನಾಗರಿಕ ಸಮಾಜದ ಧೋರಣೆಯೂ ಸಹ ಅದರ ಅನಾಗರೀಕ ಸ್ವಭಾವಕ್ಕೆ ಒಂದು ನಿದರ್ಶನವಾಗಿದೆ.

ಈ ಗ್ರಹಿಕೆಯಲ್ಲಿನ ಲೋಪವು ಜಾತಿ ದೌರ್ಜನ್ಯಗಳು ನಡೆದಾಗ ಯಾವುದೇ

ಕಾಳಜಿ ತೋರದಿರುವುದರಲ್ಲಿ ಅಭಿವ್ಯಕ್ತಗೊಂಡು ವಿಭಿನ್ನವಾಗಿ ಮುಖಾಮುಖಿಯಾಗುತ್ತದೆ. ವಿಚಿತ್ರವೆಂದರೆ ಕೋಮುಗಲಭೆಯಾದ ಸಂದರ್ಭಗಳಲ್ಲಿ ನಾಗರಿಕ ಸಮಾಜದ ಒಂದು ಗಣನೀಯ ಪ್ರಮಾಣದ ಜನ ವಿಭಾಗವು ಮುಸ್ಲಿಮರ ಪರವಾಗಿ ಇಲ್ಲವೇ ಕ್ರೈಸ್ತರ ಪರವಾಗಿ ಮುಂದೆ ಬರುತ್ತದೆ. ಗುಜರಾತಿನಲ್ಲಿ ಮುಸ್ಲಿಮರ ಹತ್ಯಾಕಾಂಡ ಜರುಗಿದಾಗ ಎಲ್ಲಾ ತರದ ಮಾನವ ಹಕ್ಕು ಸಂಘಟನೆಗಳು ಗುಜರಾತಿಗೆ ಭೇಟಿನೀಡಿ, ಸತ್ಯಶೋಧನಾ ವರದಿಗಳನ್ನು ಪ್ರಕಟಿಸಿ, ವಿಚಾರಸಂಕಿರಣಗಳನ್ನು ನಡೆಸಿ, ತಮ್ಮ ಅಸ್ತಿತ್ವವನ್ನು ಸಾರಿದವು. ಆದರೆ ಖೈರ್ಲಾಂಜಿ ಅಥವಾ ಜಝ್ಝೂರ್ ನಡೆದಾಗ ಅಥವಾ ಮತ್ತಿನ್ನಾವುದೇ ಜಾತಿದೌರ್ಜನ್ಯದ ಪ್ರಕರಣಗಳು ನಡೆದಾಗ ನಾಗರೀಕ ಸಮಾಜಾದೆ ರೀತಿಯಲ್ಲಿ ದೊಡ್ಡ ರೀತಿಯಲ್ಲಿ ಸ್ಪಂದಿಸಲು ಮುಂದಾಗಲೇ ಇಲ್ಲ. ದಲಿತರ ಮೇಲಿನ ಜಾತಿ ದೌರ್ಜನ್ಯವನ್ನು ನಿಭಾಯಿಸುವ ವಿಚಾರ ದಲಿತರಿಗೇ ಏಕೆ ಬಿಟ್ಟುಬಿಡಲಾಗಿದೆ? ಅದು ನಾಗರೀಕ ಸಮಾಜಕ್ಕೆ ಇರಬೇಕಾದ ಕಳಕಳಿಗಳಲ್ಲಿ ಒಂದಲ್ಲವೇ? ಖೈರ್ಲಾಂಜಿಯು ಇಡೀ ಮಹಾರಾಷ್ಟ್ರದ ದಲಿತರಿಂದ (ತಡವಾಗಿಯಾದರೂ) ದೊಡ್ಡ ಮಟ್ಟದ ಪ್ರತಿಕ್ರಿಯೆಯನ್ನೇನೋ ಪ್ರೇರೇಪಿಸಿತು. ಆದರೆ ಕೆಲವು ಅಪವಾದಗಳನ್ನು ಬಿಟ್ಟರೆ ಅದರಲ್ಲಿದ್ದವರೆಲ್ಲಾ ದಲಿತರೇ ಆಗಿದ್ದರು. ಮಹಾರಾಷ್ಟ್ರದ ಹೊರಗಡೆಯೂ ಪ್ರತಿಭಟನೆಗಳಾದವು. ಆದರೆ ಅಲ್ಲಿ ಕೂಡಾ ಇದೇ ಕಥೆ. ಹೀಗಾಗಿಯೇ ಜಾತಿಯ ವಿಚಾರಕ್ಕೆ ಬಂದಾಗ ಭಾರತದ ನಾಗರಿಕ ಸಮಾಜ 'ಅನಾಗರಿಕ'ವಾಗಿಯೇ ಇದೆಯೆಂದು ನಾನು ಹೇಳಿದ್ದು.

ಶಿವಸುಂದರ್: ಜಾಗತೀಕರಣದ ಈ ಯುಗದಲ್ಲಿ ಜಾತಿವಿನಾಶದ ಯೋಜನೆಯನ್ನು ಹೇಗೆ ಜಾರಿ ಗೊಳಿಸಬಹುದೆಂದು ನೀವು ಕಲ್ಪಿಸಿಕೊಂಡಿದ್ದೀರಿ?

ಡಾ. ಆನಂದ್ ತೇಲ್‌ತುಂಬ್ಡೆ: ಒಂದೆಡೆ ಅಭಿವೃದ್ಧಿಯ ಗತಿನಿಯಮವು 'ಜಾತಿ' ವಿಷಯವನ್ನು ಅತ್ಯಂತ ಸಂಕೀರ್ಣಗೊಳಿಸಿದ್ದರೂ ಮತ್ತೊಂದೆಡೆಯಲ್ಲಿ ಜಾತಿವಿನಾಶದ

ಒಂದೆಡೆ ಅಭಿವೃದ್ಧಿಯ ಗತಿನಿಯಮವು 'ಜಾತಿ' ವಿಷಯವನ್ನು ಅತ್ಯಂತ ಸಂಕೀರ್ಣಗೊಳಿಸಿದ್ದರೂ ಮತ್ತೊಂದೆಡೆಯಲ್ಲಿ ಜಾತಿವಿನಾಶದ ದೃಷ್ಟಿಯಿಂದ ಅದನ್ನು ಸರಳಗೊಳಿಸಿದೆ. ನಾವಿಂದು ಮುಖಾಮುಖಿಯಾಗುತ್ತಿರುವ ಜಾತಿಗಳು ಈ ಹಿಂದಿನ ಧರ್ಮಶಾಸ್ತ್ರಾಧಾರಿತ (ಅಂಬೇಡ್ಕರ್ ಗ್ರಹಿಸಿದ ರೀತಿಯಲ್ಲಿ) ಹಾಗೂ ಶ್ರೇಣೀಕೃತ ವ್ಯವಸ್ಥೆಯ ಮುಂದುವರಿಕೆಯ ರೂಪದಲ್ಲಿರುವ ಜಾತಿಗಳಲ್ಲ. ಅವು ಅದಕ್ಕಿಂತ ಭಿನ್ನ ಸ್ವರೂಪವನ್ನು ಪಡೆದುಕೊಂಡಿದೆ. ಇಂದು 'ಅಸ್ತಿತ್ವದಲ್ಲಿರುವ' ಜಾತಿಗಳು ಹಿಂದಿನ ಶ್ರೇಣೀಕರಣ ವ್ಯವಸ್ಥೆಯಲ್ಲಿ ಸ್ಪಷ್ಟವಾದ ಹಿಮ್ಮುರಿಯೊಂದು ಉಂಟಾಗಿರುವುದನ್ನು ಸೂಚಿಸುತ್ತದೆ.

ದೃಷ್ಟಿಯಿಂದ ಅದನ್ನು ಸರಳಗೊಳಿಸಿದೆ. ನಾವಿಂದು ಮುಖಾಮುಖಿಯಾಗುತ್ತಿರುವ ಜಾತಿಗಳು ಈ ಹಿಂದಿನ ಧರ್ಮಶಾಸ್ತ್ರಾಧಾರಿತ (ಅಂಬೇಡ್ಕರ್ ಗ್ರಹಿಸಿದ ರೀತಿಯಲ್ಲಿ) ಹಾಗೂ ಶ್ರೇಣೀಕೃತ ವ್ಯವಸ್ಥೆಯ ಮುಂದುವರಿಕೆಯ ರೂಪದಲ್ಲಿರುವ ಜಾತಿಗಳಲ್ಲ. ಅವು ಅದಕ್ಕಿಂತ ಭಿನ್ನ ಸ್ವರೂಪವನ್ನು ಪಡೆದುಕೊಂಡಿವೆ. ಇಂದು 'ಅಸ್ತಿತ್ವದಲ್ಲಿರುವ' ಜಾತಿಗಳು ಹಿಂದಿನ ಶ್ರೇಣೀಕರಣ ವ್ಯವಸ್ಥೆಯಲ್ಲಿ ಸ್ಪಷ್ಟವಾದ ಹಿಮ್ಮುಖವೊಂದು ಉಂಟಾಗಿರುವುದನ್ನು ಸೂಚಿಸುತ್ತದೆ. ಇದು ಜಾತಿಯನ್ನು ಎದುರುಗೊಳ್ಳುವುದನ್ನು ಸುಲಭಗೊಳಿಸಿದೆ. ಒಂದು ಬದಿಯಲ್ಲಿ ಹಿಂದೂ ಸಮಾಜದ ಭಾಗವಾದ ಜಾತೀಯ/ಸವರ್ಣೀಯ/ದಲಿತೇತರರಿದ್ದರೆ ಇನ್ನೊಂದು ಬದಿಯಲ್ಲಿ ಅಜಾತೀಯ/ಅವರ್ಣೀಯ/ದಲಿತರಿದ್ದಾರೆ. ಈ ಮೂಲಕ ಈಗಿರುವ ಜಾತಿಗಳು ತಮ್ಮೊಳಗೆ ಸಾಕಷ್ಟು ಪ್ರಮಾಣದಲ್ಲಿ ಸಾಮಾಜಿಕ ಕೊಡು-ಪಡೆಗಳನ್ನು ಹೊಂದಿರುವ ಆದರೆ ತಮ್ಮೊಳಗೇ ಒಡಕನ್ನು ಹೊಂದಿರುವ ಎರಡು ಭಾಗವಾಗಿ ನೀಟಾಗಿ ವಿಭಜನೆಯಾಗಿವೆ ಎಂದು ಗ್ರಹಿಸಿಕೊಳ್ಳಬಹುದು.

ಜಾತಿಯು ಸಾಮಾನ್ಯವಾಗಿ ಜಾತಿ ಬೇಧ, ಅವಕಾಶ ನಿರಾಕರಣ ಹಾಗೂ ಸಂಘರ್ಷದ ರೂಪದಲ್ಲಿಯೇ ಅಭಿವ್ಯ ಕ್ತಗೊಳ್ಳುತ್ತದೆ. ಜಾತಿ ದೌರ್ಜನ್ಯಗಳನ್ನು ಜಾತಿಯ ಅತ್ಯಂತ ಸಾಂದ್ರೀಕೃತ ಅಭಿವ್ಯಕ್ತಿಯಾಗಿಯೂ ಹಾಗೂ ಆದ್ದರಿಂದಲೇ ಅದನ್ನು ಜಾತಿಯ ಪ್ರತಿರೂಪವೆಂದೇ ಪರಿಗಣಿಸಬಹುದು. ಇದರ ಅರ್ಥವಿಷ್ಟೇ. ನಾವು ದೌರ್ಜನ್ಯದ ಅಭಿವ್ಯಕ್ತಿಯನ್ನು ಪರಿಣಾಮಕಾರಿಯಾಗಿ ನಿಗ್ರಹಿಸಲು ಸಾಧ್ಯವಾದರೆ ಜಾತಿ ಸಮಸ್ಯೆಯನ್ನು ಮತ್ತು ಆ ಮೂಲಕ ಜಾತಿ ವಿನಾಶದ ಸಮಸ್ಯೆಯನ್ನು ಯಶಸ್ವಿಯಾಗಿ ನಿಭಾಯಿಸಬಹುದು. ಇನ್ನು ಜಾತಿ ದೌರ್ಜನ್ಯಗಳನ್ನು ಇದಿರುಗೊಳ್ಳುವ ಬಗೆ ಹೇಗೆ? ಈ ಸಮಸ್ಯೆಯನ್ನು ಕೈಗೆತ್ತಿಕೊಂಡು, ಅಂಬೇಡ್ಕರ್ ಸರಿಯಾಗಿ ವಿಶ್ಲೇಷಿಸಿರುವಂತೆ ದಲಿತರ ಸಾಪೇಕ್ಷ ದುರ್ಬಲತೆಯೇ ಅವರ ಸಮಸ್ಯೆಯಾಗಿದೆ. ದಲಿತರಿಗೆ ಹೊರಗಿನಿಂದ ಶಕ್ತಿಯನ್ನು ಪೂರೈಸುವ ಮೂಲಕ ಈ ದುರ್ಬಲತೆಯನ್ನು ನೀಗಿಸಬಹುದೆಂದು ಅಂಬೇಡ್ಕರ್ ಭಾವಿಸಿದ್ದರು. ಅಂಬೇಡ್ಕರ್‌ರ ನಿಲುವಿಗೂ ನನ್ನ ನಿಲುವಿಗೂ ನಡುವಿನ ಒಂದೇ ವ್ಯತ್ಯಾಸವೇನೆಂದರೆ, ಅವರು ಇಡಿ ದಲಿತರನ್ನು ಒಂದು ಸಮುದಾಯವಾಗಿ ಪರಿಗಣಿಸಿ ದಲಿತರ ಶಕ್ತಿ ಸಾಮರ್ಥ್ಯ ಹಾಗೂ ದೌರ್ಬಲ್ಯಗಳನ್ನು ಸಮುದಾಯಕ್ಕೆ ಅನ್ವಯಿಸುವಂತೆ ಕಲ್ಪಿಸಿಕೊಂಡಿದ್ದರು. ನಾನು ಅವುಗಳನ್ನು ವರ್ಗದ ಆಧಾರದಲ್ಲಿ ಕಲ್ಪಿಸಿಕೊಂಡಿದ್ದೇನೆ. ದಲಿತ ಸಮುದಾಯವನ್ನು ಈಗಾಗಲೇ ಅಸ್ತಿತ್ವದಲ್ಲಿರುವ ಧಾರ್ಮಿಕ ಸಮುದಾಯದೊಂದಿಗೆ ಸಮ್ಮಿಳಿತಗೊಳಿಸಿ ದಲಿತರಿಗೆ ಹೊರಗಿನಿಂದ ಬಲವನ್ನು ಪೂರೈಸುವ ಯೋಜನೆ ಅಂಬೇಡ್ಕರರದ್ದಾಗಿತ್ತು. ಆದ್ದರಿಂದಲೇ ಅವರು ಧಾರ್ಮಿಕ ಮತಾಂತರದ ನಿರ್ದೇಶನವನ್ನು ನೀಡಿದರು.

ನನ್ನ ಪ್ರಕಾರ, ದಲಿತರು ಇತರರೊಂದಿಗೆ ವರ್ಗದ ಆಧಾರದಲ್ಲಿ ಸಮೀಕರಿಸಿಕೊಳ್ಳುವ ಮೂಲಕ ತಮ್ಮ ಶಕ್ತಿ ಸಾಮರ್ಥ್ಯಗಳನ್ನು ವೃದ್ಧಿಸಿಕೊಳ್ಳಬಹುದಾಗಿದೆ. ಚಾರಿತ್ರಿಕ ಕಾರಣಗಳಿಂದಾಗಿ ಇದು ಹೇಳಿದಷ್ಟು ಸುಲಭದ ವಿಷಯವಲ್ಲ. ಅದನ್ನು ಸಾಧ್ಯಗೊಳಿಸುವ ಹೊಣೆಗಾರಿಕೆಯು ದೇಶದ ಎಡಪಂಥೀಯ ಶಕ್ತಿಗಳದ್ದು ಎಂದು ನಾನು ಭಾವಿಸುತ್ತೇನೆ. ಅವರು ಸೈದ್ಧಾಂತಿಕವಾಗಿ ತಮ್ಮ ತಪ್ಪುಗಳನ್ನು ತಿದ್ದಿಕೊಂಡು ದಲಿತರ ಬಿಕ್ಕಟ್ಟಿನ (ಜಾತಿ ಸಂಘರ್ಷದ ಘಟನೆಗಳಲ್ಲಿ) ಸಂದರ್ಭದಲ್ಲಿ ಸಂಪೂರ್ಣವಾಗಿ ಅವರ ಬೆಂಬಲಕ್ಕೆ ನಿಂತಿದ್ದೇ ಆದಲ್ಲಿ ದಲಿತರು ತಮ್ಮ ಬದುಕನ್ನು ವರ್ಗದೃಷ್ಟಿಯಿಂದ ಹೆಚ್ಚೆಚ್ಚು ಪರಿಭಾವಿಸುವ ಪ್ರಕ್ರಿಯೆ ಶುರುವಾಗುತ್ತದೆ. ಇದರ ಪರಿಣಾಮವಾಗಿ ಸಂಭವಿಸುವ ವರ್ಗ ಸಂಘರ್ಷವು ಅಂತಿಮವಾಗಿ ಜಾತಿಯನ್ನು ವಿನಾಶಗೊಳಿಸುವುದಲ್ಲದೆ, ಒಂದು ಕ್ರಾಂತಿಕಾರಿ ಮಾರ್ಪಾಡನ್ನು ತರುತ್ತದೆ. ಈ ಅರ್ಥದಲ್ಲಿ ಜಾತಿವಿನಾಶದ ಯೋಜನೆಯು ಕ್ರಾಂತಿಯ ಯೋಜನೆಯೊಂದಿಗೆ ಬೆಸೆದುಕೊಂಡಿದೆ ಎಂದು ನಾನು ಭಾವಿಸುತ್ತೇನೆ. ಈ ರೀತಿಯಲ್ಲಿ ಜಾತಿ ಮತ್ತು ವರ್ಗಗಳ ಬೆಸುಗೆಯಾಗದೆ ಜಾತಿ ವಿನಾಶವೂ ಸಾಧ್ಯವಿಲ್ಲ. ವರ್ಗಕ್ರಾಂತಿಯೂ ಸಾಧ್ಯವಿಲ್ಲ.

ಶಿವಸುಂದರ್: ಕಳೆದ 60 ವರ್ಷಗಳಲ್ಲಿ ಜಾತಿಯು ಯಾವ ಬಗೆಯ ರೂಪಾಂತರಕ್ಕೊಳಗಾಗಿದೆ?

ಡಾ. ಆನಂದ್ ತೇಲ್‌ತುಂಬ್ಡೆ: ಇದಕ್ಕೆ ನೀಡಬೇಕಿರುವ ಬಹುಪಾಲು ಉತ್ತರವನ್ನು ಮೊದಲ ಪ್ರಶ್ನೆಯಲ್ಲೇ ನೀಡಿದ್ದೇನೆ. ಇಂದು ಜಾತಿಗಳು ಕೇವಲ ದಲಿತರು ಮತ್ತು ದಲಿತೇತರರು ಎಂಬ ವಿಭಜನೆಯಲ್ಲಿ ಮಾತ್ರ ಉಳಿದುಕೊಂಡಿವೆ. ಇತರೆ ಸಮಸ್ಯೆಗಳು ಜಾತ್ಯತೀತ ಬಗೆಯವು.

ಶಿವಸುಂದರ್: ದಲಿತರ ವಿಮೋಚನೆಗೆ ದಲಿತ-ಬಹುಜನ ಮೈತ್ರಿಯು ಕಾರ್ಯಸಾಧುವಾದುದಲ್ಲ ಎಂದು ನಿಮಗೇಕೆ ಅನ್ನಿಸಿದೆ?

ಡಾ. ಆನಂದ್ ತೇಲ್‌ತುಂಬ್ಡೆ: ದಲಿತ-ಬಹುಜನ ಎಂಬುದು ಒಂದು ಜಾತಿ ಆಧಾರಿತ ಸಂರಚನೆ ಎಂಬ ವಿಷಯ: ಅದೇಕೆ ಕಾರ್ಯಸಾಧುವಾದುದಲ್ಲವೆಂದರೆ, ಅದು ಜಾತಿಯು ಈ ಹಿಂದೆ ಇದ್ದ ರೀತಿಯ ಬಗ್ಗೆ ಮತ್ತು ಮತ್ತು ಈಗ ಅದು ಪ್ರಕಟವಾಗುತ್ತಿ

ದಲಿತರು ಇತರರೊಂದಿಗೆ ವರ್ಗದ ಆಧಾರದಲ್ಲಿ ಸಮೀಕರಿಸಿಕೊಳ್ಳುವ ಮೂಲಕ ತಮ್ಮ ಶಕ್ತಿ ಸಾಮರ್ಥ್ಯಗಳನ್ನು ವೃದ್ಧಿಸಿಕೊಳ್ಳಬಹುದಾಗಿದೆ. ಚಾರಿತ್ರಿಕ ಕಾರಣಗಳಿಂದಾಗಿ ಇದು ಹೇಳಿದಷ್ಟು ಸುಲಭದ ವಿಷಯವಲ್ಲ. ಅದನ್ನು ಸಾಧ್ಯಗೊಳಿಸುವ ಹೊಣೆಗಾರಿಕೆಯು ದೇಶದ ಎಡ ಪಂಥೀಯ ಶಕ್ತಿಗಳದ್ದು ಎಂದು ನಾನು ಭಾವಿಸುತ್ತೇನೆ. ಅವರು ಸೈದ್ಧಾಂತಿಕವಾಗಿ ತಮ್ಮ ತಪ್ಪುಗಳನ್ನು ತಿದ್ದಿಕೊಂಡು ದಲಿತರ ಬಿಕ್ಕಟ್ಟಿನ ಸಂದರ್ಭದಲ್ಲಿ ಸಂಪೂರ್ಣವಾಗಿ ಅವರ ಬೆಂಬಲಕ್ಕೆ ನಿಂತಿದ್ದೇ ಆದಲ್ಲಿ ದಲಿತರು ತಮ್ಮ ಬದುಕನ್ನು ವರ್ಗದೃಷ್ಟಿಯಿಂದ ಹೆಚ್ಚೆಚ್ಚು ಪರಿಭಾವಿಸುವ ಪ್ರಕ್ರಿಯೆ ಶುರುವಾಗುತ್ತದೆ.

ರುವ ರೀತಿಯ ಬಗ್ಗೆ, ಎರಡರ ಬಗ್ಗೆಯೂ, ಗಾಢ ಅಜ್ಞಾನವನ್ನು ಪ್ರದರ್ಶಿಸುತ್ತದೆ. BC ಜಾತಿಗಳು ಇಡೀ ಒಂದು ಬ್ಲಾಕ್ ಆಗಿ ದಲಿತರ ವಿರುದ್ಧವಾಗಿ ನಿಂತಿರುವ ಪ್ರಧಾನ ಶಕ್ತಿಯಾಗಿದೆ ಮತ್ತು ಅವರೇ ಇಂದು ಬ್ರಾಹ್ಮಣವಾದದ ಪ್ರಧಾನ ವಾರಸುದಾರರಾಗಿದ್ದಾರೆ. ಇಂಥ ರೂಪರಹಿತ ಬ್ಲಾಕ್‌ನೊಳಗೆ, ದಲಿತರಷ್ಟೇ ದುಸ್ಥಿತಿಯಲ್ಲಿರುವ, ಕೆಲವೊಮ್ಮೆ ಅವರಿಗಿಂತಲೂ ಹೀನಸ್ಥಿತಿಯಲ್ಲಿ ಕೆಲವು ಜನರು ಮತ್ತು ಕೆಲವು ಜಾತಿಗಳು ಇದ್ದಾರೆಂಬುದನ್ನು ಅಲ್ಲಗಳೆಯುವಂತಿಲ್ಲ. ಆದರೆ ಅಂಥವರೇನಿದ್ದರೂ ವರ್ಗದ ಆಧಾರದಲ್ಲಿ ಮಾತ್ರ ಉಪಯೋಗಕ್ಕೆ ಬರಬಲ್ಲರು. ಜಾತಿಯ ನೆಲೆಯಲ್ಲಿ ದಲಿತ-ಬಹುಜನ ಮೈತ್ರಿಯ ಕುರಿತು ಮಾತನಾಡಿದಾಗ ಅವರ ಜಾತಿ ಪ್ರಜ್ಞೆಯು ಅವರನ್ನು ದಲಿತರ ವಿರುದ್ಧ ನಿಲ್ಲುವಂತೆ ಮಾಡುತ್ತದೆ. ವರ್ಗದ ಸುಟಿಗಟ್ಟನೊಂದಿಗೆ ಮಾತ್ರವೇ ಅವರು ಹಿಂದುಳಿದ ಜಾತಿಗಳ (BC) ಬ್ಲಾಕ್ ನಿಂದ ಕಳಚಿಕೊಂಡು ದಲಿತರೊಂದಿಗೆ ಜತೆಗೂಡಲು ಸಾಧ್ಯ. ಆಗ ಅವರು ಬಹುಜನರೆಂದಾಗ ಕೇವಲ OBC ಗಳಿಗೆ ಮಾತ್ರ ಸೀಮಿತವಾಗದೆ ಉನ್ನತ ಜಾತಿಗಳ ಕೆಳವರ್ಗಗಳನ್ನೂ ಒಳಗೊಳ್ಳಲು ಸಾಧ್ಯವಾಗುತ್ತದೆ.

ಶಿವಸುಂದರ್: ಎಡಶಕ್ತಿಗಳು ಜಾತಿ ಪ್ರಶ್ನೆಯನ್ನು ಅರ್ಥಮಾಡಿ ಕೊಂಡಿಲ್ಲ ಎಂದು ಹೇಳುವುದು ತೀರಾ ಕ್ಲೀಷೆಯಾಗಿಬಿಟ್ಟಿದೆ. ನಿಮ್ಮ ಪ್ರಕಾರ ಜಾತಿ ಪ್ರಶ್ನೆಯನ್ನು ಅರ್ಥ ಮಾಡಿಕೊಳ್ಳಲು ಎಡಶಕ್ತಿಗಳು ಯಾವ ರೀತಿಯ ಸೈದ್ಧಾಂತಿಕ ಮತ್ತು ವ್ಯೂಹತಾಂತ್ರಿಕ ಮಾರ್ಪಾಡುಗಳನ್ನು ತಂದುಕೊಳ್ಳ ಬೇಕಿದೆ?

ಡಾ. ಆನಂದ್ ತೇಲ್‌ತುಂಬ್ಡೆ: ಅರಂಭದಲ್ಲಿ ಎಡ ಪಂಥೀಯರು ತಮ್ಮ ವರ್ಗ ವಿಶ್ಲೇಷಣೆಯಲ್ಲಿ ಜಾತಿಗಳ ಸಾಮಾಜಿಕ ಸತ್ಯವನ್ನು ಪರಿಗಣನೆಗೆ ತೆಗೆದುಕೊಂಡಿರಲಿಲ್ಲ. ಅಂದಿನಿಂದ ಈ ವರೆಗೆ ಸಾಕಷ್ಟು ಸಮಯವೇ ಕಳೆದಿದೆ. ಎಂಟು ಅಥವಾ ಒಂಭತ್ತು ದಶಕಗಳ ಹಿಂದೆ ಅವರು ಏನು ಮಾಡಲು ಸಾಧ್ಯವಿತ್ತೋ ಅದನ್ನೇ ಇಂದೂ ಮಾಡಲು ಸಾಧ್ಯವಿಲ್ಲ. ಆದಾಗ್ಯೂ ಈ ಕೆಳಕಂಡ ಪ್ರಯತ್ನ ಗಳನ್ನು ಅವರು ಮಾಡಬಹುದು.

ಸೈದ್ಧಾಂತಿಕವಾಗಿ ವರ್ಗಸಂಘರ್ಷವನ್ನು ಮುಂಚೂಣಿ ಅಜೆಂಡಾವಾಗಿ ವಾಪಸ್ ತಂದುಕೊಳ್ಳುವ ಅಗತ್ಯವಿದೆ. ಆಗ ಕೈಗೆತ್ತಿಕೊಳ್ಳುವ ವರ್ಗವಿಶ್ಲೇಷಣೆಯು ಅವರನ್ನು ವಾಸ್ತವಕ್ಕೆ ಹತ್ತಿರವಾಗಿಸುತ್ತದೆ. ಜಾತಿಯು ಬುನಾದಿ ಹಾಗೂ ಮೇಲ್‌ರಚನೆಗಳೆರಡರಲ್ಲೂ ವ್ಯಾಪಿಸಿ ಕೊಂಡಿದೆ ಎಂಬುದನ್ನು ಅವರು ಈಗ ಗುರುತಿಸುತ್ತಿದ್ದಾರೆ. ಆದರೆ ಈ ಪದಪುಂಜಗಳ ನಿರಂತರ ಬಳಕೆಯೇ ಅವರಿಗಿರುವ ಸೈದ್ಧಾಂತಿಕ ಗೊಂದಲವನ್ನು ತೋರಿಸುತ್ತಿರಬಹುದು. ಭೌತವಾದಿ ದೃಷ್ಟಿಕೋನಕ್ಕೆ ಸಾಮಾಜಿಕ ಜೀವನವನ್ನು ಹಾಗೆ ವಿಭಜಿಸಿ ನೋಡುವ ಅಗತ್ಯ ಬೀಳುವುದಿಲ್ಲ. ಆಚರಣೆಯಲ್ಲಿರುವ ಗತಿತರ್ಕವನ್ನು ಆಧರಿಸಿ ಹೇಳುವುದಾದರೆ ಜೀವನ ಪ್ರಕ್ರಿಯೆಗಳು ಇವೆರಡರ ನಡುವಿನ ವ್ಯತ್ಯಾಸವನ್ನು ಅಳಿಸಿಬಿಡುತ್ತವೆ. ಸೈದ್ಧಾಂತಿಕವಾಗಿ ಜಾತಿಯನ್ನು ವರ್ಗದ ಪ್ರಮುಖ ಭಾಗವೆಂದು ಪರಿಗಣಿಸಬೇಕು. ಎಡಪಂಥೀಯರು ತಮ್ಮ ಗ್ರಹಿಕೆಯಲ್ಲಿನ ಲೋಪವನ್ನು ಪ್ರಾಮಾಣಿಕವಾಗಿ ಒಪ್ಪಿಕೊಂಡು ಸಿದ್ಧಾಂತದ ಪರಿಧಿಯಲ್ಲಿ ದಲಿತರ ಸಂಘರ್ಷವನ್ನು ಸಕಾರಾತ್ಮಕವಾಗಿ ನೋಡಬೇಕು. ಎಡಶಕ್ತಿಗಳು ತಮ್ಮ ಸಿದ್ಧಾಂತವನ್ನು ಒಂದು ಜೀವಂತ ವಿಜ್ಞಾನವಾಗಿ ನೋಡಬೇಕೇ ವಿನಃ ಆಕಾಶದಿಂದ ಉದುರಿದ ಹೆಪ್ಪುಗಟ್ಟಿದ ಮಂತ್ರಗಳೆಂಬಂತೆ ನೋಡಬಾರದು ಎಂಬುದನ್ನು ಸದಾ ನೆನಪಿಟ್ಟುಕೊಂಡಿರಬೇಕು. ಇದು ಅಪಾರ ಪರಿಶ್ರಮವನ್ನೂ, ಬೌದ್ಧಿಕ ಬದ್ಧತೆಯನ್ನೂ ಕೇಳುತ್ತದೆ. ಏಕೆಂದರೆ ಸರಿಯಾದ ರೀತಿಯಲ್ಲಿ ಇದನ್ನು ಅನುಸರಿಸಿದ್ದೇ ಆದಲ್ಲಿ ಕಳೆದ ಶತಮಾನದಲ್ಲಿ ಪ್ರಪಂಚದಲ್ಲಿ ಸಂಭವಿಸಿದ ಬದಲಾವಣೆಗಳ ಹಿನ್ನೆಲೆಯಲ್ಲಿ ಎಡಶಕ್ತಿ

ಇಂಥ ಅಂಶಗಳನ್ನು ಮಾರ್ಪಾಡುಮಾಡಿಕೊಳ್ಳಬೇಕಾಗುತ್ತದೆ.

ಸೈದ್ಧಾಂತಿಕತೆಯಿಂದಾಚೆಗೆ ಮುಖ್ಯವಾದುದೆಂದರೆ, ಆಚರಣೆ. ದಲಿತ ಚಳವಳಿ ಹಾಗೂ ಎಡಪಂಥೀಯ ಚಳ ವಳಿಯ ನಡುವೆ ಸೈದ್ಧಾಂತಿಕ ಮಟ್ಟದಲ್ಲಿ ಅಂತಹ ದೊಡ್ಡ ವ್ಯತ್ಯಾಸವೂ ಇರಲಿಲ್ಲ. ಅಂಬೇಡ್ಕರ್‌ರವರು ಕಮ್ಯುನಿಸ್ಟರಿಂದ ದೂರಗೊಳ್ಳಲು ಪ್ರಮುಖ ಕಾರಣ ಕಮ್ಯುನಿಸ್ಟರ ಆಚರಣೆಯಲ್ಲಿದ್ದ ಸಮಸ್ಯೆಯೇ! ಎಡಶಕ್ತಿಗಳು ಮೇಲೆ ಹೇಳಲಾದ ಸೈದ್ಧಾಂತಿಕ ಮಾರ್ಪಾಡಿನೊಂದಿಗೆ ಆಚರಣೆಯಲ್ಲೂ ದಲಿತ ಚಳವಳಿಯೊಂದಿಗೆ ಸ್ನೇಹ ಸೇತುವೆಯನ್ನು ನಿರ್ಮಿಸಲು ಮುಂದೊಡಗು ತೋರಿಸಬೇಕು. ನಾನು ಆಗಲೇ ವಿವರ ವಾಗಿ ಸೂಚಿಸಿರುವಂತೆ, ದಲಿತರ ನಿಸ್ಸಹಾಯಕ ಪರಿಸ್ಥಿತಿಯಲ್ಲಿ ಅವರು ತಮ್ಮ ಸಂಪೂರ್ಣ ಶಕ್ತಿ ಸಾಮರ್ಥ್ಯಗಳೊಂದಿಗೆ ದಲಿತರ ಬೆಂಬಲಕ್ಕೆ ನಿಲ್ಲಬೇಕು. ಈ ಬಗೆಯ ಆಚರಣೆಯು ಎರಡೂ ಬಣಗಳ ನಡುವಿನ ಹಲವು ಸಂಶಯಗಳನ್ನು ನಿವಾರಿಸಿಕೊಳ್ಳಲು ಆಚರಣಾತ್ಮಕ ಸಂಪರ್ಕ ಕೊಂಡಿಯನ್ನು ಸ್ಥಾಪಿಸುತ್ತದೆ.

ಶಿವಸುಂದರ್: ಜಾತಿ ಐಡೆಂಟಿಟಿ (ಅಸ್ಮಿತೆ)ಗಳ ಸದೃಢೀಕರಣವನ್ನು ದಲಿತರ ವಿಮೋಚನೆಗೆ ಒಂದು ಮಾರ್ಗವಾಗಿ ಸೂಚಿಸುವ ಸಿದ್ಧಾಂತವೂ ಇದೆ. ಇದರ ಬಗ್ಗೆ ನಿಮ್ಮ ಅಭಿಪ್ರಾಯವೇನು?

ಡಾ. ಆನಂದ್ ತೇಲ್‌ತುಂಬ್ಡೆ: ಜಾತಿವಿನಾಶದಲ್ಲಿ ಆಸಕ್ತಿ ಇರುವ ಯಾರೇ ಆಗಲಿ, 'ಜಾತಿ'ಯ ನುಡಿಗಟ್ಟಿನ ಬಳಕೆಯನ್ನು ನಿಲ್ಲಿಸಬೇಕೆಂಬುದು ನನ್ನ ಸ್ಪಷ್ಟ ಅಭಿಪ್ರಾಯ. ಏಕೆಂದರೆ, ಜಾತಿಯು ಅಂತರ್ಗತವಾಗಿಯೇ ಪರಸ್ಪರ ವಿಭಜಿಸುವ ಪ್ರಭೇಧವಾಗಿದೆ. ಅದು ಎರಡು ದಲಿತ ಜಾತಿಗಳನ್ನು ಸಹ ಒಂದುಗೂಡಿಸಲು ಸಾಧ್ಯವಿಲ್ಲ. ವರ್ಗಕ್ಕೆ ಮಾತ್ರ ಈ ಪ್ರವೃತ್ತಿಯನ್ನು ದಾಟಿ ಮೇಲೇರಬಲ್ಲ ಹಾಗೂ ಜನರನ್ನು ಒಂದುಗೂಡಿಸಬಲ್ಲ ಶಕ್ತಿ ಇದೆ. ಹಾಗಾಗಿ ಜಾತಿಗಳ ವಿನಾಶಕ್ಕಾಗಿ, ಜಾತಿ ಐಡೆಂಟಿಟಿಗಳನ್ನು ಸದೃಢೀಕರಿಸುವ ಮಾತೇ ಅಸಂಬದ್ಧವಾದುದು. ಆ ಸಲಹೆಯಲ್ಲೇ ಅಂತರ್ಗತ ವೈರುಧ್ಯವಿದೆಯೆಂದು ನನ್ನ ಅಭಿಪ್ರಾಯ.

ಶಿವಸುಂದರ್: ದಲಿತ ಚಳವಳಿಗೆ ಅಂಬೇಡ್ಕರ್ ಇಂದು ಎಷ್ಟರ ಮಟ್ಟಿಗೆ ಪ್ರಸ್ತುತವಾಗುತ್ತಾರೆ?

ಡಾ. ಆನಂದ್ ತೇಲ್‌ತುಂಬ್ಡೆ: ಅಂಬೇಡ್ಕರ್ ತಮ್ಮ ಸಂಘರ್ಷದ ಬಹುಭಾಗವನ್ನು ವೈಚಾರಿಕ ಸಂಘರ್ಷದಲ್ಲಿ ಕಳೆದಿರುವುದರಿಂದ ಅವರನ್ನು ಸಕಾರಾತ್ಮಕವಾಗಿ ಮರುವ್ಯಾಖ್ಯಾನಿಸಲು ಬಹಳ ಅವಕಾಶವನ್ನು ನೀಡಿದೆ. ಇಂದು ಅಂಬೇಡ್ಕರ್ ಒಬ್ಬ ಇತಿಹಾಸಪುರುಷನಾಗಿ ಮಾತ್ರ ಉಳಿದಿಲ್ಲ. ಅವರು ತಮ್ಮದೇ ಗುಣಲಕ್ಷಣವನ್ನು ಹೊಂದಿರುವ ಒಬ್ಬ ಪ್ರತಿಮಾ ಪುರುಷನಾಗಿ (icon) ಮಾರ್ಪಟ್ಟಿದ್ದಾರೆ. ಪ್ರತಿಮಾಪುರುಷರು ಅತ್ಯಂತ ಸಕಾರಾತ್ಮವಾದ ಮತು ಅಷ್ಟೇ ನಕಾರಾತ್ಮವಾದ ಪರಿಣಾಮವನ್ನೂ ಉಂಟು ಮಾಡಬಲ್ಲರು. ಇಂದು ಈ ಪ್ರತಿಮೆಯನ್ನು ನಕಾರಾತ್ಮಕವಾಗಿ ಬಳಸಿಕೊಳ್ಳಲಾಗುತ್ತಿದೆ. ಆದರೆ ಇದನ್ನೇ ಸಕಾರಾತ್ಮಕವಾಗಿ ಬಳಸಿಕೊಳ್ಳುವ ಪ್ರಯತ್ನಗಳು ನಡೆದರೆ ಪರಿಣಾಮ ಭಿನ್ನವಾಗಿರುತ್ತದೆ. ಇದರ ಬಗ್ಗೆ ಚರ್ಚೆಯನ್ನು ಪ್ರಾರಂಭಿಸಲು ಒಂದು ಕಿರು ಪುಸ್ತಕವನ್ನು ಪ್ರಕಟಸುವ ಮೂಲಕ ಈ ನಿಟ್ಟಿನಲ್ಲಿ ಒಂಧು ಪ್ರಾಥಮಿಕ ಪ್ರಯತ್ನವನ್ನು ನಾನು ಪ್ರಾರಂಭಿಸಿದ್ದೇನೆ. ಈ ಪ್ರಯತ್ನಕ್ಕೆ ಸಿಕ್ಕಿರುವ ಅಭೂತ ಪೂರ್ವ ಪ್ರತಿಕ್ರಿಯೆಯನ್ನು ಕಂಡು ಇಂಥ ಒಂದು ಯೋಜನೆ ಕಾರ್ಯಸಾಧುವೆಂದು ನನಗೆ ಅನಿಸಿದೆ. ಆ ಅರ್ಥದಲ್ಲಿ ಯಾವ ಚಾರಿತ್ರಿಕ ವ್ಯಕ್ತಿತ್ವವೂ ಕೂಡ ಸಂಪೂರ್ಣವಾಗಿ ಪ್ರಸ್ತುತವೋ ಅಪ್ರಸ್ತುತವೋ ಆಗಲಾರರು.

ಅಂಬೇಡ್ಕರ್ ರೀತಿಯಲ್ಲೇ ಮಾರ್ಕ್ಸ್‌ರ ಪ್ರಸ್ತುತತೆಯನ್ನು ಪ್ರಶ್ನಿಸಲು ಸಾಧ್ಯವಿದೆ. ಇಂದಿಗೂ ಅಸ್ತಿತ್ವದಲ್ಲಿರುವ ಬಂಡವಾಳಶಾಹಿ ವ್ಯವಸ್ಥೆಯ ಬಗ್ಗೆ ಬಹುಹಿಂದೆಯೇ ಮಾರ್ಕ್ಸ್ ಬರೆದಿದ್ದರೂ ಸಹ ಜಗತ್ತು ಯಾವ ಪರಿಯಲ್ಲಿ ಬದಲಾಗುತ್ತಿದೆಯೆಂದರೆ, ಮಾರ್ಕ್ಸ್ ಸಂದರ್ಭದ ಬಂಡವಾಳಶಾಹಿ ವ್ಯವಸ್ಥೆ ಮತ್ತು ಇಂದಿನ ಬಂಡವಾಳಶಾಹಿ ವ್ಯವಸ್ಥೆಗಳೆರಡೂ ಒಂದೇ ಆಗಿಲ್ಲ. ಅವುಗಳನ್ನು ಗ್ರಹಿಸುವುದೇ ಸವಾಲಿನ ವಿಷಯವಾಗಿದ್ದು, ಆ ಗ್ರಹಿಕೆಯೂ ಮಾರ್ಕ್ಸ್‌ನ ಹೆಸರಲ್ಲಿ ಮುಂದುವರೆಯಬಹುದು ಆದರೆ ಚಾರಿತ್ರಿಕ ಮಾರ್ಕ್ಸ್‌ಗೂ ಇದಕ್ಕೂ ಸಾಕಷ್ಟು ಅಂತರವಿದ್ದೇ ಇರುತ್ತದೆ. ಅಂಬೇಡ್ಕರ್ ವಿಷಯದಲ್ಲೂ ಅದೇ ರೀತಿ ಪರಿಗಣಿಸಬಹುದು. ಅದೇನೇ ಇದ್ದರೂ ಅಂಬೇಡ್ಕರ್ ಎಂಬ ಪ್ರತಿಮೆ ದಲಿತ ಚಳವಳಿಯ ದೀಪಸ್ಥಂಭವಾಗಿ ಕೇವಲ ದಲಿತ ಚಳವಳಿಗೆ ಮಾತ್ರವಲ್ಲದೆ ಭಾರತದ ಕ್ರಾಂತಿಗೆ ದೊಡ್ಡ ಶಕ್ತಿಯಾಗಿ ತುಂಬಾ ಸಹಾಯಕವಾಗುತ್ತಾರೆ.

ಶಿವಸುಂದರ್: ದಲಿತರ ಮೇಲೆ ದೌರ್ಜನ್ಯಗಳು ಹೆಚ್ಚುತ್ತಿರುವ ಹೊತ್ತಿನಲ್ಲೇ ದಲಿತ ಚಳವಳಿಯೊಳಗಿನ ವಿಘಟನೆ ಹಾಗೂ ಭ್ರಷ್ಟಾಚಾರಗಳನ್ನು ನೀವು ಹೇಗೆ ಅರ್ಥೈಸುತ್ತೀರಿ?

ಡಾ. ಆನಂದ್ ತೇಲ್‌ತುಂಬ್ಡೆ: ಆಳುವ ವರ್ಗಗಳ ರಾಜಕೀಯ ಪಕ್ಷಗಳು ದಲಿತ ಚಳವಳಿಯ ನಾಯಕತ್ವ ವನ್ನು ಒಳಸೆಳೆದುಕೊಂಡಿದ್ದರಿಂದ ದಲಿತ ಚಳವಳಿಯು ನಿತ್ರಾಣಗೊಂಡಿತು. ಈ ಒಳಸೆಳೆದುಕೊಳ್ಳುವಿಕೆಯು ಎರಡು ರೀತಿಯಲ್ಲಿ ನಡೆದಿದೆ. ಒಂದು: ಇತರೆ ಯಾರಾದರೊಂದಿಗೆ ಕೈಜೋಡಿಸಲೇಬೇಕಾದ ಅಗತ್ಯದಿಂದಾಗಿ ಕೆಲವು ದಲಿತ ನಾಯಕರ (ಗಾಯಕವಾಡರಂತಹ) ಮುಗ್ಧ ಕಾಳಜಿಯಿಂದಾಗಿ ನಡೆದದ್ದು. ಎರಡು: ಇಂದು ದೇಶದೆಲ್ಲೆದೆ ದಲಿತ ನಾಯಕರು ಪ್ರಜ್ಞಾಪೂರ್ವಕವಾಗಿ ನಡೆಸುತ್ತಿರುವ ರಾಜೀ ಕಾಬೂಲಿಗಳು. ಇದಕ್ಕಿರುವ ಪ್ರಮುಖ ಕಾರಣವೇ ನೆಂದರೆ ನಾಯಕತ್ವದ ಸಿದ್ಧಾಂತ ರಾಹಿತ್ಯ ಹಾಗೂ ಅದರಿಂದ ಉಂಟಾಗುವ ಅವಕಾಶವಾದಿ ಒಲವುಗಳು. ಇಂದು ದಲಿತ ನಾಯಕರಿಗೆ ದಲಿತರ ಪರವಾದಂತಹ ಯಾವುದೇ ಕಾಳಜಿಗಳಿಲ್ಲ. ದೌರ್ಜನ್ಯಗಳು ಹೆಚ್ಚುತ್ತಿರಲಿ, ಬಿಡಲಿ. ಆಳು ವವರ್ಗದ ರಾಜಕಾರಣಿಗಳಂತೆ ಅವರು ತಮ್ಮ ಬಗ್ಗೆ ಮಾತ್ರ ಕಾಳಜಿ ಇಟ್ಟುಕೊಂಡಿದ್ದಾರೆ. ಅಷ್ಟೆ

ಮೂಲಭೂತವಾಗಿ, ಇಡೀ ವ್ಯವಸ್ಥೆಯು ಹೇಗೆ ಸಂಯೋಜಿಸಲ್ಪಟ್ಟಿದೆಯೆಂದರೆ, ದಲಿತರು ಇತರ ವಿಭಾಗಗಳೊಂದಿಗೆ ಕೈಜೋಡಿಸದ ಹೊರತು ತಮ್ಮನ್ನು ತಾವು ರಾಜಕೀಯವಾಗಿ ಸಬಲಗೊಳಿಸಿಕೊಳ್ಳಲು ಸಾಧ್ಯವಿಲ್ಲದಂತಾಗಿದೆ. ದಲಿತರ ಅತ್ಯುತ್ತಮ ಮಿತ್ರ ಶಕ್ತಿಯಾಗಬಲ್ಲ ಎಡ ಪರ್ಯಾಯದ ಅನುಪಸ್ಥಿತಿಯಲ್ಲಿ ದಲಿತರು ಹೆಚ್ಚಿಗೆ ಅನುಕೂಲ ಮಾಡಿಕೊಡುವ ಯಾರ ಬಳಿಯಾದರೂ ಹೋಗುವಂತಾಗಿದೆ. ಅಂಬೇಡ್ಕರ್ ತಮ್ಮ ರಿಪಬ್ಲಿಕನ್ ಪಕ್ಷದ ಮೂಲಕ ಎಡ ಪಕ್ಷದ ಜೊತೆಗೆ ಮೈತ್ರಿ ಸಂಭವಿಸುವುದೆಂದು ಊಹಿಸಿದ್ದರು. ಆದರೆ ಅದು ಹಾಗಾಗಲಿಲ್ಲ. ದಲಿತ ಹಾಗೂ ಎಡಚಳವಳಿಗಳ ನಡುವೆ ಒಂದು ಮೂಲಭೂತ ಐಕ್ಯತೆ ಸಾಧ್ಯವಾಗಬೇಕಿತ್ತು. ಆದರೆ ಜಡ ಸಿದ್ಧಾಂತವಾದಿ ಎಡಪಂಥೀಯರ ಕಾರಣದಿಂದಾಗಿ ಅದು ಸಂಭವಿಸಲಿಲ್ಲ. ನೈಜ ಸಮಸ್ಯೆಗಳ ಕುರಿತ ಒಂದು ಜೀವಂತ ಚಳವಳಿ ಮಾತ್ರ ನಾಯಕರಿಗಿರಬೇಕಾದ ಅಗತ್ಯ ವರ್ತನೆಯನ್ನು ಖಾತ್ರಿಗೊಳಿಸಬಲ್ಲದು. ಆದರೆ ದಲಿತ ಚಳವಳಿಯೆಂಬುದು ವ್ಯಾಪಾರಿ ನಾಯಕರು ತಮ್ಮ ವ್ಯವಹಾರಕ್ಕೆ ಬಳಸುವ ವಸ್ತುವಾಗಷ್ಟೆ ಉಳಿಯಿತು. ಈ ಕಾಲ್ಪನಿಕ ದಲಿತ ಚಳವಳಿಯೊಳಗಿನ ಭ್ರಷ್ಟತನವು ಈ ಎಲ್ಲಾ ಅಂಶಗಳ ಪರಿಣಾಮದಿಂದ ಉಂಟಾದದ್ದು.

ಶಿವಸುಂದರ್: ಮೀಸಲಾತಿಯು ವ್ಯವಸ್ಥೆಯ ಅಶಕ್ತತೆಯನ್ನು ತಿದ್ದು ಪಡಿಗೊಳಿಸುವ ಸಾಧನವೇ ವಿನಃ ದಲಿತರ ಅಶಕ್ತತೆಯನ್ನಲ್ಲ ಎಂದಿದ್ದೀರಿ. ದಯವಿಟ್ಟು ವಿವರಿಸಿ. ಹಾಗೆಯೇ ದಲಿತರನ್ನು ರಕ್ಷಿಸುವಲ್ಲಿ ಸಂವಿಧಾನದಲ್ಲಿರುವ ಅವಕಾಶಗಳು, ನೀತಿ ತತ್ವಗಳು ಎಷ್ಟರಮಟ್ಟಿಗೆ ಪರಿಣಾಮಕಾರಿಯಾಗಿವೆ ಎಂದು ತಿಳಿಸಿ.

ಡಾ. ಆನಂದ್ ತೇಲ್‌ತುಂಬ್ಡೆ: ದಲಿತರು ಮತ್ತು ಆದಿವಾಸಿಗಳು ಈ ಸಮಾಜದಲ್ಲಿ ವಿಭಿನ್ನ ಬಗೆಯ ತಾರತಮ್ಯ ಮತ್ತು ಪೂರ್ವಗ್ರಹಗಳಿಗೆ ತುತ್ತಾಗಿದ್ದಾರೆ. ದಲಿತರು ಎಷ್ಟೇ ಪ್ರತಿಭಾ ಸಂಪನ್ನರಾಗಿದ್ದರೂ ಅವರ ಮೇಲ್ಚನಗೆ ಜಾತಿ ವ್ಯವಸ್ಥೆ ಅವಕಾಶ ಕೊಡಲಿಲ್ಲ. ಆದಿವಾಸಿಗಳು ಈ ನಾಗರೀಕತೆಯ ಪರಿಧಿಯಿಂದಲೇ ಸುದೀರ್ಘಾವಧಿಯ ತನಕ ಹೊರಗಿದ್ದರಿಂದ ಇದೇ ರೀತಿಯ ಸಾಮಾಜಿಕ ಪೂರ್ವಗ್ರಹಗಳನ್ನು ಅನುಭವಿಸದಿದ್ದರೂ ಅವರೂ ಒಂದಷ್ಟು ಸಾಮಾಜಿಕ ಪೂರ್ವಗ್ರಹಗಳಿಗೆ ತುತ್ತಾಗಿರುವುದಂತೂ ನಿಜ. ಮೊದಲಿಗೆ ಅಂಬೇಡ್ಕರ್ ಸಹ ಸೌತ್‌ಬರೋ ಸಮಿತಿ, ಸೈಮನ್ ಕಮಿಷನ್ ಮತ್ತು ಪೂನಾ ಒಪ್ಪಂದದ ಸಂದರ್ಭದ ಸಮಯದಲ್ಲಿ ಪ್ರತಿಪಾದಿಸಿದಂತೆ ಅಭಿವೃದ್ಧಿಯ ಪರಿಧಿಯಿಂದ ಈ ಜನರು ಹೊರಗೇ ಇರುವುದರಿಂದ ತೀವ್ರತರವಾದ ವೈಕಲ್ಯವನ್ನು ಅನುಭವಿಸುತ್ತಿದ್ದಾರೆ. ಆದರೆ ಈ ವೈಕಲ್ಯವು ಕಾಲ ಸರಿದಂತೆ ತನ್ನಂತೆ ತಾನು ಮಾಯವಾಗುವುದಿಲ್ಲ. ಬಡತನದಂತ ಎಲ್ಲರಿಗೂ ಜಾತ್ಯತೀತವಾಗಿ ಅನ್ವಯಿಸುವಂತ ವೈಕಲ್ಯಗಳು ಮಾಯವಾಗುತ್ತಿದ್ದಂತೆ ಈ ಸಾಮಾಜಿಕ ಪೂರ್ವಗ್ರಹಗಳು ಮಾಯವಾಗುತ್ತದೆಂಬ ಭರವಸೆಯೇನೂ ಇಲ್ಲ. ಈ ವೈಕಲ್ಯತೆಯ ನಿವಾರಣೆಯಾದರೂ ಜಾತಿ ವ್ಯವಸ್ಥೆಯು ದಲಿತರಿಗೆ ಅವರಿಗೆ ದಕ್ಕಬೇಕಿರುವುದನ್ನು ಕೊಡುತ್ತದೆ ಎಂದು ಖಾತರಿಯಿಲ್ಲ. ಮೀಸಲಾತಿಯ ಮೂಲಕ ನಿವಾರಿಸ

ಜಾತಿವಿನಾಶದಲ್ಲಿ ಆಸಕ್ತಿ ಇರುವ ಯಾರೇ ಆಗಲಿ, 'ಜಾತಿ'ಯ ನುಡಿಗಟ್ಟಿನ ಬಳಕೆಯನ್ನು ನಿಲ್ಲಿಸಬೇಕೆಂಬುದು ನನ್ನ ಸ್ಪಷ್ಟ ಅಭಿಪ್ರಾಯ. ಏಕೆಂದರೆ, ಜಾತಿಯು ಅಂತರ್ಗತವಾಗಿಯೇ ಪರಸ್ಪರ ವಿಭಜಿಸುವ ಪ್ರಭೇಧವಾಗಿದೆ. ಅದು ಎರಡು ದಲಿತ ಜಾತಿಗಳನ್ನು ಸಹ ಒಂದು ಗೂಡಿಸಲು ಸಾಧ್ಯವಿಲ್ಲ. ವರ್ಗಕ್ಕೆ ಮಾತ್ರ ಈ ಪ್ರವೃತ್ತಿಯನ್ನು ದಾಟಿ ಮೇಲೇರಬಲ್ಲ ಹಾಗೂ ಜನರನ್ನು ಒಂದು ಗೂಡಿಸಬಲ್ಲ ಶಕ್ತಿ ಇದೆ. ಹಾಗಾಗಿ ಜಾತಿಗಳ ವಿನಾಶಕ್ಕಾಗಿ, ಜಾತಿ ಐಡೆಂಟಿಟಿಗಳನ್ನು ಸದೃಢೀಕರಿಸುವ ಮಾತೇ ಅಸಂಬದ್ಧ ವಾದುದು.

ಬೇಕಿದ್ದುದು ಸಮಾಜದ ಈ ಅಸಮರ್ಥತೆಯನ್ನೇ.

ಹೀಗಾಗಿ ಮೀಸಲಾತಿಯೆಂದರೆ ಸಾಮಾಜಿಕ ಪೂರ್ವಗ್ರಹಗಳು ದಲಿತರಿಗೆ ಸಿಕ್ಕಬೇಕಾದ ನ್ಯಾಯಯುತ ಪಾಲು ಸಿಗದಂತೆ ಮಾಡುವುದನ್ನು ತಡೆಯುವುದಕ್ಕೆ ಇರುವ ಒಂದು ವ್ಯವಸ್ಥೆ ಎಂದು ಪರಿಗಣಿಸಬಹುದು. ಹೀಗಾಗಿ ಅದು ಸಾಮಾಜಿಕ ಶಕ್ತಿಗಳ ವಿರುದ್ಧ ಸಮತೋಲನೆಯನ್ನು ಕಾಪಾಡಿಕೊಂಡು ಬರಲು ಪ್ರಭುತ್ವ ಶಕ್ತಿಯು ತೆಗೆದುಕೊಳ್ಳುವ ಕ್ರಮವಾಗುತ್ತದೆ. ಆ ಅರ್ಥದಲ್ಲಿ ಅದು ನಮ್ಮ ವ್ಯವಸ್ಥೆಯಲ್ಲಿರುವ ಅಸಮರ್ಥತೆಯನ್ನು ನಿವಾರಿಸುವ ಸಾಧನವೂ ಆಗುತ್ತದೆ. ಆದರೆ ಸಮಾಜವೂ ಸಹ ತನ್ನ ಅಸಮರ್ಥತೆಯ ಕಾರಣಕ್ಕಾಗಿಯೇ ಮೀಸಲಾತಿಯನ್ನು ನೀಡಲಾಗುತ್ತಿದೆಯೆಂದು ಅರ್ಥ ಮಾಡಿಕೊಳ್ಳದಿದ್ದರೆ ಇದು ಪೂರ್ಣಾರ್ಥದಲ್ಲಿ ಜಾರಿಗೆ ಬರಲು ಸಾಧ್ಯವಿಲ್ಲ.

ಈ ಅರ್ಥದಲ್ಲಿ ಮೀಸಲಾತಿಯು ಬೇರೆ ದೇಶಗಳಲ್ಲಿ ಹಿಂದುಳಿದವರ ಸೌಲಭ್ಯಕ್ಕೆ ಕೈಗೊಳ್ಳಲಾಗುತ್ತಿರುವ ಅಫಿರ್ ಮೇಟೀವ್ ಕಾರ್ಯಕ್ರಮಗಳಂತಲ್ಲ. ಅಲ್ಲಿ ಈ ಕ್ರಮಗಳು ಇತರ ಯಾವುದೇ ಕಾರಣಗಳಿಗಾಗಿ ಅಭಿವೃದ್ಧಿಯಲ್ಲಿ ಹಿಂದುಳಿದ ಸಮುದಾಯಗಳಿಗಾಗಿ ತೆಗೆದುಕೊಳ್ಳುವ ಕ್ರಮವಾಗಿರುತ್ತದೆ. ಹಾಗೆಯೇ ಭಾರತದಲ್ಲೂ ಅಭಿವೃದ್ಧಿಯಲ್ಲಿ ಹಿಂದುಳಿದಿರುವ ಸಮುದಾಯಗಳನ್ನು ಮೇಲೆತ್ತಲು ಜನ ಪರ ಅಭಿವೃದ್ಧಿ ಯೋಜನೆಗಳನ್ನು ಹಮ್ಮಿಕೊಳ್ಳಬೇಕೆ ವಿನಃ ಮೀಸಲಾತಿ ಅದಕ್ಕೆ ಉತ್ತರವಲ್ಲ. ಆದರೆ ಅಂಥ ಸಮುದಾಯಗಳಿಗೂ ಮೀಸಲಾತಿಯನ್ನು ನೀಡುತ್ತಾ ರಾಜಕಾರಣಿಗಳು ಮೀಸಲಾತಿಯ ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರಷ್ಟೆ.

ನಮ್ಮ ಸಂವಿಧಾನದಲ್ಲಿರುವ ಅವಕಾಶ ಹಾಗೂ ನೀತಿಗಳು ಉತ್ತಮವಾಗಿಯೇ ರಚಿಸಲ್ಪಟ್ಟಿದ್ದರೂ ಅವುಗಳಲ್ಲನೇಕವು ನಿರ್ದೇಶಕ ತತ್ವಗಳಷ್ಟೇ ಆಗಿವೆ. ಮೀಸಲಾತಿಗಳೂ ಸಹ ಕಾರ್ಯಾಂಗದ ಆದೇಶಗಳಿಂದಲೇ ಜಾರಿಗೊಳ್ಳುವುದರಿಂದ ಈ ಹಂತದಲ್ಲಿ ಬಹಳ ವಂಚನೆಗಳು ಸಂಭವಿಸುತ್ತದೆ. ಆದರೂ ಈ ನೀತಿ ಮತ್ತು ಯೋಜನೆಗಳು ದಲಿತರಿಗೆ ಹಾಗೂ ಆದಿವಾಸಿಗಳಿಗೆ ನಿಸ್ಸಂಶಯವಾಗಿಯೂ ಬಹಳಷ್ಟು ಒಳ್ಳೆಯದನ್ನೇ ಮಾಡಿದೆ. ಆದರೆ ಅದೇ ವೇಳೆಗೆ ಅವು ಸಾಕಷ್ಟು ಅನ್ಯಾಯವನ್ನು ಎಸಗಿವೆ. ದಲಿತರ ಪರವಾಗಿರುವ ಬಹುತೇಕ ರಕ್ಷಣಾ ಕ್ರಮಗಳು ಹಾಗೂ ಅವಕಾಶಗಳಿಗೂ ಇದೇ ಮಾತು ಅನ್ವಯಿಸುತ್ತದೆ. ಉದಾಹರಣೆಗೆ ಅಟ್ರಾಸಿಟಿ ಕಾಯ್ದೆಯು ಅತ್ಯುತ್ತಮ ಶಾಸನ ವಾಗಿರುವುದಾದರೂ ಅದು ಜಾರಿಯಾಗುತ್ತಿರುವ ರೀತಿ ಮಾತ್ರ ಆ ಶಾಸನವನ್ನೇ ಪರಿಹಾಸ್ಯ ಮಾಡುವಂತಿದೆ.

ಮೀಸಲಾತಿ ಯೋಜನೆಯಲ್ಲಿರುವ ಅತಿ ದೊಡ್ಡ ನಕಾರಾತ್ಮಕ ಅಂಶವೇನೆಂದರೆ ಅದರ ಫಲಾನುಭವಿಗಳೇ ಶಾಶ್ವತವಾಗಿ ಅದನ್ನು ತಮ್ಮ ಏಕಸ್ವಾಮ್ಯದಲ್ಲಿ ಹಿಡಿದಿಟ್ಟುಕೊಳ್ಳುವುದನ್ನು ತಡೆಗಟ್ಟುವಂಥ ಕ್ರಮಗಳಿಲ್ಲದೇ ಇರುವುದು. ಇದನ್ನು ಬಹಳ ಎಚ್ಚರಿಕೆಯಿಂದ ನಿವಾರಿಸಿಕೊಳ್ಳಲೇಬೇಕು.

ಶಿವಸುಂದರ್: ಇಂದು ದಲಿತರ ವಿಮೋಚನೆಗೆ ಯಾವ ಬಗೆಯ ಮೈತ್ರಿಗಳು ಹಾಗೂ ವ್ಯೂಹ ತಂತ್ರಗಳು ಅಗತ್ಯವಾಗಿವೆ?

ಡಾ. ಆನಂದ್ ತೇಲ್‌ತುಂಬ್ಡೆ: ನಾನಾಗಲೇ ತಿಳಿಸಿದಂತೆ ಮೈತ್ರಿಗಳೇನಿದ್ದರೂ ವರ್ಗದ ಆಧಾರದಲ್ಲಿಯೇ ನಡೆ ಯಬೇಕು. ಒಂದು ಸಂದಿಗ್ಧ ಕಾಲದವರೆಗೆ ದಲಿತರು ಹಾಗೂ ಧಾರ್ಮಿಕ ಅಲ್ಪಸಂಖ್ಯಾತರ ನಡುವೆ ಗಟ್ಟಿಯಾಗಿ ಮೈತ್ರಿ ಏರ್ಪಡಬೇಕಾಗಿದೆ. ಹಿಂದೂತ್ವ ಶಕ್ತಿಗಳು ತಂದೊಡ್ಡುವ ಅಪಾಯವನ್ನು ವಿಫಲಗೊಳಿಸಲು ಅವರು ಒಂದಾಗಬೇಕಿದೆ.

ಚುನಾವಣೆಗೆ ಸಂಬಂಧಿಸಿದಂತೆ, ಯಾವ ಮೈತ್ರಿಗಳಾಗಬಹುದೆಂದು ನನಗೆ ಗೊತ್ತಿಲ್ಲ. ಅದರಲ್ಲಿ ಯಾವುದೇ ಪರಿಹಾರವೇ ಇಲ್ಲ ಎಂಬುದನ್ನು ಯಾರಾದರೂ ಗುರುತಿಸುವ ಮಟ್ಟಕ್ಕೆ ಈ ವ್ಯವಸ್ಥೆಯು ಕೊಳೆತು ಹೋಗಿದೆ. ಕೆಲ ಚುನಾವಣಾ ಸುಧಾರಣೆಗಳಿಗಾಗಿ ಹೋರಾಟಗಳನ್ನು ನಡೆಸಬಹುದೆಂಬುದು ನಿಜ. ವಿಶಾಲವಾದ ಮೈತ್ರಿ ಏನಿದ್ದರೂ ಎಡಶಕ್ತಿಗಳು, ದಲಿತರು ಹಾಗೂ ಅಲ್ಪಸಂಖ್ಯಾತರ ನಡುವೆಯೇ ಸಾಧ್ಯವಾಗಬೇಕು.

ಶಿವಸುಂದರ್: ದಲಿತರ ಸಮೂಹದಲ್ಲಿನ ಒಂದು ವಿಭಾಗವನ್ನು ಹಿಂದೂತ್ವ ಶಕ್ತಿಗಳು ತಮ್ಮ ಹಿಡಿತಕ್ಕೆ ತಂದುಕೊಳ್ಳಲು ಯಶಸ್ವಿಯಾದದ್ದು ಹೇಗೆಂದು ನಿಮ್ಮ ಭಾವನೆ?

ಡಾ. ಆನಂದ್ ತೇಲ್‌ತುಂಬ್ಡೆ: ಪ್ರಗತಿಪರರು ಗುರುತಿಸುವ ಮಟ್ಟದಲ್ಲಿ ಹಿಂದೂತ್ವ ಪಡೆಗಳೇನೂ ಈ ದಿಸೆಯಲ್ಲಿ ಯಶಸ್ವಿಯಾಗಿಲ್ಲ. 2002ರ ಗುಜರಾತ್ ಹತ್ಯಾ ಕಾಂಡದಲ್ಲಿ ಕೆಲವು ದಲಿತರು ಮುಸ್ಲಿಮರ ವಿರುದ್ಧವಾಗಿ ಹಿಂದೂತ್ವ ಪಡೆಗಳೊಂದಿಗೆ ಭಾಗವಹಿಸಿದ್ದಂತೂ ಬೇಸರದ ಸಂಗತಿ. ಆದರೆ ಅದು ಬಹಳ ದೊಡ್ಡ ಪ್ರಮಾಣದಲ್ಲೇನೂ ನಡೆದಿರಲಿಲ್ಲ. ಬದಲಾಗಿ ಹಿಂದೂತ್ವ ಶಕ್ತಿಗಳು ಆದಿವಾಸಿಗಳನ್ನು ದೊಡ್ಡ ಸಂಖ್ಯೆಯಲ್ಲಿ ತಮ್ಮೆಡೆಗೆ ಗೆದ್ದು ಕೊಂಡಿದ್ದಾರೆ. ಅದರರ್ಥ ದಲಿತರಲ್ಲಿ ಹಿಂದೂತ್ವವು ಗಣನೀಯ ಬೆಂಬಲವನ್ನು ಹೊಂದಿಲ್ಲವೆಂತಲೂ ಅಲ್ಲ. ಹಿಂದೂತ್ವ ಕ್ಯಾಂಪು ಅಂಬೇಡ್ಕರ್‌ವಾದಿ ದಲಿತರನ್ನು ಆಕರ್ಷಿಸಲು ಸಾಧ್ಯವೇ ಇಲ್ಲ ಎಂಬುದು ಕೂಡಾ ಈಗ ಪೂರಾ ಸತ್ಯವೇನಲ್ಲ. ಮಹಾರಾಷ್ಟ್ರದಲ್ಲೇ ಅಂಬೇಡ್ಕರ್ ಹೆಸರಿನಲ್ಲಿ ಪ್ರಮಾಣ ಮಾಡುತ್ತಾ ಹಿಂದೂತ್ವಕ್ಕಾಗಿ ಕೆಲಸ ಮಾಡುತ್ತಿರುವ ಅನೇಕ ಮಂದಿಯಿದ್ದಾರೆ.

ನಮ್ಮ ಸಂವಿಧಾನದಲ್ಲಿರುವ ಅವಕಾಶ ಹಾಗೂ ನೀತಿಗಳು ಉತ್ತಮವಾಗಿಯೇ ರಚಿಸಲ್ಪಟ್ಟಿದ್ದರೂ ಅವುಗಳಲ್ಲನೇಕವು ನಿರ್ದೇಶಕ ತತ್ವಗಳಷ್ಟೇ ಆಗಿವೆ. ಮೀಸಲಾತಿಗಳೂ ಸಹ ಕಾರ್ಯಾಂಗದ ಆದೇಶಗಳಿಂದಲೇ ಜಾರಿಗೊಳ್ಳುವುದರಿಂದ ಈ ಹಂತದಲ್ಲಿ ಬಹಳ ವಂಚನೆಗಳು ಸಂಭವಿಸುತ್ತದೆ. ಆದರೂ ಈ ನೀತಿ ಮತ್ತು ಯೋಜನೆಗಳು ದಲಿತರಿಗೆ ಹಾಗೂ ಆದಿವಾಸಿಗಳಿಗೆ ನಿಸ್ಸಂಶಯವಾಗಿಯೂ ಬಹಳಷ್ಟು ಒಳ್ಳೆಯದನ್ನೇ ಮಾಡಿದೆ. ಆದರೆ ಅದೇ ವೇಳೆಗೆ ಅವು ಸಾಕಷ್ಟು ಅನ್ಯಾಯವನ್ನು ಎಸಗಿವೆ. ದಲಿತರ ಪರವಾಗಿರುವ ಬಹುತೇಕ ರಕ್ಷಣಾ ಕ್ರಮಗಳು ಹಾಗೂ ಅವಕಾಶಗಳಿಗೂ ಇದೇ ಮಾತು ಅನ್ವಯಿಸುತ್ತದೆ.

ಹಿಂದೂತ್ವ ಶಕ್ತಿಗಳು ದಲಿತರನ್ನೂ ಬಹುವಿಧವಾಗಿ ಓಲೈಸುತ್ತಿವೆ. ಅವರು ಸಮರಸತೆಯೆಂಬ ಒಂದು ಸಮಾಂತರ ಆಂದೋಲನವನ್ನು ನಡೆಸಿದರು. ಅದು ಜನರನ್ನು ಅವರ ಸೈದ್ಧಾಂತಿಕ ಖಿಚಡಿಯಿಂದ ಬ್ರೈನ್‌ವಾಷ್ ಮಾಡುವುದರ ಜೊತೆಯಲ್ಲಿಯೇ ಆಳವಾದ ಕೀಳರಿಮೆಯೊಂದಿಗೆ ಮೇಲ್ಜಾತಿಯವರೊಂದಿಗೆ ಸೇರಿಕೊಳ್ಳಲು ಸದಾ ಬಯಸುವ ದಲಿತ ಮಧ್ಯಮ ವರ್ಗದ ವ್ಯಕ್ತಿಗಳನ್ನು ತಮ್ಮೊಡನೆ ಒಂದಾಗುವಂತೆ ಮಾಡಲು ನಡೆಸಿದ ಪುಸಲಾವಣೆ ಕೂಡಾ ಆಗಿತ್ತು. ಎಡಪಂಥೀಯರಂತಲ್ಲದೆ ಅಂಬೇಡ್ಕರ್‌ರ ಪ್ರತಿಮಾ ಶಕ್ತಿಯನ್ನು ಅರ್ಥ ಮಾಡ್ಕೊಂಡಿರುವ ಅವರು ಅತ್ಯಂತ ಕುತಂತ್ರದಿಂದ ಅಂಬೇಡ್ಕರ್‌ರನ್ನು ಹಿಂದೂ ಧರ್ಮದ ದೊಡ್ಡ ಸುಧಾರಕನೆಂದು ಪ್ರಚಾರ ಮಾಡಿದರು. ಅಲ್ಲದೆ ನಿತ್ಯ ಬದುಕಿನಲ್ಲೂ ದಲಿತರು ತಮಗೆ ಬಿಜೆಪಿಯಲ್ಲಿ ಹೆಚ್ಚು ಅವಕಾಶಗಳಿರುವುದನ್ನು ಕಂಡುಕೊಂಡರು. ಏಕೆಂದರೆ ಕಾಂಗ್ರೆಸ್‌ನೊಳಗಡೆ ಅವಕಾಶಗಳು ಮುಗಿದಿದ್ದವು. ಬಿಜೆಪಿಯು ಅಂಥ ಹಲವು ಹೊಸ ದಲಿತ ನಾಯಕರಿಗೆ ಸೀಟುಗಳನ್ನು ನೀಡಿ ಆಯ್ಕೆ ಮಾಡಿತು. ಇಂದು ಬಿಜೆಪಿಯಲ್ಲಿ ಇತರ ಎಲ್ಲಾ ಪಕ್ಷಗಳಿಗಿಂತಲೂ ಹೆಚ್ಚು ದಲಿತ ಎಂ.ಪಿ. ಎಮ್ಮೆಲ್ಲೆಗಳಿದ್ದಾರೆ. ಸಾಂಪ್ರದಾಯಿಕವಾಗಿ ಕಾಂಗ್ರೆಸಿಗೇ ನೀಡಿದ ಬೆಂಬಲವು ಯಾವುದೇ ಪ್ರತಿ ಫಲವನ್ನು ನೀಡದಿರುವ ಸಂದರ್ಭದಲ್ಲಿ ಇದೂ ಕೂಡ ದಲಿತರಿಗೆ ಬಿಜೆಪಿಯ ಕುರಿತು ಸಕಾರಾತ್ಮಕ ಭಾವನೆಯನ್ನು ಮೂಡಿಸುತ್ತದೆ.

ಶಿವಸುಂದರ್: ಖೈರ್ಲಾಂಜಿಯಂಥ ಪ್ರಕರಣಗಳಲ್ಲಿ ನ್ಯಾಯ ಸಿಗುವುದು ಯಾವಾಗ?

ಡಾ.ಆನಂದ್ ತೇಲ್‌ತುಂಬ್ಡೆ: ಎಲ್ಲಾ ದಲಿತ ದೌರ್ಜನ್ಯಗಳ ಪ್ರಕರಣಗಳಂತೆ ಖೈರ್ಲಾಂಜಿ ಪ್ರಕರಣವೂ ಹಲವಾರು ವರ್ಷಗಳ ವಿಚಾರಣೆ ತೆಗೆದುಕೊಂಡಿತು. ಮೊದಲಿಗೆ ಪೋಲೀಸರು ಎಲ್ಲಾ ಆರೋಪಿಗಳನ್ನೂ ಹೆಸರಿಸಲಿಲ್ಲ. ಆರೋಪ ಹೊರಿಸಲಾದ 44 ಮಂದಿಯಲ್ಲಿ 11 ಜನರ ಮೇಲೆ ಮಾತ್ರ ನ್ಯಾಯಾಲಯ ವಿಚಾರಣೆ ಮುಂದುವರೆಸಿತು. ಅಂತಿಮವಾಗಿ 8 ಜನರಿಗೆ ಮಾತ್ರ ಶಿಕ್ಷೆ ನೀಡಿತು. 6 ಜನರಿಗೆ ಜೀವಾವಧಿ ಮತ್ತು ಇಬ್ಬರಿಗೆ ಮರಣದಂಡನೆ. ಎಲ್ಲಕ್ಕಿಂತ ಮುಖ್ಯವಾದದ್ದು ಎಂದರೆ ನ್ಯಾಯಾಲಯವು ಇದನ್ನು ಎಸ್ಸಿ–ಎಸ್ಟಿ ದೌರ್ಜನ್ಯ ತಡೆ ಕಾಯಿದೆ ಅನ್ವಯಿಸಬಹುದಾದ ಜಾತಿ ದೌರ್ಜನ್ಯ ಎಂದು ಪರಿಗಣಿಸಲೆಂದೇ ನಿರಾಕರಿಸಿತು. ಇದನ್ನು ಸಂಚು ಎಂದೂ ಕೂಡಾ ಪರಿಗಣಿಸಲಿಲ್ಲ. ಬದಲಿಗೆ ಕೋಪೋದ್ರಿಕ್ತ ಜನ ಆವೇಶದ ಕ್ಷಣದಲ್ಲಿ ನಡೆಸಿದ ಅಪರಾಧ ಎಂದಷ್ಟೇ ಪರಿಗಣಿಸಿತು. ಆ ಮೂಲಕ ನ್ಯಾಯಾಲಯವೂ ಸಹ ಇದೊಂದು ಜಾತಿ ದೌರ್ಜನ್ಯ ಎಂಬುದನ್ನು ಮರೆಸಲು ಪ್ರಯತ್ನಿಸುತ್ತಿದೆ ಕೆಲವು ವರ್ಷಗಳ ನಂತರ ಕೀಲ್ವೇನ್ಮಣಿ, ಕರಂಚೇಡುಗಳಂತೆ, ಬೆಲ್ಚಿ, ಬಾಜಿತ್ ಪುರ, ಜಗನ್ನಾಥ ಪುರ, ಮತ್ತು ವೆಲ್ಲಿಪುರಂನಂಥ ನೂರಾರು ಹೆಸರುಗಳಂತೆ ಖೈರ್ಲಾಂಜಿಯೂ ಹೆಸರು ಸಹ ಜನ ಮಾನಸದಿಂದ ಮರೆಯಾಗಿ ಬಿಡಬಹುದು. ಇತಿಹಾಸವನ್ನು ಗಮನಿಸುವುದಾದರೆ ಆಶಾವಾದಕ್ಕೆ ತಾವಿರಲು ಕಾರಣವೇ ಇಲ್ಲ. ಒಂದು ವೇಳೆ ಖೈರ್ಲಾಂಜಿ ಪ್ರಕರಣದಲ್ಲಿ ಸಿಕ್ಕಿದ್ದು ನ್ಯಾಯವೇ? ಅಷ್ಟು ಸಾಕೆ? ಆದರಿಂದ ದೌರ್ಜನ್ಯಗಳು ಕಣ್ಮರೆಯಾಗುವುದಿರಲಿ, ಕಡಿಮೆಯಾದರೂ ಆದೀತೆ? ಖಂಡಿತಾ ಇಲ್ಲ. ಎಲ್ಲಿಯ ತನಕ ದೌರ್ಜನ್ಯಗಳಲ್ಲಿ ಕೊನೆಗೊಳ್ಳುವಂಥ ಸಾಮಾಜಿಕ ಅವ್ಯವಸ್ಥೆಗಳನ್ನು ಹುಟ್ಟಿಹಾಕುತ್ತಿರುವ ವ್ಯವಸ್ಥೆಯೇ ಪುನರ್ ರಚಿತಗೊಳ್ಳುವುದಿಲ್ಲವೋ ಅಲ್ಲಿಯವರೆಗೆ ಖೈರ್ಲಾಂಜಿಗಳಿಗೆ ನಿಜವಾದ ನ್ಯಾಯ ದೊರಕುವುದಿಲ್ಲ. □

ಡಾ. ಸುಮ ಬಿ.ಯು

ಕಾಂಗ್ರೆಸ್‌ನ ಗೆಲುವು ಮತ್ತು ಭಾರತದ ಮನಸ್ಸು

ಚುನಾವಣೆಯ ಪೂರ್ವದ ಎಲ್ಲಾ ಲೆಕ್ಕಾಚಾರಗಳು ತಲೆಕೆಳಗಾಗಿ, ೨೬೩ ಸ್ಥಾನಗಳನ್ನು ಪಡೆಯುವುದರ ಮೂಲಕ, ಕಾಂಗ್ರೆಸ್ ಸರಳ ಬಹುಮತ ಪಡೆದು, ಸರ್ಕಾರ ರಚಿಸಲು ಅರ್ಹತೆ ಇರುವ ಏಕೈಕ ದೊಡ್ಡ ಪಕ್ಷವಾಗಿ ಹೊರ ಹೊಮ್ಮಿದೆ. ೧೯೮೯ ರ ನಂತರ, ನಡೆದ ಲೋಕಸಭೆಯ ಚುನಾವಣೆಯಲ್ಲಿ, ಯಾವುದೇ ಪಕ್ಷಕ್ಕೆ ಇಷ್ಟು ಸ್ಪಷ್ಟವಾದ ಬಹುಮತ ದಕ್ಕಿರಲಿಲ್ಲ. ಕಾಂಗ್ರೆಸ್ ಕೂಡ ಕನಸು ಮನಸ್ಸಿನಲ್ಲಿಯೂ ಇಂಥ ವಿಜಯವನ್ನು ನಿರೀಕ್ಷಿಸಿರಲಿಲ್ಲವಾದ್ದರಿಂದ, ಅದು ಅನೇಕ ರೀತಿಯ ಸಹಯೋಗಗಳ ಲೆಕ್ಕಾಚಾರದಲ್ಲಿ ತೊಡಗಿತ್ತು. ಚುನಾವಣೆಗಿಂತ ಮುಂಚೆ ತೀವ್ರವಾದ ಗೊಂದಲದಿಂದ ಒದ್ದಾಡುತ್ತಿದ್ದ, ಯಾವುದೇ ನಿರ್ಣಯಗಳನ್ನು ತೆಗೆದುಕೊಳ್ಳಲಾಗದ ಅಸಮರ್ಥತೆಯನ್ನು ಪ್ರದರ್ಶಿಸುತ್ತಿದ್ದ ಈ ಪಕ್ಷ ಗೆದ್ದದ್ದಾದರೂ ಹೇಗೆ ಮತ್ತು ಯಾಕೆ?...!

ಮೇ ತಿಂಗಳ 16ನೇ ತಾರೀಖು, ಮಧ್ಯಾಹ್ನದ ಹೊತ್ತಿಗೆ, 15ನೇ ಲೋಕಸಭೆಯ ಚುನಾವಣೆಯ ಫಲಿತಾಂಶ ಒಂದು ಹದಕ್ಕೆ ಬರುತ್ತಿರುವ ಸಂದರ್ಭದಲ್ಲಿ ಬಹುಶಃ ಮನಮೋಹನ್ ಸಿಂಗ್, ಸೋನಿಯಾ ಗಾಂಧಿ ರಾಹುಲ್ ಗಾಂಧಿಗೆ ಅಶ್ಚರ್ಯದಿಂದ ಮಾತು ಹೊರಡದಂತೆ ಆಗಿರಬಹುದು. ಇಲ್ಲವೇ ಅನಿರೀಕ್ಷಿತ ಎದೆ ಬಡಿತ ಹೆಚ್ಚಿರಬಹುದು.(ಪಾಪ ಇತ್ತೀಚೆಗಷ್ಟೆ ಮನಮೋಹನ್ ಸಿಂಗ್ ಅವರು ತೆರೆದ ಹೃದಯದ ಶಸ್ತ್ರ ಚಿಕಿತ್ಸೆಗೆ ಒಳಗಾಗಿದ್ದರು). ಹೌದು, ಈ ಬಾರಿಯ ಚುನಾವಣೆಯ ಫಲಿತಾಂಶದಿಂದ ಸ್ವತಃ ಕಾಂಗ್ರೆಸ್ಸಿಗೇ ಅಶ್ಚರ್ಯವಾಗಿದೆ.

ಚುನಾವಣೆಯ ಪೂರ್ವದ ಎಲ್ಲಾ ಲೆಕ್ಕಾಚಾರಗಳು ತಲೆಕೆಳಗಾಗಿ, 263 ಸ್ಥಾನಗಳನ್ನು ಪಡೆಯುವುದರ ಮೂಲಕ, ಕಾಂಗ್ರೆಸ್ ನೇತೃತ್ವದ ಯುಪಿಎ ಸರಳ ಬಹುಮತ ಪಡೆದು, ಸರ್ಕಾರ ರಚಿಸಲು ಅರ್ಹತೆ ಇರುವ ಏಕೈಕ ದೊಡ್ಡ ಪಕ್ಷವಾಗಿ ಹೊರಹೊಮ್ಮಿದೆ. 1989 ರ ನಂತರ, ನಡೆದ ಲೋಕಸಭೆಯ ಚುನಾವಣೆಯಲ್ಲಿ, ಯಾವುದೇ ಪಕ್ಷಕ್ಕೆ ಇಷ್ಟು ಸ್ಪಷ್ಟವಾದ ಬಹುಮತ ದಕ್ಕಿರಲಿಲ್ಲ. ಕಾಂಗ್ರೆಸ್ ಕೂಡ ಕನಸು ಮನಸ್ಸಿನಲ್ಲಿಯೂ ಇಂಥ ವಿಜಯವನ್ನು ನಿರೀಕ್ಷಿಸಿರಲಿಲ್ಲವಾದ್ದರಿಂದ, ಅದು ಅನೇಕ ರೀತಿಯ ಸಹಯೋಗಗಳ ಲೆಕ್ಕಾಚಾರದಲ್ಲಿ ತೊಡಗಿತ್ತು.

ಚುನಾವಣೆಗಿಂತ ಮುಂಚೆ ತೀವ್ರವಾದ ಗೊಂದಲದಿಂದ ಒದ್ದಾಡುತ್ತಿದ್ದ, ಯಾವುದೇ ನಿರ್ಣಯಗಳನ್ನು ತೆಗೆದುಕೊಳ್ಳಲಾಗದ ಅಸಮರ್ಥತೆಯನ್ನು ಪ್ರದರ್ಶಿಸುತ್ತಿದ್ದ ಈ ಪಕ್ಷ ಗೆದ್ದದ್ದಾದರೂ ಹೇಗೆ ಮತ್ತು ಯಾಕೆ?...!

ನನಗೆ ತೋಚುವಂತೆ ಕೆಲವೇ ಕೆಲವು, ಸರಳವಾದರೂ, ಈ ಹೊತ್ತಿಗೆ ಬಹಳ ಮುಖ್ಯ ಎನಿಸುವಂಥ ಅಂಶಗಳು ಕಾಂಗ್ರೆಸ್‌ನ ಗೆಲುವಿಗೆ ಕಾರಣವಾದವು.

ಭಾರತೀಯ ಸಾಂಸ್ಕೃತಿಕ ಮನಃಸ್ಥಿತಿಯಲ್ಲಿ (cultural psychi) ಎಲ್ಲಾ ಕಾಲಕ್ಕೂ ಸಲ್ಲುವ, ಹಾಗೂ ಇಲ್ಲಿನ ಜನತೆ 'ಮೌಲ್ಯ' ಎಂದು ಗೌರವಿಸುವ ಕೆಲವು ಗುಣಗಳನ್ನು ಕೆಲವು ಸಂದರ್ಭದಲ್ಲಿ ಕಾಂಗ್ರೆಸ್‌ನ ಮುಖ್ಯರು ಎನಿಸಿಕೊಂಡ ವ್ಯಕ್ತಿಗಳು ಪ್ರದರ್ಶಿಸುತ್ತಾ ಬಂದದ್ದೇ ಈ ಗೆಲುವಿಗೆ ಕಾರಣವಾಗುವ ಬಹಳ ಮುಖ್ಯವಾದ ಮಾನದಂಡಗಳಾಗಲಾರಂಭಿಸಿದವು.

ರಾಜಕೀಯ ರಂಗವನ್ನು ಕಿಗ್ಗಣ್ಣಿಲ್ಲಿ ಕಿಸಿದು ನೋಡಲೂ ತಯಾರಿಲ್ಲದ ಸೋನಿಯಾಳನ್ನು ಇಲ್ಲಿನ ಜನ ಮರೆತಿಲ್ಲ. ಹಾಗೆಯೇ ಅಪಾರವಾದ ಹಿಂಜರಿಕೆ, ತೀವ್ರವಾದ ಆತ್ಮ ವಿಶ್ವಾಸದ ಕೊರತೆಯಿಂದ ಹೆದರಿ, ಮುದುರಿ ನಿಧಾನವಾಗಿ ರಾಜಕೀಯಕ್ಕಿಳಿದ ಸೋನಿಯಾಳ ನೆನಪು ಭಾರತೀಯರಿಗೆ ಇನ್ನೂ ಇದೆ. ಬಿಜೆಪಿ 'ಹಿಂದುತ್ವ'ವನ್ನು ಪ್ರತಿಪಾದಿಸುವ ಭರದಲ್ಲಿ, ನಮ್ಮ ದೇಶಕ್ಕೆ ಸೊಸೆಯಾಗಿ ಬಂದ ಈ ಕ್ರೈಸ್ತ ಹೆಣ್ಣುಮಗಳನ್ನು ಲೇವಡಿ ಮಾಡಿತ್ತೊ, ಅವಳು ಅನುಸರಿಸುತ್ತಿದ್ದ ಧರ್ಮದ ಚರ್ಚ್‌ಗಳನ್ನು ಧ್ವಂಸ ಮಾಡಿ, ಕ್ರೈಸ್ತರನ್ನು ಕೊಚ್ಚಿ ಹಾಕಿತ್ತೋ, ಅಂಥ ಸಮುದಾಯದ ಈ ಹೆಣ್ಣು ಮಗಳಲ್ಲಿ ಭಾರತೀಯ ಮನಸ್ಸು 'ನಿಜವಾದ' ಅರ್ಥದ 'ಸೊಸೆ'ಯನ್ನು ಕಾಣಲಾರಂಭಿಸಿತು. ಆಕೆ ತನಗಾಗಿ, ತನ್ನ ಸ್ವಾರ್ಥಕ್ಕಾಗಿ ರಾಜಕೀಯ ಕ್ಷೇತ್ರಕ್ಕೆ ಕಾಲಿಡುವುದಕ್ಕಿಂತ ಹೆಚ್ಚಾಗಿ, ತನ್ನ ಅತ್ತೆ, ಗಂಡ ಕಟ್ಟಿದ ಮನೆಯನ್ನು ಸಂಭಾಳಿಸುವುದಕ್ಕಾಗಿ ಬಂದವಳು ಎನ್ನುವ ಸಂದೇಶಗಳನ್ನು (signals) ಸೋನಿಯಾಳ ನಡತೆಯಿಂದ ಭಾರತೀಯರು ಪಡೆಯಲಾರಂಭಿಸಿದರು.

2004ರಲ್ಲಿ ತನಗೆ ಬಂದ ಪ್ರಧಾನಿ ಪಟ್ಟವನ್ನು ತಿರಸ್ಕರಿಸಿದ್ದು, ಪಕ್ಷದವರು ಪ್ರಿಯಾಂಕ-ರಾಹುಲರನ್ನು ಮುಂದಿಡುತ್ತಿದ್ದ ಸಂದರ್ಭದಲ್ಲೆಲ್ಲಾ ಸೋನಿಯಾ ಅದಕ್ಕೆ ತಾತ್ಕಾಲಿಕ ತಡೆಯನ್ನು ಒಡ್ಡುತ್ತಾ ಹೋದದ್ದು, ಎಲ್ಲವೂ ಆಕೆಯನ್ನು ನಿಧಾನವಾಗಿ, ತನಗಿಂತ ಮನೆ ಮುಖ್ಯ ಎನ್ನುವ 'ಭಾರತೀಯ ಸೊಸೆಯ' ಪಡಿಯಚ್ಚಿನಲ್ಲಿ ಈ ವಿದೇಶಿ ಹೆಣ್ಣುಮಗಳನ್ನು ಪುನರ್ ಸೃಷ್ಟಿಸುತ್ತಾ ಹೋಯಿತು. ಸೋನಿಯಾಳ ಈ ವ್ಯಕ್ತಿತ್ವದೊಂದಿಗೆ ಅತ್ಯಂತ ಸುಲಭವಾಗಿ ಸಂಬಂಧ ಸ್ಥಾಪಿಸಿಕೊಳ್ಳುವುದು ಭಾರತೀಯ ಮನಸ್ಸುಗಳಿಗೆ ಸಾಧ್ಯವಾಗಲಾ

ರಂಭಿಸಿತು. ಆಕೆಯ ಬಗ್ಗೆ ಮೆಚ್ಚುಗೆ ಇಲ್ಲದಿದ್ದರೂ, ಆಕೆಯನ್ನು ಒಪ್ಪಿಕೊಳ್ಳುವ ಮಟ್ಟಕ್ಕೆ ಭಾರತೀಯರ ಬರಲಾರಂಭಿಸಿದರು. ತನ್ನ ವೈಯಕ್ತಿಕ ಇಷ್ಟ/ಕಷ್ಟಗಳನ್ನು ಬಿಟ್ಟು, ಮನೆಗಾಗಿ 'ದುಡಿಯುವ' 'ತ್ಯಾಗ' ಮಾಡುವ ಸೋನಿಯಾ ಇಟಲಿಯವಳಾಗಿ ಭಾರತೀಯರಿಗೆ ಕಾಣುತ್ತಿರಲಿಲ್ಲ.

ಎನ್‌ಟಿಆರ್ ನಿಧನದ ನಂತರ, ಅವರ ಇಬ್ಬರು ಹೆಂಡತಿಯರಾದ ಜಾನಕಿ ಮತ್ತು ಲಕ್ಷ್ಮೀಪಾರ್ವತಿ ನಡೆದುಕೊಂಡ ರೀತಿ ಹಾಗೂ ಎಂಜಿಆರ್ ನಂತರ ಜಯಲಲಿತಾ ಬೆಳೆದ ರೀತಿಯನ್ನು ಸೋನಿಯಾಳ ಈ ಚಿತ್ರದ ಜೊತೆಗಿಟ್ಟು ನೋಡಿದಾಗ, ನಮಗೆ ವ್ಯತ್ಯಾಸ ತಿಳಿಯುತ್ತದೆ.

ಸೋನಿಯಾಳ ಈ ಗುಣವನ್ನು ಪೋಷಿಸುವಂತೆ, ಸಾರ್ವಜನಿಕ ವಲಯದಲ್ಲಿ ರಾಹುಲ್ ಮತ್ತು ಪ್ರಿಯಾಂಕ ವರ್ತನೆಯಲ್ಲಿ ಬಹಳ ಮುಖ್ಯವಾದ ಎರಡು ಆಯಾಮಗಳು ವ್ಯಕ್ತವಾಗುತ್ತಿದ್ದವು:

1. ಮತ್ತದೇ, ಭಾರತೀಯರೆಲ್ಲರೂ ತಾವು ನಂಬಿದ ಮೌಲ್ಯಗಳೊಂದಿಗೆ ಸಂಬಂಧ ಸ್ಥಾಪಿಸಿಕೊಳ್ಳಬಲ್ಲ ಗುಣಗಳನ್ನು ಅವರು ಪ್ರದರ್ಶಿಸುತ್ತಿದ್ದರು.

2. ಈ ಹೊತ್ತಿನ ರಾಜಕಾರಣದಲ್ಲಿ ಸಂಪೂರ್ಣವಾಗಿ ಕಾಣೆಯಾಗಿದ್ದ ಘನತೆ ಮತ್ತು ನೈತಿಕತೆಯ ಎಳೆಗಳು ಅಲ್ಲಲ್ಲಿ ಅವರ ವರ್ತನೆಯಲ್ಲಿ ಕಂಡು ಬರುತ್ತಿದ್ದವು.

ರಾಹುಲ್ 2004ರಲ್ಲಿ ತನ್ನ ರಾಜಕೀಯ ಜೀವನ ಪ್ರಾರಂಭಿಸಿದಾಗ, ಅವನನ್ನು ಕಂಡು ಎಲ್ಲರೂ ನಕಾರಾತ್ಮಕವಾಗಿ ಗೋಣು ಆಡಿಸಿದವರೇ ಆದರೆ. ನಿಧಾನವಾಗಿ ರಾಹುಲ್ ಪಕ್ಷದ ಒಬ್ಬ ಪ್ರಾಮಾಣಿಕ ಕಾರ್ಯಕರ್ತನಾಗಿ ರೂಪುಗೊಳ್ಳಲಾರಂಭಿಸಿದ. ಆತನ ಅಪ್ರಬುದ್ಧ ಮಾತುಗಳ ಹಿಂದೆಯೂ, ತಪ್ಪನ್ನು ತಿದ್ದಿಕೊಂಡು ಹೋಗುವ ಗುಣ, ಉದ್ಧಟವಾಗಿ ವರ್ತಿಸದ ನಮ್ರತೆ, ತನಗೆ ದಕ್ಕಿದ ಅಧಿಕೃತ ವಾರಸುದಾರಿಕೆಯಿಂದ ಪಕ್ಷದ ಹಿರಿಯರ ಮೇಲೆ ಸವಾರಿ ಮಾಡದ ಸಭ್ಯತೆ–ಎಲ್ಲವೂ ಭಾರತೀಯ ಮನಸ್ಸುಗಳ ಮೇಲೆ ಪ್ರಭಾವ ಬೀರ ತೊಡಗಿದವು. ರಾಹುಲ್‌ನನ್ನು ಕಾದು ನೋಡುವ ಮಟ್ಟಕ್ಕೆ ಭಾರತೀಯರು ಬರಲಾರಂಭಿಸಿದರು. ಇದರ ಜೊತೆಗೆ, ಅವರಪ್ಪನಂತೆಯೇ Mr.clean ಎನ್ನುವ 'ಇಮೇಜ್' ಕೂಡ ಕಾಂಗ್ರೆಸ್‌ನ ಪರವಾಗಿ ಕೆಲಸ ಮಾಡಲಾರಂಭಿಸಿದವು.

ರಾಹುಲ್‌ನ ಈ ಚಿತ್ರದ ಜೊತೆಗೆ, ಪ್ರಮೋದ್ ಮಹಾಜನ್‌ನ ಮಗ ರಾಹುಲ್ ಮಹಾಜನ್‌ನ ಚಿತ್ರವನ್ನು ಇಟ್ಟು ನೋಡಿದಾಗ ವ್ಯತ್ಯಾಸಗೊತ್ತಾಗುತ್ತದೆ. ರಾಹುಲ್‌ಗೆ ಅರ್ಹತೆ ಕಡಿಮೆ ಇದ್ದರೂ, ಅಧಃಪತನಕ್ಕಿಳಿದ ಅನೈತಿಕತೆ ಇರಲಿಲ್ಲ. ರಾಹುಲ್ ಒಬ್ಬ ಅರ್ಹ ವಾರಸುದಾರನಾಗುವುದಕ್ಕೆ ಭಾರತೀಯರಿಗೆ ಇಷ್ಟು ಸಾಕಿತ್ತು.

ರಾಹುಲ್‌ಗಿಂತ ವರ್ಚಸ್ವಿಯಾದ ಪ್ರಿಯಾಂಕಳ ನಡತೆ, ಭಾರತೀಯರಲ್ಲಿ ಅಪಾರವಾದ ಮೆಚ್ಚುಗೆಯನ್ನು ಗಳಿಸಲಾರಂಭಿಸಿತ್ತು. ಒಂದು ಕಡೆ ವಿವಾಹಿತಳಾಗಿ, ಗೌರವಾನ್ವಿತಳಾಗಿ ಸಂಸಾರ ಮಾಡಿಕೊಂಡು, ತವರು ಮನೆಯಲ್ಲಿ ಬಿಕ್ಕಟ್ಟು ಉಂಟಾದಾಗಲೆಲ್ಲಾ ಅವರ ನೆರವಿಗೆ ಬರುವ –ಎಂದರೆ ಕಷ್ಟಕ್ಕೆ ಒದಗುವ, ಆದರೆ ಆಸ್ತಿ ಅಧಿಕಾರಕ್ಕೆ ಆಸೆಪಡೆದ 'ಮನೆಯ ಮಗಳ' ಚಿತ್ರಕ್ಕೆ ಪ್ರಿಯಾಂಕ ಹೆಚ್ಚು ಹತ್ತಿರವಾದಳು. ಜೊತೆಗೆ, ತನ್ನ ತಂದೆಯ ಹಂತಕಿಯಾದ ನಳಿನಿಯನ್ನು ಆಕೆ ಭೇಟಿ ಮಾಡಿ, ಅವಳನ್ನು ಕ್ಷಮಿಸಿ ಮಾನವೀಯತೆಯನ್ನು ಮೆರೆದದ್ದನ್ನು ಭಾರತೀಯರು ಮರೆಯಲಾರರು. ಭಾರತೀಯರಿಗೆ 'ಕ್ಷಮತೆ' ಒಂದು ದೊಡ್ಡ ಮೌಲ್ಯ; ಹಾಗೂ ಈ ಘಟನೆಯನ್ನು ಆಕೆ

ಇವರ ಮನೆ ಒಡೆದ ಮನೆ ಆಗಿರಲಿಲ್ಲ. ಇವರ ನಡುವೆ ಪೈಪೋಟಿ, ಭಿನ್ನಾಭಿಪ್ರಾಯಗಳಿರಲಿಲ್ಲ. ಬಹಳ ಮುಖ್ಯವಾದ ಸಾರ್ವಜನಿಕ ಮತ್ತು ಕೌಟುಂಬಿಕ ಕಾರ್ಯಕ್ರಮಗಳಲ್ಲಿ ಒಟ್ಟೊಟ್ಟಿಗೆ ಕಾಣಿಸಿಕೊಳ್ಳುತ್ತಿದ್ದರು. ಮಾಧ್ಯಮಗಳಲ್ಲಿ ಇಂಥ ಚಿತ್ರ ಗಳು ಅದೆಷ್ಟು ಬಂದು ಹೋಗಿವೆಯೋ? ಇದೆಲ್ಲದರಿಂದಾಗಿ, ಭಾರತೀಯರಿಗೆ, ಈ ಪಕ್ಷಕ್ಕಾಗಿ, ರಾಷ್ಟ್ರಕ್ಕಾಗಿ ತಮ್ಮ ಸ್ವಾರ್ಥ ಬಿಟ್ಟು ಏನನ್ನಾದರೂ ಮಾಡಲು ಸಾಧ್ಯವಿರುವ ಒಂದು ಕುಟುಂಬವಾಗಿ ಇದು ಕಾಣಲಾರಂಭಿಸಿತು.

ಎಂದೂ ಜಗಜ್ಜಾಹೀರು ಮಾಡಲಿಲ್ಲ. ಪ್ರಚಾರ ಪ್ರಿಯತೆಯಿಂದ ದೂರ ಉಳಿಯುವುದು ಕೂಡ ಭಾರತೀಯರಿಗೆ ಒಂದು ದೊಡ್ಡ ಗುಣ. ಪ್ರಿಯಾಂಕ ಪದೇ ಪದೇ, "ಈ ರಾಜಕೀಯ ನಮ್ಮ ಅಪ್ಪನನ್ನು ಕೊಂದಿದೆ, ನಮ್ಮನ್ನು ಅನಾಥರನ್ನಾಗಿ ಮಾಡಿದೆ, ನಮ್ಮ ಬಾಲ್ಯವನ್ನು ಕಸಿದುಕೊಂಡಿದೆ. ನಾವು ಎಲ್ಲರಂತೆ ಸಹಜವಾಗಿ ಬದುಕುವುದಕ್ಕೆ ಸಾದ್ಯವಿಲ್ಲದ



ಸ್ಥಿತಿಯನ್ನು ತಂದಿಟ್ಟಿದೆ. ಆದರೂ, ಈ ದೇಶಕ್ಕಾಗಿ ಕೆಲವು ಮೌಲ್ಯಗಳ ಜೊತೆ ನಾವು ಹೊಂದಾಣಿಕೆ ಮಾಡಿಕೊಳ್ಳುವುದಿಲ್ಲ'-ಎನ್ನುವ ಮಾತುಗಳು ನಿಸ್ಸಂದೇಹವಾಗಿ ಭಾರತೀಯ ಮನಸ್ಸಿನ ಮೇಲೆ ತೀವ್ರವಾದ ಪ್ರಭಾವವನ್ನು ಉಂಟುಮಾಡಿದವು.

ಇದೆಲ್ಲದರ ಜೊತೆಗೆ ಮೂರೂ ಜನ ತಮ್ಮ ಮಾತು ಮತ್ತು ಕ್ರಿಯೆಗಳಲ್ಲಿ ಪರಧರ್ಮ ಸಹಿಷ್ಣುತೆಯನ್ನು ಎತ್ತಿಹಿಡಿದರು. 'Hote politics' ನಿಂದ ತಾವು ತುಂಬಾ ದೂರ ಎನ್ನುವುದನ್ನು ಸಾಬೀತು ಪಡಿಸಲಾರಂಭಿಸಿದರು.

ಇವರ ಮನೆ ಒಡೆದ ಮನೆ ಆಗಿರಲಿಲ್ಲ. ಇವರ ನಡುವೆ ಪೈಪೋಟಿ, ಭಿನ್ನಾಭಿಪ್ರಾಯಗಳಿರಲಿಲ್ಲ. ಬಹಳ ಮುಖ್ಯವಾದ ಸಾರ್ವಜನಿಕ ಮತ್ತು ಕೌಟುಂಬಿಕ ಕಾರ್ಯಕ್ರಮಗಳಲ್ಲಿ ಒಟ್ಟೊಟ್ಟಿಗೆ ಕಾಣಿಸಿಕೊಳ್ಳುತ್ತಿದ್ದರು. ಮಾಧ್ಯಮಗಳಲ್ಲಿ ಇಂಥ ಚಿತ್ರಗಳು ಅದೆಷ್ಟು ಬಂದು ಹೋಗಿವೆಯೋ...? ಸಾಲದ್ದಕ್ಕೆ ಸೋನಿಯಾಳ ಅಳಿಯ ರಾಬರ್ಟ್ ವಾಡ್ರಾ ಕೂಡ ತಲೆ ಪ್ರತಿಷ್ಠೆಯನ್ನು ಮಾಡುತ್ತಿರಲಿಲ್ಲ. ಇದೆಲ್ಲದರಿಂದಾಗಿ, ಭಾರತೀಯರಿಗೆ, ಈ ಪಕ್ಷಕ್ಕಾಗಿ, ರಾಷ್ಟ್ರಕ್ಕಾಗಿ ತಮ್ಮ ಸ್ವಾರ್ಥ ಬಿಟ್ಟು ಏನನ್ನಾದರೂ ಮಾಡಲು ಸಾಧ್ಯವಿರುವ ಒಂದು ಕುಟುಂಬವಾಗಿ ಇದು ಕಾಣಲಾರಂಭಿಸಿತು. ಈ ಹೊತ್ತಿನ ರಾಜಕೀಯ ಸಂಕಥನಗಳಲ್ಲಿ ಮಾಯವಾಗಿರುವ ಸಣ್ಣ ಸಣ್ಣ ಮಾನವೀಯ, ಮೌಲ್ಯಾತ್ಮಕತೆಗಳನ್ನು ಇವರು ಬಿಂಬಿಸುತ್ತಿದ್ದರು.

ಇದಕ್ಕೆ ಇಂಬು ಕೊಡುವಂತೆ, ಇವರ ನೆಚ್ಚಿನ ಭಂಟ, ನಮ್ಮ ದೇಶದ ಪ್ರಧಾನಿ ಮನಮೋಹನ್ ಸಿಂಗ್ ಕೂಡ, ತಮ್ಮ ಸಜ್ಜನಿಕೆ, ಸರಳತೆಯಿಂದ 'ಸಹ್ಯ' ವ್ಯಕ್ತಿಯಾಗಿಯೇ ವ್ಯಕ್ತವಾದರು. ಅವರೇನೂ ಕೆಲಸ ಮಾಡದಿದ್ದರೂ ಪರವಾಗಿಲ್ಲ, ಆದರೆ ರಂಪ ಮಾಡದೆ ಇದ್ದುದ್ದೇ ಗುಣವಾಗಲಾರಂಭಿಸಿತು.

ಗಾಂಧಿ ಕುಟುಂಬದ ಬಗ್ಗೆ ನಾನು ಮೆಚ್ಚುಗೆಯ ಮಾತುಗಳನ್ನಾಡುತ್ತಿಲ್ಲ. ಬದಲಿಗೆ ಭಾರತೀಯ ಸಾಂಸ್ಕೃತಿಕ ಮನಃಸ್ಥಿತಿಯಲ್ಲಿ ಇದು ಯಾವುದಕ್ಕೆ ರೂಪಾತ್ಮಕವಾಗಿ ನಿಂತಿದೆ ಎಂಬುದನ್ನಷ್ಟೇ ನಾನಿಲ್ಲಿ ಹೇಳುತ್ತಿದ್ದೇನೆ. ನಾನು ಕುಟುಂಬ ರಾಜಕಾರಣದ ಪರವಾಗಿದ್ದೇನೆಂದು ಅರ್ಥ ಮಾಡಿಕೊಳ್ಳುವ ಅಗತ್ಯವೂ ಇಲ್ಲ.

ಪ್ರಧಾನವಾದ ಈ ಅಂಶದ ಜೊತೆಗೆ, ಕೆಲಸ ಮಾಡಿದ ಮತ್ತೊಂದು ನಿರ್ಣಾಯಕವಾದ ಅಂಶ, ಬಿಜೆಪಿಯ ಹಿಂದುತ್ವದ ಅಜೆಂಡಾ.

ಬಿಜೆಪಿಯಂಥ ಮನೆ, ಮನಸ್ಸು, ಸಮಾಜಗಳನ್ನು ಜಾತಿ, ಧರ್ಮ, ಲಿಂಗದ ಆಧಾರದ ಮೇಲೆ ಅಮಾನವೀಯವಾಗಿ ಕೊಚ್ಚಿ ಹಾಕುವಂಥ ಶತ್ರು ಎದುರಿಗೆ ಇದ್ದಾಗ, ಕಾಂಗ್ರೆಸಿಗೆ ಯಾವ ಸಾಧನೆ, ಯಾರ ಮೈತ್ರಿಕೂಟದ ಅಗತ್ಯವೂ ಇರಲಿಲ್ಲ. (ನಿಜವಾಗಲೂ ಕಾಂಗ್ರೆಸ್ ಐದು ವರ್ಷದಲ್ಲಿ ಯಾವ ಸಾಧನೆಯನ್ನೂ ಮಾಡಿಲ್ಲ)urban indiaದ ಮತಗಳೇ ಕಾಂಗ್ರೆಸ್‌ನ ಗೆಲುವಿನ ರೂಪುರೇಷೆಯನ್ನು ರಚಿಸಿದ್ದು ಎಂಬುದನ್ನು ಗಮನಿಸಿದರೆ, ಭಾರತೀಯರು 'ಹಿಂದೂತ್ವ'ದ ವಿರುದ್ಧ ಮತ ಹಾಕಿದ್ದಾರೆ. ಅವರಿಗೆ ರಾಮಮಂದಿರದ ನಿರ್ಮಾಣ ಬೇಡ, ಬದಲಿಗೆ ಭಾರತದ ಹೃದಯ ಮಂದಿರಗಳ ಪುನರ್ ನಿರ್ಮಾಣ ಬೇಕಾಗಿದೆ; ಅವರಿಗೆ ಹೊರಗಿನ ಉಗ್ರಾಮಿಗಳನ್ನು ನಾಶಪಡಿಸುವುದಕ್ಕಿಂತ, ಒಳಗಿನ ಉಗ್ರಾಮಿಗಳನ್ನು ಹತ್ತಿಕ್ಕಬೇಕಾಗಿದೆ; ಅವರಿಗೆ ಒಡೆದು ಬಾಳುವ ನೀತಿ ಬೇಡ, ಒಂದು ಸೌಹಾರ್ದ

(30ನೇ ಪುಟಕ್ಕೆ)

ಆಮೇಲೆ ಹೇಳಲಿಲ್ಲ ಎನ್ನಬೇಡಿ: ಮುಂದಿನ 5 ವರ್ಷಗಳಲ್ಲಿ
ಬಾಣಲೆಯ ಬೆಂಕಿ ಹೆಚ್ಚುತ್ತದೆ!

'ಇಂದಿನ ಜಾಗತಿಕ ಆರ್ಥಿಕ ಬಿಕ್ಕಟ್ಟಿನಿಂದ ಬಂಡವಾಳಶಾಹಿಗಳು ಕಷ್ಟದಲ್ಲಿದ್ದಾರೆ. ಹಾಗಾಗಿ ಅವರಿಗೆ ಸಹಾಯವಾಗುವ ಕ್ರಮಗಳನ್ನು ಹೊಸ ಸರ್ಕಾರ ಕೈಗೊಳ್ಳಬೇಕು. ಉದ್ದಿಮೆದಾರರ ಮೇಲೆ ಹಾಕಲಾಗುವ ತೆರಿಗೆಗಳನ್ನು ಇನ್ನೂ ಕಡಿಮೆ ಮಾಡಬೇಕು. ವಿದೇಶೀ ನೇರ ಬಂಡವಾಳದ ಕುರಿತಂತೆ ಧೈರ್ಯದಿಂದ ತೀರ್ಮಾನ ತೆಗೆದುಕೊಳ್ಳಬೇಕು. ಎಸ್‌ಇಝಡ್‌ಗಳನ್ನು ಹೆಚ್ಚು ಮಾಡಬೇಕು. ಮೊದಲ ಬಜೆಟ್‌ನಲ್ಲೇ ತಾವೇನು ಅಂತ ಹೊಸ ಸರ್ಕಾರ ತೋರಿಸಬೇಕು. ಮೊದಲ ೧೦೦ ದಿನಗಳಲ್ಲಿ ಉದ್ದಿಮೆದಾರರ ಪರ ಏನು ತೀರ್ಮಾನ ತೆಗೆದುಕೊಳ್ಳುತ್ತಾರೆ ಅನ್ನುವುದೇ ಮುಖ್ಯ. ಅಣು ಒಪ್ಪಂದವನ್ನು ಸಂಪೂರ್ಣಗೊಳಿಸಿ ಅಮೆರಿಕದ ಜೊತೆ ಇನ್ನೂ ಹೆಚ್ಚಿನ ರೀತಿಯ ಸಂಬಂಧವನ್ನು ಇಟ್ಟುಕೊಳ್ಳಬೇಕು.' -ಇವು ಉದ್ದಿಮೆದಾರರು ಹೊಸ ಸರ್ಕಾರಕ್ಕೆ ನೀಡಿರುವ ಸಲಹೆ ರೂಪದ ಆದೇಶಗಳು.

ಡಾ. ವಾಸು ಎಚ್.ವಿ

ಈ ದೇಶದ ಪ್ರಗತಿಯನ್ನು, ಜನಸಾಮಾನ್ಯರ ಒಳಿತನ್ನು ಬಯಸುವ ಬಹುತೇಕ ಜನರು ಮೊನ್ನಿನ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯು ಅಧಿಕಾರಕ್ಕೆ ಬರಲಿಲ್ಲ ಎಂದು ನಿಟ್ಟುಸಿರು ಬಿಡುತ್ತಿದ್ದಾರೆ. ಹೌದು ಅದು ಒಳ್ಳೆಯದೇ. ಆದರೆ ಅಷ್ಟೇ ಖಚಿತವಾಗಿ ಹೇಳಬೇಕಾದ ಇನ್ನೊಂದು ಅಂಶವೂ ಇದೆ. ಅದೇನೆಂದರೆ ಮುಂದಿನ ದಿನಗಳು ಈ ದೇಶದ ಜನತೆಗೆ ಕಷ್ಟಕರವಾಗಲಿವೆ. ಅದರ ಎಲ್ಲಾ ಲಕ್ಷಣಗಳು ಆಗಲೇ ಗೋಚರಿಸುತ್ತಿವೆ. ಚುನಾವಣೆಯ ಫಲಿತಾಂಶದ ಸುದ್ದಿ ಮತ್ತು ವಿಶ್ಲೇಷಣೆಗಳನ್ನು ಟಿವಿ ಚಾನೆಲ್‌ಗಳು ಬಿತ್ತರಿಸುತ್ತಿರುವಾಗಲೇ ಅದನ್ನು ಸ್ಪಷ್ಟವಾಗಿ ಕಾಣಬಹುದಿತ್ತು. ಆ ಅಪಾಯ ಏನು ಎಂಬುದನ್ನು ವಾರ್ತಾಭಾರತಿಯ ವಾಚಕರಿಗೆ ತಿಳಿಸದಿದ್ದರೆ ಈಗೇನ್ಮಾಡೋದು ಎಂಬುದನ್ನು ತೀರ್ಮಾನಿಸಲಾಗುವುದಿಲ್ಲ.

ಮೇ 16ರ ಶನಿವಾರ ಲೋಕಸಭಾ ಚುನಾವಣೆಯ ಫಲಿತಾಂಶ ಬಂತು. ಯುಪಿಎ ನಿರಾತಂಕವಾಗಿ ಅಧಿಕಾರ ಹಿಡಿಯುವುದು ಖಚಿತವೆಂದಾಯಿತು. ಮೇ 18ರ ಸೋಮವಾರ ಮುಂಬೈ ಷೇರು ಮಾರುಕಟ್ಟೆಯಲ್ಲಿ ಭರ್ಜರಿ ವ್ಯಾಪಾರ ನಡೆಯಿತು. ಅವತ್ತಿನ ಸೆನ್ಸೆಕ್ಸ್ 12173ನಿಂದ 14272ಕ್ಕೆ ಏರಿತು. ಕೇವಲ 23 ಸೆಕೆಂಡ್‌ನಲ್ಲಿ ಈ ಬೆಳವಣಿಗೆ ಕಂಡಿದೆ. ಅಂದರೆ 'ಷೇರು ಮಾರುಕಟ್ಟೆ ಎಂಬ ದೇಶದ' ಆರ್ಥಿಕತೆ ಆ ಪ್ರಮಾಣದ ಚೇತರಿಕೆ ಕಂಡಿತು ಎಂದರ್ಥ. ಈ ಪ್ರಮಾಣಕ್ಕೆ ಏರಬಹುದು ಎಂಬುದು ಶನಿವಾರದಿಂದಲೇ ಗೊತ್ತಾಗುತ್ತಿತ್ತು.

ವಿವಿಧ ಸುದ್ದಿ ಮತ್ತು ಬಿಸಿನೆಸ್ ಚಾನೆಲ್‌ಗಳಲ್ಲಿ ಆ ಎರಡು ದಿನಗಳು ಹಲವಾರು ಉದ್ದಿಮೆದಾರರು ಮಾತನಾಡಿದರು. 'ಅವರೆಲ್ಲರದ್ದೂ ಒಂದೇ ರಾಗ. ಈಗ ಸ್ಥಿರ ಸರ್ಕಾರ ಬಂದಿದೆ. ಯುಪಿಎ ಇನ್ನು ಮುಂದೆ ನೆಪಗಳನ್ನು ಹೇಳುವಂತಿಲ್ಲ. ಮಾಡಿ ತೋರಿಸಬೇಕು ಅಷ್ಟೇ.' ಬಜಾಜ್ ಕಂಪೆನಿಯ ಅಧ್ಯಕ್ಷ ಮತ್ತು ಸಂಸತ್‌ಸದಸ್ಯ ರಾಹುಲ್ ಬಜಾಜ್, ಇನ್ಫೋಸಿಸ್‌ನ ನಂದನ್ ನಿಲೇಕಣಿ ಮತ್ತು ಮೋಹನ್‌ದಾಸ್ ಪೈ, ಜೆಪಿ ಮೋರ್ಗನ್‌ನ ಜಹಾಂಗೀರ್ ಅಜೀಜ್, ಸುಝುಲಾನ್‌ನ ಸುಮಂತ್ ಸಿನ್ಹಾ, ಟಾಟಾ ಕಂಪೆನಿಯ ಗೋಪಾಲಕೃಷ್ಣನ್, ಸಿಇಆರ್‌ಜಿಯ ಸಲಹೆಗಾರ ಓಂಕಾರ್ ಗೋಸ್ವಾಮಿ ಇತ್ಯಾದಿಗಳು ಈ ಚರ್ಚೆಗಳಲ್ಲಿ ಪಾಲ್ಗೊಂಡಿದ್ದರು. ಸೋಮವಾರದ ಷೇರು ಮಾರುಕಟ್ಟೆ ಈ ರೀತಿಯಲ್ಲಿ ಏರುತ್ತದೆಂದು ಅವರೆಲ್ಲಾ ಭಾನುವಾರವೇ ಹೇಳಿದ್ದರು.

ಇದರ ಜೊತೆಗೆ ಹೊಸ ಸರ್ಕಾರಕ್ಕೆ ಅವರುಗಳು ಹಲವಾರು ಆದೇಶಗಳನ್ನು ನೀಡಿದರು. ಇಂದಿನ ಜಾಗತಿಕ ಆರ್ಥಿಕ ಬಿಕ್ಕಟ್ಟಿನಿಂದ ಬಂಡವಾಳಶಾಹಿಗಳು ಕಷ್ಟದಲ್ಲಿದ್ದಾರೆ. ಹಾಗಾಗಿ ಅವರಿಗೆ ಸಹಾಯವಾಗುವ ಕ್ರಮಗಳನ್ನು ಹೊಸ ಸರ್ಕಾರ ಕೈಗೊಳ್ಳಬೇಕು. ಉದ್ದಿಮೆದಾರರ ಮೇಲೆ ಹಾಕಲಾಗುವ ತೆರಿಗೆಗಳನ್ನು ಇನ್ನೂ ಕಡಿಮೆ ಮಾಡಬೇಕು. ವಿದೇಶೀ ನೇರ ಬಂಡವಾಳದ ಕುರಿತಂತೆ ಧೈರ್ಯದಿಂದ ತೀರ್ಮಾನ ತೆಗೆದುಕೊಳ್ಳಬೇಕು. ಎಸ್‌ಇಝಡ್‌ಗಳನ್ನು ಹೆಚ್ಚು ಮಾಡಬೇಕು. ಮೊದಲ ಬಜೆಟ್‌ನಲ್ಲೇ ತಾವೇನು ಅಂತ ಹೊಸ ಸರ್ಕಾರ ತೋರಿಸಬೇಕು. ಮೊದಲ 100 ದಿನಗಳಲ್ಲಿ ಉದ್ದಿಮೆದಾರರ ಪರ ಏನು ತೀರ್ಮಾನ ತೆಗೆದುಕೊಳ್ಳುತ್ತಾರೆ ಅನ್ನುವುದೇ ಮುಖ್ಯ. ಅಣು ಒಪ್ಪಂದವನ್ನು ಸಂಪೂರ್ಣಗೊಳಿಸಿ ಅಮೆರಿಕದ ಜೊತೆ ಇನ್ನೂ ಹೆಚ್ಚಿನ ರೀತಿಯ ಸಂಬಂಧವನ್ನು ಇಟ್ಟುಕೊಳ್ಳಬೇಕು. ಈ ರೀತಿ ಪುಂಖಾನುಪುಂಖವಾಗಿ ಸಲಹೆ ರೂಪದ ಆದೇಶಗಳು ಹೊರ ಬಂದವು.

ಇವೆಲ್ಲದರ ಅರ್ಥ ಏನು? ಈ ರೀತಿಯ ಆದೇಶಗಳನ್ನು ಕೊಡಲು ಇವರು ಯಾರು? ಇದರಿಂದ ಜನಸಾಮಾನ್ಯರ ಬದುಕಿನ ಮೇಲೆ ಏನು ಪರಿಣಾಮ ಬೀರುತ್ತದೆ? ಈ ವಿಚಾರಗಳನ್ನು ಚರ್ಚಿಸುವ ಮುಂಚೆ ಅಮೆರಿಕದ ಅಧ್ಯಕ್ಷೀಯ ಚುನಾವಣೆಯ ನಂತರ ಅಲ್ಲಿ ತೆಗೆದುಕೊಂಡು ಕ್ರಮಗಳನ್ನು ಸ್ವಲ್ಪ ನೋಡೋಣ. 'ಜಗತ್ತಿನ ಶೋಷಿತರ ಪ್ರತಿನಿಧಿ' ಒಬಾಮಾ ಗೆದ್ದು ಅಧಿಕಾರ ಹಿಡಿದ ನಂತರ ತೆಗೆದುಕೊಂಡ ದೊಡ್ಡ ತೀರ್ಮಾನವೇನೆಂದು ಎಲ್ಲರಿಗೂ ಗೊತ್ತಿದೆ. ಅದು ಅಮೆರಿಕದ ದೊಡ್ಡ ಬಂಡವಾಳಶಾಹಿ ಕಂಪೆನಿಗಳಿಗೆ ಅವರ ಬಿಕ್ಕಟ್ಟಿನಿಂದ ಹೊರಬರಲು ನೀಡಿದ 900 ಬಿಲಿಯನ್ ಡಾಲರ್‌ಗಳ ಅನುದಾನ. ಎರಡು ಕಂತಿನಲ್ಲಿ ಎತ್ತಿಕೊಟ್ಟು ಇಷ್ಟು ದೊಡ್ಡ ಮೊತ್ತದ ಹಣ ಸಾಲ ಸಹ ಅಲ್ಲ. ನೇರವಾಗಿ ಅಮೆರಿಕದ ತಿಜೋರಿಯಿಂದ ದೊಡ್ಡ ದೊಡ್ಡ ಬಂಡವಾಳಶಾಹಿ ಕಂಪೆನಿಗಳು ಮಾಡಿಕೊಂಡಿದ್ದ ಸಾಲ ತೀರಿಸಲು ನೀಡಿದ ಹಣ. ಅಮೆರಿಕಕ್ಕೇನೋ ಜಗತ್ತಿನ ವಿವಿಧ ದೇಶಗಳನ್ನು ಲೂಟಿ ಮಾಡಿಟ್ಟಿದ್ದ ಹಣವಿತ್ತು; ಕೊಟ್ಟಿತು. ಭಾರತ ಸರ್ಕಾರ ಎಲ್ಲಿಂದ ಹಣ ತಂದು ಇವರ ಬಾಯಿಗಿಡುತ್ತದೆ?

ವಾಸ್ತವದಲ್ಲಿ ಭಾರತದ ಬಂಡವಾಳಶಾಹಿಗಳಿಗೆ ಅಮೆರಿಕದ ಕಂಪೆನಿಗಳಿಗೆ ಆದಷ್ಟು ನಷ್ಟ ಆಗಿಲ್ಲ. (ಇಲ್ಲಿ ನಷ್ಟ ಎನ್ನುವುದನ್ನು ಲಾಭದ ದರ ಕಡಿಮೆಯಾಗಿದ್ದು ಎಂದು ಅರ್ಥ ಮಾಡಿಕೊಳ್ಳಬೇಕೇ ಹೊರತು ಮನೆ ಮಠ ಮಾರಿಕೊಂಡು ಊಟ ಮಾಡಬೇಕಾದ ಪರಿಸ್ಥಿತಿ ಬಂದಿದೆ ಎಂದಲ್ಲ.) 'ಜಾಗತಿಕ ಆರ್ಥಿಕ ಬಿಕ್ಕಟ್ಟು' ಎಂದು ಕರೆಯಲಾಗುತ್ತಿರುವ ಈ ಸಮಸ್ಯೆ ಬಂಡವಾಳಶಾಹಿ ವ್ಯವಸ್ಥೆಯ ಆಂತರಿಕ ಗುಣದಿಂದಾಗಿ ಉಂಟಾದ ಸಮಸ್ಯೆಯೇ ಹೊರತು, ಅದಕ್ಕೆ ಇನ್ನಾರೂ ಕಾರಣರಲ್ಲ. ಅಥವಾ ಯಾವುದಾದರೂ ಪ್ರಾಕೃತಿಕ ವಿಕೋಪವೋ, ಮನುಷ್ಯ ಪ್ರಯತ್ನವನ್ನು ಮೀರಿದ ದುಷ್ಟ ಶಕ್ತಿ ಉಂಟು ಮಾಡಿದ ಚೇಷ್ಟೆಯಿಂದ ಉಂಟಾದುದೋ ಅಲ್ಲ. ಬಂಡವಾಳಶಾಹಿಗಳು ತಮ್ಮಲ್ಲಿ ವಿಪರೀತವಾಗಿ ಶೇಖರವಾದ ಹಣವನ್ನು, ಮತ್ತಷ್ಟು ಲೂಟಿಗಾಗಿ ಎಲ್ಲಿ ಹೂಡುವುದು ಎಂದು ಗೊತ್ತಾಗದೆ ನಡೆಸಿದ ಜೂಜಿನಿಂದ ಉಂಟಾದ ಸಮಸ್ಯೆ ಅಷ್ಟೇ. ಅದಕ್ಕಾಗಿ ಒಬಾಮಾ ಅಷ್ಟೊಂದು ತಲೆ ಕೆಡಿಸಿಕೊಂಡು ಅಷ್ಟೊಂದು ಡಾಲರ್‌ಗಳನ್ನು ಸುರಿದದ್ದು ಏಕೆ?

ಏಕೆಂದರೆ ಅಮೆರಿಕಾ, ಭಾರತ ಮುಂತಾದ ದೇಶಗಳ ಸರ್ಕಾರಗಳು ಕಾಪಾಡುತ್ತಿರುವುದು ಇಂತಹ ಬಂಡವಾಳಶಾಹಿ ವ್ಯವಸ್ಥೆಯನ್ನೇ ಆಗಿದೆ. ಬಂಡವಾಳಶಾಹಿಗಳ ಹಿತಾಸಕ್ತಿಯೇ ಆಳುವವರ ಹಿತಾಸಕ್ತಿಯಾಗಿದೆ. ಅಧಿಕಾರಕ್ಕೆ ಬರುವ ಮುಂಚೆ ಮತದಾರ ಸಮೂಹವನ್ನು ಓಲೈಸಿಕೊಳ್ಳಲು ಬಣ್ಣ ಬಣ್ಣದ ಮಾತುಗಳನ್ನು ಎಷ್ಟೇ ಆಡಿದರೂ ಅಂತಿಮವಾಗಿ ಸರ್ಕಾರದ ನೀತಿ-ನಿರೂಪಣೆಗಳು ಈ ದೊಡ್ಡ ದೊಡ್ಡ ಬಂಡವಾಳಶಾಹಿಗಳ ಪರವಾಗಿಯೇ ಇರುತ್ತದೆ. ಒಬಾಮಾ ಮಾಡಿದ್ದೂ ಅದನ್ನೇ. ಮನಮೋಹನ ಸಿಂಗರೂ ಮಾಡುವುದೂ ಅದನ್ನೇ.

ಮನಮೋಹನ ಸಿಂಗ್ ಅದನ್ನೇ ಮಾಡುತ್ತಾರೆ ಎನ್ನುವ ಸುಳಿವು ಸಿಕ್ಕಿದ್ದರಿಂದಲೇ ಚುನಾವಣೆ ಫಲಿತಾಂಶದ ಬಗ್ಗೆ ಈ ಉದ್ದಿಮೆದಾರರು ಅಷ್ಟೊಂದು ಥ್ರಿಲ್ ಆಗಿದ್ದಾರೆ. ಎಫ್‌ಐಸಿಸಿಐ (ಭಾರತದ ದೊಡ್ಡ ಉದ್ದಿಮೆದಾರರ ಕೂಟ) ಅಧ್ಯಕ್ಷ ಫಲಿತಾಂಶಕ್ಕೆ ಮುಂಚೆಯೇ, ಹೊಸ

ಸರ್ಕಾರ ತಮಗೆ ಹೊಸ ಸೌಲಭ್ಯಗಳನ್ನು ತಂದುಕೊಡುತ್ತದೆ ಎಂದು ಘೋಷಿಸಿದ್ದ. ಏಕೆಂದರೆ ಈ ಹಿಂದಿನ ಸರ್ಕಾರ ಸಂಪೂರ್ಣ ಸ್ವಂತ ಬಹುಮತದೊಂದಿಗೆ ಆಡಳಿತ ನಡೆಸುತ್ತಿರಲಿಲ್ಲ; ಮೇಲಾಗಿ ಎಡ ಪಕ್ಷಗಳ ಬೆಂಬಲದ ಮೇಲೆ ನಿಂತಿದ್ದರಿಂದ ಹಲವಾರು ನೀತಿಗಳು ಸಲೀಸಾಗಿ ಮುಂದಕ್ಕೆ ಹೋಗುತ್ತಿರಲಿಲ್ಲ. ಇದು ಅವರೆಲ್ಲರಿಗೆ ಕಿರಿಕಿರಿ ಉಂಟು ಮಾಡುತ್ತಿತ್ತು. ಎಷ್ಟರ ಮಟ್ಟಿಗಿನ ಕಿರಿಕಿರಿ ಎಂದರೆ, ಚುನಾವಣೋತ್ತರ ಚರ್ಚೆಗಳಲ್ಲಿ ಈ ಎಲ್ಲಾ ಬಂಡವಾಳಶಾಹಿಗಳು 'ಇನ್ನು ಮುಂದೆ ಎಡ ಪಕ್ಷಗಳ ಹೊರೆ (left baggage)ಇರುವುದಿಲ್ಲ ಎನ್ನುವುದು ಸಂತಸದ ಸಂಗತಿ' ಎಂದು ಹೇಳಿದರು. ಅಣು ಒಪ್ಪಂದಕ್ಕೆ ಎಡ ಪಕ್ಷಗಳ ವಿರೋಧ ಎಲ್ಲರಿಗೂ ಗೊತ್ತಿದ್ದದ್ದೇ. ಇದಲ್ಲದೆ ಪಿಂಚಣಿ ಸುಧಾರಣೆಗಳ ಕಾಯ್ದೆ, ವಿಮಾ ಕ್ಷೇತ್ರದ ಸಂಪೂರ್ಣ ಖಾಸಗೀಕರಣದ ಕಾಯ್ದೆ, ಕಾರ್ಮಿಕ ಕಾನೂನುಗಳನ್ನು ಕಾರ್ಮಿಕ ವಿರೋಧಿಯಾಗಿ ಬದಲಾಯಿಸುವ ಪ್ರಸ್ತಾಪ ಇವೆಲ್ಲಕ್ಕೂ ಅವರ ವಿರೋಧ ಇತ್ತು. ಹಾಗಾಗಿಯೇ ಈ ಕಾನೂನುಗಳು ಪಾಸಾಗಿ ಮುಂದೆ ಹೋಗಲು ಆಗಿರಲಿಲ್ಲ. ಈಗ ಎಡ ಪಕ್ಷಗಳು ಕೆಟ್ಟದಾಗಿ ಸೋತಿರುವುದರಿಂದ, ಅವರ ಅಗತ್ಯ ಹೊಸ ಸರ್ಕಾರಕ್ಕೆ ಇಲ್ಲವಾಗಿದ್ದರಿಂದ ಅವೆಲ್ಲವನ್ನೂ ಸುಗಮವಾಗಿ ಜಾರಿ ಮಾಡಬಹುದು.

ಹತ್ತು ಹಲವು ವಿಧದ ಪ್ರಾದೇಶಿಕ ಪಕ್ಷಗಳ ಬೆಂಬಲದೊಂದಿಗೆ ಅಧಿಕಾರ ನಡೆಸುವ ಸರ್ಕಾರವು ಹಸಿ ಹಸಿ ಜನವಿರೋಧಿ ಕ್ರಮಗಳಿಗೆ ಮುಂದಾಗುವುದು ಸ್ವಲ್ಪ ಕಷ್ಟ. ಈ ಪ್ರಾದೇಶಿಕ ಪಕ್ಷಗಳು ಜನಪರ ಎಂದೋ, ಪ್ರಾಮಾಣಿಕವಾಗಿ ಅವನ್ನು ವಿರೋಧಿಸುತ್ತವೆ ಎಂದೋ ಇದರ ಅರ್ಥವಲ್ಲ. ಆದರೆ ನಿರಂತರವಾಗಿ ಅಧಿಕಾರದ ಚೌಕಾಸಿ ನಡೆಸುತ್ತಾ ಸಾಗುವ ಈ ಪಕ್ಷಗಳು ಜನರಲ್ಲಿ ಉಂಟಾಗುವ ಅಸಮಾಧಾನವನ್ನು ಬಳಸಿಕೊಂಡು, ಹೆಚ್ಚಿನ ಚೌಕಾಸಿಗಿಳಿಯುತ್ತವೆ. ಜನವಿರೋಧಿ ಮತ್ತು ಬಂಡವಾಳಶಾಹಿ ಪರ ಕ್ರಮಗಳ ವಿರುದ್ಧ ಬರುವ ಪ್ರತಿಭಟನೆಗಳನ್ನು ನಿರ್ದಾಕ್ಷಿಣ್ಯವಾಗಿ ಹತ್ತಿಕ್ಕುವ ಕೆಲಸ ಮಾಡಬೇಕೆಂದರೂ ಸರ್ಕಾರ ಸುಭದ್ರವಾಗಿರಬೇಕು. ಸುಭದ್ರ ಸರ್ಕಾರವೆಂದರೆ ಬಂಡವಾಳಶಾಹಿಗಳಿಗೆ ಎಲ್ಲಿಲ್ಲದ ಉತ್ಸಾಹ. ಅದೇ ಉತ್ಸಾಹವೇ ಈಗ ಈ ದೇಶದ ಉದ್ದಿಮೆದಾರರಲ್ಲಿ ಕಾಣುತ್ತಿರುವುದು. ಹಾಗಾಗಿಯೇ ಏರ್‌ಟೆಲ್‌ನ ಚೇರ್ಮನ್ ಸುನಿಲ್ ಭಾರ್ತಿ ಮಿತ್ತಲ್ 'ಕಡೆಗೂ ಭಾರತ ಬಹಳ ಹರ್ಷೋಲ್ಲಾಸ ಪಡುವ ಕಾಲ ಬಂದಿತು' ಎಂದು ಹೇಳಿದ್ದಾನೆ.

ಇವರುಗಳು ಬಯಸುತ್ತಿರುವ ಕ್ರಮಗಳು ಯಾವುವು ಎಂಬುದನ್ನು ಅವರುಗಳೇ ಸ್ಪಷ್ಟವಾಗಿ ಹೇಳಿದ್ದಾರೆ. ಮೇಲೆ ಕೆಲವು ಕ್ರಮಗಳನ್ನು ಈಗಾಗಲೇ ಹೇಳಲಾಗಿದೆ. ಅವುಗಳ ಜೊತೆಗೆ–ಅಮೆರಿಕ ಸರ್ಕಾರ ತನ್ನ ದೇಶದ ಕಂಪೆನಿಗಳಿಗೆ ಕೊಟ್ಟಷ್ಟು ನೇರವಾಗಿ ಅಲ್ಲದಿದ್ದರೂ (ಅಷ್ಟು ನೇರವಾಗಿ ಇಲ್ಲೂ ಸತ್ಯಂ ಕಂಪೆನಿಗೆ ನೀಡಲಾಯಿತು), ಪರೋಕ್ಷವಾಗಿ ಇಲ್ಲಿನ ಕಂಪೆನಿಗಳಿಗೆ ಅನುದಾನ. ದೊಡ್ಡ ಬಂಡವಾಳಿಗರಿಗೆ ತೆರಿಗೆ ಕಡಿತ, ಉದ್ದಿಮೆದಾರರಿಗೆ ಅದರಲ್ಲೂ ರಿಯಲ್ ಎಸ್ಟೇಟ್ ವಲಯಕ್ಕೆ ಕೊಡುತ್ತಿದ್ದ ಸಾಲದ ಮೇಲಿನ ಬಡ್ಡಿ ಇಳಿತ, ಶಿಕ್ಷಣ ಕ್ಷೇತ್ರದಲ್ಲಿ ಸುಧಾರಣೆಗಳನ್ನು (ಸುಧಾರಣೆ ಎಂಬ ಪದ ಬಂದಾಗಲೆಲ್ಲ ಅದನ್ನು ಖಾಸಗೀಕರಣ, ಸರ್ಕಾರದ ಕಲ್ಯಾಣ ಕರ್ತವ್ಯವನ್ನು ಇಲ್ಲವಾಗಿಸಿ ಬಂಡವಾಳಶಾಹಿಗಳ ಕೈಗೊಪ್ಪಿಸುವುದು ಎಂದರ್ಥ ಮಾಡಿಕೊಳ್ಳಬೇಕು) ತರುವುದು, ಪಿಂಚಣಿ ಮತ್ತು ವಿಮಾ ವಲಯದ ಸಂಪೂರ್ಣ ಖಾಸಗೀಕರಣ, ನೇರ ವಿದೇಶೀ

ಹತ್ತು ಹಲವು ವಿಧದ ಪ್ರಾದೇಶಿಕ ಪಕ್ಷಗಳ ಬೆಂಬಲದೊಂದಿಗೆ ಅಧಿಕಾರ ನಡೆಸುವ ಸರ್ಕಾರವು ಹಸಿ ಹಸಿ ಜನವಿರೋಧಿ ಕ್ರಮಗಳಿಗೆ ಮುಂದಾಗುವುದು ಸ್ವಲ್ಪ ಕಷ್ಟ. ಈ ಪ್ರಾದೇಶಿಕ ಪಕ್ಷಗಳು ಜನಪರ ಎಂದೋ, ಪ್ರಾಮಾಣಿಕವಾಗಿ ಅವನ್ನು ವಿರೋಧಿಸುತ್ತವೆ ಎಂದೋ ಇದರ ಅರ್ಥವಲ್ಲ. ಆದರೆ ನಿರಂತರವಾಗಿ ಅಧಿಕಾರದ ಚೌಕಾಸಿ ನಡೆಸುತ್ತಾ ಸಾಗುವ ಈ ಪಕ್ಷಗಳು ಜನರಲ್ಲಿ ಉಂಟಾಗುವ ಅಸಮಾಧಾನವನ್ನು ಬಳಸಿಕೊಂಡು, ಹೆಚ್ಚಿನ ಚೌಕಾಸಿಗಿಳಿಯುತ್ತವೆ. ಜನವಿರೋಧಿ ಮತ್ತು ಬಂಡವಾಳಶಾಹಿ ಪರ ಕ್ರಮಗಳ ವಿರುದ್ಧ ಬರುವ ಪ್ರತಿಭಟನೆಗಳನ್ನು ನಿರ್ದಾಕ್ಷಿಣ್ಯವಾಗಿ ಹತ್ತಿಕ್ಕುವ ಕೆಲಸ ಮಾಡಬೇಕೆಂದರೂ ಸರ್ಕಾರ ಸುಭದ್ರವಾಗಿರಬೇಕು. ಸುಭದ್ರ ಸರ್ಕಾರವೆಂದರೆ ಬಂಡವಾಳಶಾಹಿಗಳಿಗೆ ಎಲ್ಲಿಲ್ಲದ ಉತ್ಸಾಹ. ಅದೇ ಉತ್ಸಾಹವೇ ಈಗ ಈ ದೇಶದ ಉದ್ದಿಮೆದಾರರಲ್ಲಿ ಕಾಣುತ್ತಿರುವುದು. ಹಾಗಾಗಿಯೇ ಏರ್‌ಟೆಲ್‌ನ ಚೇರ್ಮನ್ ಸುನಿಲ್ ಭಾರ್ತಿ ಮಿತ್ತಲ್ 'ಕಡೆಗೂ ಭಾರತ ಬಹಳ ಹರ್ಷೋಲ್ಲಾಸ ಪಡುವ ಕಾಲ ಬಂದಿತು' ಎಂದು ಹೇಳಿದ್ದಾನೆ.

ಬಂಡವಾಳ ಮತ್ತು ಸಾರ್ವಜನಿಕ ವಲಯದ ಹೂಡಿಕೆ ಹಿಂಪಡೆಯುವುದು ಇತ್ಯಾದಿ ಇತ್ಯಾದಿ. ಇವೆಲ್ಲದರ ಅರ್ಥ ದೇಶದ ಅರ್ಥ ವ್ಯವಸ್ಥೆಯನ್ನು ಮತ್ತಷ್ಟು ಸಾಮಾನ್ಯ ಜನರ ವಿರುದ್ಧ ತಿರುಗಿಸುವುದು ಎಂದೇ ಆಗಿದೆ. ಏಕೆಂದರೆ ಇವೆಲ್ಲವೂ ಸರ್ಕಾರದ ಬೊಕ್ಕಸಕ್ಕೆ ಬಂಡವಾಳದಾರರಿಂದ ಬರಬೇಕಾದ ತೆರಿಗೆಯನ್ನು ಕಡಿಮೆ ಮಾಡುತ್ತದೆ. ಅದರ ನೇರ ಪರಿಣಾಮ ಎಂದರೆ ಜನಪರ ಕಲ್ಯಾಣ ಕಾರ್ಯಕ್ರಮಗಳಲ್ಲಿ ಕಡಿತ ಉಂಟಾಗುತ್ತದೆ ಹಾಗೂ ಸಾಮಾನ್ಯ ಜನರ ಮೇಲೆ ತೆರಿಗೆ ವಿಪರೀತ ಹೆಚ್ಚಾಗುತ್ತದೆ.

ವ್ಯಾಟ್ ಮೂಲಕ ಈಗಾಗಲೇ ಜನಸಾಮಾನ್ಯರ ಮೇಲೆ ಹಾಕಲಾಗುವ ತೆರಿಗೆಯ ವ್ಯಾಪ್ತಿಯನ್ನು ಹಿಗ್ಗಿಸಲಾಗಿದೆ. ಈಗ ಸರಕು ಮತ್ತು ಸೇವೆಯ ಮೇಲಿನ ತೆರಿಗೆ ವಿಧಾನ (GST-goods and service tax) ಎಂಬ ಇನ್ನೊಂದು ಪದ್ಧತಿಯನ್ನು ಜಾರಿಗೆ ತರುವ ಪ್ರಸ್ತಾಪವಿದೆ. ಇದರಿಂದ ಜನಸಾಮಾನ್ಯರು ಬಳಸುವ ಎಲ್ಲ ಸರಕು ಮತ್ತು ಸೇವೆಗಳ ಮೇಲೆ ತೆರಿಗೆ ಮತ್ತಷ್ಟು ಹೆಚ್ಚಲಿದೆ. ಟೈಮ್ಸ್ ನೌ, ಸಿಎನ್‌ಎನ್–ಐಬಿಎನ್ ಮತು ಎನ್‌ಡಿಟಿವಿ–ಪ್ರಾಫಿಟ್ ಚಾನೆಲ್‌ಗಳಲ್ಲಿ ನಡೆದ ಎಲ್ಲಾ ಚರ್ಚೆಗಳಲ್ಲೂ ಈ ಜಿಎಸ್‌ಟಿಯನ್ನು ಜಾರಿಗೆ ತರಬೇಕೆಂದು ಒಕ್ಕೊರಲಿನಿಂದ ಹೇಳಿದರು. ಅಲ್ಲದೆ ರೈತರ ಸಾಲ ಮನ್ನಾ ಹಾಗೂ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದರು. 'ರೈತರಿಗೆ ಸಾಲ ಮನ್ನಾ ಮಾಡಬಾರದು ಎಂದು ನಾವೇನೂ ಹೇಳುವುದಿಲ್ಲ, ಆದರೆ ಅದನ್ನು ಹಾಗೆಯೇ ಮುಂದುವರೆಸಬಾರದು' ಎಂದು ರಾಹುಲ್ ಬಜಾಜ್ ನೇರವಾಗಿಯೇ ಹೇಳಿದ. ಮುಂದುವರೆದು 'ಚುನಾವಣೆಯ ಹಿಂದಿನ ವರ್ಷದಲ್ಲಿ ಮನ್ನಾ ಮಾಡಿದ್ದನ್ನು ನಾವು ಅರ್ಥ ಮಾಡಿಕೊಳ್ಳುತ್ತೇವೆ. ಆದರೆ ಈಗ ಮತ್ತೆ ಮುಂದುವರೆಸಬಾರದು' ಎಂದೂ ಹೇಳಿದ.

ಇವೆಲ್ಲವನ್ನು ಜಾರಿ ಮಾಡಲು ದೇಶದ ಹಣಕಾಸು ಮಂತ್ರಿ ಯಾರಾಗಬೇಕು ಎಂದು ಬಹುತೇಕ ಚಾನೆಲ್‌ಗಳಲ್ಲಿ ಉದ್ದಿಮೆದಾರರನ್ನು ಕೇಳಲಾಯಿತು. ಇದೇ ಪ್ರಶ್ನೆಯನ್ನು ಆಮ್ ಆದ್ಮಿಯನ್ನು(ಜನಸಾಮಾನ್ಯರನ್ನು) ಯಾವ ಚಾನೆಲ್ ಕೂಡಾ ಕೇಳಲಿಲ್ಲ. ಎಲ್ಲಾ ಬಂಡವಾಳಶಾಹಿಗಳು ಎಷ್ಟು ಆತ್ಮವಿಶ್ವಾಸದಿಂದ ಇದ್ದರೆಂದರೆ 'ಅದೇನೂ ತೊಂದರೆಯಿಲ್ಲ. ಸ್ಥಿರ ಸರ್ಕಾರ ಬಂದಿದೆ; ಮೈತ್ರಿ ಪಕ್ಷಗಳ ಕಾಟವಿರುವುದಿಲ್ಲ. ಇರುವ ಒಬ್ಬಿಬ್ಬರ ಒತ್ತಡಗಳಿಗೆ ಮಣಿಯಬಾರದು ಅಷ್ಟೆ. ಇನ್ನು ಹಣಕಾಸು ಮಂತ್ರಿ ಯಾರಾದರೂ ತೊಂದರೆಯಿಲ್ಲ. ಹೇಗೂ ಮನಮೋಹನ್‌ಸಿಂಗ್ ಇದ್ದಾರಲ್ಲಾ' ಎಂದು ಹೇಳಿದರು.

ಕಳೆದ 5 ವರ್ಷಗಳಲ್ಲಿ ಸ್ಥಿರ ಸರ್ಕಾರ ಇರದಿದ್ದುದರಿಂದ ಮತ್ತು ಎಡಪಕ್ಷಗಳ 'ಕಿರಿಕಿರಿ'ಯಿಂದ ಎಸ್‌ಇಝಡ್‌ಗಳು ಹೆಚ್ಚು ಬರಲಾಗಲಿಲ್ಲ; ಸಂಪೂರ್ಣ ಬಂಡವಾಳಶಾಹಿ ಪರ ಸುಧಾರಣೆಗಳು ಜಾರಿಗೆ ಬರಲಿಲ್ಲ; ಆರ್ಥಿಕ ಬಿಕ್ಕಟ್ಟಿನ ಸಂದರ್ಭದಲ್ಲಿ ಸರ್ಕಾರ ಕುಬೇರರಿಗೆ ಹೆಚ್ಚು ಅನುದಾನ ನೀಡಲಿಲ್ಲ; ಕಾನೂನುಗಳನ್ನು ಬದಲಾಯಿಸಲಿಲ್ಲ ಎಂದು ಇವರೆಲ್ಲಾ ಹೇಳುತ್ತಿದ್ದಾರೆ. ಆದರೆ ಇದೇ 5 ವರ್ಷದಲ್ಲಿ ಇಷ್ಟೊಂದು ಎಸ್‌ಇಜಡ್‌ಗಳು ಬಂದವು, ಇಷ್ಟೊಂದು ಬೆಲೆ ಏರಿಕೆ ಆಯಿತು, ರೇಷನ್ ಕಾರ್ಡ್ ಕೊಟ್ಟರೂ ರೇಷನ್ ಕಡಿಮೆ ಆಯಿತು, ಬಹುತೇಕ ವಲಯಗಳಲ್ಲಿ ಕಾರ್ಮಿಕರ ಭದ್ರತೆ ಇಲ್ಲವಾಯಿತು ಎಂದು ನಾವಂದುಕೊಳ್ಳುತ್ತಿದ್ದೆವು. ಹಾಗಾದರೆ ಒಂದು ವೇಳೆ ಇನ್ನೂ ಸ್ಥಿರ

ಸರ್ಕಾರ ಇದ್ದಿದ್ದರೆ ಏನೇನು ಮಾಡುತ್ತಿದ್ದರು? ಈಗ ಸ್ಥಿರ ಸರ್ಕಾರ ಬಂದಿದೆಯಲ್ಲಾ ಏನೇನು ಮಾಡಬಹುದು? ಇದನ್ನು ನಾವಿಂದು ಯೋಚಿಸಬೇಕು. ನಾವು ಈಗೇನ್ಮಾಡೋಣ ಎಂದು ಚರ್ಚಿಸಬೇಕು.

ದೇಶದ ಜನರನ್ನು ಲೂಟಿ ಮಾಡಿ ತಮ್ಮ ಸಂಪತ್ತು ಹೆಚ್ಚಿಸಿಕೊಂಡ ಗೂಳಿಗಳು ಹೇಳುತ್ತಿದ್ದಾರೆ 'ಇಂದು ಕಾಂಗ್ರೆಸ್‌ಗೆ ಜನರ ಸ್ಪಷ್ಟ ಆದೇಶ ಸಿಕ್ಕಿದೆ. ಹಾಗಾಗಿ ಅವರು ಈಗ ಕೆಲಸ ಮಾಡಬೇಕು. ಯಾವುದೇ ನೆಪಗಳನ್ನು ಹೇಳಬಾರದು ಎಂದು (they have the mandate now, they should act now with no excuses). ಆದರೆ ದೇಶದ ಜನತೆ ಕೊಟ್ಟ ಆದೇಶ ಏನು? ಕಾಂಗ್ರೆಸ್ ಕಾ ಹಾಥ್ ಆಮ್ ಆದ್ಮಿ ಕೆ ಸಾಥ್ ಎಂದು ಹೇಳಿದ ಪಕ್ಷ ಯಾರ ಪರ ನಿಲ್ಲಬೇಕು ಇದನ್ನು ನಾವು ಮುಂದಿನ 5 ವರ್ಷಗಳ ಕಾಲ ನಿರಂತರವಾಗಿ ಪ್ರಶ್ನಿಸಬೇಕು. ಬೀದಿಗಳಲ್ಲಿ, ಮನೆಗಳಲ್ಲಿ, ವಿಚಾರ ಸಂಕಿರಣಗಳಲ್ಲಿ. ಚಿಂತನೆಯಲ್ಲಿ ಮತ್ತು ಚಳುವಳಿಯಲ್ಲಿ ಈ ಪ್ರಶ್ನೆ ಮೂಡಿ ಬರಬೇಕು. ಇಲ್ಲವಾದರೆ ಸಂಕಷ್ಟಗಳು ಹೆಚ್ಚಾಗುವುದು ಖಂಡಿತ.

ಇಷ್ಟೆಲ್ಲಾ ಹೇಳಿದ ಮೇಲೆ ಹಾಗಾದರೆ ಬಿಜೆಪಿ ಸೋತಿದ್ದು ಒಳ್ಳೆಯದಾಗಲಿಲ್ಲವೇ, ಕಾಂಗ್ರೆಸ್ ಗೆದ್ದಿದ್ದರಿಂದ ಹೀಗಾಯಿತೇ ಎಂಬ ಪ್ರಶ್ನೆ ಏಳಬಹುದು. ಬಿಜೆಪಿ ಗೆದ್ದಿದ್ದರೆ ಆರ್ಥಿಕ ನೀತಿಗಳಲ್ಲಿ ಇದಕ್ಕಿಂತ ಯಾವ ರೀತಿಯಲ್ಲೂ ಭಿನ್ನವಾಗಿರುತ್ತಿರಲಿಲ್ಲ. ಇನ್ನೂ ಒಂದು ಕೈ ಮೇಲೇ ಎನ್ನುವಂತೆ ಇರುತ್ತಿದ್ದರು ಎನ್ನುವುದಕ್ಕೆ 5 ವರ್ಷಗಳ ಎನ್‌ಡಿಎ ಆಡಳಿತಕ್ಕಿಂತ ಸಾಕ್ಷಿ ಬೇಕಿಲ್ಲ. ಆಗ ಇಂಡಿಯಾ ಎಷ್ಟು ಶೈನ್ ಆಯಿತು, ದೇಶಾದ್ಯಂತ ರೈತರು ಎಷ್ಟು ಸಂಖ್ಯೆಯಲ್ಲಿ ಆತ್ಮಹತ್ಯೆ ಮಾಡಿಕೊಂಡರು ಎನ್ನುವುದನ್ನು ನಾವೆಲ್ಲರೂ ನೋಡಿದ್ದೇವೆ. ಅದಕ್ಕಿಂತ ಅಪಾಯ ಇನ್ನೂ ಒಂದು ಇತ್ತು. ಅದಕ್ಕೆ ಗುಜರಾತ್‌ಗಿಂತ ಸಾಕ್ಷಿ ಬೇಕಿಲ್ಲ. ಇಂದು ಗುಜರಾತಿನ ಜನಸಾಮಾನ್ಯರ ಸ್ಥಿತಿ ಅತ್ಯಂತ ದುರ್ಭರವಾಗಿದೆ. ಯಾವ ಮಾನದಂಡ ತೆಗೆದುಕೊಂಡರೂ ಅವರ ಸಂಕಷ್ಟ ಹೆಚ್ಚಾಗಿದೆ. ಬಂಡವಾಳಶಾಹಿಗಳ ಪರವಾದ ನೀತಿಗಳೇ ರಾಜ್ಯವಾಳುತ್ತಿವೆ. (ವಿವರಗಳಿಗೆ ನೋಡಿ: 'ಗುಜರಾತ್ ಮಾದರಿ ಅಭಿವೃದ್ಧಿ ಎಂದರೇನು' ಪ್ರಜಾಪ್ರಭುತ್ವಕ್ಕಾಗಿ ಜನರ ಒಕ್ಕೂಟದ ಪ್ರಕಟಣೆ) ಆದರೂ ಗುಜರಾತ್ ಮಾದರಿ ಅಭಿವೃದ್ಧಿಯೇ ಎಲ್ಲೆಡೆ ಚರ್ಚೆಯಲ್ಲಿದೆ. ಅಲ್ಲಿನ ಜನಸಾಮಾನ್ಯರೂ ಪ್ರತೀ ಚುನಾವಣೆಯಲ್ಲೂ ಮೋದಿಯ ಬಹುಮತವನ್ನು ಹೆಚ್ಚಿಸುತ್ತಲೇ ಇದ್ದಾರೆ. ಏಕೆಂದರೆ ಕೋಮುವಾದೀ ನೆಲೆಯಲ್ಲಿ ಜನರ ಧ್ರುವೀಕರಣ ನಡೆಸಿ, ಊಟಕ್ಕೆ ತಿಂಡಿಗೆ ಎಲ್ಲಕ್ಕೂ ಕೋಮುವಾದವನ್ನೇ ಉಣಬಡಿಸುತ್ತಿದ್ದಾಗ ಹಸಿವೂ ಅಭಿವೃದ್ಧಿಯಂತೆ ಕಾಣುತ್ತದೆ. ಆದರೆ ಬೆಂಕಿಗೆ ಹೋಗಿ ಬೀಳಲಿಲ್ಲ ಎಂಬ ಸಮಾಧಾನದಲ್ಲಿ ನಾವಿದ್ದರೆ ಬಾಣಲೆಯ ಬಿಸಿ ಕುಂಡೆ ಸುಡದೆ ಬಿಡುವುದಿಲ್ಲ. ಬಾಣಲೆಯನ್ನೂ ಬದಲಾಯಿಸದಿದ್ದರೆ ಮತ್ತೆ ಬೆಂಕಿಗೇ ಹಾರಬೇಕಾದೀತು.

ಈಗೇನ್ಮಾಡೋಣ ಎಂದು ಯೋಚಿಸುತ್ತಾ ಮುಗಿಸುವ ಮುನ್ನ ಕಡೆಯದಾಗಿ ಎಡಪಕ್ಷಗಳಿಗೆ ಕೆಲವು ಪ್ರಶ್ನೆಗಳನ್ನು ಕೇಳಬೇಕಾಗಿದೆ. ಇಂದು ಬಂಡವಾಳಶಾಹಿಗಳು ಎಡಪಕ್ಷಗಳು ಸೋತಿದ್ದು ಒಳ್ಳೆಯದಾಯಿತು ಎಂದು ಹೇಳುತ್ತಿರುವುದನ್ನು ನಿಮಗೆ ಕೊಟ್ಟ ಸರ್ಟಿಫಿಕೇಟ್ ಎಂದೇ ತಿಳಿಯೋಣ. ದೇಶದ ಕಳೆದ ಐದು ವರ್ಷದ ರಾಜಕೀಯದಲ್ಲಿ ಸಿಪಿಎಂ ಬಂಡವಾಳಶಾಹಿ ವಿರೋಧಿ-ಜನಪರ ಎಂದು ಕಂಡಿದ್ದು ನಿಜವೇ ಆದರೂ ಅದಕ್ಕೆ ಮತದಾರ

ದೇಶದ ಜನರನ್ನು ಲೂಟಿ ಮಾಡಿ ತಮ್ಮ ಸಂಪತ್ತು ಹೆಚ್ಚಿಸಿಕೊಂಡ ಗೂಳಿಗಳು ಹೇಳುತ್ತಿದ್ದಾರೆ 'ಇಂದು ಕಾಂಗ್ರೆಸ್‌ಗೆ ಜನರ ಸ್ಪಷ್ಟ ಆದೇಶ ಸಿಕ್ಕಿದೆ. ಹಾಗಾಗಿ ಅವರು ಈಗ ಕೆಲಸ ಮಾಡಬೇಕು. ಯಾವುದೇ ನೆಪಗಳನ್ನು ಹೇಳಬಾರದು ಎಂದು (they have the mandate now. they should act now with no excuses). ಆದರೆ ದೇಶದ ಜನತೆ ಕೊಟ್ಟ ಆದೇಶ ಏನು? ಕಾಂಗ್ರೆಸ್ ಕಾ ಹಾಥ್ ಆಮ್ ಆದ್ಮಿ ಕೆ ಸಾಥ್ ಎಂದು ಹೇಳಿದ ಪಕ್ಷ ಯಾರ ಪರ ನಿಲ್ಲಬೇಕು ಇದನ್ನು ನಾವು ಮುಂದಿನ 5 ವರ್ಷಗಳ ಕಾಲ ನಿರಂತರವಾಗಿ ಪ್ರಶ್ನಿಸಬೇಕು. ಬೀದಿಗಳಲ್ಲಿ, ಮನೆಗಳಲ್ಲಿ, ವಿಚಾರ ಸಂಕಿರಣಗಳಲ್ಲಿ. ಚಿಂತನೆಯಲ್ಲಿ ಮತ್ತು ಚಳುವಳಿಯಲ್ಲಿ ಈ ಪ್ರಶ್ನೆ ಮೂಡಿಬರಬೇಕು. ಇಲ್ಲವಾದರೆ ಸಂಕಷ್ಟಗಳು ಹೆಚ್ಚಾಗುವುದು ಖಂಡಿತ. ಇಷ್ಟೆಲ್ಲಾ ಹೇಳಿದ ಮೇಲೆ ಹಾಗಾದರೆ ಬಿಜೆಪಿ ಸೋತಿದ್ದು ಒಳ್ಳೆಯದಾಗಲಿಲ್ಲವೇ; ಕಾಂಗ್ರೆಸ್ ಗೆದ್ದಿದ್ದರಿಂದ ಹೀಗಾಯಿತೇ ಎಂಬ ಪ್ರಶ್ನೆ ಏಳಬಹುದು.

ಮಾನ್ಯತೆ ಕೊಟ್ಟಿಲ್ಲ ಏಕೆ? ಪ್ರಗತಿಪರರು ಚುನಾವಣೆಗಳಲ್ಲಿ ಗೆಲ್ಲಲು ಸಾಧ್ಯವಿಲ್ಲದಷ್ಟು ಮಟ್ಟಕ್ಕೆ ಕುಲಗೆಟ್ಟು ಹೋಗಿದೆ ಎನ್ನುವುದಾದಲ್ಲಿ ನಿಲ್ಲುವುದು ಏಕೆ? ಚುನಾವಣಾ ಪದ್ಧತಿಗಳನ್ನು ಬದಲಿಸುವ, ವ್ಯವಸ್ಥೆಯಲ್ಲಿ ರಾಚನಿಕ ಬದಲಾವಣೆಗಳನ್ನು ತರಬೇಕಾದ ಮೂಲಭೂತ ಪ್ರಶ್ನೆಗಳನ್ನು ಮುಂದಿಟ್ಟು ಹೋರಾಡುವುದನ್ನು ಮಾಡುವುದಿಲ್ಲ ಏಕೆ? ಕಾಂಗ್ರೆಸ್-ಬಿಜೆಪಿ ಎರಡನ್ನೂ ಸೋಲಿಸುವುದು ಯಶಸ್ವಿಯಾಗಿಲ್ಲ ಏಕೆ? ಅತ್ಯಂತ ಭದ್ರವಾಗಿದ್ದ ಪ.ಬಂಗಾಳದಲ್ಲಿ ಬಂಡವಾಳಶಾಹಿಗಳ ಪರ ನಿಲುವೇ ಸೋಲಿಗೆ ಕಾರಣವಾಯಿತೇ? ಸಿಂಗೂರು, ನಂದಿಗ್ರಾಮದಲ್ಲಿ ಸಿಪಿಎಂ ಕಡೆಯಿಂದ ಆಗಿದ್ದ ತಪ್ಪಿನ ಪ್ರಮಾಣ ಏನು? ಹಾಗಿಲ್ಲದೆ ಅದು ಕೇವಲ ಸಿಪಿಎಂ ವಿರೋಧಿಗಳ ಅವಕಾಶವಾದಿ ಮೈತ್ರಿ ಅಷ್ಟೇನಾ? ಸಿಂಗೂರು, ನಂದಿಗ್ರಾಮಗಳು ಕೇವಲ ಅಪವಾದಗಳಾ ಅಥವಾ ಸಿಪಿಎಂನ ಅಭಿವೃದ್ಧಿ ರಾಜಕಾರಣದ ಎರಡು ಉದಾಹರಣೆಗಳು ಅಷ್ಟೇನಾ? ಇಂಥವೇ ಕೆಲವು ಪ್ರಶ್ನೆಗಳನ್ನು ಬೇರೆಯದೇ ನೆಲೆಯಲ್ಲಿ ಪುಟ್ಟಣ್ಣಯ್ಯನವರಿಗೂ, ಸರ್ವೋದಯ ಕರ್ನಾಟಕ ಪಕ್ಷಕ್ಕೂ ಕೇಳಬೇಕಾಗಿದೆ.

ಮುಂದಿನ 5 ವರ್ಷ ಚರ್ಚಿಸಬೇಕಾದ ಪ್ರಶ್ನೆಗಳು ಇವು. ಚಳುವಳಿ ನಡೆಸಲು ನೂರು ಸಂಕಷ್ಟಗಳನ್ನು ಹೇಗೂ ಆಮ್ ಆದ್ಮೀಕಾ ಸಾಥ್ ಇರುವ ಕಾಂಗ್ರೆಸ್ ತಂದು ಹಾಕುತ್ತದೆ. ಈಗ ಹೇಳಿ ಏನೇನ್ಮಾಡೋಣ? □

ಕಾಂಗ್ರೆಸ್‌ನ ಗೆಲುವು ಮತ್ತು ಭಾರತದ ಮನಸ್ಸು

(27ನೇ ಪುಟದಿಂದ)

ಯುತ ಬದುಕು ಬೇಕಾಗಿದೆ.

ಹಾಗೆಂದ ಮಾತ್ರಕ್ಕೆ ಕಾಂಗ್ರೆಸ್ ಇವೆಲ್ಲವನ್ನೂ ಕೊಟ್ಟು ಬಿಡುತ್ತದೆ ಎಂದಲ್ಲ. ತೀರಾ ಹಾಳುಗೆಡವುದಿಲ್ಲ ಎಂಬ ದೂರದಾಸೆಯಿಂದ ಭಾರತೀಯರು ಕಾಂಗ್ರೆಸ್ ಅನ್ನು ಆಯ್ಕೆ ಮಾಡಿಕೊಂಡರು.

16ನೇ ತಾರೀಖು ಸಂಜೆ, ನನಗೆ ಡಾ.ಸಿ.ಜಿ.ಲಕ್ಷ್ಮೀಪತಿಯವರು ಕಳಿಸಿದ ಒಂದು 'ಮೆಸೇಜ್' ಭಾರತೀಯರ ಮನಃಸ್ಥಿತಿಯಲ್ಲಿರುವ ಮನೋವೈಶಾಲ್ಯವನ್ನು ಬಹಳ ಚೆನ್ನಾಗಿ ಸಾರಾಂಶೀಕರಿಸುತ್ತದೆ: Indians have given the baton to-An Indian widow

who married a PARSI BRAHMIN who follows CHRISTIANITY and who leads the congress with a SIKH PM

'ಹಿಂದೂತ್ವ' ಪರಿಕಲ್ಪಿಸಿದ ರಾಷ್ಟ್ರದಲ್ಲಿ ಯಾವುದೆಲ್ಲಾ ಅಪವಿತ್ರವೋ ಅಶುದ್ಧವೋ (ವೈಧವ್ಯ, ವರ್ಣಸಂಕರತೆ, ಅನ್ಯಧರ್ಮೀಯತೆ) ಅವುಗಳ ಕೈಗೇ ಭಾರತೀಯರ ನಮ್ಮ ರಾಷ್ಟ್ರದ ಚುಕ್ಕಾಣಿಯನ್ನು ಕೊಟ್ಟಿದ್ದಾರೆ. ಸಿಖ್‌ರ ಕೂಡ ಮೂಲಭೂತವಾಗಿ ಮುಸ್ಲಿಂರು ಎಂಬುದನ್ನು ಮರೆಯದಿದ್ದರೆ, ಈ ಮೆಸೇಜ್ ಹೆಚ್ಚು ಅರ್ಥಗಳನ್ನು ಧ್ವನಿಸುತ್ತದೆ. ಇದಕ್ಕಿಂತ ಹೆಚ್ಚಿನ ಮುಖಭಂಗ ಬಿಜೆಪಿಗೆ ಬೇಕಾಗಿಲ್ಲ.

ಇದರಾಚೆಗೆ 'ರಿಸೆಷನ್' ಅವಧಿಯಲ್ಲಿ ಮನಮೋಹನ್ ಸಿಂಗ್‌ರಂಥ ಆರ್ಥಿಕ ತಜ್ಞರು ಪ್ರಧಾನಿಯಾಗಿರಬೇಕು ಎಂದು ಭಾರತೀಯರು ಕಾಂಗ್ರೆಸ್‌ಗೆ ಮತ ಚಲಾಯಿಸಿದರು ಅಥವ ಅಣು ಒಪ್ಪಂದವನ್ನು ಸಮರ್ಥಿಸಿ ಕಾಂಗ್ರೆಸ್‌ಗೆ ಬೆಂಬಲವನ್ನು ಸೂಚಿಸಿದರು ಎಂಬುದೆಲ್ಲಾ ಆನುಷಂಗಿಕ.

ಕೊನೆಯಲ್ಲಿ ಒಂದು ಪ್ರಶ್ನೆ ಉಳಿಯುತ್ತದೆ. ಹಾಗಾದರೆ, ಕರ್ನಾಟಕದಲ್ಲೇಕೆ ಈ ಭಾರತೀಯ ಸಾಂಸ್ಕೃತಿಕ ಮನಃಸ್ಥಿತಿ ಕೆಲಸ ಮಾಡಲಿಲ್ಲ ಎಂದು. ಅದಕ್ಕೆ ಮುಖ್ಯವಾಗಿ ಮೂರು ಕಾರಣಗಳನ್ನು ಗುರುತಿಸಬಹುದು.

1. ದಕ್ಷಿಣ ಕರ್ನಾಟಕದ ಪ್ರತಿಯೊಂದು ಮನೆಯಲ್ಲೂ RSS, ಭಜರಂಗದಳ ಅಥವಾ ಶ್ರೀರಾಮಸೇನೆಯ ಸದಸ್ಯರಿದ್ದಾರೆ. ಅದು BJP ಯಿಂದ ಸಂಪೂರ್ಣವಾಗಿ 'ಬ್ರೈನ್ ವಾಷ್‌ಗೆ' (Brain wash) ಒಳಗಾದ ಪ್ರದೇಶ. ಅಲ್ಲಿ ಬಿಜೆಪಿ ಹೆಚ್ಚು ಸ್ಥಾನಗಳನ್ನು ಪಡೆದಿದೆ.

2. ಜೆಡಿಎಸ್-ಕಾಂಗ್ರೆಸ್‌ನ ವೋಟ್‌ಬೇಸ್ ಒಂದೇ. ಈ ವೋಟ್ ಬೇಸ್ ಅನ್ನು ಜೆಡಿಎಸ್ ಒಡೆದು ಹಾಕಿತು.

3. ಆಳುವ ಪಕ್ಷವಾದ ಬಿಜೆಪಿ, ಚುನಾವಣೆಯನ್ನು ಸಾಕಷ್ಟು Manipulate ಮಾಡಿದೆ ಎನ್ನುವುದಕ್ಕೆ ಬೆಂಗಳೂರು ಕೇಂದ್ರದಲ್ಲಿ ನಡೆದ ಘಟನೆಗಳು ಸಾಕ್ಷಿ. ಕೃಷ್ಣಭೈರೇಗೌಡ ಮತದಾರರ ಪಟ್ಟಿಯಲ್ಲಿ ದಿಢೀರನೆ ಕಾಣೆಯಾದ ಗಮನಾರ್ಹ ಸಂಖ್ಯೆಯ ಅಲ್ಪಸಂಖ್ಯಾತರ ಹೆಸರಿನ ಬಗ್ಗೆ ಬೊಬ್ಬೆ ಹೊಡೆದರೂ, ಅದು ಗಂಭೀರವಾದ ವಿಷಯವಾಗಲೇ ಇಲ್ಲ. ಈ ರೀತಿ ಇನ್ನೂ ಎಷ್ಟು ಉದಾಹರಣೆಗಳಿವೆಯೋ?

ಏನೇ ಆಗಲಿ, ಭಾರತೀಯ ಮತದಾರರಿಗೆ ಹಾರ್ದಿಕ ಅಭಿನಂದನೆಗಳು. □

(ಹಿಂದಿನ ಸಂಚಿಕೆಯಿಂದ)

ಎನ್.ಡಿ.ಎ. ಸರ್ಕಾರದಲ್ಲಿ ದಲಿತ ಮಂತ್ರಿಗಳು ಎನ್.ಡಿ.ಎ. ಸಿದ್ಧಾಂತಕ್ಕೆ ಅನುಗುಣವಾಗಿ ದಲಿತ ಸಿದ್ಧಾಂತವನ್ನು ರಾಜಿಗೊಳಿಸಿಕೊಂಡು ಅಧಿಕಾರ ಚಲಾಯಿಸಿದರೂ ಎಂಬ ಆರೋಪ ಮೇಲ್ನೋಟಕ್ಕೆ ಸತ್ಯವೆನಿಸಿದರೂ ದಲಿತ ಪ್ರತಿನಿಧಿತ್ವದ ಹೆಸರಿನ ಮೂಲಕ ದಲಿತತ್ವವನ್ನು ಕಾಯ್ದುಕೊಳ್ಳುವ ಕಾರ್ಯವನ್ನು ಮಾಡುವಲ್ಲಿ ಅಂದಿನ ದಲಿತ ಪ್ರತಿನಿಧಿಗಳು ಸ್ವಲ್ಪ ಮಟ್ಟಿಗೆ ಸಫಲರಾದರು. ಇದೇ ರೀತಿ ಕುಮಾರಿ. ಮಾಯಾವತಿ ಅವರು ಬಿ.ಜೆ.ಪಿ. ಯೊಡನೆ ಸೇರಿ ಮೊದಲ ಬಾರಿಗೆ ಸರ್ಕಾರವನ್ನು ರಚಿಸಿದಾಗ ದಲಿತರ ರಾಜಕಾರಣ ಸೈದ್ಧಾಂತಿಕವಾಗಿ ಬಲಿಷ್ಠವಾಗಿಲ್ಲ ಎಂಬ ಪ್ರತಿಪಾದನೆ ಹೆಚ್ಚಾಯಿತು. ಆದರೆ, ಇಂದು ಮಾಯಾವತಿಯವರು ಸ್ವತಂತ್ರವಾಗಿ ಸರ್ಕಾರ ರಚಿಸುವ ಮೂಲಕ ದಲಿತ ರಾಜಕಾರಣವನ್ನು ರಾಷ್ಟ್ರದ ಬಹುದೊಡ್ಡ ರಾಜಕೀಯ ಸಮಾಜದಲ್ಲಿ ಸ್ಥಾಪಿಸಿದ್ದಾರೆ. ದಲಿತ ರಾಜಕಾರಣದ ಸ್ವರೂಪದಲ್ಲಿ ಬದಲಾವಣೆಗಳು ಒಳಪಡುತ್ತವೆ. ಇಂತಹ ಬದಲಾವಣೆಗಳಿಂದ ದಲಿತ ರಾಜಕಾರಣ ವಿಶಾಲವಾದ ತಳಹದಿಯಲ್ಲಿ ನಿಲ್ಲಲು ಸಾಧ್ಯವಾಗುತ್ತದೆ. ದಲಿತ ರಾಜಕಾರಣವು ಸಕಾರಾತ್ಮಕವಾಗಿ ನೋಡುವ ಸ್ವರೂಪ ಈ ಮೂಲಕ ಸೃಷ್ಟಿಯಾಗುತ್ತದೆ. ರಾಷ್ಟ್ರದ ಮೊದಲನೆಯ ಪ್ರಜೆಯನ್ನ ಆಯ್ಕೆಮಾಡುವಲ್ಲಿ ದಲಿತ ರಾಜಕಾರಣ ಪ್ರಮುಖ ಪಾತ್ರವಹಿಸುತ್ತದೆ. ಇಂತಹ ಸಂದೇಶಗಳು ದಲಿತ ರಾಜಕಾರಣದ ಮಹತ್ವವನ್ನು ಹೆಚ್ಚಿಸುವ ಮೂಲಕ ಅದರ ಅವಶ್ಯಕತೆಯನ್ನ indian polityಯು ಮನವರಿಕೆ ಮಾಡಿಕೊಡುತ್ತದೆ.

ದಲಿತ ರಾಜಕಾರಣವು ಪಕ್ಷಾತೀತವಾಗಿ ಕಂಡುಕೊಳ್ಳುವುದು ಸುಲಭದ ಮಾತಲ್ಲ. ಇಂದು ಪ್ರತಿಯೊಂದು ಪಕ್ಷವು ಒಂದಲ್ಲ ಒಂದು ಜಾತಿಯ ನೆಲೆಯಿಂದ ರಾಜಕೀಯದ ಚಟುವಟಿಕೆಯನ್ನು ಉಂಟುಮಾಡುತ್ತದೆ. ಹೆಸರಿಗೆ ಜಾತ್ಯಾತೀತವೆಂದರೂ ಪಕ್ಷದ ಆಗುಹೋಗುಗಳಲ್ಲಿ ಜಾತಿಗಳು ಪ್ರಧಾನವಾಗಿವೆ. ಇಂತಹ ಹಿಡಿತದಿಂದ ರಾಜಕೀಯ ಪಕ್ಷಗಳು ಹೊರಬರಲು ಪ್ರಾಮಾಣಿಕ ಪ್ರಯತ್ನ ನಡೆಸಿದರೆ ಅಷ್ಟೇ ಮುಖ್ಯವಾಗಿ ಇತರ ಪಕ್ಷಗಳು ಅವುಗಳನ್ನು ಬಂಡವಾಳವಾಗಿಸಿ ರಾಜಕಾರಣವನ್ನು ಮಾಡುತ್ತವೆ. ಭಾರತದ ರಾಜಕಾರಣದಲ್ಲಿ action and counter action ಸದಾ ಜಾತಿಯ ಹೆಸರಿನಲ್ಲಿ ಕಾರ್ಯ ನಿರ್ವಹಿಸುತ್ತಿವೆ.

ಇಂತಹ ಸಂದಿಗ್ಧತೆಯಲ್ಲಿ ದಲಿತ ರಾಜಕಾರಣ ಪಕ್ಷಾತೀತವಾಗಬೇಕು. ಆಗ ಮಾತ್ರ ದಲಿತ ರಾಜಕಾರಣದ ಮೌಲ್ಯವು ಹೆಚ್ಚುತ್ತದೆ. ಹೆಚ್ಚಿದ ಮೌಲ್ಯಗಳಿಂದ ದಲಿತ ರಾಜಕಾರಣಕ್ಕೆ ಮತ್ತು indian polity ಗೆ ಪ್ರಾಮುಖ್ಯತೆ ದೊರೆಯುತ್ತದೆ. ಇದು ಪ್ರಜಾಪ್ರಭುತ್ವವನ್ನು ಪ್ರಜ್ಞಾವಂತ ಪ್ರಜಾಪ್ರಭುತ್ವವಾಗಿ ಬೆಳೆಸಲು ಸಾಧ್ಯವಾಗುತ್ತದೆ. ಪ್ರಜ್ಞಾವಂತ ಪ್ರಜಾಪ್ರಭುತ್ವವೆಂದರೆ ಜಾತಿಗಳ ಪ್ರಾಬಲ್ಯವನ್ನು ಕಡಿಮೆಗೊಳಿಸಿ ಜನತೆಯ ಪ್ರಭುತ್ವವನ್ನು ಸ್ಥಾಪಿಸುವುದೇ ಆಗಿದೆ. ಒಂದು ಚುನಾವಣೆಯಿಂದ ಮತ್ತೊಂದು ಚುನಾವಣೆಗೆ ಅಪಾರವಾದ ಬದಲಾವಣೆಗಳನ್ನು ಕಾಣುತ್ತಿದ್ದು, ಅವುಗಳ ಸಕಾರಾತ್ಮಕವಾದ ಬೆಳವಣಿಗೆಗಳನ್ನು ಕ್ರೋಢಿಕರಿಸಿ ಜನತೆಯ ಪ್ರಭುತ್ವವಾಗಿ ಕಟ್ಟುವ ಕೆಲಸ ನಡೆಯಬೇಕಾಗಿದೆ. ಮತ ಬ್ಯಾಂಕುಗಳು Issue Base ಆಗಿ ನಿರ್ಮಾಣವಾಗಬೇಕೇ ವಿನಹ ಜಾತಿಯ ಮತ ಬ್ಯಾಂಕುಗಳಾಗಿ ಅಲ್ಲ.

ಜಾತಿಯ ಮತ ಬ್ಯಾಂಕುಗಳನ್ನು ದುರ್ಬಲಗೊಳಿಸಿ ಆ ಜಾಗದಲ್ಲಿ ಪ್ರಜ್ಞಾವಂತ ಮತ ಬ್ಯಾಂಕುಗಳನ್ನು ಸೃಷ್ಟಿಸಿ ೨೦೨೦ರ ಸದೃಢ ಭಾರತ ನಿರ್ಮಾಣವಾದಾಗ ಮಾತ್ರ ಭಾರತದ ಪ್ರಜಾಪ್ರಭುತ್ವಕ್ಕೆ ಮಹತ್ವ ಹೆಚ್ಚುತ್ತದೆ. ಈ ಕೆಲಸವನ್ನು ರಾಜಕೀಯ ಪಕ್ಷಗಳು ಪ್ರಾಮಾಣಿಕವಾಗಿ ಮಾಡಬೇಕಿದೆ. ರಾಜಕೀಯದಲ್ಲಿ ಪ್ರಾಮಾಣಿಕತೆ ಬಹಳ ಅಗತ್ಯವಾಗಿದೆ. ಆದರೆ, ರಾಜಕೀಯ ಪಕ್ಷಗಳು ಅದನ್ನು ಅಷ್ಟೇ ಪ್ರಾಮಾಣಿಕವಾಗಿ ಮೈಗೂಡಿಸಿಕೊಂಡಿರುವದಿಲ್ಲ. ವಿಶೇಷ ಆರ್ಥಿಕ ವಲಯಗಳ ಸೃಷ್ಟಿಯಲ್ಲಾಗಲೀ, ರಾಷ್ಟ್ರದ ರಕ್ಷಣೆಯ ಸಶಸ್ತ್ರಗಳ ಖರೀದಿಸುವ ವಿಷಯದಲ್ಲಾಗಲ್ಲೀ ರಾಜಕೀಯ ಪಕ್ಷಗಳ ಪ್ರಾಮಾಣೀಕತೆ ಏನೆಂಬುದನ್ನು ಬಹಳ ಸುಲಭವಾಗಿ ಕಂಡುಕೊಳ್ಳಬಹುದಾಗಿದೆ. ಆದ್ದುದ್ದರಿಂದಲೇ ಪ್ರಾಮಾಣಿಕತೆಯಂತೂ ಮೂಲಭೂತವಾದ ವಿಷಯವಾಗಿದ್ದು, ಇದನ್ನು ಎಲ್ಲಾ ರಂಗದಲ್ಲೂ ಮೈಗೂಡಿಸಿ ಕೊಂಡಾಗ

ಜಾತಿಯ ಮತ ಬ್ಯಾಂಕುಗಳನ್ನು ದುರ್ಬಲಗೊಳಿಸಿ ಆ ಜಾಗದಲ್ಲಿ ಪ್ರಜ್ಞಾವಂತ ಮತ ಬ್ಯಾಂಕುಗಳನ್ನು ಸೃಷ್ಟಿಸಿ ೨೦೨೦ರ ಸದೃಢ ಭಾರತ ನಿರ್ಮಾಣವಾದಾಗ ಮಾತ್ರ ಭಾರತದ ಪ್ರಜಾ ಪ್ರಭುತ್ವಕ್ಕೆ ಮಹತ್ವ ಹೆಚ್ಚುತ್ತದೆ. ಈ ಕೆಲಸವನ್ನು ರಾಜಕೀಯ ಪಕ್ಷಗಳು ಪ್ರಾಮಾಣಿಕವಾಗಿ ಮಾಡಬೇಕಿದೆ. ರಾಜಕೀಯದಲ್ಲಿ ಪ್ರಾಮಾಣಿಕತೆ ಬಹಳ ಅಗತ್ಯವಾಗಿದೆ. ಆದರೆ, ರಾಜಕೀಯ ಪಕ್ಷಗಳು ಅದನ್ನು ಅಷ್ಟೇ ಪ್ರಾಮಾಣಿಕವಾಗಿ ಮೈಗೂಡಿಸಿಕೊಂಡಿರುವುದಿಲ್ಲ. ವಿಶೇಷ ಆರ್ಥಿಕ ವಲಯಗಳ ಸೃಷ್ಟಿಯಲ್ಲಾಗಲೀ, ರಾಷ್ಟ್ರದ ರಕ್ಷಣೆಯ ಶಸ್ತ್ರಗಳ ಖರೀದಿಸುವ ವಿಷಯದಲ್ಲಾಗಲ್ಲೀ ರಾಜಕೀಯ ಪಕ್ಷಗಳ ಪ್ರಾಮಾಣೀಕತೆ ಏನೆಂಬುದನ್ನು ಬಹಳ ಸುಲಭವಾಗಿ ಕಂಡುಕೊಳ್ಳಬಹುದಾಗಿದೆ. ಆದ್ದುದ್ದರಿಂದಲೇ ಪ್ರಾಮಾಣಿಕತೆಯಂತೂ ಮೂಲಭೂತವಾದ ವಿಷಯವಾಗಿದ್ದು, ಇದನ್ನು ಎಲ್ಲಾ ರಂಗದಲ್ಲೂ ಮೈಗೂಡಿಸಿ ಕೊಂಡಾಗ ಮಾತ್ರ ಪ್ರಜಾ ಪ್ರಭುತ್ವ ಯಶಸ್ವಿಯಾಗುತ್ತದೆ.

ಜಾತಿ ವ್ಯವಸ್ಥೆ ಮತ್ತು ರಾಜಕಾರಣ

ಡಾ. ಜೆ.
ಸೋಮಶೇಖರ್

ಮಾತ್ರ ಪ್ರಜಾಪ್ರಭುತ್ವ ಯಶಸ್ವಿಯಾಗುತ್ತದೆ. ತಾಂತ್ರಿಕ ಕ್ಷೇತ್ರದಲ್ಲಿ ಭಾರತೀಯರು ಜಗತ್ತಿನಲ್ಲಿಯೇ ಅಗ್ರ ಸ್ಥಾನವನ್ನು ಪಡೆದುಕೊಂಡಿದ್ದಾರೆ. ಕೃಷಿಯ ಉತ್ಪಾದನೆಯಲ್ಲೂ ರಾಷ್ಟ್ರ ಹಿಂದೆ ಬಿದ್ದಿಲ್ಲ. ಆದರೆ, ದಕ್ಷತೆಯ ಮತ್ತು ಪ್ರಾಮಾಣಿಕ ಆಡಳಿತವನ್ನು ಸ್ಥಾಪಿಸುವಲ್ಲಿ ಇನ್ನೂ ಶ್ರಮಿಸಬೇಕಿದೆ.

ಉನ್ನತ ಶಿಕ್ಷಣದಲ್ಲಿ ಬದಲಾವಣೆಗಳನ್ನು ತರಬೇಕಿದೆ. ಶಿಕ್ಷಣ ಹೆಚ್ಚಾದಂತೆ ಜಾತಿ ದುರ್ಬಲವಾಗುತ್ತದೆ ಎಂಬ ಸಿದ್ಧಾಂತಕ್ಕೆ ವಿರುದ್ಧವಾದ ಪರಿಸರ ನಿರ್ಮಾಣವಾಗಿದ್ದು, ಇದನ್ನು ಹೋಗಲಾಡಿಸುವ ಶಿಕ್ಷಣವನ್ನು ಪ್ರಾಥಮಿಕ ಹಂತದಿಂದಲೇ ಮೂಡಿಸಬೇಕಿದೆ. ಇಂದೂ ರಾಷ್ಟ್ರದಲ್ಲಿ generation Gap ಅನ್ನು ಕಾಣುತ್ತಿದ್ದೇವೆ. ಇದನ್ನು ತುಂಬುವ ಕೆಲಸ ಇಂದಿನ ತುರ್ತು ಹಾಗೂ ಅವಶ್ಯಕತೆ. ಸದನದ ಒಳಗಾಗಲೀ, ಹೊರಗಾಗಲೀ ನಮ್ಮ ಪ್ರತಿನಿಧಿಗಳು ನಡೆದು ಕೊಳ್ಳುವ ರೀತಿ, ರಾಷ್ಟ್ರದ ಪ್ರಥಮ ಪ್ರಜೆಯನ್ನು ಚುನಾಯಿಸುವ ವಿಚಾರದಲ್ಲಿ ಮತ ಚಲಾಯಿಸದೇ ಇರುವ ನಮ್ಮ ಪ್ರತಿನಿಧಿಗಳು, ನೌಕರ ಶಾಹಿಗಳ ಭ್ರಷ್ಟತೆ, ಸಾಮಾನ್ಯನಿಗೆ ನಿಲುಕದ ಗುಣಮಟ್ಟದ ಶಿಕ್ಷಣ, ಬಡವನಿಗೆ ಸುಲಭವಾಗಿ ದೊರೆಯದ ನ್ಯಾಯ, ದಲಿತರ ಮೇಲಿನ ದೌರ್ಜನ್ಯಗಳು, ಮಹಿಳೆಯ ಮೇಲಿನ ಅತ್ಯಾಚಾರಗಳು ಮತ್ತು ಅಲ್ಪಸಂಖ್ಯಾತರ ಅಭದ್ರತೆಯ ಬದುಕುಗಳಿಂದ ಕೂಡಿರುವ ಪ್ರಸ್ತುತ ಭಾರತವು ತನ್ನ ಎಲ್ಲಾ ಈ ಅನಿಷ್ಠತೆಗಳನ್ನು ಮುಕ್ತವಾಗುವ ಶಕ್ತಿಯನ್ನು ಪಡೆಯುವಂತ ಭಾರತವನ್ನು ಕಟ್ಟುವುದೇ ದಲಿತ ರಾಜಕಾರಣವಾಗಬೇಕು. ಇದೇ ದಲಿತ ರಾಜಕಾರಣದ ಆಶಯ. ಇಂತಹ ಆಶಯವನ್ನು ಒಪ್ಪುವ ಭಾರತ ಸಮಾಜ ಆದಷ್ಟು ಬೇಗನೆ ನಿರ್ಮಾಣಗೊಳ್ಳಬೇಕು. ಇದು ನಿರ್ಮಾಣವಾದಾಗ ಮಾತ್ರವೇ ಜಾಗತೀಕರಣದ ಸ್ಥಳೀಯ ಗೌಡನ ಭಯೋತ್ಪಾದಕತೆ ಮತ್ತು ವಿದೇಶಿಗೌಡನ ಯುದ್ಧೋತ್ಪಾದಕತೆಯನ್ನು ದಲಿತ ರಾಜಕಾರಣ ತಡೆಯಬಹುದು.

ದಲಿತ ರಾಜಕಾರಣಕ್ಕೆ ಸಾಮಾಜಿಕ ನ್ಯಾಯದ ಪರಿಕಲ್ಪನೆಯೇ ಆಧಾರ ಸ್ಥಂಭವಾಗಿದೆ. ಈ ಸ್ಥಂಭದಡಿಯಲ್ಲಿ ನಿರ್ಗತಿಕ ಸಮಾಜವನ್ನು ಬಲಿಷ್ಠಗೊಳಿಸುವ ಸಂಕಲ್ಪವನ್ನು ಇದು ಹೊಂದಿದೆ. ಇದರ ವ್ಯಾಪ್ತಿಯಲ್ಲಿ ಎಲ್ಲರಿಗೂ ಸಮಪಾಲು ಮತ್ತು ಎಲ್ಲರೂ ಸ್ವತಂತ್ರತೆ, ಸಮಾನತೆ ಹಾಗೂ ಸೋದರತ್ವಗಳನ್ನು ಅನುಭವಿಸಿ ಆದರ್ಶ ಸಮಾಜವನ್ನು ಹುಟ್ಟುಹಾಕುವುದೇ ದಲಿತ ರಾಜಕಾರಣದ ಉದ್ದೇಶವಾಗಿದೆ. ಈ ಉದ್ದೇಶವನ್ನ ಸಫಲಗೊಳಿಸಿ ಪರಿಸರವನ್ನು

> **ಜಾತಿಯ ರಾಜಕಾರಣದ ಜಾಗದಲ್ಲಿ ದಲಿತ ರಾಜಕಾರಣವನ್ನು ಹುಟ್ಟುಹಾಕಬೇಕು. ದಲಿತ ಮನಸ್ಸುಗಳನ್ನು ಈ ಕಾಯಕಕ್ಕೆ ಸನ್ನದ್ಧಗೊಳಿಸಬೇಕಿದೆ. ಆಧುನಿಕತೆಯ ಶತಮಾನದಲ್ಲಿ ಜಾತಿ ಬಲಿಷ್ಠಗೊಳಿಸಿಕೊಂಡೇ ಮುಂದುವರೆಯುವ ಹಿಂದೂ ಸಮಾಜವು ದಲಿತ ರಾಜಕಾರಣವನ್ನ ಏಕೆ ಒಪ್ಪಿಕೊಳ್ಳಬೇಕು, ಎಂಬ ಮನೋವೃತ್ತಿ ಹಿಂದೂಗಳಲ್ಲಿ ಕಂಡುಬಂದಿರುವುದೇ ದಲಿತ ರಾಜಕಾರಣಕ್ಕೆ ಒಂದು ದೊಡ್ಡ ಸವಾಲಾಗಿದೆ. ಇಂತಹ ಮನೋವೃತ್ತಿಗೆ ದಲಿತ ರಾಜಕಾರಣವೇ ಸಿದ್ಧ ಔಷಧಿ. ಈ ಸಿದ್ಧ ಔಷಧಿಯನ್ನು ಚಿಕಿತ್ಸೆಗಾಗಿ ಪಡೆಯದಂತೆ ತಡೆಯೊಡ್ಡುವ ಕೆಲಸವನ್ನು ಹಿಂದೂ ಸಮಾಜ ದಲಿತ ರಾಜಕಾರಣದಲ್ಲಿಯೇ ಹುಟ್ಟು ಹಾಕಿರುತ್ತದೆ. ಇದು ದಲಿತ ರಾಜಕಾರಣಕ್ಕೆ ಬಹುದೊಡ್ಡ ಅಪಾಯ.**

ಮೊದಲು ಸೃಷ್ಟಿಸುವುದು ದಲಿತ ರಾಜಕಾರಣದ ಆದ್ಯ ಕರ್ತವ್ಯವಾಗಿದೆ. ಅಷ್ಟೇ ಜವಾಬ್ದಾರಿಯನ್ನು ದಲಿತೇತರರು ಕೂಡ ಹೊರುವ ಮೂಲಕ ದಲಿತ ರಾಜಕಾರಣಕ್ಕೆ ಸಕಾರಾತ್ಮಕವಾದ ಬೆಳವಣಿಗೆಯನ್ನು ನೀಡಬೇಕು. ಈ ಮೂಲಕ ದಲಿತ ರಾಜಕಾರಣದ ಸ್ವರೂಪಕ್ಕೆ ವಿಶಾಲ ತಳಹದಿಯನ್ನು ನೀಡಿ ಭಾರತ ರಾಜಕಾರಣದೊಳಗೆ ಅರ್ಥಪೂರ್ಣವಾಗಿ ವಿಲೀನಗೊಳಿಸಿ ಜಾತಿ ರಾಜಕರಣವನ್ನು ದುರ್ಬಲಗೊಳಿಸುವ ಪ್ರಯತ್ನಗಳು ನಡೆಯಬೇಕಿದೆ. ಇದರಿಂದ, ರಾಷ್ಟ್ರವು ಎದುರಿಸುತ್ತಿರುವ ಪ್ರಮುಖ ಸಮಸ್ಯೆಗಳನ್ನು ಸುಲಭವಾಗಿ ಬಗೆಹರಿಸಿದಂತಾಗುತ್ತದೆ. ರಾಷ್ಟ್ರದ ಆರ್ಥಿಕ ಸ್ಥಿತಿಯನ್ನು ಉತ್ತಮ ಪಡಿಸಿಕೊಂಡು ಇತರ ರಾಷ್ಟ್ರಗಳೊಂದಿಗೆ ಉತ್ತಮ ಸಂಬಂಧವನ್ನು ಬೆಸೆದುಕೊಂಡು ಅಂತರಾಷ್ಟ್ರೀಯ ರಾಜಕಾರಣದಲ್ಲಿ ಪ್ರಾಬಲ್ಯವನ್ನು ಹೆಚ್ಚಿಸಿಕೊಳ್ಳಬೇಕಾಗಿದೆ.

ಬೌದ್ಧ ಧರ್ಮದ ಮಾನವೀಯ ಮೌಲ್ಯಗಳು ದಲಿತ ರಾಜಕಾರಣಕ್ಕೆ ಚಾಲನೆ ನೀಡತಕ್ಕದ್ದು. ೨೧ನೇ ಶತಮಾನದಲ್ಲಿ ಭಾರತೀಯ ಸಂಸ್ಕೃತಿಯನ್ನು ಪುನರ್ ಸ್ಥಾಪಿಸುವ ಮೂಲಕ ಬುದ್ಧನ ಚಿಂತನೆಯಾದ ಮೈತ್ರಿಯ ಪರಿಕಲ್ಪನೆಯಿಂದ ಅಂತರಾಷ್ಟ್ರೀಯ ಸಮಾಜವನ್ನು ಕಟ್ಟುವ ಶಕ್ತಿ ದಲಿತ ರಾಜಕಾರಣಕ್ಕೆ ಬೇಕಿದೆ. ಇದನ್ನು ತಿಳಿಯಪಡಿಸಲು ದಲಿತ ರಾಜಕಾರಣ ಸಕ್ರಿಯವಾಗಿ ರಾಜಕೀಯದಲ್ಲಿ ತೊಡಗಿಸಿಕೊಳ್ಳಬೇಕಿದೆ. ಹೀಗೆ ತೊಡಗಿಸಿಕೊಳ್ಳುವಾಗ ಬೌದ್ಧ ಧರ್ಮದ ಸಂಘದ ತತ್ವಗಳ ಅನುಗುಣವಾಗಿ ಕಾರ್ಯನಿರ್ವಹಿಸುವುದನ್ನು ಮರೆಯಬಾರದು. ಯಾರಿಗೆ ಜಾತಿಯಲ್ಲಿ ನಂಬಿಕೆ ಇರುವುದಿಲ್ಲವೋ ಅಂತವರು ಬುದ್ಧನ ಸಂಘದ ಚೌಕಟ್ಟಿನ ಒಳಗೆ ಕಾರ್ಯ ನಿರ್ವಹಿಸಬಲ್ಲರು. ಹಾಗಾಗೀ ದಲಿತ ರಾಜಕಾರಣ ಬಹಳವಾಗಿ ಶ್ರಮಿಸಬೇಕಿದೆ. ಯಾರು ಶ್ರಮದ ಮೇಲೆ ನಂಬಿಕೆ ಇಟ್ಟಿರುತ್ತಾರೋ ಅವರಿಗೆ ಜಯ ಖಂಡಿತವಾಗಿಯೂ ದೊರೆಯುತ್ತದೆ. ಯಾರು ಅದೃಷ್ಟವನ್ನು ಅವಲಂಬಿಸುತ್ತಾರೋ ಅಂತಹವರು ಕೋಮುವಾದದ ರಾಜಕಾರಣವನ್ನು ಮಾಡುತ್ತಿರುತ್ತಾರೆ. ಆದ್ದುದ್ದರಿಂದಲೇ ಶ್ರಮದ ರಾಜಕರಣ ಧಲಿತ ರಾಜಕಾರಣವಾಗಬೇಕಿದೆ. ಇದನ್ನು ಒಪ್ಪುವಂತವರು ಮತ್ತು ಅದಕ್ಕೆ ಅನುಗುಣವಾಗಿ ರಾಜಕಾರಣ ಮಾಡುವಂತಹವರು ದಲಿತ ರಾಜಕಾರಣಕ್ಕೆ ಬೇಕಿದೆ. ಇಂತಹವರ ಸಂಖ್ಯೆ ಹೆಚ್ಚಾಗಬೇಕಿದೆ.

ಜಾತಿಯ ರಾಜಕಾರಣದ ಜಾಗದಲ್ಲಿ ದಲಿತ ರಾಜಕಾರಣವನ್ನು ಹುಟ್ಟುಹಾಕಬೇಕು. ದಲಿತ ಮನಸ್ಸುಗಳನ್ನು ಈ ಕಾಯಕಕ್ಕೆ ಸನ್ನದ್ಧಗೊಳಿಸಬೇಕಿದೆ. ಆಧುನಿಕತೆಯ ಶತಮಾನದಲ್ಲಿ ಜಾತಿ ಬಲಿಷ್ಠಗೊಳಿಸಿಕೊಂಡೇ ಮುಂದುವರೆಯುವ ಹಿಂದೂ ಸಮಾಜವು ದಲಿತ ರಾಜಕಾರಣವನ್ನ ಏಕೆ ಒಪ್ಪಿಕೊಳ್ಳಬೇಕು, ಎಂಬ ಮನೋವೃತ್ತಿ ಹಿಂದೂಗಳಲ್ಲಿ ಕಂಡುಬಂದಿರುವುದೇ ದಲಿತ ರಾಜಕಾರಣಕ್ಕೆ ಒಂದು ದೊಡ್ಡ ಸವಾಲಾಗಿದೆ. ಇಂತಹ ಮನೋವೃತ್ತಿಗೆ ದಲಿತ ರಾಜಕಾರಣವೇ ಸಿದ್ಧ ಔಷಧಿ. ಈ ಸಿದ್ಧ ಔಷಧಿಯನ್ನು ಚಿಕಿತ್ಸೆಗಾಗಿ ಪಡೆಯದಂತೆ ತಡೆಯೊಡ್ಡುವ ಕೆಲಸವನ್ನು ಹಿಂದೂ ಸಮಾಜ ದಲಿತ ರಾಜಕಾರಣದಲ್ಲಿಯೇ ಹುಟ್ಟು ಹಾಕಿರುತ್ತದೆ. ಇದು ದಲಿತ ರಾಜಕಾರಣಕ್ಕೆ ಬಹುದೊಡ್ಡ ಅಪಾಯ. ಅನಾರೋಗ್ಯದ ಮನಸ್ಸುಳ್ಳವರು ಇಂತಹ ಅಪಾಯವನ್ನು ಒಳ್ಳೆಯ ಉಪಾಯವೆಂದು ಸ್ವೀಕರಿಸಿ ತಮ್ಮನ್ನ ತಾವೇ ಕೊಂದುಕೊಳ್ಳುತ್ತಾರೆ. ಈ ಅಪಾಯ ದಲಿತ ರಾಜಕಾರಣವನ್ನು ಸೀಳುವ, ವಿಕಾರಗೊಳಿಸುವ ಮತ್ತು ಬಲಹೀನಗೊಳಿಸುವ ಸ್ಥಿತಿಗೆ ಕೊಂಡೊಯ್ಯುತ್ತವೆ. ಇದರಿಂದ ಆರೋಗ್ಯವಂತ ಮನಸ್ಸುಳ್ಳವರು ಎಚ್ಚೆತ್ತುಕೊಂಡು ಅನಾರೋಗ್ಯದ ಮನಸ್ಸುಳ್ಳವರು ದುರ್ಬಲ ಮನಸ್ಸುಗಳನ್ನ ಬಲಿಷ್ಠಗೊಳಿಸುವ ಕೆಲಸವನ್ನು ನಿರಂತರವಾಗಿ ಮಾಡಬೇಕಿದೆ. ಚರಿತ್ರೆಯಿಂದ ಈ ಸತ್ಯವನ್ನು ಮನದಟ್ಟು ಮಾಡಿಕೊಂಡು ದಲಿತ ರಾಜಕಾರಣಕ್ಕೆ ಎದುರಾಗುವ ಅಪಾಯಗಳನ್ನು ನಿವಾರಿಸಿಕೊಂಡು ದಲಿತ ರಾಜಕಾರಣವನ್ನು ಕಟ್ಟಬೇಕಿದೆ. ದಲಿತ ರಾಜಕಾರಣ ಜಾತಿ, ಧರ್ಮ ಅಥವಾ ಲಿಂಗ ಆಧಾರಗಳಿಂದ ನಿರ್ಮಿತವಾಗದೇ ಮಾನವತಾವಾದದ ಆಧಾರದಲ್ಲಿ ನಿರ್ಮಿತವಾಗ ಬೇಕಿದೆ. practical politics ಮಾನವತಾವಾದವನ್ನು ಒಪ್ಪಿಕೊಂಡು ಜಾತಿ, ಧರ್ಮ ಮತ್ತು

ಲಿಂಗ ಇವುಗಳನ್ನು ಕಡೆಗಣಿಸಬೇಕಿದೆ.

ಒಬ್ಬರು ಎಲ್ಲರಿಗಾಗಿ, ಎಲ್ಲರೂ ಒಬ್ಬರಿಗಾಗಿ ಎಂಬ ನಿಯಮದಡಿಯಲ್ಲಿ ಸಾಮೂಹಿಕ ಭದ್ರತೆಯ ಚೌಕಟ್ಟನ್ನ ದಲಿತ ರಾಜಕಾರಣ ಕಟ್ಟಬೇಕಿದೆ. ಇದು ಸಾಧ್ಯವಿದೆ. ಇದರಿಂದ ಮತೀಯ ಶಕ್ತಿಗಳನ್ನು ದೂರವಿರಿಸುವ ಎಲ್ಲಾ ಲಕ್ಷಣಗಳು ದಲಿತ ರಾಜಕಾರಣ ಪಡೆದು, ವಿರಾಟ ಸಮಾವೇಶಕ್ಕೂ ಅಂಬೇಡ್ಕರ್ ಪ್ರವೇಶಿಸಿದ ಸ್ಥಿತಿ ಜಾತಿ ರಾಜಕಾರಣದ ಕಪಿಮುಷ್ಠಿಯ ರಕ್ಷಸತನದಿಂದ ದಲಿತ ರಾಜಕಾರಣವನ್ನು ಸಂರಕ್ಷಿಸಬಹುದಾಗಿದೆ. ದಲಿತ ರಾಜಕಾರಣದ ಮೈತ್ರಿ (ಸೋದರತ್ವ)ಯ ಶಕ್ತಿಯನ್ನು ಬಹಳಷ್ಟು ಜನರಿಗೆ ಮನವರಿಕೆ ಮಾಡಿಕೊಡ ಬೇಕಿದೆ. ಇದನ್ನು ಮನವರಿಕೆ ಮಾಡಿಕೊಟ್ಟಾಗ ಮಾತ್ರ ಇಂತಹ ಜಾತಿಯವರು/ಧರ್ಮದವರೇ ಇಂತಹ ಹುದ್ದೆಗೆ ಹೋಗಬೇಕೆಂಬ ಸಮಾಜ ಸಡಿಲಗೊಳ್ಳುತ್ತಾ ಮಾಯವಾಗುತ್ತದೆ. ಆಗ ಮಾತ್ರ ದಲಿತ ರಾಜಕಾರಣಕ್ಕೆ ಅರ್ಥದೊರೆಯುತ್ತದೆ. ಪಂಚಾಯಿತಿ ಮಟ್ಟದಿಂದ ಪಾರ್ಲಿಮೆಂಟ್‌ನವರೆಗೂ ಭಾರತದ ರಾಜಕಾರಣ ದಲಿತ ರಾಜಕಾರಣವನ್ನು ಆಚರಣೆಯಲ್ಲಿಡುವಂತಹ ಭಾರತದ ಪ್ರಜಾಪ್ರಭುತ್ವ ನಿರ್ಮಾಣಗೊಳ್ಳುತ್ತದೆ. ಇಂತಹ ಪ್ರಜಾಪ್ರಭುತ್ವದಿಂದ ರಾಷ್ಟ್ರದ ಪ್ರಗತಿ ಉಜ್ವಲವಾಗುತ್ತದೆ. ರಾಷ್ಟ್ರವು ಎದುರಿಸುತ್ತಿರುವ ಅಭಿವೃದ್ಧಿ ಹೆಸರಿನ ಸವಾಲುಗಳಿಗೆ ದಲಿತ ರಾಜಕಾರಣ ಸ್ಥಾಪನೆಯ ಮೂಲಕ ಉತ್ತರಿಸಬಹುದಾಗಿದೆ.

ದಲಿತ ರಾಜಕಾರಣ ಮತ್ತು ಅಭಿವೃದ್ಧಿ:

ಭಾರತವು ಅಭಿವೃದ್ಧಿಶೀಲ ರಾಷ್ಟ್ರವಾಗುತ್ತಿರುವ ಸಂದರ್ಭದಲ್ಲಿ ದಲಿತ ರಾಜಕಾರಣ ವಿಶೇಷವಾದ ಪಾತ್ರವನ್ನು ನಿರ್ವಹಿಸಬೇಕಿದೆ. ರಾಷ್ಟ್ರಗಳನ್ನು ಅಭಿವೃದ್ಧಿಯ ಪಥದಲ್ಲಿ ಗುರುತಿಸುವ ಪರಿಪಾಠವು ಹೆಚ್ಚಾಗುತ್ತಿರುವ ಕಾಲದಲ್ಲಿ ಅಭಿವೃದ್ಧಿಯ ಪರಿಕಲ್ಪನೆಯನ್ನು ಸರಿಯಾದ ರೀತಿಯಲ್ಲಿ ಗುರುತಿಸಬೇಕಿದೆ. ಮಾನವ ಅಭಿವೃದ್ಧಿ ಕಲ್ಪನೆಗೆ ರಾಷ್ಟ್ರಗಳ ಅಭಿವೃದ್ಧಿಯ ಕಲ್ಪನೆಗೆ ಇದು ಪೂರಕ ಅಂಶವಾಗಿದೆ. ಇದನ್ನು ಉತ್ತಮ ರೀತಿಯಲ್ಲಿ ಅಳವಡಿಸಿಕೊಂಡು ಎಲ್ಲಾ ರಂಗದ ಅಭಿವೃದ್ಧಿಯನ್ನು ಸಾಧಿಸಬೇಕಿದೆ. ಭಾರತ ರಾಜಕಾರಣ ಇದನ್ನು ಸಾಧಿಸುವ ಆಶಯವನ್ನು ಇಟ್ಟುಕೊಂಡರೆ ದಲಿತ ರಾಜಕಾರಣ ಸುಲಭವಾಗಿ ಪ್ರವೇಶಿಸಲು ಸಾಧ್ಯವಾಗುತ್ತದೆ.

ರಾಷ್ಟ್ರಗಳನ್ನು ಕೈಗಾರಿಕೆಯ ಅಭಿವೃದ್ಧಿಯ ರಾಷ್ಟ್ರಗಳಾಗಿ, ಶ್ರೀಮಂತ ರಾಷ್ಟ್ರಗಳ ಗುಂಪುಗಳಾಗಿ ವಿಂಗಡಿಸಿ ನೋಡುತ್ತಿರುವ ಅಂತರಾಷ್ಟ್ರೀಯ ರಾಜಕಾರಣದಲ್ಲಿ ಅಭಿವೃದ್ಧಿ ಪಥ ಹೇಗೆ ಚಲಿಸುತ್ತಿದೆ ಎಂಬುದನ್ನು ಗುರುತಿಸಬಹುದು. ಬಡರಾಷ್ಟ್ರಗಳು ಇಂತಹ ಪೈಪೋಟಿಯಲ್ಲಿ ಸಿಲುಕಿ ಅಂತರಾಷ್ಟ್ರೀಯ ರಾಜಕಾರಣದಲ್ಲಿ ರಾಜಿಯಾಗುವ ವಾತಾವರಣವು ಹೆಚ್ಚುತ್ತವೆ. ರಾಷ್ಟ್ರದೊಳಗೆ ಇಂತಹ ಪ್ರಕ್ರಿಯೆಗಳಿಗೆ ವಿರೋಧಗಳು ವ್ಯಕ್ತವಾಗುತ್ತಿದ್ದರೂ ಅಭಿವೃದ್ಧಿ ಹೊಂದಿರುವ ರಾಷ್ಟ್ರಗಳು ಅಭಿವೃದ್ಧಿಯ ಹೆಸರಿನಲ್ಲಿ ಶಕ್ತಿ ರಾಜಕಾರಣವನ್ನ ತಮ್ಮಲ್ಲಿಯೇ ಕೇಂದ್ರಿಕರಿಸಿ ಅಂತರಾಷ್ಟ್ರೀಯ ರಾಜಕಾರಣವೆಂದು ಇತರ ರಾಷ್ಟ್ರಗಳನ್ನು ಬಲವಂತವಾಗಿ ತಮ್ಮ ನಿಯಂತ್ರಣದ orbit ಗೆ ಒಳಪಡಿಸಿಕೊಳ್ಳುತ್ತದೆ. ದಲಿತ ರಾಜಕಾರಣ ಇಂತಹ ಎಲ್ಲಾ ಸೂಕ್ಷ್ಮತೆಗಳನ್ನು ಗಮನಿಸಿ ಅವುಗಳಿಗೆ ಪರ್ಯಾಯವನ್ನು ಹುಡುಕಿಕೊಳ್ಳಲು ಸಾಧ್ಯವಾಗುತ್ತದೆ. ಏಕೆಂದರೆ, ದಲಿತ ರಾಜಕಾರಣ ಶೋಷಣೆಯಿಂದ ಹೊರಬಂದ ರಾಜಕಾರಣವಾಗಿದ್ದು, ಮತ್ತು ಬುದ್ಧನೆಡೆಗೆ..... ಮರಳಿಮನೆಗೆ ಸಾಗುವ ಹಾದಿಯಿಂದ ಕೂಡಿದೆ. ಇದರಿಂದ ಇಂತಹ ಅಪಾಯಗಳಿಗೆ ಪರ್ಯಾಯವನ್ನು ಸೃಷ್ಟಿಸಿಕೊಳ್ಳುವುದನ್ನು ಸಾಧ್ಯವಾಗಿಸಿ ಶಕ್ತಿಯ ರಾಜಕಾರಣವನ್ನು ಅಹಿಂಸಾವಾದದ ಹಿನ್ನೆಲೆಯಲ್ಲಿ ಆಚರಣೆಯಲ್ಲಿಡುವ ದಲಿತ ರಾಜಕಾರಣವಾಗುತ್ತದೆ. ಇದಕ್ಕೆ ಮೌರ್ಯ ಸಾಮ್ರಾಜ್ಯದ ಪಥನದ ಹಾದಿ ಹಿಡಿಯುತ್ತದೆ ಎಂಬ ಆತಂಕಬೇಕಿಲ್ಲ.

ದಲಿತ ರಾಜಕಾರಣ ಮೈತ್ರಿಯ ರಾಜಕಾರಣವಾಗಿರುವುದರಿಂದ ಹಾಗೂ ಮೈತ್ರಿಯು democratic ಆಗಿರುವದರಿಂದ ಅಪಾಯವಿರುವದಿಲ್ಲ. ಇದು ಮೇಲ್ನೋಟಕ್ಕೆ ಆದರ್ಶವಾಗಿ ಕಂಡರೂ ಇದರ ಮುಖ್ಯ ತಿರುಳು ವಾಸ್ತವವಾದದ ಸ್ಥಳದಡಿಯಲ್ಲಿದೆ. ಬಲಪ್ರಯೋಗ ಯಾವಾಗಲೂ ತಾತ್ಕಾಲಿಕ. ಬಲದಿಂದ, ಭಯದಿಂದ ಮತ್ತು ಹಿಂಸೆಯಿಂದ ದಲಿತ ರಾಜಕಾರಣ ದೂರವಿರುತ್ತದೆ. ದಲಿತ ರಾಜಕಾರಣದ ಬಲವೆಂದರೆ ಪ್ರಭುತ್ವ ರಾಜಕಾರಣ. ಅಂತರಾಷ್ಟ್ರೀಯ ಮಟ್ಟದಲ್ಲಿ ಇದು ರಾಷ್ಟ್ರಗಳ ಪ್ರಭುತ್ವ ರಾಜಕಾರಣ. ಭಯ ವೆಂದರೆ ದಲಿತ ಶಕ್ತಿಯನ್ನು ದೌರ್ಜನ್ಯದಿಂದ ಮುಕ್ತವಾಗಿಸುವ ಸ್ಥಿತಿ. dalit phobiaಯ ಎಂದೂ Unconstitutional ಆಗಿರುವುದಿಲ್ಲ. ಸಂವಿಧಾನ ಬದ್ಧವಾದ ಹೋರಾಟದ ಮೂಲಕ ದಲಿತ ರಾಜಕಾರಣ ನಿರ್ಮಾಣವಾಗಿರುವುದರಿಂದ dalit phobia ಪ್ರಜಾಪ್ರಭುತ್ವದ ತತ್ವಕ್ಕೆ ಅನುಗುಣವಾಗಿದೆ. ಆದುದರಿಂದ, ಹಿಂಸೆಗೆ ದಲಿತ ರಾಜಕಾರಣದಲ್ಲಿ ಸ್ಥಾನವಿರುವುದಿಲ್ಲ.

ಅನೇಕ ರಾಷ್ಟ್ರಗಳಲ್ಲಿ ಅಭಿವೃದ್ಧಿಯ ಹೆಸರಿನಲ್ಲಿ ಶೋಷಣೆ, ಹಿಂಸೆ ಮತ್ತು ದೌರ್ಜನ್ಯಗಳು ನಡೆಯುತ್ತಿವೆ. ಅಭಿವೃದ್ಧಿ ಯಾವಾಗಲೂ ಪ್ರಜಾಪ್ರಭುತ್ವದ ಹಿತವನ್ನ ಕಾಯಬೇಕು. ಅಭಿವೃದ್ಧಿ ಕೆಲವೇ ಕೆಲವು ಹಿತಾಶಕ್ತಿಯ ಗುಂಪುಗಳಿಗೆ ಸಿಮೀತವಾಗಬಾರದು. ರಸ್ತೆ ನಿರ್ಮಾಣದಿಂದ ಹಿಡಿದು ಬಂದರುಗಳ ನಿರ್ಮಾಣದವರೆಗೂ ಅಭಿವೃದ್ಧಿಯ ಪರಿಕಲ್ಪನೆಯನ್ನು ಪ್ರಜಾಪ್ರಭುತ್ವ ತಪ್ಪದೆ ಅನುಗುಣವಾಗಿ ಕೈಗೊಳ್ಳಬೇಕಿದೆ. ರಸ್ತೆಯ ನಿರ್ಮಾಣದ ಹೆಸರಿನಲ್ಲಿ ಭೂಮಿಯನ್ನು ಕಸಿದುಕೊಳ್ಳುವ ಅಭಿವೃದ್ಧಿ ಇಂದು ಹೆಚ್ಚಾಗಿ ನಡೆಯುತ್ತಿದ್ದು, ಇದು ಅಭಿವೃದ್ಧಿಯ ಪರಿಕಲ್ಪನೆಗೆ ಮಾರಕವಾಗಿದೆ. ಅದರಲ್ಲೂ ಕೃಷಿಯನ್ನೇ ಪ್ರಧಾನವಾಗಿ ಅವಲಂಬಿಸಿರುವ ಭಾರತದಂತಹ ರಾಷ್ಟ್ರದಲ್ಲಿ ಭೂಮಿಯನ್ನು ಕಸಿದು ಕೊಳ್ಳುವುದು ಅಭಿವೃದ್ಧಿಯ ಮಾರಕವಲ್ಲದೆ ಬೇರೇನು ಅಲ್ಲ. ರಸ್ತೆ ನಿರ್ಮಾಣ ಪ್ರಗತಿಗೆ ನಾಂದಿ. ಆದರೆ, ಇದು ವೈಜ್ಞಾನಿಕವಾಗಿರಬೇಕೆ ವಿನಹ ಯಾರದೋ ಪ್ರತಿಷ್ಠೆಗೆ ಅಥವಾ ಯಾರಿಗೋ ಸಹಾಯ ಮಾಡುವಂತಿರಬಾರದು. ಕೃಷಿ ಆಧಾರಿತ ರಾಷ್ಟ್ರದಲ್ಲಿ ಭೂಮಿ ಅತ್ಯಂತ ಪ್ರಮುಖವಾದ ಸ್ಥಾನವನ್ನು ಹೊಂದಿರುತ್ತದೆ. ಭೂಮಿಯನ್ನು ಕಳೆದು ಕೈಗಾರಿಕೆಗಳನ್ನು ಹೆಚ್ಚೆಚ್ಚು ಸ್ಥಾಪಿಸುವ ಬೆಳವಣಿಗೆಯೂ ಮುಂದಿನ ಪೀಳಿಗೆಗೆ ಆಘಾತವನ್ನುಂಟು ಮಾಡುತ್ತದೆ. ಇದರಿಂದ ಪರಿಸರಕ್ಕೆ ಹಾನಿಯಾಗುತ್ತದೆ. ಉಸಿರಾಡುವ ಗಾಳಿ, ಕುಡಿಯುವ ನೀರು ಇವೆಲ್ಲವೂ ಮಲೀನಗೊಂಡು ಹುಟ್ಟುವ ಮಗು ರೋಗಗ್ರಸ್ತವಾಗಿ, ದುಡಿಯುವ ಕೈಗಳು ಬಲಹೀನಗೊಂಡು ರಾಷ್ಟ್ರವನ್ನು ಬೇರೊಂದು ರಾಷ್ಟ್ರದ ಸೂಚನೆಗಳಿಗೆ ತಕ್ಕಂತೆ ನಡೆಯುವಂತ ರಾಷ್ಟ್ರವಾಗಿಸುತ್ತದೆ. ಆದುದ್ದರಿಂದ ಅಭಿವೃದ್ಧಿಯ ಪರಿಕಲ್ಪನೆಯನ್ನು ತುಂಬಾ ಗಂಭೀರವಾಗಿ ಅವಲೋಕಿಸಿ ಅರ್ಥಪೂರ್ಣವಾದ ಅಭಿವೃದ್ಧಿಯನ್ನು ಸಾಧಿಸುವ ದಲಿತ ರಾಜಕಾರಣ ಸೃಷ್ಟಿಯಾಗಬೇಕು.

ರಾಷ್ಟ್ರಗಳನ್ನು ಕೈಗಾರಿಕೆಯ ಅಭಿವೃದ್ಧಿಯ ರಾಷ್ಟ್ರಗಳಾಗಿ, ಶ್ರೀಮಂತ ರಾಷ್ಟ್ರಗಳ ಗುಂಪುಗಳಾಗಿ ವಿಂಗಡಿಸಿ ನೋಡುತ್ತಿರುವ ಅಂತರಾಷ್ಟ್ರೀಯ ರಾಜಕಾರಣದಲ್ಲಿ ಅಭಿವೃದ್ಧಿ ಪಥ ಹೇಗೆ ಚಲಿಸುತ್ತಿದೆ ಎಂಬುದನ್ನು ಗುರುತಿಸಬಹುದು. ಬಡರಾಷ್ಟ್ರಗಳು ಇಂತಹ ಪೈಪೋಟಿಯಲ್ಲಿ ಸಿಲುಕಿ ಅಂತರಾಷ್ಟ್ರೀಯ ರಾಜಕಾರಣದಲ್ಲಿ ರಾಜಿಯಾಗುವ ವಾತಾವರಣವು ಹೆಚ್ಚುತ್ತವೆ. ರಾಷ್ಟ್ರದೊಳಗೆ ಇಂತಹ ಪ್ರಕ್ರಿಯೆಗಳಿಗೆ ವಿರೋಧಗಳು ವ್ಯಕ್ತವಾಗುತ್ತಿದ್ದರೂ ಅಭಿವೃದ್ಧಿ ಹೊಂದಿರುವ ರಾಷ್ಟ್ರಗಳು ಅಭಿವೃದ್ಧಿಯ ಹೆಸರಿನಲ್ಲಿ ಶಕ್ತಿ ರಾಜಕಾರಣವನ್ನ ತಮ್ಮಲ್ಲಿಯೇ ಕೇಂದ್ರಿಕರಿಸಿ ಅಂತರಾಷ್ಟ್ರೀಯ ರಾಜಕಾರಣವೆಂದು ಇತರ ರಾಷ್ಟ್ರಗಳನ್ನು ಬಲವಂತವಾಗಿ ತಮ್ಮ ನಿಯಂತ್ರಣದ orbit ಗೆ ಒಳಪಡಿಸಿಕೊಳ್ಳುತ್ತದೆ.

ಗಣಿಗಾರಿಕೆ, ಕೈಗಾರಿಕೆ ಕುಳಗಳು ಭಾರತದ ರಾಜಕಾರಣವನ್ನು ಇಲ್ಲಿಯವರೆಗೂ ಆಳಿದ್ದು ಸಾಕಾಗಿದ್ದು ಇನ್ನು ಮುಂದೆ ಆ ಜಾಗದಲ್ಲಿ ಪರಿಸರ ಪ್ರೇಮಿಗಳು, ಆದಿವಾಸಿಗಳು ಮತ್ತು ಎಲ್ಲಾ ಒಪ್ಪುವಂತಹ ಅಭಿವೃದ್ಧಿವಾದಿಗಳು ಭಾರತದ ರಾಜಕಾರಣವನ್ನು ದಲಿತ ರಾಜಕಾರಣದ ಮೂಲಕ ಸ್ಥಾಪಿಸಬೇಕಿದೆ. ಸರದಾರ ಸರೋವರ ಯೋಜನೆ ಆಗಿರಲಿ, ತೇರಿ ಅಣೆಕಟ್ಟಾಗಿರಲಿ ಅಥವಾ ನದಿ ನೀರಿನ ಹಂಚಿಕೆಯಾಗಲೀ ಇವುಗಳಿಗೆ ದಲಿತ ರಾಜಕಾರಣದಲ್ಲಿ ಪರಿಹಾರಗಳಿವೆ. ಬೃಹತ್ ವಾಹನಗಳ ತಯಾರಿಕೆಯ ಘಟಕಗಳನ್ನು ನಿರ್ಮಿಸುವ ನೆಪದಲ್ಲಾಗಲೀ ಅಥವಾ ವಿಶೇಷ ಆರ್ಥಿಕ ವಲಯಗಳನ್ನು ಸೃಷ್ಟಿಸುವುದಾಗಲೀದಲಿತ ರಾಜಕಾರಣ ಅಭಿವೃದ್ಧಿಯ ಪರಿಕಲ್ಪನೆಗೆ ಅನುಗುಣವಾಗಿ ಕಾರ್ಯನಿರ್ವಹಿಸುವ ಸಾಮರ್ಥ್ಯವನ್ನು ಹೊಂದಿದೆ. ಇದು ದೇಶಿಯ ಸಂಸ್ಕೃತಿಯ ಮೂಲಕ ಮೊಳಕೆಯೊಡೆದು ಚಿಗುರುವ ಸಂಕೇತ ದಲಿತ ರಾಜಕಾರಣವಾಗಿದೆ. ಈ ಸಂಕೇತಕ್ಕೆ ತನಗೆ ಎದುರಾಗುವ ಸವಾಲುಗಳನ್ನು ಎದುರಿಸುವ ಎದೆಗಾರಿಕೆ ಇರುತ್ತದೆ. ಇದು hybrid ತಳಹದಿಯ ಮೇಲೆ ನಿರ್ಮಾಣಗೊಂಡಿರುವದಿಲ್ಲ. ಅದಕ್ಕೆ ತನಗೆ ಎದುರಾಗುವ ಎಲ್ಲಾ ಸವಾಲುಗಳನ್ನು ಸ್ವೀಕರಿಸಿ ಅವುಗಳಿಗೆ ಸಾವಯವ ಪದ್ಧತಿಯ ಮೂಲಕ ಉತ್ತರಿಸು ವಷ್ಟು ಬಲಿಷ್ಠವಾಗಿದೆ.

ಭಾರತದ ರಾಜಕಾರಣ ಇದನ್ನು ಮನಗಂಡು ದಲಿತ ರಾಜಕಾರಣವನ್ನ ಗೌರವಿಸುವಂತಾಗಬೇಕು. ಇಲ್ಲಿಯವರೆಗೆ ಭಾರತದ ರಾಜಕಾರಣ ದಲಿತರಿಗೆ ಸಂಬಂಧಿಸಿದಂತೆ ಹಾಕಿಕೊಂಡ ಕಾರ್ಯಕ್ರಮಗಳು ದಲಿತ ಸಬಲೀಕರಣಕ್ಕೆ ಸಾಲದಾಗಿದೆ. ದಲಿತರು ಇಂದಿಗೂ ಕೂಡ ಸಾಮಾಜಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ ಮತ್ತು ಸಾಂಸ್ಕೃತಿಕವಾಗಿ ಗೌರವಿತವಾದ ಸ್ಥಾನವನ್ನು ಪಡೆದುಕೊಂಡಿಲ್ಲ. ದಲಿತರಲ್ಲಿ ಶೈಕ್ಷಣಿಕವಾಗಿ ಸ್ವಲ್ಪ ಸುಧಾರಣೆಯು

[illegible] ಸಾಮಾಜಿಕ [illegible] ಪ್ರಗತಿಯನ್ನು ಸಾಧಿಸಿರುವುದಿಲ್ಲ. ದಲಿತ ಮಂತ್ರಿಗಳು ಭಾರತದ ರಾಜಕಾರಣದಲ್ಲಿ ಅಧಿಕಾರವನ್ನು ಪಡೆದರೂ, ದಲಿತ ರಾಜಕಾರಣವನ್ನು ಸ್ಥಾಪಿಸುವಲ್ಲಿ ವಿಫಲರಾಗಿದ್ದಾರೆ. ಅಲ್ಲಿ ಇಲ್ಲಿ ತಾಂತ್ರಿಕ ಕ್ಷೇತ್ರದಲ್ಲಿ ಪ್ರವೇಶ ಪಡೆದಿದ್ದರೂ ತಂತ್ರಜ್ಞಾನದ ಕ್ಷೇತ್ರದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಇವರಿಲ್ಲ. ಭಾರತದ ಸಂಸ್ಕೃತಿಯ ಬೇರು ಈ ರಾಷ್ಟ್ರದ ಮೂಲ ನಿವಾಸಿಗಳಾದ ದಲಿತರದು. ಆದರೆ, ಭಾರತದ ಸಂಸ್ಕೃತಿಯನ್ನು ಮೇಲ್ವರ್ಗದ ಸಂಸ್ಕೃತಿಯನ್ನ ಆಧರಿಸಿ Rich cultural Heritage ಎಂದು ಇತಿಹಾಸಕಾರರು ಭಾರತವನ್ನು ಬಿಂಬಿಸಿ ಅಲ್ಲಿಯೂ ಕೂಡ ಸಾಂಸ್ಕೃತಿಕ ನಾಯಕತ್ವದಿಂದ ದಲಿತರನ್ನು ದೂರ ಇಡಲಾಗಿದೆ. ಜಾತಿ ಆಧಾರಿತ ಸಮಾಜವು ಸತ್ಯದ ಇತಿಹಾಸದ ಜಾಗದಲ್ಲಿ ಅಸತ್ಯದ ಸಂಗತಿಗಳನ್ನೇ ಸತ್ಯದ ಇತಿಹಾಸ ಎಂದು ಬಿಂಬಿಸುವ ರಾಜಕಾರಣವನ್ನು ನಿರಂತರವಾಗಿ ನಡೆಸಿಕೊಂಡು ಬಂದಿರುತ್ತದೆ. ಇದು ಹೇಗಿದೆ ಎಂದರೆ, ಹನ್ನೆರಡನೇ ಶತಮಾನದಲ್ಲಿ ಬಸವಣ್ಣನವರು ಸಮಾನತೆಯ ಸಮಾಜವನ್ನು ಕಟ್ಟಲು ಸಾಮಾಜಿಕ ಕ್ರಾಂತಿಯನ್ನೇ ನಡೆಸಿದರು. ಇವರು ಜಾತಿರಹಿತ ಸಮಾಜವನ್ನು ನಿರ್ಮಿಸುವ ದಾರಿಯನ್ನು ಹಾಕಿಕೊಟ್ಟವರು. ಆದರೆ, ಜಾತಿ ಆಧಾರಿತ ಸಮಾಜ ಆ ದಾರಿಗೆ ಬದಲಾಗಿ ಅಸತ್ಯದ ದಾರಿಯನ್ನೇ ಬಲಿಷ್ಠಗೊಳಿಸುತ್ತಾ ಸಾಗಿತ್ತು. ಇದು ಯಾರು ಜಾತಿ ಬೇಡ ಎಂದು ಹೇಳಿದರೋ ಅಂತಹ ಮಹಾನ ಪುರುಷನನ್ನು ಮತ್ತೆ ಜಾತಿಯ ಗರ್ಭದೊಳಗೆ ಸಿಲುಕಿಸಿತು. ಇಂದು ಪ್ರತಿಯೊಂದು ಜಾತಿಗಳು ತಮ್ಮ ತಮ್ಮ ನಾಯಕರುಗಳನ್ನು ಜಾತಿಗಳಿಗೆ ಸೀಮಿತಗೊಳಿಸುವ ಪೈಪೋಟಿಯಲ್ಲಿ ತೊಡಗಿವೆ.

ಸಾಂಸ್ಕೃತಿಕ ನಾಯಕರಾಗಬೇಕಿದ್ದ ನಾಯಕರುಗಳನ್ನು ಜಾತಿ ಆಧಾರಿತ ಸಮಾಜ ಜಾತಿಯ ನಾಯಕರುಗಳನ್ನಾಗಿ ಬಂಧಿಸಲ್ಪಟ್ಟಿದೆ. ಕಾನೂನು ಸುವ್ಯವಸ್ಥೆಯನ್ನು ನೋಡಿಕೊಳ್ಳುವವರು ಪ್ರತಿಮೆಗಳ ರಕ್ಷಣೆಯಲ್ಲಿ ಹೆಚ್ಚಿನ ಕಾಲವನ್ನ ವಿನಿಯೋಗಿಸಬೇಕಾದಂತಹ ವಾತಾವರಣ ಜಾತಿ ಜಾತಿಗಳ ನಡುವಿನ ಪೈಪೋಟಿಯಿಂದ ಸೃಷ್ಟಿಯಾಗಿದೆ. ಈ ರಾಷ್ಟ್ರದ ದುರಂತವೆಂದರೆ ನಾಯಕರುಗಳನ್ನು ಜಾತಿಯ ದೃಷ್ಟಿಕೋನದಲ್ಲಿ ನೋಡುತ್ತಿರುವುದು ಮತ್ತು ರಾಜಕಾರಣವನ್ನು ಮಾಡುತ್ತಿರುವುದು. ದಲಿತ ರಾಜಕಾರಣ

ಭಾರತದ ಪ್ರಜಾಪ್ರಭುತ್ವದಲ್ಲಿ ರಾಷ್ಟ್ರ ಮಟ್ಟದಲ್ಲಿ ನೆಹರು ಕುಟುಂಬ, ರಾಜ್ಯಗಳ ಮಟ್ಟದಲ್ಲಿ ಸ್ಥಳೀಯ ನಾಯಕರಗಳ ಕುಟುಂಬಗಳು ಪ್ರಜಾಪ್ರಭುತ್ವವನ್ನು ತಮ್ಮಲ್ಲಿಯೇ ಕೇಂದ್ರಿಕರಿಸಿಕೊಂಡು ಭಾರತದ ರಾಜಕಾರಣವನ್ನು ನಡೆಸುತ್ತಿರುವುದು ವಿಷಾದನೀಯವಾಗಿದೆ. ಪ್ರಜಾಪ್ರಭುತ್ವದ ಸಿದ್ಧಾಂತಗಳಲ್ಲಿ ವ್ಯಕ್ತಿಪೂಜೆಗೆ ಅವಕಾಶವಿರುವದಿಲ್ಲ. ದಲಿತ ರಾಜಕಾರಣವು ವ್ಯಕ್ತಿಪೂಜೆಯಿಂದ ದೂರವಿರುವ ರಾಜಕಾರಣವಾಗಬೇಕು. ಭಗವಾನ್ ಬುದ್ಧರ ಮತ್ತು ಅಂಬೇಡ್ಕರ್ ಅವರ ಸೈದ್ಧಾಂತಿಕ ನೆಲೆಯಿಂದ ಹುಟ್ಟಿರುವ ದಲಿತ ರಾಜಕಾರಣವು ನೈಜ ಪ್ರಜಾಪ್ರಭುತ್ವದ ತಳಹದಿಯಲ್ಲಿ ಬೆಳೆಯಲು ಸಾಧ್ಯವಾಗುತ್ತದೆ.

ಇದನ್ನು ಮೀರುವಂತಹ ಎಲ್ಲಾ ಲಕ್ಷಣಗಳನ್ನ ಹೊಂದಿರುತ್ತದೆ. ಏಕೆಂದರೆ, ಶೋಷಣೆಗಳನ್ನು ಎರಡು ಸಾವಿರ ವರ್ಷಗಳಿಂದಲೂ ಅನುಭವಿಸಿ ಹೋರಾಟಗಳನ್ನು ಕಂಡುಕೊಂಡು ಸಮಾನತೆಯ ಸಮಾಜವನ್ನು ಕಟ್ಟುವ ಹಟವನ್ನು ಮೈಗೂಡಿಸಿಕೊಂಡಿದೆ. ಆದರೆ, ಜಾತಿಯ ಆಧಾರಿತ ಸಮಾಜದಲ್ಲಿ ವಾರದಲ್ಲಿ ಹದಿಮೂರು ದಲಿತರನ್ನು ಕೊಲೆಗೈಯಲಾಗುವುದು, ಐದು ಮನೆಗಳನ್ನು ಸುಡಲಾಗುವುದು, ಆರು ದಲಿತರನ್ನು ಅಪಹರಿಸಲಾಗುವುದು, ಪ್ರತಿದಿನ ಮೂರು ದಲಿತ ಮಹಿಳೆಯರನ್ನು ಅತ್ಯಾಚಾರ ಮಾಡಲಾಗುವುದು, ಒಂದು ದಿನದಲ್ಲಿ ಹನ್ನೊಂದು ದಲಿತರ ಮೇಲೆ ದೌರ್ಜನ್ಯವನ್ನ ಎಸಗಲಾಗುವುದು ಮತ್ತು ಭಾರತದಲ್ಲಿ ಪ್ರತಿ ಹದಿನೆಂಟು ನಿಮಿಷಕ್ಕೆ ಒಬ್ಬ ದಲಿತನ ಮೇಲೆ ಅಪರಾಧವನ್ನು ಎಸಗಲಾಗುವುದು.

ಇಂತಹ ಪರಿಸ್ಥಿತಿಯಲ್ಲಿ ದಲಿತ ರಾಜಕಾರಣ ಹೇಗೆ ಹುಟ್ಟಿ ಭಾರತ ರಾಜಕಾರಣದಲ್ಲಿ ತನ್ನ ಹಿಡಿತವನ್ನು ಹೊಂದುತ್ತದೆ ಎಂಬುದೇ ಯಕ್ಷಪ್ರಶ್ನೆಯಾಗಿದೆ. ಈ ಯಕ್ಷಪ್ರಶ್ನೆಗೆ ಉತ್ತರವನ್ನು ಅರವತ್ತು ವರ್ಷದ ಭಾರತದ ಪ್ರಜಾಪ್ರಭುತ್ವದ ಅನುಭವದ ಮೂಲಕ ಕಂಡುಕೊಳ್ಳಬೇಕಿದೆ. ನಮ್ಮದೇ ಸರ್ಕಾರದಲ್ಲಿ ನಮ್ಮ ಮೇಲೆ ದೌರ್ಜನ್ಯ ಯಾತಕ್ಕಾಗುತ್ತದೆ ಎಂಬುದನ್ನು ದಲಿತ ಚಳವಳಿ ಸಮಾಜಕ್ಕೆ ತಿಳಿಸಿಕೊಟ್ಟಿದೆ. ಈ ಅರಿವು ದಲಿತ ರಾಜಕಾರಣಕ್ಕೆ ನಾಂದಿಯಾಗಿದೆ. ಇದರಿಂದ ಹೊಸ ಹೊಸ ಪ್ರಯೋಗಗಳು ಕೆಲವು ರಾಜ್ಯಗಳಲ್ಲಿ ನಡೆಯುತ್ತಿವೆ. ಪ್ರಾರಂಭದ ಫಲಿತಾಂಶ ತೃಪ್ತಿಕರವಾಗಿ ಲ್ಲದಿದ್ದರೂ ಇಂತಹ ಪ್ರಯೋಗಗಳು ಹೆಚ್ಚು ಹೆಚ್ಚು ಪ್ರಯೋಗಕ್ಕೆ ಒಳಗಾದಾಗ ದಲಿತ ರಾಜಕಾರಣಕ್ಕೆ ಬಲ ಬರುತ್ತದೆ. ಆಗ ಮಾತ್ರ ಭಾರತದ ರಾಜಕಾರಣಕ್ಕೆ ಮೌಲ್ಯವು ಹೆಚ್ಚುತ್ತದೆ. ಈ ಮೌಲ್ಯ ಹೆಚ್ಚಬೇಕಾದರೆ ಮುಸಲ್ಮಾನರ, ಕ್ರೈಸ್ತ, ಬೌದ್ಧರ, ಜೈನರ ಪ್ರತಿನಿಧಿಗಳಿಗೆ ಸಮಾನತೆ ಪ್ರಾತಿನಿಧ್ಯವನ್ನು ಕಲ್ಪಿಸಬೇಕಾಗಿದೆ. ಅದನ್ನು ಬಿಟ್ಟು ಅಬ್ದುಲ್ ಕಲಾಂ ಬದಲು ನಜ್ಮಾ ಹೆಪ್ತುಲ್ಲಾ, ಮೊಹಮದ್ ಹಮೀದ್ ಅನ್ಸಾರಿ, ಬದಲು ಅಥಾಲ್ ರಶೀದ್ ಮಸೂದ್ ಇವರುಗಳ ಬದಲಾಗಿ ಕ್ರೈಸ್ತರ, ಬೌದ್ಧರ ಅಥವಾ ಜೈನರ ಪ್ರತಿನಿಧಿಗಳಿಗೆ ಅವಕಾಶ ನೀಡುವ ರಾಜ ಕಾರಣ ಭಾರತಕ್ಕೆ ಅಗತ್ಯವಿದೆ. ಈ ಅಗತ್ಯತೆಯನ್ನು ದಲಿತ ರಾಜಕಾರಣ ಪೂರೈಸುತ್ತದೆ. ದಲಿತ ರಾಜಕಾರಣದಲ್ಲಿ ಕುಟುಂಬ ರಾಜಕಾರಣಕ್ಕೆ ಅವಕಾಶವಿರುವುದಿಲ್ಲ. ಪ್ರಜಾಪ್ರ ಭುತ್ವದಲ್ಲಿ ವಂಶ ಪಾರಂಪರೆಯ ಆಡಳಿತ ನಡೆದುಬಂದರೆ ಜನತೆಯ ಪ್ರಜಾಪ್ರಭುತ್ವದ ಆಶೋತ್ತರಗಳಿಗೆ ಅಲ್ಲಿ ಮೌಲ್ಯವಿರುವುದಿಲ್ಲ.

ಭಾರತದ ಪ್ರಜಾಪ್ರಭುತ್ವದಲ್ಲಿ ರಾಷ್ಟ್ರಮಟ್ಟದಲ್ಲಿ ನೆಹರು ಕುಟುಂಬ, ರಾಜ್ಯಗಳ ಮಟ್ಟದಲ್ಲಿ ಸ್ಥಳೀಯ ನಾಯಕರಗಳ ಕುಟುಂಬಗಳು ಪ್ರಜಾಪ್ರಭುತ್ವವನ್ನು ತಮ್ಮಲ್ಲಿಯೇ ಕೇಂದ್ರಿಕರಿಸಿಕೊಂಡು ಭಾರತದ ರಾಜಕಾರಣವನ್ನು ನಡೆಸುತ್ತಿರುವುದು ವಿಷಾದನೀಯವಾಗಿದೆ. ಪ್ರಜಾಪ್ರಭುತ್ವದ ಸಿದ್ಧಾಂತಗಳಲ್ಲಿ ವ್ಯಕ್ತಿಪೂಜೆಗೆ ಅವಕಾಶವಿರುವದಿಲ್ಲ. ದಲಿತ ರಾಜಕಾರಣವು ವ್ಯಕ್ತಿಪೂಜೆಯಿಂದ ದೂರವಿರುವ ರಾಜಕಾರಣವಾಗಬೇಕು. ಭಗವಾನ್ ಬುದ್ಧರ ಮತ್ತು ಅಂಬೇಡ್ಕರ್ ಅವರ ಸೈದ್ಧಾಂತಿಕ ನೆಲೆಯಿಂದ ಹುಟ್ಟಿರುವ ದಲಿತ ರಾಜಕಾರಣವು ನೈಜ ಪ್ರಜಾಪ್ರಭುತ್ವದ ತಳಹದಿಯಲ್ಲಿ ಬೆಳೆಯಲು ಸಾಧ್ಯವಾಗುತ್ತದೆ. ಇದರಿಂದ ವಂಶ ಪಾರಂಪರೆಯ ಆಡಳಿತದ ಜಾಗದಲ್ಲಿ ಜನಸಾಮಾನ್ಯರೇ ಆಡಳಿತವನ್ನು, ವ್ಯಕ್ತಿಪೂಜೆಯ ಜಾಗದಲ್ಲಿ ಜನಪರ ಕಾರ್ಯಕ್ರಮಗಳನ್ನು ಜಾರಿಗೊಳಿಸಬ ಹುದಾಗಿದೆ. ಅಲ್ಲದೇ ಮತಬ್ಯಾಂಕಿನ ರಾಜಕಾರಣದ ಜಾಗದಲ್ಲಿ ಮೌಲ್ಯಾಧಾರಿತ ಮತಬ್ಯಾಂಕುಗಳನ್ನು ಸೃಷ್ಟಿಸುವುದು ದಲಿತ ರಾಜಕಾರಣದ ಬಹುದೊಡ್ಡ ಗುರಿಯಾಗಿದೆ.

ಇದು ಪ್ರಾಮಾಣಿಕ ಚುನಾವಣೆಗಳನ್ನು ನಡೆಸಲು ಸಾಧ್ಯವಾಗಿಸುತ್ತದೆ. ಇಂದಿನ ಚುನಾವಣೆಗಳನ್ನು ನೋಡಿದರೆ ನಿಷ್ಪಕ್ಷಪಾತವಾದ ಚುನಾವಣೆ ನಡೆಯುವುದೇ ಕಷ್ಟವೆನಿಸುತ್ತದೆ. ಭಾರತದ ಚುನಾವಣೆಗಳೆಂದರೆ ದುಬಾರಿ ವೆಚ್ಚದ ಚುನಾವಣೆಗಳಾಗಿವೆ. ಇದರ ಜೊತೆಗೆ ಮಧ್ಯಂತರ ಚುನಾವಣೆಗಳು ಹೆಚ್ಚಾಗುತ್ತಿದೆ. ಮತದಾರರು ಸುಭದ್ರ ಸರ್ಕಾರವನ್ನು ರಚಿಸಿಕೊಳ್ಳುವಲ್ಲಿ ವಿಫಲರಾಗುತ್ತಿದ್ದಾರೆ. ಸಮಿಶ್ರ ಸರ್ಕಾರವೇ ಇಂದು ಬಹುದೊಡ್ಡ ಪ್ರಯೋಗವಾಗಿದ್ದು, ಆ ಪ್ರಯೋಗದಲ್ಲಿ Stability and good Governance ಸ್ಥಾಪನೆಯಾಗಬೇಕಾಗಿದೆ. ಇದನ್ನು ಸಾಧಿಸಲಿಕ್ಕೆ Co-ordination Committee or steering Committee ರಚಿಸಿ

ಕೊಂಡಿದ್ದರೂ ಯಶಸ್ವಿಯಾಗುತ್ತಿಲ್ಲ. ಕಾರಣ ಸೈದ್ಧಾಂತಿಕ ನೆಲೆಯಲ್ಲಿ ರಾಜಕೀಯ ಪಕ್ಷಗಳ ದುರ್ಬಲತೆ. ರಾಜಕೀಯ ಪಕ್ಷಗಳು ಅಧಿಕಾರಕ್ಕಾಗಿಯೇ ರಾಜಕಾರಣವನ್ನು ಮಾಡುತ್ತಿವೆಯೇ ವಿನಹ ಮತದಾರರನ್ನು ಎಚ್ಚರಗೊಳಿಸುವ ರಾಜಕಾರಣವನ್ನಲ್ಲ. ಹಾಗಾಗೀ ತಿಂಗಳಿಗೆ, ವರ್ಷಕ್ಕೆ ಹೀಗೆ ಸರ್ಕಾರದ ನಿರಂತರ ಬದಲಾವಣೆಗಳನ್ನು ಕಾಣುತ್ತಿದ್ದೇವೆ. ಗಟ್ಟಿಯಾಗಿ ನಿಲ್ಲುವ ಸರ್ಕಾರ ನಮ್ಮ ಮುಂದೆ ಕಾಣುತ್ತಿಲ್ಲ. ಇದಕ್ಕೆ ಹೊಣೆ ನಾವೆಲ್ಲರೂ.

ಇದರಿಂದ ಹೊರಬರಲು ಉತ್ತಮ ರಾಜಕೀಯ ವ್ಯವಸ್ಥೆಯ ನಿರ್ಮಾಣ ಒಂದೇ ದಾರಿ. ಇದನ್ನು ಬಹುದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ಹೇಗೆ ಜಾರಿಗೊಳಿಸಬೇಕೆಂಬುದೇ ರಾಷ್ಟ್ರಕ್ಕೆ ಬಹುದೊಡ್ಡ ಸವಾಲಾಗಿದೆ. ಹೆಚ್ಚುತ್ತಿರುವ ಪ್ರಾದೇಶಿಕತೆ, ರಾಜಕೀಯ ಪಕ್ಷಗಳು ಮತ್ತು ಮತದಾರನ ಅಭದ್ರತೆ – ಇವುಗಳಿಂದ ಭಾರತದ ಪ್ರಜಾಪ್ರಭುತ್ವ ಹೊಸ ನೆಲೆಯನ್ನು ಸೃಷ್ಟಿಸಿಕೊಂಡಿದೆ. ಆದರೆ, ಈ ನೆಲೆ ಅರ್ಥಪೂರ್ಣವಾದ ನೆಲೆಯಾಗಬೇಕಾಗಿದೆ. ಜಾತಿ ಪ್ರಧಾನ ರಾಷ್ಟ್ರದಲ್ಲಿ ಹೊಸ ಹೊಸ ಸಮಸ್ಯೆಗಳಿಗೆ ಹೊಸ ಚಿಕಿತ್ಸೆಗಳನ್ನು ಕಂಡುಕೊಳ್ಳಬೇಕಿದೆ. ಜಾತಿಯೇ ಒಂದು ಬೃಹತ್ ಮಾರಿಯಾಗಿದ್ದು, ಇದು ಏಡ್ಸ್ ರೀತಿ ಹರಡುತ್ತಾ ಆರೋಗ್ಯವಂತರನ್ನು ಅನಾರೋಗ್ಯವಂತವರಾಗಿ ಅವರಿಗೆ ಏನಾದರೂ ಚಿಕಿತ್ಸೆ ನೀಡಿದರೆ ಆ ಚಿಕಿತ್ಸೆ ಫಲಕಾರಿಯಾಗದೇ ಆತನನ್ನು ಕೊಲ್ಲುವ ಹಾಗೆ ಜಾತಿ ಭಾರತೀಯರನ್ನು ಕೊಲ್ಲುತ್ತಿರುವ ಸಂದರ್ಭದಲ್ಲಿ ಮತಮಾನ್ಯಗಳು ತಮ್ಮ ನೆಲೆಗಳನ್ನು ಮತ್ತಷ್ಟು ವಿಸ್ತರಿಸಿಕೊಂಡು ಪ್ರಭುತ್ವದ ಮೇಲೆ ಹಿಡಿತವನ್ನು ಸಾಧಿಸುತ್ತಾ, ಮುನ್ನುಗ್ಗುತ್ತಿರುವುದರಿಂದ ಇವುಗಳೆಲ್ಲವನ್ನು ತಡೆಯಲು ಹೊಸ ನೆಲೆಯನ್ನು ನಿರಂತರವಾಗಿ ಕಟ್ಟಬೇಕಿದೆ. ಹೊಸ ನೆಲೆಯಿಂದ ೨೦೨೦ರ ಬಲಿಷ್ಠ ಭಾರತವನ್ನು ನೋಡಿದರೆ ಮಾತ್ರ ಭಾರತಕ್ಕೆ ಸಂಪೂರ್ಣವಾದ ಗೌರವ ಉಂಟಾಗುತ್ತದೆ. ಅಂತಹ ಗೌರವವನ್ನು ದೊರಕಿಸಬೇಕಾದರೆ ದಲಿತ ರಾಜಕಾರಣ ಜಾತಿ ರಾಜಕಾರಣದ ಹಿತವನ್ನು ಕೊನೆಗಾಣಿಸಬೇಕಿದೆ. ಆಗ ಮಾತ್ರ ಪ್ರಜಾಪ್ರಭುತ್ವಕ್ಕೆ ಅರ್ಥ ಒದಗಿ ಬಲಿಷ್ಠ ಪ್ರಜಾಪ್ರಭುತ್ವವಾಗಿ ಹೊರಹೊಮ್ಮಲು ಸಾಧ್ಯವಾಗುತ್ತದೆ. ಇಲ್ಲದಿದ್ದರೆ, ಭಾರತದ ಅಭಿವೃದ್ಧಿ ಜಾತಿ ಆಧಾರಿತ ಅಭಿವೃದ್ಧಿಯಾಗಿ ಪ್ರತಿಯೊಂದು ಜಾತಿಗಳು ತಮ್ಮ ತಮ್ಮ Share ಗಳನ್ನು ಪಡೆದುಕೊಂಡೇ ರಾಜಕಾರಣವನ್ನು ಮುಂದುವರೆಸಿ ದಂತಾಗುತ್ತದೆ.

ಇಂದು ಪ್ರತಿಯೊಂದು ಜಾತಿಗಳು ರಾಜಕಾರಣದ ಹಿಡಿತವನ್ನು ಸಾಧಿಸುವ ಏಕೈಕ ಗುರಿಯಿಂದ ಜಾತಿ ಸಂಘಟನೆಗಳನ್ನು ಬಲಿಷ್ಠಗೊಳಿಸುತ್ತಿವೆ. ಎಲ್ಲಾ ಜಾತಿಯ ಸಂಘಟನೆಗಳು ಬಲಗೊಂಡರೆ ಜಾತಿ–ಜಾತಿಗಳ ನಡುವಿನ ಘರ್ಷಣೆಗಳನ್ನು ತಡೆಯಲಿಕ್ಕೆ ಸಾಧ್ಯವಾಗುವುದಿಲ್ಲ. ರಾಷ್ಟ್ರದ ಸಂವಿಧಾನವು ಮೇಲ್ಜಾತಿಯ ಹಿಡಿತಕ್ಕೆ ಅಂದರೆ, ಆಳುವ ಕೈಗಳ ಹಿಡಿತಕ್ಕೆ ಒಳಪಡುತ್ತದೆ. ಇದರಿಂದ ಸಂವಿಧಾನದ ಆಶಯ ಈಡೇರುವುದಿಲ್ಲ. ಸಂವಿಧಾನ ಜಾರಿಯಾಗಿ ಇಂದಿಗೆ ಅರ್ಧ ಶತಮಾನ ಕಳೆದರೂ ಜಾತಿ ರಾಜಕಾರಣದಿಂದ ಸಂವಿಧಾನಕ್ಕೆ ಮುಕ್ತಿದೊರೆತಿಲ್ಲ. ಕಾನೂನು ರೂಪಿಸುವ ಮತ್ತು ಜಾರಿಗೊಳಿಸುವ ಅಂಗಗಳಲ್ಲಿ ಜಾತಿ ಕೆಲಸ ಮಾಡಿದರೆ ಯಾವುದೇ ಕಾನೂನುಗಳಿಗೂ ಬೆಲೆ ಇರುವುದಿಲ್ಲ. ಈ ಎಲ್ಲಾ ನ್ಯೂನ್ಯತೆಗಳನ್ನು ಒಳಗೊಂಡು ಭಾರತೀಯ ರಾಜಕಾರಣ ಸಾಗುತ್ತಿದೆ. ಇದು ಹೀಗೆ ಮುಂದುವರೆದರೆ, ಭಾರತವು ಜಾತಿಯ ರಾಜಕಾರಣವನ್ನು ತನ್ನದೇ ಆದ ಲಕ್ಷಣಗಳೊಂದಿಗೆ ಪ್ರಜಾಪ್ರಭುತ್ವಕ್ಕೆ ಅನರ್ಥವನ್ನು ಉಂಟುಮಾಡುತ್ತಾ ಸಾಗುತ್ತಿರುತ್ತದೆ. ಪ್ರಜ್ಞಾವಂತರು ಇಂತಹ ನ್ಯೂನತೆಗಳನ್ನು ಖಂಡಿಸಿ ಸಾರ್ವಜನಿಕ ಅಭಿಪ್ರಾಯವನ್ನು ಮೂಡಿಸಿ ದಲಿತ ರಾಜಕಾರಣದ ಪ್ರವೇಶಕ್ಕೆ ದಾರಿ ಮಾಡಿಕೊಡಬೇಕಿದೆ. ಭಾರತದ ರಾಜಕಾರಣಕ್ಕೆ ಅಂಬೇಡ್ಕರ್ ಬಯಸಿದ ಪ್ರಜಾಪ್ರಭುತ್ವ ಆದಷ್ಟು ಬೇಗನೆ ನೆಲೆಗೊಳ್ಳಬೇಕಿದೆ. ಆಗ ಮಾತ್ರ ಜನರ ಆರ್ಥಿಕ ಮತ್ತು ಸಾಮಾಜಿಕ ಜೀವನದಲ್ಲಿ ಕ್ರಾಂತಿಕಾರಕ ಬದಲಾವಣೆಗಳನ್ನು ಉಂಟು ಮಾಡಬಹುದು. ಪ್ರಜಾಪ್ರಭುತ್ವ ಯಶಸ್ವಿಗೆ ಅಂಬೇಡ್ಕರ್ ಪ್ರತಿಪಾದಿಸಿರುವ ಸಮಾನತೆಯ ಸಮಾಜ, ಬಲಿಷ್ಠ ವಿರೋಧಪಕ್ಷ, ಕಾನೂನು ಮತ್ತು ಆಡಳಿತದಲ್ಲಿ ಸಮಾನತೆ, ಸಂವಿಧಾನದ ನೈತಿಕತೆ ಪಾಲಿಸುವಿಕೆ, ನೈತಿಕ ವ್ಯವಸ್ಥೆ, ಸಾರ್ವಜನಿಕ ಅರಿವು ಮತ್ತು ಮುಕ್ತ ಮತ್ತು ನ್ಯಾಯ ಸಮ್ಮತವಾದ ಚುನಾವಣೆಗಳು ಅಗತ್ಯವಾಗಿರುತ್ತದೆ. ಈ ಅಗತ್ಯತೆಗಳನ್ನು ದಲಿತ ರಾಜಕಾರಣ ಮನವರಿಕೆ ಮಾಡಿಕೊಡುತ್ತದೆ.

ದಲಿತ ರಾಜಕಾರಣವನ್ನು ಈ ನಿಟ್ಟಿನಲ್ಲಿ ಬೆಳೆಸಿದರೆ ಕೋಮುವಾದದ ರಾಜಕಾರಣದಿಂದ ರಾಷ್ಟ್ರವನ್ನು ಮುಕ್ತಿಗೊಳಿಸಬಹುದು. ಪ್ರಜಾಪ್ರಭುತ್ವ ಪ್ರಭುತ್ವಗಳಲ್ಲಿ ಅತಿ ಜನಪ್ರಿಯವಾದ ಮತ್ತು ಅರ್ಥಪೂರ್ಣವಾದ ವ್ಯವಸ್ಥೆ ಆಗಿರುವುದರಿಂದ ಇಲ್ಲಿ ಸ್ವತಂತ್ರತೆ, ಸಮಾನತೆ ಹಾಗೂ ಸೋದರತ್ವಗಳು ಅನುಷ್ಠಾನಗೊಳ್ಳುತ್ತದೆ. ಈ ಮೂರು ತತ್ವಗಳು ತ್ರಿರತ್ನಗಳಾಗಿ ಒಂದನ್ನು ಮತ್ತೊಂದು ಅವಲಂಬಿಸಿಕೊಂಡು ಆದರ್ಶ ಸಮಾಜದ ನಿರ್ಮಾಣಕ್ಕೆ ಅವಕಾಶವನ್ನು ನೀಡುತ್ತದೆ. ಜಾತಿ ಆಧಾರಿತ ಸಮಾಜದಲ್ಲಿ ಸೋದರತ್ವವು ನೆಲೆಗೊಂಡಾಗ ಸ್ವತಂತ್ರತೆ ಮತ್ತು ಸಮಾನತೆಯನ್ನು ಸಾಧಿಸಬಹುದು. ಈ ಮೂಲಕ ಜಾತ್ಯಾತೀತ ರಾಜಕಾರಣ ಬಲಗೊಂಡು ಮಾನವೀಕರಣ ರಾಜಕಾರಣ ಬೆಳೆಯುತ್ತದೆ.

ಇಂದು ಪ್ರತಿಯೊಂದು ಜಾತಿಗಳು ರಾಜಕಾರಣದ ಹಿಡಿತವನ್ನು ಸಾಧಿಸುವ ಏಕೈಕ ಗುರಿಯಿಂದ ಜಾತಿ ಸಂಘಟನೆಗಳನ್ನು ಬಲಿಷ್ಠಗೊಳಿಸುತ್ತಿವೆ. ಎಲ್ಲಾ ಜಾತಿಯ ಸಂಘಟನೆಗಳು ಬಲಗೊಂಡರೆ ಜಾತಿ–ಜಾತಿಗಳ ನಡುವಿನ ಘರ್ಷಣೆಗಳನ್ನು ತಡೆಯಲಿಕ್ಕೆ ಸಾಧ್ಯವಾಗುವುದಿಲ್ಲ. ರಾಷ್ಟ್ರದ ಸಂವಿಧಾನವು ಮೇಲ್ಜಾತಿಯ ಹಿಡಿತಕ್ಕೆ ಅಂದರೆ, ಆಳುವ ಕೈಗಳ ಹಿಡಿತಕ್ಕೆ ಒಳಪಡುತ್ತದೆ. ಇದರಿಂದ ಸಂವಿಧಾನದ ಆಶಯ ಈಡೇರುವುದಿಲ್ಲ. ಸಂವಿಧಾನ ಜಾರಿಯಾಗಿ ಇಂದಿಗೆ ಅರ್ಧ ಶತಮಾನ ಕಳೆದರೂ ಜಾತಿ ರಾಜಕಾರಣದಿಂದ ಸಂವಿಧಾನಕ್ಕೆ ಮುಕ್ತಿದೊರೆತಿಲ್ಲ. ಕಾನೂನು ರೂಪಿಸುವ ಮತ್ತು ಜಾರಿಗೊಳಿಸುವ ಅಂಗಗಳಲ್ಲಿ ಜಾತಿ ಕೆಲಸ ಮಾಡಿದರೆ ಯಾವುದೇ ಕಾನೂನುಗಳಿಗೂ ಬೆಲೆ ಇರುವುದಿಲ್ಲ.

ಮಾನವೀಕರಣ ರಾಜಕಾರಣದಿಂದ ಅಭಿವೃದ್ಧಿ ನಿಷ್ಠೆ ಸಮಾಜದ ಎಲ್ಲಾ ವರ್ಗಗಳಿಗೂ ತಲುಪುವಂತೆ ಮಾಡುತ್ತದೆ. ಇದು ಸಮುದಾಯ ಸಮಷ್ಠಿ ರಾಜಕಾರಣವಾಗಿ ಬುದ್ಧತ್ವದ ರಾಜಕಾರಣವಾಗಲೂ ಅನುಕೂಲವಾಗುತ್ತದೆ. ಇವೆಲ್ಲವೂ ಆದರ್ಶ ಸಮಾಜದ ವಿಶ್ವಾಸಕ್ಕೆ ಪಾತ್ರವಾಗುವ ಅಂಶವಾಗಿದೆ. ಆದರೆ, ಜಾತಿಯ ಮಾನದಂಡಗಳು ಇಂತಹ ಮಾನವೀಯ ವ್ಯವಸ್ಥೆಯನ್ನು ವಿಕಾರಗೊಳಿಸುವ ಶಕ್ತಿಯನ್ನು ಹೊಂದಿರುತ್ತವೆ. ಹಾಗಾಗೀ ಜಾತಿಯ ಸರ್ವಾಧಿಕಾರಿಗಳು ಸಂವಿಧಾನಕ್ಕಿಂತಲೂ ಬಲಿಷ್ಠವಾಗಿ ಸಮಾಜವನ್ನು ಅರಿತ ಕಾನೂನುಗಳ ಮೂಲಕ ನಿಯಂತ್ರಿಸುತ್ತವೆ.

ನಮ್ಮ ರಾಷ್ಟ್ರದ ಎಲ್ಲಾ ರಾಜಕೀಯ ಪಕ್ಷಗಳು ಜಾತಿಯನ್ನು ನಿರಾಕರಿಸಿ ಅಸ್ತಿತ್ವವನ್ನು ಉಳಿಸಿಕೊಳ್ಳುವ ಶಕ್ತಿಯನ್ನು ಬೆಳೆಸಿಕೊಳ್ಳುವವರೆಗೆ ಜಾತಿಪ್ರಬಲವಾಗಿ ಮುಂದುವರೆಯುತ್ತದೆ. ಇದನ್ನು ಆದಷ್ಟು ಬೇಗನೆ ಹೋಗಲಾಡಿಸುವ ಶಕ್ತಿಗಳನ್ನು ರಾಜಕೀಯ ಪಕ್ಷಗಳು ಪಡೆಯಬೇಕಿದೆ. ಆ ಶಕ್ತಿಯನ್ನು ಎಲ್ಲಾ ಜಾತಿಯ ಮುಖಂಡರುಗಳು ತಮ್ಮ ತಮ್ಮ ಜಾತಿಯ ಸಂಕೋಲೆಗಳನ್ನು ಮೀರಿ ನಿಂತಾಗ ಮಾತ್ರ ಸಾಧ್ಯವಾಗುತ್ತದೆ. ಇಂತಹ ಗಟ್ಟಿತನದ ನಾಯಕರುಗಳು ಹುಟ್ಟಬೇಕಿದೆ. ಅಂತಹ ಹುಟ್ಟಿಗೆ ದಲಿತ ರಾಜಕಾರಣವೇ ಮೂಲವಾಗಿರುತ್ತದೆ. ಇದನ್ನು ಅರಿತುಕೊಳ್ಳುವ ಮತ್ತು ವಿಶ್ವಾಸ ಪೂರ್ವಕವಾಗಿ ಕಾರ್ಯನಿರ್ವಹಿಸುವ ಸಾಮಾಜಿಕ ವ್ಯವಸ್ಥೆಯನ್ನು ಆದರ್ಶ ಸಮಾಜದ ಮೂಲಕ ರಾಷ್ಟ್ರ ಕಂಡುಕೊಳ್ಳಬೇಕಿದೆ. ಜಾತಿರಹಿತ ಸಾಮಾಜಿಕ ವಾಸ್ತವತೆ ನಿರ್ಮಾಣಗೊಂಡಾಗ ಮಾತ್ರ ರಾಜಕಾರಣ ಉತ್ತಮವಾಗಿರುತ್ತದೆ. ೨೧ನೇ ಶತಮಾನದ ನೇತಾರರು ಮತ್ತು ಯುವ ಪೀಳಿಗೆ Casteless Social Reality ಹುಟ್ಟುಹಾಕುವ ಹೊಣೆಗಾರಿಕೆಯನ್ನು ಹೊರಬೇಕಿದೆ. ಇದನ್ನು ಪ್ರಾಮಾಣಿಕವಾಗಿ ಮತ್ತು ಕಟಿಬದ್ಧರಾಗಿ ಹೊತ್ತಾಗ ಮಾತ್ರ ಇದನ್ನು ಬೆಳೆಸಲು ಸಾಧ್ಯ. ಅಮೇರಿಕಾದಂತಹ ರಾಷ್ಟ್ರದ ಸಂಸತ್ತಿನಲ್ಲಿ ಭಾರತದ ಜಾತಿ ವ್ಯವಸ್ಥೆ ಚರ್ಚೆಯಾಗುತ್ತಿದೆ ಎಂಬುದನ್ನು ನೋಡಿದಾಗ ನಮ್ಮ political Democracyಗೆ ಯಾವ ಅರ್ಥವಿದೆ ಎಂಬುದು ಗೋಚರವಾಗುತ್ತದೆ.

ಇಲ್ಲಿಯವರೆಗೂ ರಾಷ್ಟ್ರವನ್ನು ಪ್ರಜಾಪ್ರಭುತ್ವದ ಹೆಸರಿನಲ್ಲಿ ಆಳಿದಂತಹ ನಮ್ಮ ಪ್ರತಿನಿಧಿಗಳು (ಜಾತಿ ಆಧಾರಿತ ಪ್ರತಿನಿಧಿಗಳು) Communal Democracyಯನ್ನು ಮಾತ್ರ ಆಚರಿಸಿದ್ದಾರೆ. ರಾಷ್ಟ್ರಕ್ಕೆ ಇದರಿಂದ ಮುಕ್ತಿಬೇಕಿದೆ. Communal Democracy ಜಾಗದಲ್ಲಿ ನೈಜ political, Economic, and Social Democracy ಸ್ಥಾಪನೆಯಾಗಬೇಕಿದೆ. ಆಗ ಮಾತ್ರ ಭಾರತದ ಪ್ರಜಾಪ್ರಭುತ್ವ ಅರ್ಥಪೂರ್ಣವಾಗುತ್ತದೆ. ಈ ಕೆಲಸವನ್ನು ದಲಿತ ರಾಜಕಾರಣದ ಜೊತೆಗೆ ಜಾತ್ಯಾತೀತ ಶಕ್ತಿಗಳು ಒಗ್ಗೂಡಿ ಶೋಷಿತ ವರ್ಗವನ್ನು ಆಳುವ ವರ್ಗವನ್ನಾಗಿ ಮಾರ್ಪಡಿಸಿದಾಗ ಮಾತ್ರ ಪ್ರಜಾಪ್ರಭುತ್ವ ಭದ್ರಗೊಳ್ಳುತ್ತದೆ. ಇಲ್ಲದಿದ್ದರೆ, ಪ್ರಜಾಪ್ರಭುತ್ವಕ್ಕೆ ಕೆಲವೇ ಕೆಲವು ಸಮುದಾಯಗಳ ಹಿತವನ್ನು ಕಾಪಾಡಿಕೊಂಡು ಅವರ ಗಳಿಕೆಗಳನ್ನು ಹೆಚ್ಚಿಸುವುದಂತಾಗುತ್ತದೆ. ಡಾ. ಅಂಬೇಡ್ಕರ್ ಅವರ ಕೊನೆಯ ವಾಕ್ಯದ ಮೂಲಕ ಪ್ರಜಾಪ್ರಭುತ್ವದ ವಾದಿಗಳಿಗೆ ತಮ್ಮ ತಮ್ಮ ಕರ್ತವ್ಯಗಳೇನು? ಎಂಬ ಎಚ್ಚರಿಕೆಯನ್ನು ಉಂಟು ಮಾಡುವ ಮೂಲಕ ಜಾತಿ ವ್ಯವಸ್ಥೆ ಮತ್ತು ಶಕ್ತಿ ರಾಜಕಾರಣಕ್ಕೆ ಇರುವ ಅಪಾಯವನ್ನು ತಿಳಿಯಬಯಸುತ್ತೇನೆ– 'If Democracy fails in this land, the result will be rebellion anarchy and communism.' □

ನಿರಾಪರಾಧಿಯ ನಿಲ್ಲದ ನಡೆಗೆ

ತನ್ನ ಹಸಿವಿಗೆ ಹೋರಾಡಿದರೆ ಲಾಠಿ ಏಟು, ಬೂಟಿನ ಒದೆತ, ಪರರ ಹಸಿವಿಗೆ ಹೋರಾಡಿದರೆ ಜೈಲು, ಗುಂಡು, ನಕಲಿ ಎನ್‌ಕೌಂಟರುಗಳು, ಪ್ರತಿಯೊಂದು ಪ್ರಭುತ್ವಗಳು ತಮ್ಮ ಹಿತವಲ್ಲದನ್ನ ಕೇಳ ಬಯಸುವುದಿಲ್ಲ. ಹೀಗಾಗಿಯೇ ಇತಿಹಾಸದುದ್ದಕ್ಕೂ ಜೈಲುಗಳು ಒಂದರ್ಥದಲ್ಲಿ ವ್ಯವಸ್ಥೆಯ ಬಲಿಪಶುಗಳ ಅಥವಾ ವ್ಯವಸ್ಥೆಯ ವಿರುದ್ಧ ಬಂಡೆದ್ದ ಜನರ ಆಶ್ರಯ ತಾಣಗಳೇ ಆಗಿವೆ. ಶ್ರೀಮಂತರು ಮತ್ತು ಬಲಾಢ್ಯರು ತಾವು ಮಾಡಿದ ಪಾಪದ ಹಣದಿಂದಲೇ ಶಿಕ್ಷೆಯಿಂದ ತಪ್ಪಿಸಿಕೊಂಡರೆ ಅಮಾಯಕರು-ಅಬಲರು ಅಪರಾಧ ಮಾಡದೆಯೂ ಸಿಕ್ಕಿಬಿದ್ದು ಜೈಲಿನಲ್ಲಿ ಕೊಳೆಯುತ್ತಾರೆ, ಜನರ ಹಸಿವಿನ ಹೋರಾಟಗಳನ್ನು ದಮನಿಸುವ ಇಲಾಖೆಗಳಿಗೆ ಜನರ ಕಲ್ಯಾಣ ಯೋಜನೆಗಳಿಗಿಂತಲೂ ದುಪ್ಪಟ್ಟ ಹಣವನ್ನು ವೆಚ್ಚ ಮಾಡುತ್ತಿವೆ ಎಂಬ ಮುನ್ನುಡಿಯಿಂದ ಪ್ರಾರಂಭವಾದ ಕುಮಾರು ಸಮತಳರವರು ಮೂರುವರ್ಷಗಳ ಕಾಲ ರಾಜಕೀಯ ಖೈದಿಯಾಗಿ ಅನುಭವಿಸಿದ ಜೈಲಿನ ಅನುಭವಗಳನ್ನು "ಜೈಲೆಂಬ ಲೋಕದಲ್ಲಿ" ಎಂಬ ಪುಸ್ತಕದಲ್ಲಿ ತೆರೆದಿಟ್ಟಿದ್ದಾರೆ.

ಈ ಪುಸ್ತಕವು ಜೈಲಿನ ಲಯ, ಭಾಷೆ, ಸಂಸ್ಕೃತಿ, ಜೈಲಿನ ಭ್ರಷ್ಟತೆ, ಅಲ್ಲಿ ನಡೆಯುವ ಮಾನವ ಹಕ್ಕು ಉಲ್ಲಂಘನೆ ಬಗ್ಗೆ ಜಾತಿ, ಆಚಾರ, ವಿಚಾರಗಳು ಖೈದಿಗಳಿಂದ ನಡೆಯುವ ಮೂಢನಂಬಿಕೆಗಳ ಬಗ್ಗೆ, ಜೈಲಿನ ಲೋಕಲ್ ತಂತ್ರಜ್ಞಾನದ ಬಗ್ಗೆ ಮೆಂಟಲ್, ಆಫ್ ಮೆಂಟಲ್, ಪೇಷಿಂಟಗಳ ಮಾನಸಿಕ ಅಸ್ತವ್ಯಸ್ತರಾದವರು ಮಾಡುವ ಹಾಸ್ಯಗಳನ್ನು, ಜೈಲಿನ ಆಡಳಿತ-ಅಧಿಕಾರಿಗಳು ನಡೆದುಕೊಳ್ಳುವ ರೀತಿ, ಜೈಲಿನ ವ್ಯವಸ್ಥೆ ಹಾಗೂ ಜೈಲಿನಲ್ಲಿರುವವರು ಹೆಚ್ಚಾಗಿ ದಲಿತರು, ಹಿಂದುಳಿದ ವರ್ಗದವರು, ಭೂಹೀನರು, ಅಲ್ಪಾಸಂಖ್ಯಾತರು ಹಾಗೂ ಆರ್ಥಿಕವಾಗಿ ಹಿಂದುಳಿದವರು, ಇದ್ದಾರೆ ಎಂಬುದನ್ನು ಹಾಗೂ ಇವರು ಆರೋಪಿಗಳು ಆಗಲು ಕಾರಣಗಳನ್ನು ಅಪರಾಧದ ಹಿನ್ನಲೆಗಳನ್ನು ಹಾಗೂ ಜೈಲಿನ ಇನ್ನಿತರ ಘಟನೆಗಳನ್ನು ಕುಮಾರು ಸಮತಳರವರು ಈ ಪುಸ್ತಕದಲ್ಲಿ ಬಹಳ ಸಮರ್ಪಕವಾಗಿ ಹಿಡಿದಿಟ್ಟಿದ್ದಾರೆ.

ಹೈದರಬಾದು ಕರ್ನಾಟಕದ ಹಿಂದುಳಿದ ಜಿಲ್ಲೆಯಾದ ರಾಯಚೂರುನಲ್ಲಿ ಶಿಕ್ಷಣ-ರಾಜಕೀಯ-ಆರ್ಥಿಕ, ಸಾಮಾಜಿಕ ಅಸಮಾನತೆ, ಜಾತಿಯತೆ ಇದೆ, ಜನರಿಗೆ ಮೂಲಭೂತ ಸೌಲಭ್ಯಗಳು ಇಲ್ಲ ಹಾಗೂ ಇನ್ನು ಮುಖ್ಯವಾಗಿ ಇಲ್ಲಿ ಊಳಿಗೆಮಾನ್ಯ ದೊರೆಗಳ ಶೋಷಣೆ, ಭೂಮಾಲೀಕರ ದೌರ್ಜನ್ಯ ಇದೆ. ಇವುಗಳಿಗೆ ಇತಿಶ್ರೀ ಹಾಡಲು ಚಿಕ್ಕಮಗಳೂರು ಜಿಲ್ಲೆಯ ತರಿಕೆರೆ ತಾಲೂಕಿನ ಸಮತಳ ಗ್ರಾಮದಿಂದ ಬಂದ ಕುಮಾರು ಸಮಾತಳರವರನ್ನು ಜನರಿಂದ ಬೇರ್ಪಡಿಸಿ ಅವರ ದನಿಯನ್ನು ಹತ್ತಿಕ್ಕಲು ಜೈಲಿಗೆ ಕಳಿಸಿದ್ದು ಖಂಡನೀಯ.

ಸಾಮನ್ಯ ಪೊಲೀಸ್ ಬಾಯಲ್ಲಿ "ಮೀಸಲಾತಿಯಿಂದಲೆ ನಮಗೆಲ್ಲಾ ಅನ್ಯಾಯವಾಗಿರೋದು" ಎಂಬ ಮಾತನ್ನು ಓದಿ ಆಶ್ಚರ್ಯವಾಯಿತು. ಪೊಲೀಸ್ ಇಲಾಖೆಯಲ್ಲಿ ಜಾಸ್ತಿ ದಲಿತರು-ಹಿಂದುಳಿದ ವರ್ಗದವರು, ಅಲ್ಪಾಸಂಖ್ಯಾತರು, ಹಾಗೂ ಆರ್ಥಿಕವಾಗಿ, ಸಾಮಾಜಿಕವಾಗಿ

> **ಭೂಮಿರಹಿತರಿಗೆ ಭೂಮಿಬೇಕು, ಮನೆ ಬೇಕು, ಹಕ್ಕು ಪತ್ರ, ರೇಷನ್ ಕಾರ್ಡು ಕುಡಿಯುವ ನೀರು, ಶಾಲೆ, ಇನ್ನಿತರ ಮೂಲ ಸೌಕರ್ಯಗಳನ್ನು ಕೇಳಿದರೆ, ಡೊನೆಷನ್, ಫೀ ಹೆಚ್ಚಳ, ಹಾಸ್ಟಲ್ ಸಮಸ್ಯೆಗಳ ಬಗ್ಗೆ ಕೇಳಿದರೆ ರಾಜದ್ರೋಹ, ಸರಕಾರದ ವಿರುದ್ಧ ಸಂಚು ಎಂದು ಕೇಸು ಹಾಕಿ ಕುಮಾರ ಸಮತಳ ಹಾಗೂ ಅವರ ಸಂಗಾತಿಗಳನ್ನು ಜೈಲಿಗೆ ಹಾಕಿದರು. ಅಂದರೆ ಇವುಗಳವುಗಳನ್ನು ವಂಚಿಸುತ್ತಿರುವುದು ದೇಶ ಸೇವೆಯೇ...?**

ಪುಸ್ತಕ ಅವಲೋಕನ



ಲೇ : ಕುಮಾರ್ ಸಮತಳ
ಬೆಲೆ : ರೂ.80/-
ಪ್ರ : ಲಂಕೇಶ್ ಪ್ರಕಾಶನ
ನಂ.9, ಪೂರ್ವ ಆಂಜನೇಯ ಗುಡಿ ರಸ್ತೆ,
ಬಸವನ ಗುಡಿ, ಬೆಂಗಳೂರು-560 004

ನರಸಿಂಹ

ಅಸಮಾನತೆ ಇರುವವರು, ಈ ಎಲ್ಲಾ ಜನರು ಕೂಡ ಮೀಸಲಾತಿಯನ್ನು ಒಂದಲ್ಲ ಒಂದು ರೀತಿಯಲ್ಲಿ ಪಡೆದುಕೊಂಡಿರುತ್ತಾರೆ. ಅಂತವರು ಕೂಡ ಮೀಸಲಾತಿಯನ್ನು ವಿರೋದಿಸುತ್ತಿರುವುದು ಹಾಗೂ ಎಲ್ಲಾ ಜಾತಿಯ ಬಡವರ ಐಕ್ಯತೆ ಚೀರಾಯವಾಗಲಿ ಎಂಬ ಗೋಡೆ ಬರಹವನ್ನು ಒಬ್ಬ ಸಾಮನ್ಯ ಕೆಳಜಾತಿ ಪೊಲೀಸ್‌ಗೆ ಆಕ್ರೋಶ ಬರುವುದು ಅಸಮಾನ ಎಂದರೆ ಸಾಮನ್ಯ ನೌಕರರಲ್ಲಿ ಮೀಸಲಾತಿ ಬಗ್ಗೆ, ಬಡವರ ಬಗ್ಗೆ ಆಳುವವರು ಯಾವ ಅಭಿಪ್ರಾಯ ತುಂಬಿದ್ದಾರೆ ಎಂಬುದು ಗೊತ್ತಾಗುತ್ತದೆ.

ನೀನು ಈ ಕೇಸಿನ ಅಪರಾಧಿ ಅಂತಾ ಒಪ್ಪಿಕೋ, ಸ್ವಲ್ಪ ದಿನ ಜೈಲಿನಲ್ಲಿ ಇದ್ದು ಬಾ, ಆಮೇಲೆ ನೋಡಿಕೊಂಡರಾಯಿತು ಎಂದು ಹೇಳುತ್ತಾ ಯಾರೋ ಮಾಡಿದ ಅಪರಾಧಕ್ಕೆ ಚುಟ್ಟಾನಂತಹ ನಿರಾಪರಧಿಗಳು ಅಪಾರಾಧಿಯಾಗಿ ಜೈಲಿನಲ್ಲಿ ಶಿಕ್ಷೆ ಅನುಭವಿಸುತ್ತಿರುವುದು, ಕೆಲವು ಸಂದರ್ಭಗಳಲ್ಲಿ ಪೊಲೀಸರೇ ಚುಟ್ಟಾ, ಸೀನಾ, ಹುಸೇನ್, ಸಲೀಂ, ಮಾರಪ್ಪರಂತವರನ್ನು ಸಮಯ, ಮನೆ, ನಿಗದಿ ಮಾಡಿ ಕಳ್ಳ ತನಕ್ಕೆ ಕಳಿಸಿ ಕದ್ದಿದ್ದರಲ್ಲಿ ಒಂದು ಪಾಲು ಚುಟ್ಟಾನಂತ ಹರವರಿಗೆ ಉಳಿದಿದ್ದು ಪೊಲೀಸರಿಗೆ. ಅಪರಾಧ ತಡೆಗಟ್ಟಯುವ ಪೊಲೀಸರೇ ಈ ರೀತಿ ಅಪರಧಗಳನ್ನು ಮಾಡಿಸಿದರೆ ಇದಕ್ಕಿಂತ ದೊಡ್ಡ ದುರಂತ ಇನ್ನೊಂದಿಲ್ಲ.

ಭೀಮಸ್ಯಾ ತನ್ನದಲ್ಲದ ತಪ್ಪಿಗೆ ಜೈಲುಪಾಲಾಗಿದ್ದಾನೆ. ಹಾಗೂ ಅವರ ಅತ್ತೆ ಮಾವ ಕೂಡ ರೆಡ್ಡಿ ಮೇಲೆ ಕಂಪ್ಲೆಂಟ್ ಕೊಡುವ ಬದಲು ಭೀಮಸ್ಯಾನ ಮೇಲೆ ಕೊಟ್ಟಿದ್ದಾರೆ. ಇದರರ್ಥ ಬಲಾಢ್ಯರು ಮಾಡಿರುವ ತಪ್ಪಿಗೆ ನಿರ್ಗತಿಕರು ಶಿಕ್ಷೆ ಅನುಭವಿಸುತ್ತಿದ್ದಾರೆ. ತನ್ನ ಹೆಂಡತಿ ಸಾವಿಗೆ ಕಾರಣವಾದ ರೆಡ್ಡಿಗೆ ಭೀಮಸ್ಯಾ, ನನ್ನನ್ನು ಜೈಲಿನಿಂದ ಬಿಡಿಸಿಕೊಂಡು ಹೋಗಿ, ನಾನು ನಿಮ್ಮ ಮನೇಲಿ ಜೀತ ಮಾಡಿಕೊಂಡಿರುತ್ತೇನೆ ಎಂದು ಪತ್ರ ಬರೆಯಿಸಿ ಕಳಿಸುತ್ತಾನೆ. ಇದರರ್ಥ ತನ್ನ ಹೆಂಡತಿ ಸಾವಿಗೆ ಕಾರಣವಾದ ಹಾಗೂ ತಾನು ಜೈಲುಪಾಲಾಗಲು ಕಾರಣವಾದ ರೆಡ್ಡಿ ಮೇಲೆ ಕೋಪ, ಆಕ್ರೋಶ ಸೇಡು ಬರುವುದರ ಬದಲು ಕ್ಷೇಮಗುಣ ಬಂದಿರುವುದರ ಹಿನ್ನಲೆ ಭೀಮಸ್ಯಾನ ನಿರೋದ್ಯೋಗ, ಜಾತಿ, ಆರ್ಥಿಕ, ಸಾಮಾಜಿಕ-ರಾಜಕೀಯ ಅಸಮಾನತೆಗಳು ಕಾರಣವೆನ್ನುವುದು ಇಲ್ಲಿ ಎದ್ದು ಕಾಣುತ್ತವೆ. ಹಾಗೂ ಚಿಗರೆಗಾರರು ಬೀಗನಿಗೆ ಈ ಮೂಲಕ ತಿಳಿಸುವದೇನಂದರೆ ನೀನು ಮಾತಿನಂತೆ ನಡೆ ದುಕೊಳ್ಳುತ್ತಿಲ್ಲ "ನನ್ಹಂಡ್ತಿನಾ ಕರುಕೊಂಡು ಹೋಗುವಾಗ ಏನು ಮಾತಡಿದಿವೋ ಅದೇ ತರಹ ನಡೆದುಕೊಳ್ಳಬೇಕು" ನನಗೆ 28-7-2000ಕ್ಕೆ ಕೋರ್ಟ್ ಇದೆ ಅವತ್ತು ಹಣ ತೆಗದುಕೊಂಡು ಬಾ ಲಾಯರಿಗೆ ಕೊಡಬೇಕು, ಇಲ್ಲಾಂದರೆ ನನ್ನ ಹೆಂಡತಿ ನಿನಗೆ ಬೇಡಾ ಅಂದರೆ ಕೋರ್ಟ್ ಹತ್ತಿರ ಬಾ ಪಂಚಾಯಿತಿ ಮಾಡೋಣ, ಎಂಬ ಪತ್ರವನ್ನು ತನ್ನ ಹೆಂಡತಿ ಮಾರಿದವನಿಗೆ ಪತ್ರ ಬರೆದು ಕಳಿಸುತ್ತಾನೆ. ತನ್ನ ಹೆಂಡತಿಯನ್ನು ಹಣಕ್ಕಾಗಿ ಇನ್ನೊಬ್ಬರಿಗೆ ಮಾರುವುದು ಈ 21 ಶತಮಾನದಲ್ಲಿ ವಿಶ್ವದ ಅತಿ ದೊಡ್ಡ ಪ್ರಜಾಪ್ರಭುತ್ವ

ದೇಶದಲ್ಲಿ ನಡೆಯುತ್ತಿರುವುದು ದುರಂತ, ಚುಟ್ಸಾ, ಭೀಮಸ್ಸಾ, ಚಿಗೆರೆಗಾರರ ಕತೆಗಳನ್ನು ಓದುತ್ತಿದ್ದಂತೆ ಕಣ್ಣುಗಳು ತನ್ನಷ್ಟಕ್ಕೆ ತಾವೇ ತೇವಗೊಳ್ಳುತ್ತವೆ.

ಭೂಮಿರಹಿತರಿಗೆ ಭೂಮಿಬೇಕು, ಮನೆಬೇಕು, ಹಕ್ಕು ಪತ್ರ, ರೇಷನ್ ಕಾರ್ಡು ಕುಡಿಯುವ ನೀರು, ಶಾಲೆ, ರಸ್ತೆ, ಬಸ್, ಇನ್ನಿತರ ಮೂಲ ಸೌಕರ್ಯಗಳನ್ನು ಕೇಳಿದರೆ, ಡೊನೇಷನ್, ಫೀ ಹೆಚ್ಚಳ, ಹಾಸ್ಟಲ್ ಸಮಸ್ಯೆಗಳ ಬಗ್ಗೆ ಕೇಳಿದರೆ ರಾಜದ್ರೋಹ, ಸರಕಾರದ ವಿರುದ್ಧ ಸಂಚು ಎಂದು ಕೇಸು ಹಾಕಿ ಕುಮಾರ ಸಮತಳ ಹಾಗೂ ಅವರ ಸಂಗಾತಿಗಳನ್ನು ಜೈಲಿಗೆ ಹಾಕಿದರು. ಅಂದರೆ ಇವುಗಳನ್ನು ವಂಚಿಸುತ್ತಿರುವುದು ದೇಶ ಸೇವೆಯೇ...?

ಗೌಡನ ಮುಂದೆ ಚಪ್ಪಲಿ ಹಾಕಿಕೊಂಡು ತಿರುಗುವಂತಿಲ್ಲ. ಹೊಸಬಟ್ಟೆ ಹಾಕಿಕೊಂಡು ನಿಲ್ಲುವಂತಿಲ್ಲ. ಇಂತಹ ಹಲವಾರು ದೌರ್ಜನ್ಯಗಳು ರಾಯಚೂರು ತಾಲೂಕಿನ ಅಪ್ಪನ ದೊಡ್ಡಿ ಗ್ರಾಮ ಭೂಮಾಲಿಕ ಪಾಳೆಗಾರಿಕೆ ಅಪ್ಪನ ದೊಡ್ಡಿ ಗೌಡನ ದೌರ್ಜನ್ಯಗಳು, ಇವುಗಳ ವಿರುದ್ಧ ಜನಪರ ಹೋರಾಟಗಾರರಾದ ರಮೇಶ್, ಗೋಪಾಲ, ಜಿಂದಪ್ಪರವರ ಬೆಂಬಲದಿಂದ ಒಬ್ಬ ಅನಕ್ಷರಸ್ಥ ಮಹಿಳೆ ಹೋರಾಟ ಮಾಡಿ ಆ ಗೌಡನನ್ನು ಊರು ಬಿಟ್ಟು ಹೋಡಿಸಿದ್ದಳು, ಎಂಬ ಕಾರಣಕ್ಕೆ ಪೊಲೀಸರು ತಿಮ್ಮಕ್ಕ ಮಗನನ್ನು ಅರೆಸ್ಟ್ ಮಾಡಿರುವುದು, ಅವಳ ಗಂಡನಿಗೆ ದೈಹಿಕ ಮಾನಸಿಕ ಹಿಂಸೆ ನೀಡುವುದು ಮತ್ತು ತಿಮ್ಮಕ್ಕನಿಗೆ ಬೆದರಿಕೆ ಹಾಕುವುದು. ಅವಳ ಬೆಳೆಯನ್ನು ದಿವಳಿ ಮಾಡುವುದು. ಇದು ಯಾವ ನ್ಯಾಯ...? ವಿಶ್ವದತಿದೊಡ್ಡ ಪ್ರಜಾಪ್ರಭುತ್ವ ದೇಶದಲ್ಲಿ ಅನ್ಯಾಯದ ವಿರುದ್ಧ ಹೋರಾಟ ಮಾಡಿದರೆ ಅಪರಾದವೇ...?

ಅಧಿಕಾರ ವಿಕೇಂದ್ರಿಕರಣಕ್ಕಾಗಿ, ಉತ್ತರ ಕರ್ನಾಟಕದಲ್ಲಿ ಹೈಕೋರ್ಟ್ ಪೀಠಕ್ಕಾಗಿ ಹಾಗೂ ಜೈಲಿನ ವ್ಯವಸ್ಥೆಯ ಬಗ್ಗೆ ಸುಧಾರಣೆಯ ಬಗ್ಗೆ ಜೈಲಿನಲ್ಲಿ ಎಂಟು–ಹತ್ತು ವರ್ಷಗಳಿಂದ ವಿಚಾರಣೆ ನಡೆಯದೇ ಪೆಂಡಿಂಗ್ ಇರುವವರನ್ನು, ಜಾಮೀನು ಕೊಡದಿರುವುದನ್ನು ಸಣ್ಣ ಪುಟ್ಟ ಕೇಸುಗಳನ್ನು ಸೆಲ್ಫ್ ಬೇಲು ಮೇಲೆ ಬಿಡುಗಡ ಮಾಡುವಂತೆ ಕೇಳಿದರೆ ಹಿರಿಯ ನ್ಯಾಯಧೀಶರು ಲೇಖಕರನ್ನು ಮಿಸ್ಟರು ನಿಮ್ಮ ವಿಚಾರ ಮಾತ್ರ ಹೇಳಿ ಬೇರೆಯವರದ್ದೆಲ್ಲಾ ಬೇಡ ಎಂದರು ಎಂಬುದನ್ನು ಓದಿ ಆಶ್ಚರ್ಯವಾಯಿತು. ಏಕೆಂದರೆ ಸಂವಿಧಾನವನ್ನ ಪರಿಪಾಲನೆ ಮಾಡುವ ನ್ಯಾಯಧೀಶರೇ ಸಂವಿಧಾನ ಬಾಹಿರ ಮಾತುಗಳನ್ನು ಆಡಿದರೆ ಸಾಮನ್ಯ ಜನರು, ಭೂಮಾಲಿಕರು, ಜೈಲಿನ ಸಿಬ್ಬಂದಿಗಳು ಸಂವಿಧಾನ ಬಾಹಿರ ಮಾತುಗಳನ್ನು ಆಡದೇ ಇರುತ್ತಾರೆಯೇ...? ಹಾಗೂ ಜೈಲುಗಳಲ್ಲಿ ಅಪರಾಧಿಗಳನ್ನು ಸರಿ ದಾರಿಗೆ ತರುವ ಶಿಕ್ಷಣ, ಉದ್ಯೋಗ ಕೌಶಲ್ಯಗಳನ್ನು ಕಲಿಸುತ್ತಿಲ್ಲ ಇವೆಲ್ಲ ವಿಷಯಗಳು ನ್ಯಾಯಲಕ್ಕೆ ಗೊತ್ತಿದ್ದರೂ ಮೂಕ ಪ್ರೇಕ್ಷಕವಾಗಿರುವುದು ಸರಿಯಲ್ಲ.

ಕುಮಾರು ಸಮತಳರವರನ್ನು ಪೊಲೀಸರು ಬಂಧಿಸುವುದಕ್ಕೆ ಮುಂಚೆ ನಿನ್ನ ಮೇಲೆ ಈ ರೀತಿ ಆರೋಪ ಇದೆ. ಆದುದರಿಂದ ನಿನ್ನನ್ನು ಬಂಧಿಸುತ್ತೇವೆ ಎಂದು ತಿಳಿಸಬೇಕು ಮತ್ತು ಬಂಧಿತರನ್ನು ಪೊಲೀಸರು ಅವಾಚ್ಯ ಶಬ್ಧಗಳಿಂದ ಬೈಯ್ಯಬಾರದು. ಹಾಗೂ ಮಾನಸಿಕ–ದೈಹಿಕ ಹಿಂಸೆ ಕೊಡಬಾರದು, ಬಂಧಿತ ಆರೋಪಿಯನ್ನು 24 ಗಂಟೆಯೊಳಗೆ ನ್ಯಾಯಲಕ್ಕೆ ಹಾಜರಿ ಪಡಿಸಬೇಕು. ಆದರೆ ಪೊಲೀಸರು ಇದು ಯಾವುದನ್ನು ಮಾಡದೇ ಕಾನೂನು ಉಲ್ಲಂಘಿಸಿದ್ದಾರೆ. ಬಂಧಿತ ಆರೋಪಿ ನ್ಯಾಯಲಯದಲ್ಲಿ

ಅಧಿಕಾರ ವಿಕೇಂದ್ರಿಕರಣಕ್ಕಾಗಿ, ಉತ್ತರ ಕರ್ನಾಟಕದಲ್ಲಿ ಹೈಕೋರ್ಟ್ ಪೀಠಕ್ಕಾಗಿ ಹಾಗೂ ಜೈಲಿನ ವ್ಯವಸ್ಥೆಯ ಬಗ್ಗೆ ಸುಧಾರಣೆಯ ಬಗ್ಗೆ ಜೈಲಿನಲ್ಲಿ ಎಂಟು–ಹತ್ತು ವರ್ಷಗಳಿಂದ ವಿಚಾರಣೆ ನಡೆಯದೇ ಪೆಂಡಿಂಗ್ ಇರುವವರನ್ನು, ಜಾಮೀನು ಕೊಡದಿರುವುದನ್ನು ಸಣ್ಣ ಪುಟ್ಟ ಕೇಸುಗಳನ್ನು ಸೆಲ್ಫ್ ಬೇಲು ಮೇಲೆ ಬಿಡುಗಡೆ ಮಾಡುವಂತೆ ಕೇಳಿದರೆ ಹಿರಿಯ ನ್ಯಾಯಧೀಶರು ಲೇಖಕರನ್ನು ಮಿಸ್ಟರು ನಿಮ್ಮ ವಿಚಾರ ಮಾತ್ರ ಹೇಳಿ ಬೇರೆಯವರದ್ದೆಲ್ಲಾ ಬೇಡ ಎಂದರು ಎಂಬುದನ್ನು ಓದಿ ಆಶ್ಚರ್ಯವಾಯಿತು. ಏಕೆಂದರೆ ಸಂವಿಧಾನವನ್ನ ಪರಿಪಾಲನೆ ಮಾಡುವ ನ್ಯಾಯಧೀಶರೇ ಸಂವಿಧಾನ ಬಾಹಿರ ಮಾತುಗಳನ್ನು ಆಡಿದರೆ ಸಾಮನ್ಯ ಜನರು, ಭೂಮಾಲಿಕರು, ಜೈಲಿನ ಸಿಬ್ಬಂದಿಗಳು ಸಂವಿಧಾನ ಬಾಹಿರ ಮಾತುಗಳನ್ನು ಆಡದೇ ಇರುತ್ತಾರೆಯೇ...? ಹಾಗೂ ಜೈಲುಗಳಲ್ಲಿ ಅಪರಾಧಿಗಳನ್ನು ಸರಿ ದಾರಿಗೆ ತರುವ ಶಿಕ್ಷಣ, ಉದ್ಯೋಗ ಕೌಶಲ್ಯಗಳನ್ನು ಕಲಿಸುತ್ತಿಲ್ಲ, ಇವೆಲ್ಲ ವಿಷಯಗಳು ನ್ಯಾಯಾಲಯಕ್ಕೆ ಗೊತ್ತಿದ್ದರೂ ಮೂಕ ಪ್ರೇಕ್ಷಕವಾಗಿರುವುದು ಸರಿಯಲ್ಲ.

ಅಪರಾಧಿ ಅಂತ ಸಾಬೀತಾಗುವವರೆಗೆ ಆತ ಆರೋಪಿಯೇ ಹೊರತು ಅಪರಾಧಿಯಲ್ಲ. ಬಂಧಿತ ಆರೋಪಿ ತನ್ನ ಮೇಲಿನ ಅಪರಾಧವನ್ನು ಸುಳ್ಳೆಂದು ಸಾಬಿತು ಪಡಿಸಲು ತಾನು ತನ್ನ ಪರವಾಗಿ ವಾದಿಸಲು ವಕೀಲರನ್ನು ನೇಮಿಸಕೊಳ್ಳಬಹುದು. ಈ ಅವಕಾಶವನ್ನು ಕುಮಾರು ಸಮತಳರವರ ಪರವಾಗಿ ವಕಾಲತ್ತು ವಹಿಸುವದಕ್ಕೆ ಬಂದಿರುವ ವಕೀಲರನ್ನು ಪೊಲೀಸರು ಬೆದರಿಸಿರುವುದು

ಆತ್ಮಹತ್ಯೆ

ಅನೇಕರು 'ಹೊನ್ನ ಶೂಲ'ಕ್ಕೆ
ತಮ್ಮನ್ನು ತಾವೆ
ಏರಿಸಿಕೊಂಡು
ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ.

○ ಡಾ.ಸಿ.ಪಿ.ಕೃಷ್ಣಕುಮಾರ್

ಕಾನೂನು ಬಾಹಿರ. ಹಾಗೂ ಪಾಳೆಗಾರಿಕೆ ಶೋಷಣೆ : ಜಾತಿ ಕ್ರೌರ್ಯ, ವಿದೇಶೀ ಲೂಟಿ, ಊಳಿಗಮಾನ್ಯತೆಯನ್ನು ವಿರೋಧಿಸಿ ಜನರನ್ನು ಸಂಘಟಿಸಿ ಸರಕಾರ ಹಾಗೂ ಈ ವ್ಯವಸ್ಥೆಯನ್ನು ಬದಲಾವಣೆ ಮಾಡಬೇಕೆಂಬ ಗುರಿ ಇಟ್ಟುಕಂಡು ಕುಮಾರು ಸಮತಳ, ಶ್ರೀನಿವಾಸ, ಅಂಬಣ್ಣ ಆರೋಪಿ, ಸತ್ಯಾ ರವಿ, ಭಾಸ್ಕರ್, ಸುವಕ್ಕ, ಮಹಿಬಾಬು, ಪಟ್ನಂಶಿವಪ್ಪ, ರಮೇಶ್, ಗೋಪಾಲ, ಜಿಂದಪ್ಪ, ಮಹಾಲಿಂಗ, ಲಕ್ಷ್ಮಣರಂತಹ ರಾಜಕೀಯ ಹೋರಾಟಗಾರರನ್ನು ರಾಜದ್ರೋಹ ಆರೋಪ ಕೇಸು ದಾಖಲೆ ಮಾಡಿ ಜೈಲಿಗೆ ಹಾಕಿರುವುದು ಖಂಡನೀಯ. ಹಾಗೂ ಅಂಬಣ್ಣ ಆರೋಪಿಯವರನ್ನು ಬೇಟಿಗಾಗಿ ಬರುತ್ತಿದ್ದ ಪತ್ನಿ ಹಾಗೂ ಚಿಕ್ಕ ಮಕ್ಕಳು– ಅಂಬಣ್ಣ ಹೆಂಡತಿ ಮಾನಸಿಕ ಕ್ಷೋಭೆಯ ಒತ್ತಡದಿಂದ ಎಷ್ಟೋ ಸಾರಿ ದಾರಿಯಲ್ಲೇ ಕುಸಿದು ಬಿದ್ದಿರುವ ಘಟನೆ ಹಾಗೂ ರವಿಯರನ್ನು ನೋಡಲು ಬರುತ್ತಿದ್ದ ಆತನ ಪತ್ನಿ ಹಾಗೂ ಪುಟ್ಟ ಮಗಳು ಕುಮಾರು ಸಮತಳರನ್ನು ಕಂಡು ಅಣ್ಣ ಬೆಳಗ್ಗೆಯಿಂದ ಏನು ತಿಂದಿಲ್ಲ ಎಂದು ಹೇಳಿರುವ ಘಟನೆಗಳಿಂದ ಕಣ್ಣಲ್ಲಿ ನೀರು ಬರುತ್ತವೆ.

ಸಿಲ್ವರ್ ತಟ್ಟೆ ಮಣ್ಣಿನಲ್ಲುಟ್ಟು ನುಣುಪಾದ ಕಲ್ಲಿನಿಂದ ಬಡಿಯುತ್ತ ಹೋಗುತ್ತಿದ್ದಂತೆ ಆರು ಬಾಂಡ್ಲಿ, ತಪ್ಪಲೆಯ ರೂಪ ಪಡೆಯುತ್ತದೆ ಹಾಸಲುಕೊಡುವ ಜಮಖಾನವನ್ನು ಕಟ್ ಮಾಡ ಗಾಳಿ ಹೊಡೆಯುವ ಪಂಪನ್ನು ತಯಾರು ಮಾಡುತ್ತಾರೆ, ಹಾಸಿಗೆದಾರದ ಎಳೆಯನ್ನು ತೆಗೆದು ಒಂದಷ್ಟು ದುಂಡಗೆ ಮಾಡಿ ಎಣ್ಣೆಯಲ್ಲಿ ಅದ್ದಿ ಬೆಂಕಿ ಹಚ್ಚಿ ಇದರಿಂದ Tear, Coffee ಮಾಡುತ್ತಾರೆ. ಚೆಂಬಿಗೆ ಬೆಂಕಿ ಹಾಕಿ ಆ ಮೂಲಕ ಬಟ್ಟೆಗಳನ್ನು ಇಸ್ತ್ರಿ ಮಾಡಿಕೊಳ್ಳುವುದು ಈ ಮೇಲಿನ ಜೈಲಿನ ಲೋಕಲ್ ಟೆಕ್ನಾಲಜಿಗಳು ಹಸಿದ ಹೊಟ್ಟೆಯಿಂದ ಹುಟ್ಟಿ ಬಂದ ಟೆಕ್ನಾಲಜಿಗಳು ಹೊರೆತು ಈಗ ಪ್ರಪಂಚದ್ಯಾಂತ ಬಳಸುತ್ತಿರುವ ಬಂಡವಾಳ ಶಾಹಿಗಳ ಹೊಟ್ಟೆಯಿಂದ ಹುಟ್ಟದಿಂದ ಟೆಕ್ನಾಲಗಜಿಗಳಲ್ಲ, ಬಂಡವಾಳ ಟೆಕ್ನಾಲಜಿಗಳಿಂದ ರೈತರ ಆತ್ಮಹತ್ಯೆ ನಿರೋದ್ಯೋಗ, ಆರ್ಥಿಕ ಅಸಮಾನತೆ ತಾಂಡವಾಡುತ್ತಿದೆ.

ಜೈಲಿನಲ್ಲಿ ಮಿಠಾಯಿ ಮಾರಿ ಸಂಪಾದಿಸಿ, ಶ್ರೀಮಂತರ ಬಟ್ಟೆ ತೊಳೆದು ಕೈಕಾಲುಗಳಿಗೆ ಮಸಾಜ್ ಮಾಡಿ, ಎತ್ತುಗಳನ್ನು ಸಾಕುಇವುದು, ಹಾಲು ಕರೆಯುವುದು ಇನ್ನಿತರ ಕಷ್ಟದ ಶ್ರಮದಲ್ಲಿ ತೊಡಗಿಸಿಕೊಂಡು ಹಣ ಸಂಪಾದಿಸಿ ಮನೆಗೆ ನೇರವಾಗುತ್ತಿದ್ದ ಶ್ರಮಜೀವಿಗಳು ಹಸಿದ ಹೊಟ್ಟೆಯಿಂದ ಟೆಕ್ನಾಲಜಿಗಳನ್ನು ಕಂಡು ಹಿಡಿಯುತ್ತಿದ್ದ ತಂತ್ರಜ್ಞಾನಿಗಳು ಹೊರಗೆಯಿದ್ದರೆ ಈ ದೇಶದಲ್ಲಿ ಬಡತನಕ್ಕೆ ಇತಿಶ್ರೀ ಹಾಡಬಹುದು.

ಕುಮಾರು ಸಮತಳರವರು ಜೈಲಿನಲ್ಲಿ ಕೂಡ ಜೈಲಿನ ವ್ಯವಸ್ಥೆ ಬಗ್ಗೆ, ಊಟದ ಬಗ್ಗೆ, ಭ್ರಷ್ಟತೆ, ಬಗ್ಗೆ ಹೋರಾಟ ಮಾಡಿದ್ದಾರೆ. ಹಾಗೂ ಜೈಲಿನಲ್ಲಿ ಬಂಧಿಗಳೊಂದಿಗೆ ಸಭೆ, ಚರ್ಚೆ, ಸಂವಾದ, ಮಾಡಿ ರಾಜಕೀಯ ಮೂಡಿಸಿರುವುದು ಹಾಗೂ ಎಲ್ಲಾ ಜೈಲಿನ ಸಿಬ್ಬಂದಿಗಳಿಗೆ ಒರಿಸ್ಸಾ ಚಂಡಮಾರುತದಿಂದ ಅನಾಹುತಗಳ ಬಗ್ಗೆ ಅಲ್ಲಿ ಜನರ ಪರಿಸ್ಥಿತಿಯ ಬಗ್ಗೆ ತಿಳಿಸಿ ಅನಂತರ ಒಂದು ದಿನ ಉಪವಾಸ ಮಾಡಿ ಅದರ ಹಣ ಹಾಗೂ ತಮ್ಮ ಸ್ವಂತ ಹಣವನ್ನು ಶೇಖರಿಸಿ ಒರಿಸ್ಸಾ ಸಂತ್ರಸ್ಥರ ನಿಧಿಗೆ ತಲುಪಿಸಿರುವುದು ಕುಮಾರು ಸಮತಳ ಹಾಗೂ ಅವರ ಬಂಧಿ ಸಂಗಾತಿಗಳ ಮಾನವೀಯ ಕಾಳಜಿ ನಿಜಕ್ಕೂ ಅನೋನ್ಯವಾದದ್ದು. □

ನಮ್ಮ ಪ್ರಾಥಮಿಕ ಶಿಕ್ಷಣ ಎತ್ತ ಸಾಗಿದೆ!



ಡಾ. ಟಿ.ಆರ್. ಚಂದ್ರಶೇಖರ್

ಪ್ರಾಥಮಿಕ ಶಿಕ್ಷಣವು ಮಕ್ಕಳಿಗೆ ಆಕರ್ಷಣೀಯವಾಗಿರಬೇಕು. ಅದು ಅವರಿಗೆ ಹೆಣಭಾರವಾಗಬಾರದು. ಸಮಾಜದಲ್ಲಿ ಮತ್ತು ಸರ್ಕಾರದಲ್ಲಿ ಅದು ಯಾವಾಗಲೂ ಆದ್ಯತೆಯ ಸಂಗತಿಯಾಗಬೇಕು. ಪ್ರತಿ ಊರಿನಲ್ಲಿ ಪ್ರಾಥಮಿಕ ಶಾಲೆಯು ಅಲ್ಲಿನ ಕೇಂದ್ರ ಬಿಂದುವಾಗಿರಬೇಕು. ಶಾಲೆಯ ಸ್ಥಿತಿಗತಿಯು ಒಂದು ಹಳ್ಳಿಯ ಸ್ಥಿತಿಗತಿಯನ್ನು, ಜನರ ಬದುಕಿನ ಸ್ಥಾನಮಾನವನ್ನು ಅಳೆಯುವ ಮಾನದಂಡವಾಗಬೇಕು. ಅದರ ಕಟ್ಟಡ, ಅದರ ವಿನ್ಯಾಸ, ಅಲ್ಲಿನ ಗ್ರಂಥಾಲಯ, ಆಟದ ಮೈದಾನ, ಅಲ್ಲಿನ ಶಿಕ್ಷಕವರ್ಗ, ಮಕ್ಕಳು- ಎಲ್ಲವೂ ಆದರ್ಶ ಸ್ವರೂಪದಲ್ಲಿರಬೇಕು. ಅಲ್ಲಿನ ಶಿಕ್ಷಕ ವೃಂದವು ಶಿಸ್ತುಬದ್ಧವಾಗಿ ಮತ್ತು ಅನುಕರಣೀಯ ಸ್ವರೂಪದಲ್ಲಿರಬೇಕು. ಅಲ್ಲಿ ಮಕ್ಕಳು ಯಾವುದೇ ರೀತಿಯ ತಾರತಮ್ಯ, ಪಕ್ಷ ಪಾತ, ಅಸೂಯೆ, ಹಿಂಸೆ, ದೌರ್ಜನ್ಯ ಮುಂತಾದವುಗಳನ್ನು ಅನುಭವಿಸದಂತೆ ಎಚ್ಚರ ವಹಿಸಬೇಕಾಗುತ್ತದೆ. ಹಳ್ಳಿಯೊಂದರ ೬-೧೪ ವಯೋಮಾನದ ಮಕ್ಕಳೆಲ್ಲರೂ ಶಾಲೆಯಲ್ಲಿರಬೇಕು.

ಪ್ರಸ್ತಾವನೆ:

ಕರ್ನಾಟಕದಲ್ಲಿ ಪ್ರಾಥಮಿಕ ಶಿಕ್ಷಣವು ಸರಿಸುಮಾರು ಒಂದುಕೋಟಿ ಮಕ್ಕಳನ್ನು(1ರಿಂದ 10ನೆಯ ತರಗತಿ) ಒಳಗೊಂಡ ಒಂದು ಬೃಹತ್ ವ್ಯವಸ್ಥೆಯಾಗಿದೆ. ಇದು ಪ್ರಾಥಮಿಕ. ಏಕೆಂದರೆ ಇಲ್ಲಿ ದೇಶದ ಭವಿಷ್ಯವಾದ ಮಕ್ಕಳಿಗೆ ಅಗತ್ಯವಾದ ಸಾಮಾನ್ಯ ಕುಶಲತೆಗಳನ್ನು ಮತ್ತು ನಾಗರಿಕ ಗುಣಗಳನ್ನು ಕಲಿಸಿ ಕೊಡಲಾಗುತ್ತದೆ. ಒಂದು ದೇಶದ ಭವಿಷ್ಯದ ಬೀಜವನ್ನು ಇಲ್ಲಿ ಬಿತ್ತಲಾಗುತ್ತದೆ. ದೇಶದ ಜವಾಬುದಾರಿ ನಾಗರಿಕರಾಗಲು ಅಗತ್ಯವಾದ ಜ್ಞಾನವನ್ನು ಮಕ್ಕಳು ಇಲ್ಲಿ ಪಡೆದುಕೊಳ್ಳುತ್ತಾರೆ. ಸಮಾಜದಲ್ಲಿ ನೂರಕ್ಕೆ ನೂರರಷ್ಟು ಸಾಕ್ಷರತೆಯನ್ನು ಸಾಧಿಸಿಕೊಳ್ಳಲು ಪ್ರಾಥಮಿಕ ಶಿಕ್ಷಣವು ಅಲ್ಲಿ ಕ್ರಮಬದ್ಧವಾಗಿರಬೇಕಾಗುತ್ತದೆ ಮತ್ತು ಸಶಕ್ತವಾಗಿರಬೇಕಾಗುತ್ತದೆ. ಮಕ್ಕಳು ಮುಂದೆ ಎಂಜಿನಿಯರಾಗಬೇಕು, ಡಾಕ್ಟರಾಗಬೇಕು, ತೆರಿಗೆ ತಜ್ಞರಾಗಬೇಕು, ಮೇನೇಜ್‌ಮೆಂಟ್ ಗುರುಗಳಾಗಬೇಕು ಎಂಬುದಕ್ಕಿಂತ ಅವರು ಪ್ರಥಮವಾಗಿ ನಾಗರಿಕರಾಗಬೇಕು ಎಂಬುದು ಪ್ರಾಥಮಿಕ ಶಿಕ್ಷಣದ ಉದ್ದೇಶವಾಗಬೇಕು. ಹೆಚ್ಚು ಹಣ ತರುವ ಉದ್ಯೋಗವನ್ನು ಯಾರು ಪಡೆಯುತ್ತಾರೋ ಅವರು ಮಾತ್ರ ಬುದ್ಧಿವಂತರೆಂಬ, ಯಾವ ಶಿಕ್ಷಣ ಸಂಸ್ಥೆಗಳು ಹೆಚ್ಚು ಹಣ ಸಂಪಾದಿಸುವಂತಹ ಉದ್ಯೋಗಗಳನ್ನು ದಕ್ಕಿಸಿಕೊಳ್ಳುವುದು ಸಾಧ್ಯವಾಗುವಂತೆ ಮಕ್ಕಳನ್ನು ತಯಾರಿಸುತ್ತವೋ ಅವು ಮಾತ್ರ ಉತ್ಕೃಷ್ಟ ಶಿಕ್ಷಣ ಸಂಸ್ಥೆಗಳೆಂಬ ಸೀಮಿತವಾದ ದೃಷ್ಟಿಕೋನಕ್ಕೆ ಪ್ರತಿಯಾಗಿ ಮಕ್ಕಳನ್ನು ನಾಗರಿಕರನ್ನಾಗಿ ಮಾಡುವ ವ್ಯವಸ್ಥೆ ಬಗ್ಗೆ ಗಮನ ನೀಡುವಂತಾಗಬೇಕು.

ಪ್ರಾಥಮಿಕ ಶಿಕ್ಷಣವು ಮಕ್ಕಳಿಗೆ ಆಕರ್ಷಣೀಯವಾಗಿರಬೇಕು. ಅದು ಅವರಿಗೆ ಹೆಣಭಾರವಾಗಬಾರದು. ಸಮಾಜದಲ್ಲಿ ಮತ್ತು ಸರ್ಕಾರದಲ್ಲಿ ಅದು ಯಾವಾಗಲೂ ಆದ್ಯತೆಯ ಸಂಗತಿಯಾಗಬೇಕು. ಪ್ರತಿ ಊರಿನಲ್ಲಿ ಪ್ರಾಥಮಿಕ ಶಾಲೆಯು ಅಲ್ಲಿನ ಕೇಂದ್ರ ಬಿಂದುವಾಗಿರಬೇಕು. ಶಾಲೆಯ ಸ್ಥಿತಿಗತಿಯು ಒಂದು ಹಳ್ಳಿಯ ಸ್ಥಿತಿಗತಿಯನ್ನು, ಜನರ ಬದುಕಿನ ಸ್ಥಾನಮಾನವನ್ನು ಅಳೆಯುವ ಮಾನದಂಡವಾಗಬೇಕು. ಅದರ ಕಟ್ಟಡ, ಅದರ ವಿನ್ಯಾಸ, ಅಲ್ಲಿನ ಗ್ರಂಥಾಲಯ, ಆಟದ ಮೈದಾನ, ಅಲ್ಲಿನ ಶಿಕ್ಷಕ ವರ್ಗ, ಮಕ್ಕಳು- ಎಲ್ಲವೂ ಆದರ್ಶ ಸ್ವರೂಪದಲ್ಲಿರಬೇಕು. ಅಲ್ಲಿನ ಶಿಕ್ಷಕ ವೃಂದವು ಶಿಸ್ತುಬದ್ಧವಾಗಿ ಮತ್ತು ಅನುಕರಣೀಯ ಸ್ವರೂಪದಲ್ಲಿರಬೇಕು. ಅಲ್ಲಿ ಮಕ್ಕಳು ಯಾವುದೇ ರೀತಿಯ ತಾರತಮ್ಯ, ಪಕ್ಷ ಪಾತ, ಅಸೂಯೆ, ಹಿಂಸೆ, ಅನ್ಯಾಯ, ದೌರ್ಜನ್ಯ ಮುಂತಾದವುಗಳನ್ನು ಅನುಭವಿಸದಂತೆ ಎಚ್ಚರವಹಿಸಬೇಕಾಗುತ್ತದೆ. ಹಳ್ಳಿಯೊಂದರ 6-14 ವಯೋಮಾನದ ಮಕ್ಕಳೆಲ್ಲರೂ ಶಾಲೆಯಲ್ಲಿರಬೇಕು. ಶಾಲೆ ಸೇರಿದ ಮಕ್ಕಳು ಕನಿಷ್ಠ ಹತ್ತು ವರ್ಷಗಳ ಶಾಲಾ ಜೀವನವನ್ನು ಪೂರೈಸುವಂತಿರಬೇಕು. ಶಾಲೆಯಿಂದ ಮಕ್ಕಳು ಹೊರಗಿರಬಾರದು ಮತ್ತು ಶಾಲೆಯನ್ನು ಅವರು ಮಧ್ಯದಲ್ಲಿ ಬಿಡಬಾರದು. ಇವು ಒಂದು ಒಳ್ಳೆಯ ಶಿಕ್ಷಣ ವ್ಯವಸ್ಥೆಯ ಗುಣಲಕ್ಷಣಗಳು.

ನಮ್ಮ ರಾಜ್ಯದಲ್ಲಿನ ಪ್ರಾಥಮಿಕ ಶಿಕ್ಷಣದ ಸ್ಥಿತಿಗತಿ ಹೇಗಿದೆ? ಅಲ್ಲಿ ಎಲ್ಲ ಮಕ್ಕಳೂ ಶಾಲೆ ಸೇರುತ್ತಾರೆಯೇ? ಶಾಲೆ ಸೇರಿದ ಎಲ್ಲ ಮಕ್ಕಳು ಮಧ್ಯದಲ್ಲಿ ಶಾಲೆಯನ್ನು ಬಿಡದೆ ಕನಿಷ್ಠ ಹತ್ತು ವರ್ಷಗಳ ಶಾಲಾ ಜೀವನ ಪೂರೈಸುತ್ತಾರೆಯೆ? ನಮ್ಮ ಸರ್ಕಾರಿ ಶಾಲೆಗಳ ಕಟ್ಟಡಗಳು, ಅವುಗಳ ವಿನ್ಯಾಸ, ಅಲ್ಲಿನ ಮೈದಾನ, ಅಲ್ಲಿನ ಗ್ರಂಥಾಲಯ ಮುಂತಾದ ಸಂಗತಿಗಳು ಹೇಗಿವೆ? ಪ್ರಾಥಮಿಕ ಶಿಕ್ಷಣವನ್ನು ಮುಗಿಸಿಕೊಂಡ ಮಕ್ಕಳು ದೇಶದ ಜವಾಬುದಾರಿಯುತ ನಾಗರಿಕರಾಗಿರುತ್ತಾರೆಯೇ? ನಮ್ಮ ಶಾಲಾ ಪಠ್ಯಕ್ರಮವನ್ನು ಇಂದು ಪುನಾರೂಪಿಸುವ ಅವಶ್ಯಕತೆಯಿದೆಯೇ? ಆ ಜವಾಬುದಾರಿಯನ್ನು ಸಮಾಜದ ಒಂದು ಪಡೆಗೆ ವಹಿಸಿಕೊಡಬಹುದೇ?. ಯಾಕೆ ನಮ್ಮ ಸಮಾಜದ ಒಂದು ಕೋಮಿನ, ಒಂದು ಗುಂಪಿನ ಜನರು ಮಾತ್ರ ಶಾಲಾ ಪಠ್ಯಕ್ರಮದ ಪುನಾರಚನೆ ಬಗ್ಗೆ ಗಟ್ಟಿಯಾಗಿ ಮಾತನಾಡುತ್ತಿದ್ದಾರೆ?. ಯಾಕೆ ಅವರು ಮಾತ್ರ ನಮ್ಮ ಇತಿಹಾಸವನ್ನು ತಿರುಚಲಾಗಿದೆಯೆಂಬ ಆರೋಪ ಮಾಡುತ್ತಿದ್ದಾರೆ?. ಇವೇ ಮುಂತಾದ ಪ್ರಶ್ನೆಗಳನ್ನು ಪ್ರಸ್ತುತ ಪ್ರಬಂಧದಲ್ಲಿ ಚರ್ಚಿಸಲು ಪ್ರಯತ್ನಿಸಲಾಗಿದೆ. ಕರ್ನಾಟಕದ ಕೆಲವು ಜಿಲ್ಲೆಗಳಲ್ಲಿ ಕ್ಷೇತ್ರಕಾರ್ಯದ ಮೂಲಕ ಕಂಡುಕೊಂಡ ಸಂಗತಿಗಳನ್ನು ಬಳಸಿಕೊಂಡು ಇಲ್ಲಿನ ಪ್ರಬಂಧವನ್ನು ಕಟ್ಟಲಾಗಿದೆ.

ಶಾಲಾ ಕಟ್ಟಡಗಳು

ಶಾಲಾ ವ್ಯವಸ್ಥೆಯಲ್ಲಿ ಮೂಲಭೂತ ಸೌಲಭ್ಯದ ಸಂಗತಿ ಒಂದಾದರೆ ಶೈಕ್ಷಣಿಕ ಸಂಗತಿ ಮತ್ತೊಂದಾಗಿದೆ. ಎರಡೂ ಮಹತ್ವದ ಅಗತ್ಯ ಅಂಗಗಳಾಗಿವೆ. ಮೊದಲು ನಮ್ಮ ಶಾಲೆಗಳಲ್ಲಿನ ಮೂಲಭೂತ ಸೌಲಭ್ಯಗಳ ಸ್ಥಿತಿಗತಿಯನ್ನು ಪರಿಶೀಲಿಸೋಣ. ಶಾಲಾ ಪರಿಸರವು ಆಕರ್ಷಣೀಯವಾಗಿರಬೇಕು. ಅದು ಹೇಗಿರಬೇಕೆಂದರೆ ಮಕ್ಕಳು ಉತ್ಸಾಹದಿಂದ ಮತ್ತು ಸ್ವಯಂ ಪ್ರೇರಣೆಯಿಂದ ಶಾಲೆಗೆ ಬಂದು ಹೋಗುವಂತಿರಬೇಕು. ಶಾಲೆಗೆ ಸೇರದ ಮಕ್ಕಳು ನಮ್ಮ ರಾಜ್ಯದ ಹಿಂದುಳಿದ ಜಿಲ್ಲೆಗಳಲ್ಲಿ ಅಗಾಧವಾಗಿದ್ದಾರೆ ಮತ್ತು ಶಾಲೆಯನ್ನು ಮಧ್ಯದಲ್ಲಿ ಬಿಡುವ ಮಕ್ಕಳ ಪ್ರಮಾಣವೂ ಅಧಿಕವಾಗಿದೆ. ಅನೇಕ ಕಾರಣಗಳಿಂದಾಗಿ ಇಂದು ನಮ್ಮ ಶಿಕ್ಷಣ ಇಲಾಖೆಯ ವರದಿಗಳು ಶಾಲೆ ಸೇರದ ಮಕ್ಕಳು ರಾಜ್ಯದಲ್ಲಿ ಇಲ್ಲವೆಂದು ಮತ್ತು ಶಾಲೆಯನ್ನು ಮಧ್ಯದಲ್ಲಿ ಬಿಡುವ ಮಕ್ಕಳ ಪ್ರಮಾಣವು ನಂಬಲಾರದಷ್ಟು ಕಡಿಮೆಯೆಂದು ತಿಳಿಸುತ್ತವೆ. ಶಿಕ್ಷಣ ಇಲಾಖೆಗೂ ಮತ್ತು ಶಿಕ್ಷಣ ತಜ್ಞರಿಗೂ ಹಾಗೂ ಸರ್ಕಾರಕ್ಕೂ ಗೊತ್ತಿರುವಂತೆ ಇದು ಉತ್ಪ್ರೇಕ್ಷೆಯ ಸಂಗತಿಯಾಗಿದೆ. ಈ ರೀತಿಯಲ್ಲಿ ವರದಿ ಮಾಡಲು ಅದಕ್ಕೆ ಬೇರೆ ಕಾರಣಗಳಿವೆ. ಅದು ವಸ್ತುಸ್ಥಿತಿಯನ್ನು ಒಪ್ಪಿಕೊಳ್ಳುವ ಸ್ಥಿತಿಯಲ್ಲಿ ಇಲ್ಲ. ಇತ್ತೀಚಿಗೆ ರಾಯಚೂರು ಜಿಲ್ಲೆಯಲ್ಲಿ ಇದಕ್ಕೆ ಸಂಬಂಧಿಸಿದಂತೆ ಅನೇಕ ಹಳ್ಳಿಗಳಲ್ಲಿ ಕ್ಷೇತ್ರಕಾರ್ಯ ಕೈಗೊಂಡಾಗ ಅಲ್ಲಿನ ಪ್ರತಿಯೊಂದು ಹಳ್ಳಿಯಲ್ಲೂ ಶಾಲೆಯಿಂದ ಹೊರಗಿರುವ ಮತ್ತು ಶಾಲೆಯನ್ನು ಮಧ್ಯದಲ್ಲಿ ಬಿಟ್ಟಿರುವ ಮಕ್ಕಳಿರುವುದು ಕಂಡು ಬಂದಿದೆ. ಅತ್ಯಂತ ಕುತೂಹಲದ ಸಂಗತಿಯೆಂದರೆ ಅಲ್ಲಿನ ಹಳ್ಳಿಗಳಲ್ಲಿ ಜನನ ಪ್ರಮಾಣ ಪತ್ರ ಪಡೆಯದ ನೂರಾರು ಮಕ್ಕಳಿದ್ದಾರೆ. ಜನನ

ಪ್ರಮಾಣ ಪತ್ರವಿಲ್ಲದೆ ಅಲ್ಲಿ ಮಕ್ಕಳನ್ನು ಶಾಲೆ ಸೇರಿಸಿಕೊಳ್ಳುವ ಪರಿಪಾಠವಿದೆ. ಸರ್ವ ಶಿಕ್ಷಣದಡಿಯಲ್ಲಿ ಶಾಲೆಯನ್ನು ಸೇರದ ಮಕ್ಕಳು ಶೂನ್ಯವೆಂದು ವರದಿ ಮಾಡಿ ಬಿಟ್ಟರೆ ಅದನ್ನು ನಂಬುವ ಅಗತ್ಯವಿಲ್ಲ. ಅದರಲ್ಲೂ ರಾಜ್ಯದ ಹಿಂದುಳಿದ ಜಿಲ್ಲೆಗಳ ಸಂದರ್ಭದಲ್ಲಿ ಇದು ಅವಾಸ್ತವಿಕ ಸಂಗತಿಯಾಗಿದೆ.

ಒಂದು ಉದಾಹರಣೆ

ಗುಲಬರ್ಗಾ ಜಿಲ್ಲೆಯ ಅಳಂದ್ ತಾಲ್ಲೂಕಿನ ಭಂಟನೂರು ಗ್ರಾಮದಲ್ಲಿ ಜನವರಿ 29.2008ರಲ್ಲಿ ಕಾಶಪ್ಪ ಕಾಂಬಳೆ ಮತ್ತು ಸುಗಲಾಬಾಯಿ ಎಂಬ ದಿನಗೂಲಿ ದಂಪತಿಗಳ ಮಗು ಚಿ. ನವನಾಥ(ಏಳು ವರ್ಷ) ಕಬ್ಬಿನ ಗದ್ದೆಯ ಬಳಿ ಆಟವಾಡುತ್ತಾ ಆಡುತ್ತಾ ಅಲ್ಲಿದ್ದ ತೆರೆದ ಕೊಳವೆ ಬಾವಿಯಲ್ಲಿ ಬಿದ್ದುಬಿಟ್ಟಿತು. ಅಧಿಕಾರಿಗಳ ಮತ್ತು ಸಾರ್ವಜನಿಕರ ನೆರವಿನಿಂದ ಕಾರ್ಯಾಚರಣೆ ನಡೆಸಿ ಮಗುವನ್ನು ಉಳಿಸಲಾಯಿತು. ಈ ದೃಶ್ಯವನ್ನು ಟಿವಿಯಲ್ಲಿ ನೋಡುತ್ತಿದ್ದ ಜನರು ನಿಟ್ಟುಸಿರು ಬಿಟ್ಟರು. ಅಧಿಕಾರಿಗಳು ವಿಜಯೋತ್ಸವ ಆಚರಿಸಿದರು. ಇದೆಲ್ಲ ಸರಿ. ಆದರೆ ಅಲ್ಲಿ ಯಾರೂ ಕೇಳಿಕೊಳ್ಳದಿದ್ದ ಪ್ರಶ್ನೆಯೆಂದರೆ ಶಾಲೆಯಲ್ಲಿ ಇರಬೇಕಾಗಿದ್ದ ನವನಾಥ ಕೊಳವೆ ಬಾವಿಗೆ ಯಾಕೆ ಬಿದ್ದ?. ಈ ಪ್ರಶ್ನೆಯನ್ನು ಅಂದು ಅಲ್ಲಿ ಯಾರೂ ಕೇಳಿಕೊಳ್ಳಲಿಲ್ಲ. ನವನಾಥನನ್ನು ಶಾಲೆಗೆ ಸೇರಿಸಬೇಕಾಗಿದ್ದ ಅವನ ಪಾಲಕರು ಅವನನ್ನು ತಾವು ಕೆಲಸ ಮಾಡುತ್ತಿದ್ದ ಕಬ್ಬಿನ ಗದ್ದೆಗೆ ಯಾಕೆ ಕರೆದುಕೊಂಡು ಹೋಗಿದ್ದರು? ಅಳಂದ್ ತಾಲ್ಲೂಕಿನ ಶಿಕ್ಷಣ ಇಲಾಖೆ ಅಧಿಕಾರಿಗಳು ನವನಾಥನನ್ನು ಶಾಲೆಯಲ್ಲಿರುವ ಮಗುವೆಂದು ಲೆಕ್ಕ ಕೊಟ್ಟಿದ್ದಾರೋ ಅಥವಾ ಶಾಲೆಯನ್ನು ಸೇರದ ಮಗುವೆಂದು ವರದಿ ಮಾಡಿದ್ದಾರೋ ನಮಗೆ ಮಾಹಿತಿಯಿಲ್ಲ. ಈಗಲಾದರೂ(ಈ ಘಟನೆ ನಡೆದು ಈಗಾಗಲೆ ಒಂದು ವರ್ಷದ ಮೇಲಾಗಿದೆ) ನವನಾಥ ಶಾಲೆಗೆ ಹೋಗುತ್ತಿದ್ದಾನೋ ಇಲ್ಲವೋ ನಮಗೆ ಗೊತ್ತಿಲ್ಲ.

ಈ ಹಿನ್ನೆಲೆಯಲ್ಲಿ ನಾವು ಶಾಲಾ ಆವರಣದ ಸ್ಥಿತಿಗತಿಯನ್ನು ನೋಡಬೇಕಾಗುತ್ತದೆ. ಮಕ್ಕಳು ಶಾಲೆಯನ್ನು ಸೇರದಿರುವುದಕ್ಕೆ ಮತ್ತು ಅವರು ಶಾಲೆಯನ್ನು ಮಧ್ಯದಲ್ಲಿ ಬಿಡುವುದಕ್ಕೆ ಬಡತನವನ್ನು ಸಾಮಾನ್ಯವಾಗಿ ಕಾರಣ ಮಾಡಲಾಗುತ್ತಿದೆ. ಇದು ಒಂದು ನೆಲೆಯವರೆಗೆ ಸರಿಯಿದೆ. ಆದರೆ ಇದು ಪೂರ್ಣ ಸತ್ಯವಲ್ಲ. ನಮ್ಮ ಸರ್ಕಾರಿ ಶಾಲೆಗಳಿಗೆ ಸಾಮಾನ್ಯವಾಗಿ ಬಡ ಕುಟುಂಬಗಳ ಮಕ್ಕಳು ಸೇರುತ್ತಾರೆ. ಉನ್ನತ ಮತ್ತು ಮಧ್ಯಮವರ್ಗದ ಕುಟುಂಬಗಳು ತಮ್ಮ ಮಕ್ಕಳನ್ನು ಖಾಸಗಿ ಶಾಲೆಗೆ ಸೇರಿಸುವುದು ಇಂದು ಸಾಮಾನ್ಯವಾಗಿ ಬಿಟ್ಟಿದೆ. ಇದು ಇಂದು ಯಾರಿಗೂ ತಿಳಿಯದ ಸಂಗತಿಯೇನಲ್ಲ. ಇದಕ್ಕೆ ಅನೇಕ ಕಾರಣಗಳು ಸಾಧ್ಯ. ಶಾಲೆಯನ್ನು ಮಕ್ಕಳು ಸೇರದಿರುವುದಕ್ಕೆ, ಅಥವಾ ಪಾಲಕರು ತಮ್ಮ ಮಕ್ಕಳನ್ನು ಶಾಲೆಗೆ ಸೇರಿಸದಿರುವುದಕ್ಕೆ ಹಾಗೂ ಮಕ್ಕಳು ಶಾಲೆಯನ್ನು ಮಧ್ಯದಲ್ಲಿ ಬಿಡುವುದಕ್ಕೆ ಶಾಲಾ ವಾತಾವರಣವು ಒಂದು ಬಹುಮುಖ್ಯ ಕಾರಣವಾಗಿದೆ.

ಶಾಲಾ ವಾತಾವರಣವೆಂದರೆ ಅದು ಭೌತಿಕವಾದುದು ಹೌದು ಮತ್ತು ಶೈಕ್ಷಣಿಕವಾದುದು ಹೌದು ಮತ್ತು ಅದು ಸಾಂಸ್ಕೃತಿಕವಾದುದು ಹೌದು.. ಬಡತನವನ್ನು ಕಾರಣ ಮಾಡಿ ಶಾಲೆ ಸೇರದ ಮತ್ತು ಶಾಲೆಯನ್ನು ಮಧ್ಯದಲ್ಲಿ ಬಿಟ್ಟ ಮಕ್ಕಳಿಗೆ ಸಂಬಂಧಿಸಿದಂತೆ ನಾವು ನಮ್ಮ ಜವಾಬುದಾರಿಯಿಂದ ತಪ್ಪಿಸಿಕೊಳ್ಳುತ್ತಿರುವಂತೆ ಕಾಣುತ್ತಿದೆ.

ಬಡ ಕುಟುಂಬಗಳು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸುವುದಕ್ಕೆ ಸಂಬಂಧಿಸಿದಂತೆ ಎದುರಿಸುತ್ತಿರುವ ಸಮಸ್ಯೆಗಳನ್ನು ಸಮಾಧಾನದಿಂದ ಪರಿಶೀಲಿಸಬೇಕಾಗಿದೆ. ಬಡವರಿಗೆ ಶಿಕ್ಷಣದ ಮಹತ್ವದ ಅರಿವಿಲ್ಲವೆಂದು ಷರ ಬರೆಯುವುದು ಸುಲಭ. ಯಾವ ಪಾಲಕರಿಗೂ ತಮ್ಮ ಮಕ್ಕಳು ಓದಬಾರದು ಎಂದು ಭಾವನೆ ಇರುವುದಿಲ್ಲ. ಮಕ್ಕಳನ್ನು ಶಾಲೆಗೆ ಕಳುಹಿಸುವುದನ್ನು ಸರ್ಕಾರ ಮತ್ತು ಜನರು ಬಹಳ ಸರಳವಾಗಿ ಪರಿಭಾವಿಸಿಕೊಂಡಿದ್ದಾರೆ. ಅದು ಅನೇಕ ಸಂಗತಿಗಳನ್ನೊಳಗೊಂಡ ಸಂಕೀರ್ಣ ಸಂಗತಿಯಾಗಿದೆ. ಈ ಸಮಸ್ಯೆಯನ್ನು ಪೂರೈಕೆಯ ನೆಲೆಯಿಂದ ನೋಡುವುದಕ್ಕೆ ಪ್ರತಿಯಾಗಿ ಬೇಡಿಕೆ ನೆಲೆಯಿಂದ ನೋಡಲು ಪ್ರಯತ್ನಿಸಬೇಕು. ಆಗ ನಮಗೆ ಕಂಡುಬರುವ ಸಂಗತಿ ಬೇರೆ ಇರುತ್ತದೆ.

ಬಡವರು ತಮ್ಮ ಎಳೆ ಮಕ್ಕಳನ್ನು ಕೂಲಿಗೆ ಕಳುಹಿಸುವುದಿಲ್ಲ. ಅವರನ್ನು ಯಾರೂ ಕೂಲಿಗೆ ಸೇರಿಸಿಕೊಳ್ಳುವುದಿಲ್ಲ. ಈ ಪೂರ್ವಗ್ರಹ ಪೀಡಿತ ಮತ್ತು ಅವಾಸ್ತವಿಕ ಪ್ರಮೇಯಕ್ಕೆ ಅತೀತವಾಗಿ ಶಾಲಾ ನಿರ್ದಿಷ್ಟ ನೆಲೆಯಿಂದ ಹಾಗೂ ಪಾಲಕರ ಧಾರಣಾ ಸಾಮರ್ಥ್ಯದ ದೃಷ್ಟಿಯಿಂದ ಸಮಸ್ಯೆಯನ್ನು ನೋಡುವ ಅಗತ್ಯವಿದೆ.

ಬಡ ಕುಟುಂಬಗಳು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸುವುದಕ್ಕೆ ಸಂಬಂಧಿಸಿದಂತೆ ಎದುರಿಸುತ್ತಿರುವ ಸಮಸ್ಯೆಗಳನ್ನು ಸಮಾಧಾನದಿಂದ ಪರಿಶೀಲಿಸಬೇಕಾಗಿದೆ. ಬಡವರಿಗೆ ಶಿಕ್ಷಣದ ಮಹತ್ವದ ಅರಿವಿಲ್ಲವೆಂದು ಷರ ಬರೆಯುವುದು ಸುಲಭ. ಯಾವ ಪಾಲಕರಿಗೂ ತಮ್ಮ ಮಕ್ಕಳು ಓದಬಾರದು ಎಂದು ಭಾವನೆ ಇರುವುದಿಲ್ಲ. ಮಕ್ಕಳನ್ನು ಶಾಲೆಗೆ ಕಳುಹಿಸುವದನ್ನು ಸರ್ಕಾರ ಮತ್ತು ಜನರು ಬಹಳ ಸರಳವಾಗಿ ಪರಿಭಾವಿಸಿಕೊಂಡಿದ್ದಾರೆ. ಅದು ಅನೇಕ ಸಂಗತಿಗಳನ್ನೊಳಗೊಂಡ ಸಂಕೀರ್ಣ ಸಂಗತಿಯಾಗಿದೆ. ಈ ಸಮಸ್ಯೆಯನ್ನು ಪೂರೈಕೆಯ ನೆಲೆಯಿಂದ ನೋಡುವುದಕ್ಕೆ ಪ್ರತಿಯಾಗಿ ಬೇಡಿಕೆ ನೆಲೆಯಿಂದ ನೋಡಲು ಪ್ರಯತ್ನಿಸಬೇಕು. ಆಗ ನಮಗೆ ಕಂಡುಬರುವ ಸಂಗತಿ ಬೇರೆ ಇರುತ್ತದೆ. ಮಕ್ಕಳನ್ನು ಶಾಲೆಗೆ ಕಳಿಹಿಸುವುದೆಂದರೆ ಕೇವಲ ಮಕ್ಕಳನ್ನು ಶಾಲೆಗೆ ಕಳುಹಿಸುವುದು ಮಾತ್ರವಲ್ಲ. ಅದು ಪಾಲಕರಿಂದ ಶ್ರಮ, ಸಂಪನ್ಮೂಲ ಮತ್ತು ಸಮಯ ಹಾಗೂ ಅತ್ಯಂತ ಅಗತ್ಯವಾಗಿ ತಾಳ್ಮೆಯನ್ನು ಬಯಸುತ್ತದೆ.

- ಶಾಲೆಗೆ ಪ್ರತಿ ದಿನ ಮಕ್ಕಳನ್ನು ಸಿದ್ಧಪಡಿಸಬೇಕು (ಶ್ರಮ, ಸಮಯ ಮತ್ತು ಸಂಪನ್ಮೂಲ)
- ಶಾಲೆಗೆ ಹೋಗುವ ಮಕ್ಕಳಿಗೆ ಕಾಲಕ್ಕೆ ಸರಿಯಾಗಿ ಊಟ, ತಿಂಡಿ, ಬಟ್ಟೆ ಒದಗಿಸಬೇಕು (ಶ್ರಮ ಮತ್ತು ಸಂಪನ್ಮೂಲ)
- ಪುಸ್ತಕಗಳು, ನೋಟ್‌ಬುಕ್‌ಗಳು, ಪೆನ್ಸಿಲ್, ರಬ್ಬರ್, ಬಿಳಿಹಾಳೆಗಳು, ಜಾಮಿಟ್ರಿ, ಗೈಡುಗಳು,ಹಿಂದಿನ ವರ್ಷದ ಪ್ರಶ್ನೆ ಪತ್ರಿಕೆಗಳು ಇತ್ಯಾದಿ ಒದಗಿಸಬೇಕು (ಸಂಪನ್ಮೂಲ)
- ಮಕ್ಕಳಿಗೆ ಮನೆಯಲ್ಲಿ ಅಭ್ಯಾಸ ಮಾಡಲು ಸರಿಯಾದ ಬೆಳಕು, ಗಾಳಿ, ನೈರ್ಮಲ್ಯದಿಂದ ಕೂಡಿದ ವಾತಾವರಣ ಒದಗಿಸಬೇಕು (ಶ್ರಮ ಮತ್ತು ಸಂಪನ್ಮೂಲ).
- ಮಕ್ಕಳ ಅಭ್ಯಾಸಕ್ಕೆ ಸಂಬಂಧಿಸಿದ ತೊಡಕುಗಳನ್ನು ಗುರುತಿಸಿ ಅವನ್ನು ತೊಡೆದುಹಾಕುವುದು(ಸಮಯ ಮತ್ತು ತಾಳ್ಮೆ)
- ಪ್ರತಿ ದಿನ ಮಕ್ಕಳಿಗೆ ಸ್ನಾನ ಮಾಡಿಸುವುದು, ತಲೆ ಬಾಚುವುದು, ಸಮವಸ್ತ್ರ ಸಿದ್ಧ ಮಾಡಿಕೊಡುವುದು, ಹಲ್ಲುಜ್ಜಲು ಬ್ರಷ್ ಮತ್ತು ಪೇಸ್ಟ್ ಕೊಡಿಸುವುದು, ಇತ್ಯಾದಿ (ಶ್ರಮ, ಸಮಯ ಮತ್ತು ಸಂಪನ್ಮೂಲ)
- ಮಕ್ಕಳು ಯಾವುದಾದರೂ ವಿಷಯದಲ್ಲಿ ಹಿಂದುಳಿದಿದ್ದರೆ ಆದಕ್ಕೆ ವಿಶೇಷ ವ್ಯವಸ್ಥೆ ಮಾಡಿಕೊಡುವುದು (ಸಂಪನ್ಮೂಲ)
- ದಿನವೂ ಮಕ್ಕಳು ಮನೆಯಲ್ಲಿ ಪಾಠ ಹೇಳಿಕೊಳ್ಳುವಂತೆ ಮಾಡುವುದು, ಶಾಲೆಯಲ್ಲಿ ಕೊಟ್ಟ ಮನೆ ಕೆಲಸಗಳನ್ನು ಮಾಡಿದ್ದಾರೆಯೇ ಹೇಗೆ ಎಂಬುದನ್ನು ಪರಿಶೀಲಿಸುವುದು, ಮಕ್ಕಳ ಕಲಿಕೆಯ ಮೇಲೆ ಗಮನ ಇಡುವುದು ಇತ್ಯಾದಿ(ಸಮಯ ಮತ್ತು ತಾಳ್ಮೆ)

ಮೇಲೆ ತಿಳಿಸಿರುವ ಎಲ್ಲ ಕೆಲಸಗಳೂ ಪಾಲಕರಿಂದ ಸಮಯ, ಶ್ರಮ, ಸಂಪನ್ಮೂಲ ಮತ್ತು ಅಪಾರ ತಾಳ್ಮೆಯನ್ನು ಬಯಸುತ್ತವೆ. ಈ ಎಲ್ಲ ಸಂಗತಿಗಳನ್ನು ಒದಗಿಸುವುದು ಮತ್ತು ಭರಿಸುವುದು ಬಡ ಪಾಲಕರಿಗೆ ಸಾಧ್ಯವಾಗುವುದಿಲ್ಲ. ಇದು ಜಗಜ್ಜಾಹೀರಾಗಿರುವ ಸಂಗತಿ. ಇದು ಎಲ್ಲರಿಗೂ ಗೊತ್ತಿರುವ ಸಂಗತಿ. ಗೊತ್ತಿದ್ದರೂ ಇದಕ್ಕೆ ನಾವು ಪರ್ಯಾಯವಾಗಿ ಏನು ಮಾಡಿದ್ದೇವೆ? ಎಷ್ಟು ಉಚಿತ ವಿದ್ಯಾರ್ಥಿ ನಿಲಯಗಳನ್ನು ತೆರೆದಿದ್ದೇವೆ? ಅವುಗಳನ್ನು ಎಷ್ಟು ಸಮರ್ಥವಾಗಿ ನಡೆಸುತ್ತಿದ್ದೇವೆ? ಸರ್ಕಾರ ಮತ್ತು ಸಮಾಜದಲ್ಲಿ ಶಿಕ್ಷಣಕ್ಕೆ ಸಂಬಂಧಿಸಿದಂತೆ ಬಡವರಿಗೆ ಮಾಡಿರುವುದು ಈಗಾಗಲೇ ಅತಿಯಾಯಿತು ಎಂಬ ಭಾವನೆಯಿರುವುದು ಇಂದು ರಹಸ್ಯವಾಗೇನುಳಿದಿಲ್ಲ.

ಶಾಲಾ ಮೂಲಭೂತ ಸೌಲಭ್ಯಕ್ಕೆ ಸಂಬಂಧಿಸಿದಂತೆ ಒಂದು ಒಳ್ಳೆಯ ಸಂಗತಿಯೆಂದರೆ ಅದಕ್ಕೆ ಈಗ ಹಣದ ಕೊರತೆಯಿಲ್ಲ. ಸರ್ವಶಿಕ್ಷಣ ಅಭಿಯಾನದಡಿಯಲ್ಲಿ ಸಾಕಷ್ಟು ಹಣವನ್ನು ಶಾಲಾ ಕೊಠಡಿಗಳನ್ನು ನಿರ್ಮಿಸಲು ಮತ್ತು ಉಳಿದಂತೆ ಇತರೆ ಸೌಲಭ್ಯಗಳನ್ನು ಒದಗಿಸಲು ನೀಡಲಾಗುತ್ತಿದೆ. ಸಾಕಷ್ಟು ಹಣ ವಿವಿಧ ಮೂಲಗಳಿಂದ ಹರಿದು ಬರುತ್ತಿದೆ. ಆದರೆ ಅದನ್ನು ಸುಸ್ಥಿತಿರಗತಿ ಸ್ವರೂಪದ ಕಟ್ಟಡ ನಿರ್ಮಿಸಲು ಬಳಸಲಾಗುತ್ತಿದೆಯೇ ಎಂಬುದು ಪ್ರಶ್ನೆ. ಇದಕ್ಕೆ ಉತ್ತರ ಖಂಡಿತ ಇಲ್ಲ ಎನ್ನುವುದೇ ಆಗಿದೆ. ಶಾಲಾ ಕಟ್ಟಡಗಳನ್ನು ಕಾಟಾಚಾರಕ್ಕೆ ಕಟ್ಟುತ್ತಿರುವುದು ಕಂಡು ಬರುತ್ತಿದೆ. ಒಂದೇ ಆವರಣದಲ್ಲಿ ಒಂದಕ್ಕಿಂತ ಒಂದು ಕಳಪೆ ಗುಣಮಟ್ಟದ ಕಟ್ಟಡಗಳನ್ನು ಕಟ್ಟಲಾಗುತ್ತಿದೆ. ಅಲ್ಲಿ ಒಂದು ಯೋಜನೆಯಿಲ್ಲ, ಒಂದು ವಿನ್ಯಾಸವಿಲ್ಲ, ಒಂದು ರೂಪವಿಲ್ಲ. ಶಾಲಾ ಆವರಣದೊಳಗೆ ಒಂದು ಕಟ್ಟಡಕ್ಕೂ ಮತ್ತು ಮತ್ತೊಂದು ಕಟ್ಟಡಕ್ಕೂ ಯಾವುದೇ ಸಂಬಂಧವಿಲ್ಲದಂತೆ ಕೊಠಡಿಗಳನ್ನು ಕಟ್ಟಲಾಗುತ್ತಿದೆ. ಒಂದೇ ಶಾಲಾ ಆವರಣದಲ್ಲಿ ಒಂದೆ ಶಾಲೆಗೆ ಸಂಬಂಧಿಸಿದಂತೆ ವಿವಿಧ ದಿಕ್ಕುಗಳಿಗೆ

ಮುಖ ಮಾಡಿಕೊಂಡಿರುವ ಶಾಲಾ ಕೊಠಡಿಗಳನ್ನು ಕಟ್ಟಿರುವ ಉದಾಹರಣೆಗಳಿವೆ.(ಎಸ್‌ಡಿಎಮ್‌ಸಿ ಒಂದು ಕಡೆಗೆ, ಶಾಲಾ ಶಿಕ್ಷಕರು ಒಂದು ಕಡೆಗೆ ಮತ್ತು ಶಿಕ್ಷಣ ಇಲಾಖೆ ಮತ್ತೊಂದು ಕಡೆಗೆ ಮುಖ ಮಾಡಿಕೊಂಡಿರುವುದನ್ನು ಸಾಂಕೇತಿಕವಾಗಿ ಇದು ಸೂಚಿಸುತ್ತಿರುವಂತೆ ಕಾಣುತ್ತದೆ). ನಮ್ಮ ಶಿಕ್ಷಣ ಇಲಾಖೆಯು ಶಾಲಾ ಕಟ್ಟಡಕ್ಕೆ ಸಂಬಂಧಿಸಿದಂತೆ ಒಂದು ಆಕರ್ಷಣೀಯವಾದ ಕಟ್ಟಡ ವಿನ್ಯಾಸವನ್ನು ರೂಪಿಸಿಲ್ಲ. ಕರ್ನಾಟಕದ ರಾಯಚೂರು, ಬಳ್ಳಾರಿ, ಕೊಪ್ಪಳ ಮುಂತಾದ ಜಿಲ್ಲೆಗಳಲ್ಲಿ ಅಕರಾಳ-ವಿಕರಾಳ ರೀತಿಯಲ್ಲಿ ಶಾಲಾ ಕಟ್ಟಡಗಳನ್ನು ಕಟ್ಟಲಾಗುತ್ತಿದೆ. ಕಟ್ಟಡಗಳು ಎಷ್ಟು ಕೆಟ್ಟದಾಗಿರಬಹುದೆಂಬುದಕ್ಕೆ ಉದಾಹರಣೆಗಳಾಗುವಂತೆ ಅವುಗಳನ್ನು ಕಟ್ಟಲಾಗುತ್ತಿದೆ. ಹೊಸದಾಗಿ ಕಟ್ಟಿದ ಶಾಲಾ ಕಟ್ಟಡಗಳು ಗತಕಾಲದ ಅವಶೇಷಗಳಂತೆ ಕಾಣುತ್ತವೆ. ಶಾಲಾ ಕಟ್ಟಡಗಳನ್ನು ಒಂದೆ ಶಾಲಾ ಅವರಣದಲ್ಲಿ ವಿವಿಧ ರೀತಿಯ ಕೊಠಡಿಗಳನ್ನು ಮನಸ್ಸಿಗೆ ಬಂದ ದಿಕ್ಕಿಗೆ ಕಟ್ಟಲಾಗುತ್ತಿದೆ. ನಾನು ಈ ಜಿಲ್ಲೆಗಳಲ್ಲಿ ಕನಿಷ್ಠ 30-35 ಶಾಲೆಗಳಿಗೆ ಭೇಟಿ ಕೊಟ್ಟಿದ್ದೇನೆ. ಒಂದರಲ್ಲೂ ಉಪಯೋಗಿಸಲು ತಕ್ಕುದಾದ ಶೌಚಾಲಯಗಳನ್ನು ನೋಡಲಿಲ್ಲ. ಲೆಕ್ಕಕ್ಕೆ ಶೌಚಾಲಯಗಳನ್ನು ಕಟ್ಟಲಾಗಿದೆ. ಆದರೆ ಅವುಗಳನ್ನು ಮಕ್ಕಳು ಉಪಯೋಗಿಸುತ್ತಿಲ್ಲ ಮತ್ತು ಶಿಕ್ಷಕರೂ ಬಳಸುತ್ತಿಲ್ಲ. ಅದನ್ನು ಹೀಗೆ ಹೇಳಬಹುದು. ಅವುಗಳನ್ನು ಉಪಯೋಗಿಸು ರೀತಿಯಲ್ಲಿ ನಿರ್ವಹಣೆ ಮಾಡುತ್ತಿಲ್ಲ. ಕೇವಲ ಲೆಕ್ಕಕ್ಕೆ ಮಾತ್ರ ಕಟ್ಟಲಾಗಿದೆ. ಶ್ವಚಾಲಯ ಕಟ್ಟಡಗಳಿವೆ, ಆದರೆ ಅವುಗಳ ನಿರ್ವಹಣೆ ಇಲ್ಲ.

ಅನೇಕ ಶಾಲಾ ಆವರಣವನ್ನು ಜನರು ಒತ್ತುವರಿ ಮಾಡಿಕೊಂಡಿದ್ದಾರೆ. ಶಾಲಾ ಆವರಣದೊಳಗೆ ಜನರು ಮನೆ ಕಟ್ಟಿಸಿಕೊಂಡಿದ್ದಾರೆ. ಅದನ್ನು ತೆರವುಗೊಳಿಸುವ ಕ್ರಮವನ್ನು ಶಿಕ್ಷಣ ಇಲಾಖೆಯಾಗಲಿ ಅಥವಾ ರೆವಿನ್ಯೂ ಇಲಾಖೆಯಾಗಲಿ ಪ್ರಯತ್ನಿಸಿಲ್ಲ. ಗ್ರಾಮಗಳಿರಲಿ, ತಾಲ್ಲೂಕು ಕೇಂದ್ರದಲ್ಲಿ ಕೆಲವು ಶಾಲೆಗಳು ಎಷ್ಟು ಕೆಟ್ಟದಾಗಿವೆ ಎಂಬುದನ್ನು ಹೇಳದಿರುವುದೇ ಲೇಸು ಅಥವಾ ನೋಡಿಯೇ ತಿಳಿಯಬೇಕು. ಅನೇಕ ನಗರಗಳಲ್ಲಿ(ಉದಾಹರಣೆಗೆ ಹೊಸಪೇಟೆಯಂತಹ ಗಣಿ ಸಂಪತ್ತಿನಿಂದ ತೇಲಿ-ತೇಗುತ್ತಿರುವ ಪಟ್ಟಣದಲ್ಲಿ) ಅನೇಕ ಶಾಲಾ ಕಟ್ಟಡಗಳು ತಿಪ್ಪೆಗುಂಡಿಗಳಂತಿವೆ. ಅಂತಹ ಶಾಲೆಗಳಲ್ಲಿ ಮಕ್ಕಳಿಗೆ ನೈರ್ಮಲ್ಯದ ಬಗ್ಗೆ, ಶುಚಿತ್ವದ ಬಗ್ಗೆ ಏನು ಪಾಠ ಹೇಳಿಕೊಡುವುದು? ಶೌಚಾಲಯಗಳು ಉಪಯೋಗಿಸಲು ಬಾರದಂತಿದ್ದರೆ ಮಕ್ಕಳಿಗೆ ನೈರ್ಮಲ್ಯದ ಅಭ್ಯಾಸ ಹೇಗೆ ಮಾಡಿಸುವುದು? ನಾನು ನೋಡಿದಂತೆ ಯಾವ ಶಾಲೆಯಲ್ಲೂ ಶೌಚಾಲಯವನ್ನು ಉಪಯೋಗಿಸಿದ ಮೇಲೆ ಕೈತೊಳೆದುಕೊಳ್ಳಲು ಸೋಪನ್ನಿಡುವ ಕ್ರಮ ತೆಗೆದುಕೊಂಡಿಲ್ಲ. ನೀರೇ ಇರುವುದಿಲ್ಲ, ಅಂದ ಮೇಲೆ ಸೋಪಿನ ಸಂಗತಿ ಕೇಳಬೇಕಾದ್ದೇ ಇಲ್ಲ!. ಇದು ಶಿಕ್ಷಕರಿಗೆ ಅಥವ ಶಿಕ್ಷಣ ಇಲಾಖಾ ಅಧಿಕಾರಿಗಳಿಗೆ ಗೊತ್ತಿಲ್ಲ ಎಂದೇನಿಲ್ಲ. ಅದರೆ ಅದಕ್ಕೆ ಯಾವುದೆ ಯೋಜನೆ ಅಥವಾ ಸ್ಕೀಮು ಬಂದಿಲ್ಲ. ಅದಕ್ಕೆ ತರಬೇತಿ ನಡೆದಿಲ್ಲ. ಆದ್ದರಿಂದ ಅವರು ಅದನ್ನು ನೀಡಿಲ್ಲ.

ಜಿಲ್ಲಾ ಪಂಚಾಯಿತಿ ಮೂಲಕ ಸಂಪೂರ್ಣ ನೈರ್ಮಲ್ಯ ಯೋಜನೆ ಎಂಬ ಕಾರ್ಯಕ್ರಮ ಕಳೆದ ಹತ್ತಾರು ವರ್ಷಗಳಿಂದ ನಡೆಯುತ್ತಿದೆ. ಅದರಲ್ಲಿ ಶಾಲಾ ಆವರಣದಲ್ಲಿ ಶೌಚಾಲಯಗಳನ್ನು ಕಟ್ಟಿಸುವುದು ಅದರ ಒಂದು ಉದ್ದೇಶ. ಆದರೆ ಆ ಯೋಜನೆಯಡಿಯಲ್ಲಿ ಶೌಚಾಲಯಗಳಿಗೆ ಸೋಪನ್ನು ಸರಬರಾಜು ಮಾಡುವ ಬಗ್ಗೆ ಯಾವುದೇ ಕ್ರಮವಿಲ್ಲ. ಈ ರೀತಿಯಲ್ಲಿ ಶಾಲಾ ಅವರಣವನ್ನು ಬೇಕಾಬಿಟ್ಟಿ ನಿರ್ವಹಿಸುತ್ತಿರುವುದಕ್ಕೆ ಮುಖ್ಯ ಕಾರಣವೆಂದರೆ ಬಡ ಕುಟುಂಬದ ಮಕ್ಕಳು ಇಲ್ಲಿ ಹೆಚ್ಚಾಗಿ ಕಲಿಯುತ್ತಿದ್ದಾರೆ. ಬಡವರ ಮಕ್ಕಳು ಕಲಿಯುವ ಶಾಲೆಗಳು ಹೇಗಿದ್ದರೂ ನಡೆಯುತ್ತದೆ ಎಂಬ ಉಡಾಫೆ ಧೋರಣೆ ಇಲ್ಲಿ ಕೆಲಸ ಮಾಡುತ್ತಿರುವುದು ಸ್ಪಷ್ಟ. ಶಾಲಾ ಶಿಕ್ಷಕರ ಅಥವಾ ಎಂಎಲ್‌ಎಗಳ, ಎಂ.ಪಿಗಳ ಅಥವಾ ಜಿಲ್ಲಾ ಪಂಚಾಯಿತಿ ಸದಸ್ಯರ ಮಕ್ಕಳು ಮತ್ತು ಉನ್ನತ ವರ್ಗಗಳ ಮಕ್ಕಳು ಅಲ್ಲಿ ಕಲಿಯುವುದು ಕಡಿಮೆ.

ಬಡವರಿಗೆ ಈಗ ಕೊಟ್ಟಿರುವುದೇ ಅತಿಯಾಯಿತು ಎಂಬುದು ಜನಪ್ರತಿನಿಧಿಗಳ ಮನೋಭಾವವಿದ್ದಂತೆ ಕಾಣುತ್ತಿದೆ. ಎಲ್ಲಿಯವರೆಗೆ ನಮ್ಮ ಹಳ್ಳಿಗಳಲ್ಲಿ ಶಾಲಾ ಸೌಲಭ್ಯ ಪಡೆಯುವುದು, ಒಳ್ಳೆಯ ಶಾಲಾ ಸೌಲಭ್ಯವನ್ನು ಪಡೆಯುವುದು ಜನರ ಹಕ್ಕು, ಅದು ಯಾರ ಉಂಬಳಿಯಲ್ಲ-ದತ್ತಿಯಲ್ಲ ಎಂಬ ಅರಿವಾಗುವುದಿಲ್ಲವೋ ಅಲ್ಲಿಯವರೆಗೆ ನಮ್ಮ ಶಾಲಾ ಶಿಕ್ಷಣದ ಸ್ಥಿತಿಗತಿ ಉತ್ತಮಗೊಳ್ಳುವುದಿಲ್ಲ. ಇಂದು ಸರ್ವಶಿಕ್ಷಣ ಅಭಿಯಾನ ಮತ್ತು ಸರ್ಕಾರದ ಅನೇಕ ಸೌಲಭ್ಯಗಳ ಕಾರಣದಿಂದಾಗಿ ಪ.ಜಾ ಮತ್ತು ಪ.ಪಂ.ಗಳ ಮಕ್ಕಳು ಅಗಾಧ ಸಂಖ್ಯೆಯಲ್ಲಿ ಶಾಲಾ ವಾಹಿನಿಯನ್ನು ಪ್ರವೇಶಿಸುತ್ತಿದ್ದಾರೆ. ವಾಸ್ತವದಲ್ಲಿ ರಾಜ್ಯದಲ್ಲಿ 1-10ನೆಯ ತರಗತಿಗಳಲ್ಲಿ ಕಲಿಯುತ್ತಿರುವ ಒಟ್ಟು ದಾಖಲಾತಿಯಲ್ಲಿ ಪರಿಶಿಷ್ಟ ಮಕ್ಕಳ ಸಂಖ್ಯೆ ಸುಮಾರು 28 ಲಕ್ಷ (ಶೇ28). ಆದರೆ ಅವರ ಶಾಲೆಗಳು ಹೇಗಿದ್ದರೂ ನಡೆಯುತ್ತದೆಯೆಂಬ ಧೋರಣೆ ಮಾತ್ರ ಸಲ್ಲ. ಇತ್ತೀಚೆಗೆ ದೆಹಲಿಯ ಶಾಲೆಯೊಂದರಲ್ಲಿ ಸರಿಯಾದ ಸಮಯಕ್ಕೆ ವೈದ್ಯಕೀಯ ಸೌಲಭ್ಯ ದೊರೆಯಲಿಲ್ಲ ಎಂಬ ಕಾರಣಕ್ಕೆ ಅಸ್ತಮಾ ರೋಗದಿಂದ ನರಳುತ್ತಿದ್ದ ಮಗುವೊಂದು ಸಾವನ್ನಪ್ಪಿದ ಘಟನೆ ನಡೆಯಿತು. ಇದು ನಡೆದ ಮೇಲೆ ಮುದ್ರಣ ಮತ್ತು ಎಲೆಕ್ಟ್ರಾನಿಕ್ ಮಾಧ್ಯಮಗಳಲ್ಲಿ ಅದರ ಬಗ್ಗೆ ಬಿಸಿಬಿಸಿ ಚರ್ಚೆ ನಡೆಯಿತು. ಶಾಲೆಗಳಲ್ಲಿ ಕಡ್ಡಾಯವಾಗಿ ಒಬ್ಬ ವೈದ್ಯರು ಕಾರ್ಯ ನಿರ್ವಹಿಸಬೇಕೆಂದು ಅಲ್ಲಿ ತಜ್ಞರು ಸಲಹೆ ನೀಡಿದರು. ಇದು ಒಳ್ಳೆಯದು. ಆದರೆ ವರ್ಷ ಪೂರ್ತಿ ವೈದ್ಯಕೀಯ ತಪಾಸಣೆಯೂ ನಡೆಯದಿರುವ ಸ್ಥಿತಿಯಲ್ಲಿ ಸರ್ಕಾರಿ ಶಾಲೆಗಳಿವೆಯೆಂಬುದನ್ನು ಇಲ್ಲಿ ಚರ್ಚೆಯಲ್ಲಿ ಭಾಗವಹಿಸಿದ ಎಲೈಟ್ ಮಂದಿ ತಿಳಿದುಕೊಳ್ಳಬೇಕು. ಎರಡು ಬಗೆಯ ಶಿಕ್ಷಣದ ಬಗ್ಗೆ ನಾವು ಬಹಳ ಗಂಭೀರವಾಗಿ ಚಿಂತಿಸಬೇಕಾಗಿದೆ. ಬಡವರಿಗೆ ಒಂದು ಬಗೆಯ ಶಾಲೆಗಳು, ಉಳ್ಳವರಿಗೆ ಒಂದು ಬಗೆಯ ಶಾಲೆಗಳು ಎಂಬ ಭಿನ್ನತೆ ಉಂಟು ಮಾಡಬಹುದಾದ ಪರಿಣಾಮಗಳ ಬಗ್ಗೆ ನಾವು ಗಮನ ನೀಡಬೇಕು.

ಜಿಲ್ಲಾ ಪಂಚಾಯಿತಿ ಮೂಲಕ ಸಂಪೂರ್ಣ ನೈರ್ಮಲ್ಯ ಯೋಜನೆ ಎಂಬ ಕಾರ್ಯಕ್ರಮ ಕಳೆದ ಹತ್ತಾರು ವರ್ಷಗಳಿಂದ ನಡೆಯುತ್ತಿದೆ. ಅದರಲ್ಲಿ ಶಾಲಾ ಆವರಣದಲ್ಲಿ ಶೌಚಾಲಯಗಳನ್ನು ಕಟ್ಟಿಸುವುದು ಅದರ ಒಂದು ಉದ್ದೇಶ. ಆದರೆ ಆ ಯೋಜನೆಯಡಿಯಲ್ಲಿ ಶೌಚಾಲಯಗಳಿಗೆ ಸೋಪನ್ನು ಸರಬರಾಜು ಮಾಡುವ ಬಗ್ಗೆ ಯಾವುದೇ ಕ್ರಮವಿಲ್ಲ. ಈ ರೀತಿಯಲ್ಲಿ ಶಾಲಾ ಅವರಣವನ್ನು ಬೇಕಾಬಿಟ್ಟಿ ನಿರ್ವಹಿಸುತ್ತಿರುವುದಕ್ಕೆ ಮುಖ್ಯ ಕಾರಣವೆಂದರೆ ಬಡ ಕುಟುಂಬದ ಮಕ್ಕಳು ಇಲ್ಲಿ ಹೆಚ್ಚಾಗಿ ಕಲಿಯುತ್ತಿದ್ದಾರೆ. ಬಡವರ ಮಕ್ಕಳು ಕಲಿಯುವ ಶಾಲೆಗಳು ಹೇಗಿದ್ದರೂ ನಡೆಯುತ್ತದೆ ಎಂಬ ಉಡಾಫೆ ಧೋರಣೆ ಇಲ್ಲಿ ಕೆಲಸ ಮಾಡುತ್ತಿರುವುದು ಸ್ಪಷ್ಟ.

ನಮ್ಮ ಶಾಲಾ ಪಠ್ಯಕ್ರಮ ಮತ್ತು ಅಲ್ಲಿನ ಬೋಧನಾ ಕ್ರಮ

ಇದು ಇಂದು ಹೆಚ್ಚು ಚರ್ಚೆಗೆ ಗ್ರಾಸವಾಗಬೇಕಾಗಿರುವ ಸಂಗತಿಯಾಗಿದೆ. ಆದರೆ ನಮ್ಮ ಶಾಲಾ ಪಠ್ಯಕ್ರಮದ ಬಗ್ಗೆ ಒಂದು ಧೋರಣೆಯ ಮಂದಿ ಮಾತ್ರ ಹೆಚ್ಚು ಮಾತನಾಡುತ್ತಿದ್ದಾರೆ. ಈ ಧೋರಣೆಯನ್ನು ಪ್ರತಿನಿಧಿಸುವ ಪಕ್ಷವು ಅಧಿಕಾರದಲ್ಲಿರುವ ರಾಜ್ಯಗಳಲ್ಲಿ ಶಾಲಾ ಪಠ್ಯಕ್ರಮವನ್ನು ತಮ್ಮ ಧೋರಣೆಗನುಗುಣವಾಗಿ ಪುನಾರಚಿಸಲಾಗುತ್ತಿದೆ. ಈ ಬಗೆಯ ಶಾಲಾ ಪಠ್ಯದ ವಿಮರ್ಶೆಯು ಪ್ರಧಾನವಾಗಿ ಇತಿಹಾಸವನ್ನು ಕುರಿತದ್ದಾಗಿರುತ್ತದೆ. ನಮ್ಮ ಸಮಾಜ ಹೇಗಿದೆ, ಅದು ಹೀಗಿರಲು ಕಾರಣವೇನು? ಅಲ್ಲಿ ಶ್ರೇಣೀಕರಣ ವ್ಯವಸ್ಥೆಯು ಹೇಗೆ ರೂಪುಗೊಂಡಿತು? ಯಾಕೆ ನಮ್ಮ ಊರಿನ ದೇವಾಲಯಗಳೊಳಗೆ ಕೆಲವು ವರ್ಗದ ಮಕ್ಕಳು ಪ್ರವೇಶಿಸುವಂತಿಲ್ಲ? ಶಾಲೆಗಳಲ್ಲಿ ಗಂಡು ಮಕ್ಕಳ ಸಂಖ್ಯೆಯು ಹೆಣ್ಣು ಮಕ್ಕಳ ಸಂಖ್ಯೆಗಿಂತ ಯಾಕೆ ಅಧಿಕವಾಗಿರುತ್ತದೆ? ಅಸ್ಪೃಶ್ಯತೆ ಎಂದರೇನು? ಅದು ನಮ್ಮ ಪರಂಪರೆಯ ಕೊಡುಗೆಯಲ್ಲವೆ? ನಮ್ಮ ಪರಂಪರೆಯೆಂಬುದು ಹೆಮ್ಮೆಯ ಸಂಗತಿಗಳನ್ನು ಹೊಂದಿರುವಂತೆ ಹುಳುಕುಗಳನ್ನು ಹೊಂದಿದೆ.

ಶಾಲಾ ಪಠ್ಯಗಳಲ್ಲಿ ಕೇವಲ ಹೆಮ್ಮೆಯ ಸಂಗತಿಗಳನ್ನು ಮಾತ್ರ ಇಟ್ಟುಕೊಂಡು ಹುಳುಕು ಗಳನ್ನು ಮುಚ್ಚಿಡಬೇಕೆ? ಈ ಬಗೆಯ ಪ್ರಶ್ನೆಗಳಿಗೆ ನಮ್ಮ ಪಠ್ಯಕ್ರಮವು ಸಹ ಸ್ಪಂದಿಯಾಗಿರಬೇಕು. ಇತಿಹಾಸವೆನ್ನುವುದು ವೈಭವವನ್ನು ಮಾತ್ರ ಒಳಗೊಂಡ ಕೋಶವಾಗಬಾರದು. ಅದರಿಂದ ನಾವು ಪಾಠ ಕಲಿಯುವಂತಾಗಬೇಕಾದರೆ ನಮ್ಮ ಪರಂಪರೆಗೆ ಸಂಬಂಧಿಸಿದ ಹುಳುಕುಗಳನ್ನು ನಮ್ಮ ಮಕ್ಕಳು ತಿಳಿದುಕೊಳ್ಳಬೇಕು. ಅದರ ಬಗ್ಗೆ ಮಕ್ಕಳು ಶಾಲೆಯಲ್ಲಿ ಚರ್ಚಿಸುವಂತಾಗಬೇಕು. ನಮ್ಮ ಇತಿಹಾಸದ ಪಠ್ಯಕ್ರಮವನ್ನು ಪುನಾರಚಿಸಬೇಕೆಂದು ಒತ್ತಾಯಿಸುತ್ತಿರುವ ಮಡೆಯು ಇತಿಹಾಸದಲ್ಲಿ ವೈಭವವನ್ನು ಮಾತ್ರ ಕಾಣಲು ಬಯಸುತ್ತದೆ. ಏಕೆಂದರೆ ತನ್ನ ಪರಂಪರೆಯಲ್ಲಿನ ಲೋಪ ದೋಷಗಳಿಗೆ ಅದು ಜವಾಬುದಾರಿಯಾಗಬೇಕಾಗುತ್ತದೆ. ಆದ್ದರಿಂದ ಅವರು ಇತಿಹಾಸದಲ್ಲಿ ಕೇವಲ ವೈಭವದ ಸಂಗತಿಗಳನ್ನು ಮಾತ್ರ ಜಪಮಾಡಲು ಬಯಸುತ್ತಾರೆ. ಆದರೆ ನಮ್ಮ ಮಕ್ಕಳು ನಮ್ಮ ಇತಿಹಾಸದಲ್ಲಿನ ಹುಳುಕುಗಳ ಬಗ್ಗೆಯೂ ತಿಳಿದುಕೊಳ್ಳಬೇಕು. ಆದರೆ ಇತಿಹಾಸವನ್ನು ಪುನಾರಚಿಸಬೇಕೆಂದು ಒತ್ತಾಯಿಸುತ್ತಿರುವ ಮಂದಿ ಅಲ್ಲಿನ ಅಮಾನವೀಯ ಸಂಗತಿಗಳನ್ನು, ಲೋಪಗಳನ್ನು ಮುಚ್ಚಿಡಲು ಪ್ರಯತ್ನಿಸುತ್ತಿದೆ. ಆದರೆ ಅದರ ಅಗತ್ಯವಿಲ್ಲ.

ಜ್ಞಾನವೆನ್ನುವುದು ಕೂಡಿಟ್ಟ ಭಂಡಾರವಲ್ಲ, ಅದು ಉತ್ಪಾದಿಸುವ ಒಂದು ಸರಕು! ಇದು ನಮ್ಮ ಶಾಲಾ ಕೋಣೆಗಳಲ್ಲಿ ಅಭ್ಯಾಸ, ಚರ್ಚೆ, ಸಂವಾದ, ಅವಲೋಕನ ಮುಂತಾದ ಕ್ರಮಗಳಿಂದ ಸಂಭವಿಸಬೇಕಾದ ಒಂದು ಸಂಗತಿ. ಜ್ಞಾನವೆನ್ನುವುದು ದಾಸ್ತಾನಲ್ಲ. ಅದು ಸದಾಕಾಲ ಪ್ರವಹಿಸುವ ಪ್ರಕ್ರಿಯೆ. ಅನುಸಂಧಾನದ ಮೂಲಕ ಪ್ರಾಪ್ತವಾಗುವ ಒಂದು ಸಂಗತಿ. ಜ್ಞಾನವೆನ್ನುವುದು ಈಗಾಗಲೆ ಸಿದ್ಧವಾದ ಒಂದು ಸರಕು ಎಂಬ ಪ್ರಸ್ತುತ ನಂಬಿಕೆಯನ್ನು, ಅದು ಕೋಶದಲ್ಲಿರುತ್ತದೆ ಎಂಬ ಭ್ರಮೆಯನ್ನು ತೊಡೆದು ಹಾಕಬೇಕು. ಶಾಲೆಯಲ್ಲಿ ಮಕ್ಕಳಿಗೆ ಅನುಸಂಧಾನಕ್ಕೆ ಅವಕಾಶವಿರಬೇಕು. ಆ ಬಗೆಯ ಬೋಧನಾ ಕ್ರಮವನ್ನು ಅಳವಡಿಸಿಕೊಳ್ಳಬೇಕು. ಪರಂಪರೆಯಿಂದ ಬಂದ ಕಂಠಪಾಠದ ಕ್ರಮವನ್ನು ಕೈಬಿಡಬೇಕು. ಬೋಧನೆಯು ಸೃಜನಶೀಲವಾಗಿರಬೇಕು. ಇದು ಹೇಳಿದಷ್ಟು ಸಾಧಿಸಿಕೊಳ್ಳಲು ಸುಲಭವಲ್ಲ. ಅದನ್ನು ಅಳವಡಿಸಿಕೊಳ್ಳದೆ ನಮ್ಮ ಶಿಕ್ಷಣದ ಗುಣಮಟ್ಟವನ್ನು ಉತ್ತಮಪಡಿಸುವುದು ಅಸಾಧ್ಯ.

ಯಾರು ನಮ್ಮ ದೇಶದ ಶತ್ರುಗಳು?

ಇತಿಹಾಸವನ್ನು ಶಾಲಾ ಪಠ್ಯಗಳಲ್ಲಿ ತಿರುಚಲಾಗಿದೆಯೆಂದೂ ಅದಕ್ಕಾಗಿ ಅದನ್ನು ಪುನಾರಚಿಸಬೇಕೆನ್ನುವ ಒತ್ತಾಯ ಮಾಡುತ್ತಿರುವ ಒಂದು ನಿರ್ದಿಷ್ಟ ಧೋರಣೆಯ ಮಂದಿ ತಿಳಿದುಕೊಳ್ಳಬೇಕಾದ ಸಂಗತಿಯೆಂದರೆ ಶತ್ರು ಅಥವಾ ಮಿತ್ರ ಎನ್ನುವ ಸಂಗತಿಗಳು ಗೆರೆ ಕೊರೆದಂತೆ, ಬದಲಾಗದಂತೆ ಇರುವುದಿಲ್ಲ. ಮುಸಲ್ಮಾನರು ಮತ್ತು ಕ್ರಿಶ್ಚಿಯನ್ನರು ಈ ದೇಶದ ಶತ್ರುಗಳು ಎಂಬ ರೀತಿಯ ತೀರ್ಮಾನವನ್ನು ತೆಗೆದುಕೊಂಡು ಬಿಟ್ಟರೆ ಅಂತವರಿಗೆ ಚರಿತ್ರೆಯು ತಿಳಿದಿಲ್ಲವೆಂದು ಹೇಳಬೇಕಾಗುತ್ತದೆ. ಇತಿಹಾಸವನ್ನು ಪುನಾರಚಿಸಬೇಕೆಂದು ಒತ್ತಾಯಿಸುತ್ತಿರುವ ಮಂದಿ ಸಿದ್ಧಪಡಿಸುತ್ತಿರುವ ಇತಿಹಾಸದ ಪಠ್ಯಗಳಲ್ಲಿ ಇಂತಹ ಜನಾಂಗ ಭೇದ ನೀತಿಯನ್ನು ಬೋಧಿಸಲಾಗುತ್ತಿದೆ. ಇತಿಹಾಸವೆಂಬುದು ನಿಂತ ನೀರಲ್ಲ. ಅದು ಬದಲಾಗುತ್ತಿರುತ್ತದೆಯೆಂದರೆ ಅದನ್ನು ಪರಿಭಾವಿಸಿಕೊಳ್ಳುವ ಕ್ರಮ ಭಿನ್ನವಾಗಿರುತ್ತದೆಯೆಂದು ತಿಳಿಯಬೇಕಾಗುತ್ತದೆ. ನಮ್ಮ ಮೂಗಿನ ನೇರಕ್ಕೆ ರೂಪಿಸಿದ ಚರಿತ್ರೆಯಿಂದ ನಮ್ಮ ಮಕ್ಕಳು ಭಾರತೀಯರಾಗಿ ಬಿಡುತ್ತಾರೆಂದು ಭಾವಿಸುವುದು ಸರಿಯಲ್ಲ. ಒಂದು ಜನಾಂಗದ ಬಗ್ಗೆ ಮಕ್ಕಳ ಮನಸ್ಸಿನಲ್ಲಿ ವಿಷವನ್ನು ಬಿತ್ತುವುದು ನಾಗರಿಕ ಕ್ರಮವೆನಿಸುವುದಿಲ್ಲ. ಒಂದು ವೇಳೆ ನಮ್ಮ ಶಾಲಾ ಪಠ್ಯಗಳಲ್ಲಿ ಮುಸಲ್ಮಾನ ಮತ್ತು ಕ್ರಿಶ್ಚಿಯನ್ನರ ಬಗ್ಗೆ ವಿದ್ವೇಷವನ್ನು ಬಿತ್ತುವುದಾದರೆ ಅದಕ್ಕೂ ಜರ್ಮನಿಯಲ್ಲಿ ಹಿಟ್ಲರ್ ಎರಡನೆಯ ಮಹಾಯುದ್ಧದ ಸಂದರ್ಭದಲ್ಲಿ ಅನುಸರಿಸಿದ್ದ ಜನಾಂಗ ಭೇದ ಶಿಕ್ಷಣ ನೀತಿಗೂ ನಡುವೆ ಭಿನ್ನತೆ ಇರುವುದಿಲ್ಲ. ಈ ಬಗ್ಗೆ ನಾವು ಬಹಳ ಎಚ್ಚರ ವಹಿಸಬೇಕಾಗುತ್ತದೆ.

ಶಾಲಾ ಪಠ್ಯಗಳಲ್ಲಿ ಏನೇನಿರಬೇಕು?

ನಮ್ಮಲ್ಲಿ ಒಂದು ರೋಗ ವ್ಯಾಪಕವಾಗಿದೆ. ಅದೇನೆಂದರೆ ದೊಡ್ಡವರೆನಿಸಿಕೊಂಡ ಮಂದಿ ಭಾಷಣ ಮಾಡುವಾಗಲೆಲ್ಲಾ ಶಾಲಾ ಪಠ್ಯಗಳಲ್ಲಿ ಅದಿರಬೇಕು, ಇದಿರಬೇಕೆಂದು ಬೊಬ್ಬೆ ಇಡುತ್ತಿರುತ್ತಾರೆ. ಉದಾಹರಣೆಗೆ

* ಮನುಸ್ಮೃತಿಯನ್ನು ಶಾಲಾ ಪಠ್ಯದಲ್ಲಿ ಸೇರಿಸಬೇಕು–ನ್ಯಾಯಾದೀಶ ಎಂ.ರಾಮಾಜೋಯಿಸ್ ಕರೆ.

(ಹೌದು, ಅದನ್ನು ಶಾಲಾ ಪಠ್ಯದಲ್ಲಿ ಸೇರಿಸಬೇಕು. ಹಾಗೆ ಸೇರಿಸಿದಾಗ ಮಾತ್ರ ಅದರ ಒಳಗಿರುವ ಅಮಾನವೀಯ ನಿಯಮಗಳೆಲ್ಲ ಮಕ್ಕಳಿಗೆ ತಿಳಿಯುತ್ತದೆ. ಮನುಸ್ಮೃತಿಯು ಎಷ್ಟು ಮನುಷ್ಯ ವಿರೋಧಿಯಿದೆ ಎಂಬುದು ನಮ್ಮ ಮಕ್ಕಳಿಗೆ ಅರ್ಥವಾಗಬೇಕು. ಈ ದಿಶೆಯಲ್ಲಿ ಶ್ರೀ ರಾಮಾ ಜೋಯಿಸರ ಸಲಹೆ ಬಹು ಅಮೂಲ್ಯವಾದುದು. ಸರ್ಕಾರವು ಮುಂದಿನ ಶೈಕ್ಷಣಿಕ ವರ್ಷದಿಂದ ಅದನ್ನು ಪಠ್ಯದಲ್ಲಿ ಸೇರಿಸಬೇಕು ಮತ್ತು ಅದನ್ನು ಜಾರಿಗೆ ತರಬೇಕು. ಶ್ರೀ ರಾಮಾಜೋಯಿಸರಿಗೆ ಜಯವಾಗಲಿ!)

ಇತಿಹಾಸವನ್ನು ಶಾಲಾ ಪಠ್ಯಗಳಲ್ಲಿ ತಿರುಚಲಾಗಿದೆಯೆಂದೂ ಅದಕ್ಕಾಗಿ ಅದನ್ನು ಪುನಾರಚಿಸಬೇಕೆನ್ನುವ ಒತ್ತಾಯ ಮಾಡುತ್ತಿರುವ ಒಂದು ನಿರ್ದಿಷ್ಟ ಧೋರಣೆಯ ಮಂದಿ ತಿಳಿದುಕೊಳ್ಳಬೇಕಾದ ಸಂಗತಿಯೆಂದರೆ ಶತ್ರು ಅಥವಾ ಮಿತ್ರ ಎನ್ನುವ ಸಂಗತಿಗಳು ಗೆರೆ ಕೊರೆದಂತೆ, ಬದಲಾಗದಂತೆ ಇರುವುದಿಲ್ಲ. ಮುಸಲ್ಮಾನರು ಮತ್ತು ಕ್ರಿಶ್ಚಿಯನ್ನರು ಈ ದೇಶದ ಶತ್ರುಗಳು ಎಂಬ ರೀತಿಯ ತೀರ್ಮಾನವನ್ನು ತೆಗೆದುಕೊಂಡು ಬಿಟ್ಟರೆ ಅಂತವರಿಗೆ ಚರಿತ್ರೆಯು ತಿಳಿದಿಲ್ಲವೆಂದು ಹೇಳಬೇಕಾಗುತ್ತದೆ. ಇತಿಹಾಸವನ್ನು ಪುನಾರಚಿಸಬೇಕೆಂದು ಒತ್ತಾಯಿಸುತ್ತಿರುವ ಮಂದಿ ಸಿದ್ಧಪಡಿಸುತ್ತಿರುವ ಇತಿಹಾಸದ ಪಠ್ಯಗಳಲ್ಲಿ ಇಂತಹ ಜನಾಂಗ ಭೇದ ನೀತಿಯನ್ನು ಬೋಧಿಸಲಾಗುತ್ತಿದೆ. ಇತಿಹಾಸವೆಂಬುದು ನಿಂತ ನೀರಲ್ಲ. ಅದು ಬದಲಾಗುತ್ತಿರುತ್ತದೆಯೆಂದರೆ ಅದನ್ನು ಪರಿಭಾವಿಸಿಕೊಳ್ಳುವ ಕ್ರಮ ಭಿನ್ನವಾಗಿರುತ್ತದೆಯೆಂದು ತಿಳಿಯಬೇಕಾಗುತ್ತದೆ.

ವಚನಗಳನ್ನು ಮಕ್ಕಳಿಗೆ ಶಾಲೆಯಲ್ಲಿ ಕಲಿಸುವಂತಾಗಬೇಕು–ಧರ್ಮಸ್ಥಳದ ಧರ್ಮಾಧಿಕಾರಿ ಶ್ರೀ ವೀರೇಂದ್ರ ಹೆಗ್ಗಡೆ! (ಬಸವಶ್ರೀ ಪ್ರಶಸ್ತಿ ಪಡೆಯುವ ಸಂದರ್ಭದಲ್ಲಿ).

ಕನಕದಾಸರ ಕೀರ್ತನೆಗಳನ್ನು ಶಾಲಾ ಪಠ್ಯಗಳಾಗಿ ನಿಯಮಿಸಬೇಕು– ರಾಜಕೀಯ ನಾಯಕರೊಬ್ಬರ ಕರೆ.

ಸಾವರ್‌ಕರ್ ಅವರ ಜೀವನ ಚರಿತ್ರೆಯನ್ನು ಶಾಲಾ ಪಠ್ಯಕ್ರಮದಲ್ಲಿ ಸೇರಿಸಬೇಕು! ಸಾವರ್‌ಕರ್ ಕುಟುಂಬದ ಸದಸ್ಯರಿಂದ ಒತ್ತಾಯ.

ಲಿಂಗ ಸಮಾನತೆಯ ಬಗ್ಗೆ ಪಾಠಗಳಿರಬೇಕು, ಪರಿಸರ ಸಮತೋಲನ, ಸುಸ್ಥಿರಗತಿ ಅಭಿವೃದ್ಧಿ ಕುರಿತ ಪಾಠಗಳನ್ನು ಶಾಲಾ ಪಠ್ಯಗಳಲ್ಲಿ ಸೇರಿಸಬೇಕು–ಮುಹಿಳಾವಾದಿಗಳ ಮತ್ತು ಪರಿಸರವಾದಿಗಳ ಕರೆ.

(ಈ ಬಗ್ಗೆ ಬಹಳ ಹಿಂದೆ ರವೀಂದ್ರನಾಥ ಠಾಗೂರರು ನುಡಿದಿರುವ ಮಾತು ಹೀಗಿವೆ: ಬಂಡಿಯ ಮೇಲೆ ಈಗಾಗಲೆ ಇರುವ ಅಕ್ಕಿ ಚೀಲಗಳ ಜೊತೆಯಲ್ಲಿ ಇನ್ನೊಂದಿಷ್ಟು ಚೀಲಗಳನ್ನು ಹೇರಿದರೆ ಹೇರು ಅಧಿಕವಾಗುತ್ತದೆ ವಿನಾ ಬಂಡಿಯನ್ನು ಎಳೆಯುತ್ತಿರುವ ಎತ್ತಿಗೆ ಅದರಿಂದ ಯಾವುದೇ ಪ್ರಯೋಜನವಾಗುವುದಿಲ್ಲ)

ಈ ಬಗೆಯ ಉಪದೇಶ ನೀಡುವುದು, ಸಲಹೆ ಮಾಡುವುದು ನಮ್ಮಲ್ಲಿ ಅಧಿಕವಾಗಿ ಬಿಟ್ಟಿದೆ. ಪಠ್ಯಕ್ರಮವನ್ನು ಸರಿಪಡಿಸುವವರ ಸಂಖ್ಯೆಯು ಅದನ್ನು ಸಿದ್ಧಪಡಿಸುವವರ ಸಂಖ್ಯೆಗಿಂತ ಅಧಿಕವಾಗಿ ಬಿಟ್ಟಿದೆ. ಈಗಂತೂ ಪಠ್ಯ ಕ್ರಮ ಸರಿಪಡಿಸುವವರ ಒಂದು ಪಡೆಯೇ ಸಿದ್ಧವಾಗಿರುವಂತೆ ಕಾಣುತ್ತಿದೆ. ಅದಕ್ಕಾಗಿ ಕೆಲವು ಸಂಘಟನೆಗಳು ವಿಚಾರ ಸಂಕಿರಣಗಳನ್ನು ಏರ್ಪಡಿಸುತ್ತಿವೆ. ಯಾವುದು ಕಲೆ ಯಾವುದು ಕಲೆಯಲ್ಲ ಎಂಬುದನ್ನು ನಿರ್ವಚಿಸುವ ಮತ್ತು ನಿರ್ಧರಿಸುವ ಜವಾಬುದಾರಿಯನ್ನು ನಮ್ಮ ರಾಜ್ಯದಲ್ಲಿ ಮಂತ್ರಿ ಮಹೋದಯರು ತಮ್ಮ ವಶಕ್ಕೆ ತೆಗೆದುಕೊಳ್ಳುತ್ತಿದ್ದಾರೆ. ಕಲೆಯು ಒಂದು ಜ್ಞಾನಶಿಸ್ತು. ಅದಕ್ಕೆ ತನ್ನದೇ ಆದ ಅಧ್ಯಯನ ಕ್ರಮವೊಂದಿರುತ್ತದೆ, ಅರ್ಥಗ್ರಹಣ ಪದ್ಧತಿಯೊಂದಿರುತ್ತದೆ ಎಂಬ ಸಾಮಾನ್ಯ ತಿಳುವಳಿಕೆಯೂ ಇಲ್ಲದವರಂತೆ ನಮ್ಮ ಮಂತ್ರಿಗಳು ಕಲೆ ಬಗ್ಗೆ, ಸಾಹಿತ್ಯದ ಬಗ್ಗೆ, ಅಭಿವೃದ್ಧಿ ಬಗ್ಗೆ, ಶಿಕ್ಷಣದ ಬಗ್ಗೆ ತಮ್ಮ ಆಣಿಮುತ್ತುಗಳನ್ನು ಸಮಯ ಸಿಕ್ಕಾಗಲೆಲ್ಲ ಉದುರಿಸುತ್ತಿರುತ್ತಾರೆ. ಅದನ್ನು ಪ್ರಶ್ನೆ ಮಾಡಿದರೆ 'ನಾನು, ಸರ್ಕಾರ ಮಾತನಾಡುತ್ತಿರುವುದು!' ಎಂಬ ದಾಷ್ಟ್ಯವನ್ನು ಪ್ರದರ್ಶಿಸುತ್ತಾರೆ.

ಹೀಗೆ ಸಾರ್ವಜನಿಕ ಸಮಾರಂಭಗಳಲ್ಲಿ, ಸರ್ಕಾರಿ ಸಭೆಗಳಲ್ಲಿ ಮಂತ್ರಿಗಳ ಉಪದೇಶಗಳಲ್ಲಿ ಉದುರುವ ಸಂಗತಿಗಳನೆಲ್ಲ ಗಂಭೀರವಾಗಿ ತೆಗೆದುಕೊಳ್ಳಬೇಕೆ? ಒಂದು ವೇಳೆ ತೆಗೆದುಕೊಂಡರೆ ಅದನ್ನು ಅನುಷ್ಠಾನಗೊಳಿಸುವುದು ಸಾಧ್ಯವೆ? ಕನಕದಾಸರು, ಪುರಂದರದಾಸರು, ಬಸವಣ್ಣ, ಅಕ್ಕಮಹಾದೇವಿ, ಮನುಸ್ಮೃತಿ, ಉಪನಿಷತ್ತುಗಳು, ಸಾವರ್‌ಕರ್ ಜೀವನ ಯಜ್ಞ, ಯಾಗ, ಕರ್ಮಕಾಂಡ ಮುಂತಾದ ಸಂಗತಿಗಳನ್ನೆಲ್ಲ ಪಠ್ಯಕ್ರಮದಲ್ಲಿ ಸೇರಿಸುವುದು ಉಪಯುಕ್ತವಾದ ಸಂಗತಿಯಾದರೂ ಸಾಧ್ಯವೆ? ಅಥವಾ ಅಗತ್ಯವೆ? ಮಹಾತ್ಮರ ಮಾತು, ಬರಹ, ಉಪದೇಶಗಳ ಮಹತ್ವವನ್ನು ಅಲ್ಲಗಳೆಯಲು ಬರುವುದಿಲ್ಲ. ಅದರೆ ಅವುಗಳನ್ನೆಲ್ಲ ಶಾಲಾ ಪಠ್ಯದಲ್ಲಿ ಸೇರಿಸುವುದು ಕಾರ್ಯಸಾಧುವೆ? ಹೀಗೆ ಸೇರಿಸುತ್ತ ಹೋದರೆ ಕೊನೆ ಮುಟ್ಟುವುದು ಎಂದು, ಎಲ್ಲಿ?

ಇತ್ತೀಚೆಗೆ ಸರ್ಕಾರವು ಹಬ್ಬಹರಿದಿನಗಳಲ್ಲಿ ಸಿಹಿ ಮಾಡಿಸಿ ಜನರಿಗೆ ಹಂಚುವ ಕಾರ್ಯಕ್ರಮ ಹಾಕಿಕೊಳ್ಳುತ್ತಿದೆ. ಶಿವರಾತ್ರಿಯಲ್ಲಿ ರಾಜ್ಯದ ಎಲ್ಲ ದೇವಾಲಯಗಳಿಗೂ ಸರ್ಕಾರವು ಗಂಗಾ ನದಿಯ ನೀರನ್ನು ಸರಬರಾಜು ಮಾಡುವ ಕೆಲಸ ಮಾಡಿತು. ಸರಿ, ಸರ್ಕಾರದಲ್ಲಿರುವವರ ಭಕ್ತಿ ಮೇರೆ ಮೀರಿ ಹರಿದರೆ ಅದಕ್ಕೆ ನಾವು ತಲೆ ಕೆಡಿಸಿಕೊಳ್ಳುವ ಅಗತ್ಯವಿಲ್ಲ. ಆದರೆ ಇಲ್ಲಿರುವ ಪ್ರಶ್ನೆಯೆಂದರೆ ನಾಡಿನಲ್ಲಿರುವ ಎಲ್ಲ ಮಠಗಳ, ಎಲ್ಲ ದೇವರುಗಳ, ಎಲ್ಲ ದೇವಾಲಯಗಳ ಅವಶ್ಯಕತೆಗಳನ್ನು ಈಡೇರಿಸುವುದು ಸರ್ಕಾರಕ್ಕೆ ಸಾಧ್ಯವೆ? ಇದೆಲ್ಲಾ ಕಾರ್ಯಸಾಧುವೇ? ಇದು ಪ್ರಶ್ನೆ.

ಅಥವಾ ವೇದಾಗಮ ಪ್ರಣೀತ ದೇವರು, ಮಠಗಳು ಮತ್ತು ದೇವಾಲಯಗಳನ್ನು ಮಾತ್ರ ಸರ್ಕಾರವು ತನ್ನ ಜವಾಬುದಾರಿಯೆಂದು ಪರಿಗಣಿಸುತ್ತದೆಯೇ?. ಅದು ನಡೆದುಕೊಳ್ಳುತ್ತಿರುವ ರೀತಿಯನ್ನು ನೋಡಿದರೆ ಹಾಗನಿಸುತ್ತದೆ. ಈ ತಾರತಮ್ಯವೇಕೆ? ವೈಕುಂಠ ಏಕಾದಶಿಯಲ್ಲಿ ಮಾತ್ರ ಮುಜರಾಯಿ ಇಲಾಖಾ ಮಂತ್ರಿಗಳು ಸಿಹಿ ಹಂಚಿದರು. ಸರಿ. ಅದರೆ ನಮ್ಮ ಎಲ್ಲಮ್ಮನ ಜಾತ್ರೆಯಲ್ಲಿ, ಮೈಲಾ

(45ನೇ ಪುಟಕ್ಕೆ)

ಅಲ್ಲಮನ ವಚನಗಳಲ್ಲಿ ಪ್ರಕ್ರಿಯಾಮೀಮಾಂಸೆ

ಡಾ. ಎಸ್. ನಟರಾಜ್ ಬೂದಾಳು

ಇಬ್ಬರ ಮಧ್ಯದಲೊಂದು ಮಗು ಹುಟ್ಟಿತ್ತು
ಆ ಮಗುವಿನ ಹುಟ್ಟ ತಾಯೂ ಅರಿಯಲು ತಂದೆಯೂ ಅರಿಯರು
ಹೆಸರಿಟ್ಟು ಕರೆದು ಜೋಗುಳವಾಡುತ್ತೈದಾರೆ ನೋಡಾ
ಕೈ ಬಾಯಿಗೆ ಬಂದ ಶಿಶು ಮೈದೋರದಿದ್ದರೆ
ಕಂಡು ನಾನು ನಾಚಿದೆನು ಕಾಣಾ ಗೊಹೇಶ್ವರ.

ಅಲ್ಲಮಪ್ರಭುವಿನ ಈ ವಚನಕ್ಕೆ ಬೇರೊಂದು ಪಾಂಥಿಕ ವ್ಯಾಖ್ಯಾನವಿದ್ದೀತು ಅಥವಾ ಅನೇಕ ವ್ಯಾಖ್ಯಾನಗಳಿರಲು ಸಾಧ್ಯ. ಅಲ್ಲಮನ ವಚನಗಳ ಅನುಸಂಧಾನವೂ ಹಲವು ರೀತಿಯಲ್ಲಿರಲು ಸಾಧ್ಯ. ಹಾಳು ಮಂಟಪದಲ್ಲಿ ಏಕತಾರಿ ಹಿಡಿದು ಕೂತಿರುವ ತತ್ವ ಪದಕಾರನಿಗೆ ಅಲ್ಲಮನೊಡನೆ ಸಾಧ್ಯವಾಗುವ ಸಂವಾದ ಅಕೆಡೆಮಿಕ್ ವಲಯದ ನನ್ನಂಥವನಿಗೆ ಸಾಧ್ಯವಾಗಲಿಕ್ಕಿಲ್ಲ. ಒಬ್ಬ ಆಧುನಿಕ ಓದುಗನ ಓದಿಗೆ ಅಲ್ಲಮ ಸಿಗುತ್ತಾನೆನ್ನುವುದು ಅಹಮ್ಮಿನ ಮಾತು. ಪ್ರಭುವಿನಂತಹ ಸಾಧಕನೊಡನೆ ಸಾಧಕನೊಬ್ಬನು ಸಂವಾದಿಸುವ ಕ್ರಮವೇ ಬೇರೆ, ಭಾಷಿಕನೊಬ್ಬನು ಅಲ್ಲಮನ ವಚನಗಳೊಂದಿಗೆ ನಡೆಸುವ ಸಂವಾದಕ್ರಮವೇ ಬೇರೆ. ಅಲ್ಲಮಪ್ರಭು ಕನ್ನಡ ತಾತ್ವಿಕತೆಗೆ ವಿಶ್ವಸಾಮರ್ಥ್ಯವನ್ನು ದೊರಕಿಸಿಕೊಟ್ಟವನು. ಆ ತಾತ್ವಿಕತೆಗೆ ಇರುವ ಪ್ರಸ್ತುತತೆ ಮತ್ತು ಅವನು ಒದಗಿಸಿಕೊಟ್ಟ ಸಾಮರ್ಥ್ಯವೇ ಅವನ ವಚನದ ನಿರ್ವಚನಕ್ಕೆ ಆಧುನಿಕನೊಬ್ಬ ಕೂಡಾ ಕೈಹಾಕಲು ಸಾಧ್ಯವೆಂದು ಭಾವಿಸಿರುವುದು. ಈ ವಚನಕ್ಕಿರುವ ಗುಣಾತ್ಮಕ ಅಸ್ಪಷ್ಟತೆ ಅದರ ಹಿಂದಿನ ನಿಶ್ಶಬ್ದವನ್ನು ಓದಲು ಪ್ರೇರೇಪಿಸುತ್ತದೆ. ಇದು ಅಲ್ಲಮನ ವಚನಗಳನ್ನು ಓದುವ ಕ್ರಮಗಳಲ್ಲಿ ಒಂದೆಂದು ಭಾವಿಸುತ್ತೇನೆ.

ಅಲ್ಲಮಪ್ರಭುವನ್ನು ಪ್ರಕ್ರಿಯಾಮೀಮಾಂಸಕನೆಂದು ಆಧುನಿಕ ಪರಿಭಾಷೆಯಲ್ಲಿ ಗುರುತಿಸಬಹುದು. ಲೋಕವನ್ನು ನಿರಂತರವಾದ ಪ್ರವಾಹರೂಪಿಯೆಂದು ವಿವರಿಸುವ ಪ್ರಸ್ಥಾನಗಳು ಅನುಸರಿಸುವ ಕ್ರಮವನ್ನೇ ಅಲ್ಲಮನೂ ಅನುಸರಿಸಿದ್ದಾನೆ. ಅದೇನೆಂದರೆ ಒಬ್ಬ ಪ್ರಕ್ರಿಯಾ ಮೀಮಾಂಸಕ ನಮ್ಮೆದುರಿನ ಈ ಲೋಕಕ್ಕೆ ಆದಿ ಕಾರಣವನ್ನಾಗಲೀ ಶಾಶ್ವತ ಪರಿಣಾಮವನ್ನಾಗಲೀ ಒಪ್ಪುವುದಿಲ್ಲ. ಅಂತಹ ಆದಿಬಿಂದುವೋ ಅಂತ್ಯಬಿಂದುವೋ ಗ್ರಹಿಕೆಗೆ ದೊರಕುವುದಾದರೆ ಪ್ರವಾಹದ ನಿರಂತರತೆ ಭಂಗ ಬಂದಂತೆಯೇ.

ಈ ಹಿನ್ನೆಲೆಯಲ್ಲಿ ಈ ವಚನದ ನಿರ್ವಚನಕ್ಕೆ ಪ್ರಯತ್ನಿಸಬಹುದು. ಕಾರಣ ಪರಿಸ್ಥಿತಿಗಳ ಸಂಯೋಗದಿಂದ ಉಂಟಾದ ಪರಿಣಾಮದ ಸರಣಿಯನ್ನೇ ಪ್ರಕ್ರಿಯೆಯೆಂದು ಸೂಚಿಸುತ್ತಾರೆ. ಕಾರಣ ಪರಿಸ್ಥಿತಿಗಳೇ ತಾಯಿ ತಂದೆಗಳಾಗಿ ಹುಟ್ಟುಪಡೆದ ಪರಿಣಾಮ ಅಥವಾ ಫಲವೆಂಬುದು ಸ್ವತಂತ್ರ ಅಸ್ತಿತ್ವವುಳ್ಳುದಲ್ಲ. ಆದರೆ ಅದಕ್ಕೆ ಒಂದು ಹೆಸರನ್ನಿಟ್ಟು ಅದನ್ನು ಸ್ವತಂತ್ರ ಶಾಶ್ವತ ವಸ್ತುವೆಂದು ಕರೆಯುವ ಸಾಮಾನ್ಯ ಲೋಕಕ್ರಮವನ್ನು 'ಹೆಸರಿಟ್ಟು ಕರೆದು ಜೋಗುಳವಾಡುವುದು' ಸೂಚಿಸುತ್ತದೆ. ಕ್ರಿಯಾ ಸಾಮರ್ಥ್ಯವುಳ್ಳದ್ದಾದರೂ ಸ್ವತಂತ್ರ ಅಸ್ತಿತ್ವವಿಲ್ಲದುದರಿಂದ ಅದು ಮೈದೋರದು. ಹಾಗಿದ್ದರೂ ಸಾಮಾನ್ಯ ಲೋಕ ನಂಬಿಕೆಯಲ್ಲಿ ಅದು ಸ್ವತಂತ್ರ 'ಸತ್ತು' ಎಂದು ದಾಖಲಾಗುವುದನ್ನು ಅಲ್ಲಮ ಬೆರಗಿನಿಂದ ಗಮನಿಸುತ್ತಾನೆ. ಲೋಕವನ್ನು ಬಿಡಿಬಿಡಿಯಾದ ಘಟಕಗಳನ್ನಾಗಿ ಗ್ರಹಿಸಿ ಲೋಕ ಸಂಬಂಧವು ನಿರ್ನಾಮವಾಗಿರುವ ಈ ಹೊತ್ತು ಮನುಷ್ಯ ಮನುಷ್ಯನ ನಡುವೆ ಮನುಷ್ಯ-ಮತ್ತಿತರ ಜೀವಿಗಳ ನಡುವೆ, ಮನುಷ್ಯ ಮತ್ತು ನಿಸರ್ಗದ ನಡುವೆ ಸಾಮರಸ್ಯದ ಸಂಬಂಧವು ಇಂದಿನ ಅಗತ್ಯವಾಗಿದೆ. ಅದನ್ನು ಈ ಪ್ರಕ್ರಿಯಾ ಮೀಮಾಂಸೆ ಮುಂದಿಡುತ್ತದೆ. ಸಾಮರಸ್ಯದ ಸಂಬಂಧವನ್ನು ಕದಡುವ ಅನೇಕ ಸಂಗತಿಗಳಲ್ಲಿ ಮುಖ್ಯವಾದುದು ನಾವು ಈವರೆಗೆ ಕಟ್ಟಿಕೊಂಡು ಬಂದಿರುವ ಸಂರಚನೆಗಳು ಮತ್ತು ಅವುಗಳಿಂದ ನಿರ್ದೇಶಿತವಾಗುವ ಎಲ್ಲ ಇಂದ್ರಿಯ ಅನುಭವಗಳು. ಅಂಗಗಳ ಮೂಲಕ ಗ್ರಹಿಸಲ್ಪಟ್ಟ ಅನುಭವ ಮತ್ತು ಅದನ್ನು ವ್ಯಕ್ತಪಡಿಸುವ ಭಾಷೆ ಎರಡೂ ಎಂಜಲೆಂಬುದು ಅಲ್ಲಮನ ನಿಲುವು.

ಶಬ್ದವೆಂಬೆನೆ ಶ್ರೋತ್ರದೆಂಜಲು ಸ್ಪರ್ಶವೆಂಬೆನೆ ತ್ವಕ್ಕಿನೆಂಜಲು
ರೂಪವೆಂಬೆನೆ ನೇತ್ರದೆಂಜಲು ರುಚಿಯೆಂಬೆನೆ ಜಿಹ್ವೆಯೆಂಜಲು
ಪರಿಮಳವೆಂಬೆನೆ ಘ್ರಾಣದೆಂಜಲು, ನಾನೆಂಬೆನೆ ಅರಿವಿನೆಂಜಲು
ಎಂಜಲೆಂಬ ಭಿನ್ನವಳಿದ ಬೆಳಗಿನೊಳಗಣ ಬೆಳಗು ಗುಹೇಶ್ವರ ಲಿಂಗವು

ಆಧುನಿಕ ಸಂಕಥನ (discourse) ಪ್ರಸ್ಥಾನವು ಈ ತಾತ್ವಿಕತೆಯ ನ್ನಾಧರಿಸಿದ್ದು, ಲೋಕವೆನ್ನುವುದು ನಮ್ಮ ಇಂದ್ರಿಯಗಳು ಮತ್ತು ಭಾವಕೋಶದಿಂದ ಕಟ್ಟಲ್ಪಟ್ಟದ್ದೇ ಹೊರತು, ಅದು ಹಾಗೆ ಮಾತ್ರವೇ ಇದೆಯೆಂದಲ್ಲ.

ಕಂಗಳ ಕರುಳ ಕೊಯ್ದವರ
ಮನದ ತಿರುಳ ಹುರಿದವರ ಮಾತಿನ ಮೊದಲ ಬಲ್ಲವರನೆನಗೆ
ನೀ ತೋರಾ ಗುಹೇಶ್ವರ.

ಕಂಗಳ ಕರುಳ ಕೊಯ್ಯುವುದೆಂದರೆ ಇಂದ್ರಿಯ ಮೂಲವಾದ ಮೋಹ ತಿರಸ್ಕಾರಗಳಿಂದ ಮುಕ್ತವಾಗುವುದು. ಮನದ ತಿರುಳೆಂಬುದು ಇಂದ್ರಿಯಗ್ರಾಹ್ಯವಾದ ಅನುಭವಗಳಿಂದ ಜನ್ಮಿಸಿದುದು. ಇಂದ್ರಿಯಗಳ ಮೂಲಕ ದೊರೆಯುವ ಅಪಾರ ಮಾಹಿತಿಯನ್ನು ನಿರ್ವಹಿಸುವಲ್ಲಿನ ಗೊಂದಲದಿಂದಾಗಿ ಸಾಮಾನ್ಯವಾಗಿ ಮಾನವ ಮತಿ 'ಆಯ್ಕೆ'ಗೆ ತೊಡಗುತ್ತದೆ. ಸುಖದಾಯಕವಾದುದು ಯಾವುದು ಇಷ್ಟವಾಗದುದು ಯಾವುದು ಎಂಬ ಆಯ್ಕೆಯ ಮೂಲಕ, ಮಾನವ ಮನಸ್ಸು ಮುಂದಿನ ಲೋಕಾನುಭವಗಳ ವ್ಯಾಖ್ಯಾನಕ್ಕೆ ತಿರುಳನ್ನು ಒದಗಿಸಿಕೊಳ್ಳುತ್ತದೆ. ಮುಂದಿನ ಅನುಭವಗಳು ಈ ತಿರುಳನ್ನು ಬೆಳೆಸುತ್ತಾ ಹೋಗುತ್ತವೆ. ಇದನ್ನು ಬೌದ್ಧ ಧರ್ಮದಲ್ಲಿ ideation store ಎನ್ನುತ್ತಾರೆ. ಈ ತಿರುಳು ಇಷ್ಟಾನಿಷ್ಟಗಳ ಹುಟ್ಟಿಗೆ ಕಾರಣವಾಗುತ್ತದೆ. ಮೋಹ-ತಿರಸ್ಕಾರಗಳನ್ನು ನಿರ್ಧರಿಸುತ್ತದೆ. ಆ ತಿರುಳನ್ನು ಹುರಿಯುವುದೆಂದರೆ ಅದರ ಕ್ರಿಯಾಸಾಮರ್ಥ್ಯವನ್ನು ನಾಶ ಮಾಡುವುದು (ಬೀಜವನ್ನು ಹುರಿದರೆ ಅದರ ಮೊಳೆಯುವ ಸಾಮರ್ಥ್ಯ ಇಲ್ಲವಾಗುತ್ತದೆ) ಲೋಕಾನುಭವವನ್ನು ಅದರಿಂದ ಮುಕ್ತವಾಗಿ ಸ್ವೀಕರಿಸುವಂತಾದರೆ ಮೋಹ-ತಿರಸ್ಕಾರಗಳಿಂದ ಗ್ರಹಿಕೆಯು ಮುಕ್ತವಾಗುತ್ತದೆ. ವಸ್ತುವನ್ನು 'ಅದಿರುವಂತೆಯೇ' ಗ್ರಹಿಸಲು ಸಾಧ್ಯವಾಗುತ್ತದೆ.

ಅಲ್ಲಮಪ್ರಭುವನ್ನು ಪ್ರಕ್ರಿಯಾ ಮೀಮಾಂಸಕನೆಂದು ಆಧುನಿಕ ಪರಿಭಾಷೆಯಲ್ಲಿ ಗುರುತಿಸಬಹುದು. ಲೋಕವನ್ನು ನಿರಂತರವಾದ ಪ್ರವಾಹ ರೂಪಿಯೆಂದು ವಿವರಿಸುವ ಪ್ರಸ್ಥಾನಗಳು ಅನುಸರಿಸುವ ಕ್ರಮವನ್ನೇ ಅಲ್ಲಮನೂ ಅನುಸರಿಸಿದ್ದಾನೆ. ಅದೇನೆಂದರೆ ಒಬ್ಬ ಪ್ರಕ್ರಿಯಾ ಮೀಮಾಂಸಕ ನಮ್ಮೆದುರಿನ ಈ ಲೋಕಕ್ಕೆ ಆದಿ ಕಾರಣವನ್ನಾಗಲೀ ಶಾಶ್ವತ ಪರಿಣಾಮವನ್ನಾಗಲೀ ಒಪ್ಪುವುದಿಲ್ಲ. ಅಂತಹ ಆದಿ ಬಿಂದುವೋ ಅಂತ್ಯ ಬಿಂದುವೋ ಗ್ರಹಿಕೆಗೆ ದೊರಕುವುದಾದರೆ ಪ್ರವಾಹದ ನಿರಂತರತೆ ಭಂಗ ಬಂದಂತೆಯೇ. ಈ ಹಿನ್ನೆಲೆಯಲ್ಲಿ ಈ ವಚನದ ನಿರ್ವಚನಕ್ಕೆ ಪ್ರಯತ್ನಿಸಬಹುದು. ಕಾರಣ ಪರಿಸ್ಥಿತಿಗಳ ಸಂಯೋಗದಿಂದ ಉಂಟಾದ ಪರಿಣಾಮದ ಸರಣಿಯನ್ನೇ ಪ್ರಕ್ರಿಯೆಯೆಂದು ಸೂಚಿಸುತ್ತಾರೆ. ಕಾರಣ ಪರಿಸ್ಥಿತಿಗಳೇ ತಾಯಿ ತಂದೆಗಳಾಗಿ ಹುಟ್ಟುಪಡೆದ ಪರಿಣಾಮ ಅಥವಾ ಫಲವೆಂಬುದು ಸ್ವತಂತ್ರ ಅಸ್ತಿತ್ವವುಳ್ಳುದಲ್ಲ.

ಅಂತೆಯೇ ಭಾಷೆ ಸೃಷ್ಟಿಸಿದ ವಿಕಲ್ಪಗಳು ಲೋಕ ಗ್ರಹಿಕೆಯನ್ನು ಭ್ರಷ್ಟ ಗೊಳಿಸುತ್ತವೆ. ಈ ವಿಕಲ್ಪಗಳನ್ನು ನಿವಾರಿಸಿಕೊಳ್ಳದೆ ಲೋಕಪ್ರವಾಹದ ಜೊತೆಗೆ ಚಲಿಸಲು ಸಾಧ್ಯವಿಲ್ಲ. ಅದನ್ನು ಮತ್ತೊಂದು ರೀತಿಯಲ್ಲಿ ಈ ವಚನ ಮುಂದಿಡುತ್ತದೆ:

ತಾಯಿ ಬಂಜೆಯಾದಲ್ಲದೆ ಶಿಶು ಗತವಾಗದು
ಬೀಜ ನಷ್ಟವಾದಲ್ಲದೆ ಸಸಿ ಗತವಾಗದು
ನಾಮ ನಷ್ಟವಾದಲ್ಲದೆ ನೇಮ ನಷ್ಟವಾಗದು
ಮೊದಲು ಕೆಟ್ಟಲ್ಲದೆ ಲಾಭದಾಸೆ ಬಿಡದು
ಗುಹೇಶ್ವರ ಲಿಂಗದ ನಿಜವನ್ನೈದುವಡೆ
ಪೂಜೆಯ ಫಲ ಮಾದಲ್ಲದೆ ಭವಂ ನಾಸ್ತಿಯಾಗದು

ನಿರಂತರ ಚಲನಶೀಲವಾದ ಲೋಕಪ್ರವಾಹವನ್ನು, ಹಾಗೆ ಸ್ವೀಕರಿಸದೆಹೋದರೆ ಉಂಟಾಗುವ ತೊಡಕನ್ನು ಈ ವಚನ ಸೂಚಿಸುತ್ತಿದೆ. ತಾಯ್ತನದ ಉಂಟಾಗುವಿಕೆಯು ಮಗು ತಾಯಿಯಿಂದ ಭಿನ್ನವಾಗಿ ಮುಂದಿನ ಲೋಕಪ್ರವಾಹದ ಇನ್ನೊಂದು ಪಾತ್ರವನ್ನು ನಿರ್ವಹಿಸುವುದರಿಂದ ಆಗುತ್ತದೆ. ಬೀಜವು ಮೊಳೆತು ಸಸಿಯ ಹಂತಕ್ಕೆ ವರ್ಗಾವಣೆಗೊಂಡರೆ ಮಾತ್ರ ಅದಕ್ಕೆ ಬೀಜವೆನ್ನಿಸಿಕೊಳ್ಳುವ ಅರ್ಹತೆ ದೊರಕುವುದು. ಮೊಳೆಯದ ಬೀಜ ಬೀಜವಲ್ಲ. ಅದರ ತಿರುಳ ಹುರಿದರೆ ಅದು ಬೀಜವಲ್ಲ. ಬಂಡವಾ ಳವೂ ಅಷ್ಟೆ ಲಾಭದ ಪರಿಣಾಮದಲ್ಲೇ ಅದಕ್ಕೆ ಅಸ್ತಿತ್ವ, ಎಲ್ಲವೂ ಕರಗುತ್ತ ಮುಂದೆ ಚಲಿಸುತ್ತಿರುವ ಲೋಕಪ್ರವಾಹದಲ್ಲಿ ಸ್ಥಿತ ಅವಸ್ಥೆಯೆನ್ನುವುದಿಲ್ಲ. ಚಲನೆಯೇ ಜಗದ ನಿಯಮವಾಗಿರುವುದರಿಂದ ಬೀಜ–ಮೊಳಕೆ–ಸಸಿ–ಗಿಡ–ಮರ–ಹೂ–ಹಣ್ಣು–ಬೀಜ ಈ ಪ್ರವಾಹ ನಿರಂತರವಾದುದು. ಇಲ್ಲಿ ಪ್ರಾರಂಭದ ಬಿಂದುವಾಗಲೀ ಅಂತ್ಯವೆಂಬ ಬಿಂದುವಾಗಲೀ ಇಲ್ಲ. ಅಂತಹ ಹುಡುಕಾಟವೇ ಅರ್ಥಹೀನ, ಬೀಜ ಮೊದಲೋ ವೃಕ್ಷ ಮೊದಲೋ ಎಂಬ ಹುಡುಕಾಟವೇ ಅರ್ಥಹೀನವಾದುದು. ಅದು ಎಂದೂ ಮುಗಿಯದ ಹಿಂಪಯಣವನ್ನು ಪ್ರವರ್ತಿಸುತ್ತದೆಯೇ ಹೊರತು ಉತ್ತರವನ್ನು ದೊರಕಿಸಿಕೊಡುವುದಿಲ್ಲ. (ಬುದ್ಧ ಗುರು ಮೌನವಾದ ನಾಲ್ಕು ಪ್ರಶ್ನೆಗಳಲ್ಲಿ ಇದೂ ಒಂದು). ಬೀಜವೆನ್ನುವುದು ಹಿಂದಿನ ಸಸ್ಯಬದುಕಿನ ಫಲವೂ ಹೌದು ಮುಂದಿನ ಸಸ್ಯ ಬದುಕಿನ ಕಾರಣವೂ ಹೌದು ಹೀಗೆ ನಿರಂತರ ಪ್ರವಾಹದಲ್ಲಿರುವ ಯಾವುದಕ್ಕೂ ಸ್ವತಂತ್ರ ಅವಸ್ಥೆ ಕ್ಷಣ ಮಾತ್ರವೂ ಇಲ್ಲ. ಎಲ್ಲವೂ ಹಿಂದು–ಮುಂದಿನ ಅವಲಂಬೀ ಅಸ್ತಿತ್ವವನ್ನು ಪಡೆದ ಚಲನಶೀಲತೆ ಮಾತ್ರ ಎಂಬ ಅರಿವೇ ಗುಹೇಶ್ವರನೆಂಬ ನಿಜದ ಅರಿವು ಎನ್ನುತ್ತಾನೆ. ಇಂತಹ ಪ್ರಶ್ನೆ ಹುಟ್ಟುವ ಕಾರಣವೆಂದರೆ ಮಾನವ ಮತಿ ಎಲ್ಲದಕ್ಕೂ ಒಂದು ಆದಿ ಕಾರಣವನ್ನು, ಶಾಶ್ವತ ಸ್ವತಂತ್ರ ಕಾರಣವನ್ನು ಹುಡುಕುತ್ತಿರುತ್ತದೆ. ಅಂತೆಯೇ ಎಲ್ಲದಕ್ಕೂ ಶಾಶ್ವತ ಪರಿಣಾಮವನ್ನೂ ಶೋಧಿಸುತ್ತಿರುತ್ತದೆ. ಇಂತಹ ಲೋಕರೂಢಿಯ ಮೇಲೆ ಅಲ್ಲಮಪ್ರಭು ಬಲವಾದ ಪ್ರಹಾರವನ್ನು ಮಾಡುತ್ತಾನೆ:

ಪರತತ್ವದೊಳಗಿರಬಲ್ಲಡೆ ಉಣಲಾಗದು, ಉಣದಿರಲಾಗದು
ಎಲ್ಲರ ಸಂಗದಲ್ಲಿರಲಾಗದು ಬೇರೆ ಮತ್ತೊಬ್ಬನೆ ಇರಲಾಗದು
ತಾಯಿಸತ್ತ ಆರುತಿಂಗಳಿಗೆ ತಾ ಹುಟ್ಟಿದ ಮೂಲ ಗುಹೇಶ್ವರ
ತಾಯಿ ಸತ್ತ ಆರು ತಿಂಗಳಿಗೆ ತಾ ಹುಟ್ಟಿದ

ತಾಯ್ತನದ ಉಂಟಾಗುವಿಕೆಯು ಮಗು ತಾಯಿಯಿಂದ ಭಿನ್ನವಾಗಿ ಮುಂದಿನ ಲೋಕಪ್ರವಾಹದ ಇನ್ನೊಂದು ಪಾತ್ರವನ್ನು ನಿರ್ವಹಿಸುವುದರಿಂದ ಆಗುತ್ತದೆ. ಬೀಜವು ಮೊಳೆತು ಸಸಿಯ ಹಂತಕ್ಕೆ ವರ್ಗಾವಣೆಗೊಂಡರೆ ಮಾತ್ರ ಅದಕ್ಕೆ ಬೀಜವೆನ್ನಿಸಿಕೊಳ್ಳುವ ಅರ್ಹತೆ ದೊರಕುವುದು. ಮೊಳೆಯದ ಬೀಜ ಬೀಜವಲ್ಲ. ಅದರ ತಿರುಳ ಹುರಿದರೆ ಅದು ಬೀಜವಲ್ಲ. ಬಂಡವಾಳವೂ ಅಷ್ಟೆ ಲಾಭದ ಪರಿಣಾಮದಲ್ಲೇ ಅದಕ್ಕೆ ಅಸ್ತಿತ್ವ, ಎಲ್ಲವೂ ಕರಗುತ್ತ ಮುಂದೆ ಚಲಿಸುತ್ತಿರುವ ಲೋಕ ಪ್ರವಾಹದಲ್ಲಿ ಸ್ಥಿತ ಅವಸ್ಥೆಯೆನ್ನುವುದಿಲ್ಲ. ಚಲನೆಯೇ ಜಗದ ನಿಯಮವಾಗಿರುವುದರಿಂದ ಬೀಜ–ಮೊಳಕೆ–ಸಸಿ–ಗಿಡ–ಮರ–ಹೂ–ಹಣ್ಣು–ಬೀಜ ಈ ಪ್ರವಾಹ ನಿರಂತರವಾದುದು. ಇಲ್ಲಿ ಪ್ರಾರಂಭದ ಬಿಂದುವಾಗಲೀ ಅಂತ್ಯವೆಂಬ ಬಿಂದುವಾಗಲೀ ಇಲ್ಲ. ಅಂತಹ ಹುಡುಕಾಟವೇ ಅರ್ಥ ಹೀನ, ಬೀಜ ಮೊದಲೋ ವೃಕ್ಷ ಮೊದಲೋ ಎಂಬ ಹುಡುಕಾಟವೇ ಅರ್ಥಹೀನವಾದುದು.

ಮೂಲ ಗುಹೇಶ್ವರ – ಸಾಮಾನ್ಯ ಲೋಕನಂಬಿಕೆಯನ್ನು ಆದಿಮ ಅವ್ಯವಸ್ಥೆಗೆ(?) ತಳ್ಳಿಕೊಂಡೇ ಅಲ್ಲಮ ನಮ್ಮೊಡನೆ ಸಂವಾದಕ್ಕಿಳಿಯುತ್ತಾನೆ. ಇದು ಸಂವಾದಕ್ಕೆ ಅಗತ್ಯವಾದ ಚಲನಶೀಲತೆಯನ್ನು ಒದಗಿಸಿಕೊಡುತ್ತದೆ. ನಮ್ಮ ಪಾರಂಪರಿಕ ಭಾಷಿಕವ್ಯವಹಾರ ಅಂದರೆ ಲೋಕವ್ಯವಹಾರದ ವಿಧಿ–ನಿಷೇಧಗಳನ್ನು, ಅಹುದು–ಇಲ್ಲಗಳನ್ನು ಪಕ್ಕಕ್ಕೆ ಕಟ್ಟಿಟ್ಟು ಮಾತನಾಡುವಾ ಎಂದು ಅಲ್ಲಮ ಆಹ್ವಾನಿಸುತ್ತಾನೆ.

ಅಸ್ತಿತ್ವ–ನಾಸ್ತಿತ್ವಗಳನ್ನಾಧರಿಸಿದ ಲೋಕದೃಷ್ಟಿಗೆ ಎರಡೇ ಸಾಧ್ಯತೆಗಳಿವೆ. ಒಂದು, ಉಣ್ಣದಿರದ ಸ್ಥಿತಿ ಇನ್ನೊಂದು ಉಂಡಸ್ಥಿತಿ. ಹಾಗೆಯೇ ಎಲ್ಲರ ಜೊತೆ ಇರುವ ಸ್ಥಿತಿ, ಬೇರೆ ಒಬ್ಬನೇ ಇರುವ ಸ್ಥಿತಿ.

ಇವೆರಡೂ ಬಂಧನದ ಸ್ಥಿತಿಗಳೇ. ತಾಯಿ–ಮಗನ ಸಂಬಂಧವನ್ನೂ ಹರಿದುಕೊಂಡೇ ಹುಟ್ಟಿದ ಅಲ್ಲಮನಿಗೆ, ಗುಹೇಶ್ವರನಾಗಿ ಪೂರ್ಣಮುಕ್ತನಾಗಿ ಇರುವುದರಲ್ಲಿ ರುಚಿಯಿಲ್ಲ. ಅವನಿಗೆ ಉಣಲಾಗದ, ಉಣದಿರಲಾಗದ ಸ್ಥಿತಿಗಿಂತ, ಹಸಿವಿಲ್ಲದೆ ಉಣಬಲ್ಲ, ಉಪಾಧಿ ಇಲ್ಲದೆಯೂ ಬೇಡಬಲ್ಲ ಸ್ಥಿತಿಯೇ ಇಷ್ಟ. ಲೋಕದಲ್ಲಿದ್ದೂ ಲೌಕಿಕಕ್ಕೆ ಬಂಧಿಯಾಗದ, ಸುಳಿದೂ ಗಮನಕ್ಕೆ ಬಂಧಿಯಾಗದ, ನಿಂತೂ ನಿರ್ಗಮನಕ್ಕೆ ಬಂಧಿಯಾಗದಿದ್ದಾಗ ಉಂಟಾಗುವ ಮುಕ್ತಸ್ಥಿತಿಯನ್ನು ನಮ್ಮ ಮುಂದಿಡುತ್ತಾನೆ.

ಎತ್ತಣ ಮಾಮರ ಎತ್ತಣ ಕೋಗಿಲೆ
ಎತ್ತಣಿಂದೆತ್ತ ಸಂಬಂಧವಯ್ಯಾ!
ಬೆಟ್ಟದ ನೆಲ್ಲಿಕಾಯಿ ಸಮುದ್ರದ ಉಪ್ಪು
ಎತ್ತಣಿಂದೆತ್ತ ಸಂಬಂಧವಯ್ಯಾ!
ಗುಹೇಶ್ವರ ಲಿಂಗಕ್ಕೆಯೂ ಎನಗೆಯೂ
ಎತ್ತಣಿಂದೆತ್ತ ಸಂಬಂಧವಯ್ಯಾ

ಇದು ಅಲ್ಲಮಪ್ರಭುವಿನ ಸಾಕಷ್ಟು ಜನಪ್ರಿಯ 'ಸಂಬಂಧ'ದ ವಚನ. ಇದು ಅನೇಕ ಸಂಬಂಧದ ಎಳೆಗಳನ್ನು ನಮ್ಮೆದುರಿಗೆ ಹರಡುತ್ತದೆ. ಅದಕ್ಕಿಂತ ಮೊದಲು ಇದರ ಕಾವ್ಯಾತ್ಮಕ ಗುಣ ನಮ್ಮನ್ನು ಸೆಳೆಯುತ್ತದೆ. ಮೊದಲನೆಯದಾಗಿ ಶೂನ್ಯಸಂಪಾದನೆಯಲ್ಲಿ ಈ ವಚನ ಉಕ್ತವಾಗಿರುವ ಸಂದರ್ಭ ತುಂಬಾ ಗಂಭೀರವಾದದ್ದು. ಅಲ್ಲಮ ತಾನು ಉತ್ಕಟವಾಗಿ ಪ್ರೀತಿಸುತ್ತಿದ್ದ ಕಾಮಲತೆ ಮಹಾಜ್ವರದಿಂದ ಮೃತಳಾಗಿದ್ದಾಳೆ. ತೀವ್ರ ನಿರಾಸೆಗೊಳಗಾದ ಅಲ್ಲಮ ಬದುಕನ್ನೇ ನಿರಾಕರಿಸಿದ ಸ್ಥಿತಿಯಲ್ಲಿ ಹೂತುಹೋಗಿದ್ದ ಶಿವಾಲಯವನ್ನು ಪ್ರವೇಶಿಸಿ ಅಲ್ಲಿ ಅನಿಮಿಷಯೋಗಿಯನ್ನು ಕಾಣುತ್ತಾನೆ. (ಗೊಗ್ಗಯ್ಯನ ತೋಟ, ಈ ಅನಿಮಿಷಯೋಗಿಯ ಮಠ, ಶಿವಾಲಯವಿದ್ದ ದೊಡ್ಡದೊಂದು ಕುಣಿಯ ಕುರುಹುಗಳು ಬಳ್ಳಿಗಾವೆಯಿಂದ ಸುಮಾರು ಐದು ಕಿಲೋಮೀಟರು ದೂರದಲ್ಲಿರುವ ಮಾಳಗೊಂಡನಕೊಪ್ಪ ಎಂಬ ಗ್ರಾಮದಲ್ಲಿ ಈಗಲೂ ಇವೆ.) ಅನಿಮಿಷಯೋಗಿ ತನ್ನ ಕೈಯಲ್ಲಿದ್ದ ಜ್ಯೋತಿರ್ಲಿಂಗವನ್ನು ಅಲ್ಲಮನಿಗೆ ನೀಡಿ ಪ್ರಾಣ ಬಿಡುತ್ತಾನೆ. ಅನಿಮಿಷನ ಕೈಲಿದ್ದ ಜ್ಯೋತಿರ್ಲಿಂಗ ಈಗ ಅಲ್ಲಮನ ಕೈಯಲ್ಲಿದೆ. ಈ ಘಟನೆ ಅಲ್ಲಮನ ಬದುಕಿನ ದಿಕ್ಕನ್ನು ಬದಲಿಸುತ್ತದೆ. ಬದುಕನ್ನೇ ನಿರಾಕರಿಸಿ ಹೊರಟವನಿಗೆ ಮತ್ತೊಂದು ಬದುಕಿನ ದಾರಿ ತೆರೆಯುತ್ತದೆ. ಈ ಸಂದರ್ಭದ ಅಚ್ಚರಿ ಮತ್ತು ಧನ್ಯಭಾವದಲ್ಲಿ ಈ ವಚನ ಉಂಟಾಗಿದೆ. ಆ ಸಂದರ್ಭಕ್ಕೆ ಈ ವಚನವನ್ನು ಪೋಣಿಸಿರುವ ಸಂಕಲನಕಾರನ ಪ್ರತಿಭೆ ಮೆಚ್ಚುವಂಥದ್ದು.

ಇದರ ಹೊರತಾಗಿ ಇಲ್ಲಿ ಅನಾವರಣವಾಗುವ ಇತರ ಸಂಬಂಧ ಸಾಧ್ಯತೆಗಳನ್ನು ಗಮನಿಸಿದರೆ ಅಲ್ಲಮ ಈ ವಚ ನದ ಮೂಲಕ ಕಾರಣ–ಪ್ರತ್ಯಯ–ಪರಿಣಾಮಗಳ ಪ್ರಕ್ರಿಯಾ ಮೀಮಾಂಸೆಯನ್ನು ಮುಂದಿಡುತ್ತಿದ್ದಾನೆ. ಪ್ರಭು ಲೋಕ ವನ್ನು ಸಂಬಂಧದ ಮೂಲಕ, ಸಂಯೋಜನೆಗಳ ಮೂಲಕ ವಿವರಿಸುತ್ತಾನೆ ಮತ್ತು ಅಂತಹ ಸಂಯೋಜನೆಯಲ್ಲಿ ಶಾಶ್ವತ ಸ್ವತಂತ್ರ ವಸ್ತುರೂಪವನ್ನು ನಿರಾಕರಿಸುತ್ತಾನೆ. ಕೋಗಿಲೆಯೆಂಬ ಕಾರಣ ಚಿಗುರಿದ ಮಾಮರವೆಂಬ ಪ್ರತ್ಯಯ (ಪರಿಸ್ಥಿತಿ)ದ ನಡುವೆ ಉಂಟಾದ ಸಂಬಂಧವು ಪಂಚಮನಾದವೆಂಬ ಫಲ ಅಥವಾ ಪರಿಣಾಮವನ್ನು ತಂದುಕೊಟ್ಟಿದೆ. ನೆಲ್ಲಿಕಾಯಿಯೆಂಬ ಕಾರಣ, ಸಮುದ್ರದಾಳದ ಉಪ್ಪೆಂಬ ಪ್ರತ್ಯಯವು ರಸಪ್ರತೀತಿಯೆಂಬ ಪರಿಣಾಮವನ್ನುಂಟುಮಾಡಿದೆ. ಮುಂದಿನ ಪ್ರಯಾಣ ಮೂರ್ತದಿಂದ ಅಮೂರ್ತಕ್ಕೆ, ತಾನು ಮತ್ತು ಇದಿರಿನ ನಿರಸನಕ್ಕೆ. ಮೇಲ್ನೋಟಕ್ಕೆ ಸಂಬಂಧವೆಂಬ ಪ್ರಕ್ರಿಯೆ ಆಕಸ್ಮಿಕವೆಂಬ ಭಾವನೆಯನ್ನುಂಟು ಮಾಡುವುದಾದರೂ ಲೋಕರಚನೆಯು ಸಂಬಂಧಗಳಿಂದಲೇ ಆದುದೆಂಬ ಪ್ರಕ್ರಿಯಾಮೀಮಾಂಸೆಯನ್ನು ಮುಂದಿಡುತ್ತದೆ. ಲೋಕದ ಕ್ರಿಯಾಶೀಲತೆ ಸಂಬಂಧದಲ್ಲಿ ಅಡಗಿದೆ ಎಂಬ ಸಂದೇಶವನ್ನು ನೀಡುತ್ತದೆ.

ಕಲಾವಿದರನ್ನು ಕಾಡುವ ಕುರುಹುಗಳು:

ಕೆಲವು ಚಿತ್ರಕಲಾವಿದರಿಗೆ ವಿಚಿತ್ರವಾದ ಸಮಸ್ಯೆಯೊಂದು ಕಾಡುತ್ತದೆ. ತಮ್ಮ ವ್ಯಕ್ತಿ ವಿಶಿಷ್ಟತೆಗಾಗಿ ತಾವೇ ಸೃಷ್ಟಿಸಿಕೊಂಡ ಕುರುಹುಗಳಲ್ಲಿ ಅವರು ಬಂಧಿಗಳಾಗಿಬಿಟ್ಟ

ಮಾತ್ತಾರೆ. ಅವುಗಳಿಂದ ಬಿಡುಗಡೆ ಪಡೆಯುವುದು ಸಾಧಾರಣ ಸಾಧನೆಯಲ್ಲ. ತಮ್ಮದೊಂದು ವಿಶಿಷ್ಟವಾದ ಸ್ಟ್ಯಾಂಪನ್ನು ಒತ್ತುವ ಮೂಲಕ ಪ್ರಾರಂಭವಾಗಿ ಕಡೆಗೆ ಅದರಲ್ಲೇ ಬಂಧಿಯಾಗಿಬಿಡುತ್ತಾರೆ. ಈ ಸಂಗತಿಯನ್ನು ಇಂದಿನ ಅನೇಕ ಕಲಾವಿದರಲ್ಲಿ ಕಾಣಬಹುದು. ಇದಕ್ಕೆ ಇನ್ನೊಂದು ಮುಖವೂ ಇದೆ. ಹೀಗೆ ಮೇಲ್ಪದರದ ಯಾವುದೋ ಒಂದು ಹಂತದಲ್ಲಿ ಬಂಧಿಯಾಗಿರುವುದೇ ಸಾಧನೆಯೆಂಬ ಭಾವನೆಯನ್ನು ಸಮೂಹದಲ್ಲಿ ಮೂಡಿಸುವ ಪ್ರಯತ್ನಗಳನ್ನೂ ಅವರು ಮಾಡುತ್ತಾರೆ. ಗಿಡ-ಮರಗಳಲ್ಲಿ ಹೆಣ್ಣೊಂದನ್ನು ಮೂಡಿಸುವುದರಲ್ಲೇ ಜೀವಮಾನವನ್ನು ಕಳೆಯುವವರಿದ್ದಾರೆ. ಕೆಲವೇ ಆಕೃತಿಗಳನ್ನು ಮರುಜೋಡಿಸುವುದರ ಹೊರತಾಗಿ ಮತ್ತೇನನ್ನೂ ಮಾಡದ ಕಲಾವಿದರು ಅನೇಕರಿದ್ದಾರೆ. ತಾವೇ ಸೃಜಿಸಿದ ಸಂಕೇತಗಳನ್ನು ನಿರಸನಗೊಳಿಸುತ್ತ ಸಾಗುವ ಕಲಾವಿದರು ತುಂಬಾ ಕಡಿಮೆ.

ಅಲ್ಲಮನಿಗೆ ಕುರುಹುಗಳು ಅಂದರೆ ಸಂಕೇತಗಳು ಸ್ಥಾಪನೆಗೊಂಡು ಸಂಸ್ಥೆಯಾಗುವ ಬಗೆಗೆ ತೀವ್ರವಾದ ಆತಂಕವಿದೆ. ಅದು ಭಾಷೆಯ ಸಂಕೇತಗಳ ಬಗೆಗೂ ನಿಜ, ಧಾರ್ಮಿಕ ಸಂಕೇತಗಳ ಬಗೆಗೂ ನಿಜ. ಕರುಹಿನ ವಿಸರ್ಜನೆ ಕುರುಹಿನ ನಿರ್ಮಾಣದಷ್ಟು ಸರಳವಲ್ಲ. ಒಮ್ಮೆ ಕುರುಹನ್ನು ನಿರ್ಮಿಸಿಕೊಂಡ ಮೇಲೆ ಅದಕ್ಕೇ ಅಂಟಿಕೂತುಬಿಡುತ್ತೇವೆ. ಆಕಾರದಿಂದ ನಿರಾಕಾರದೆಡೆಗೆ ಸಾಗಿ ಕಡೆಗೆ ಎರಡನ್ನೂ ದಾಟುವುದು, ಕುರುಹ ಹಿಡಿದು ಕುರುಹ ದಾಟುವುದು ಉದ್ದೇಶವಾದರೂ ಹೀಗೆ ದಾಟುವ ಪ್ರಯತ್ನದಲ್ಲಿರುವವರನ್ನು, ಪ್ರಯತ್ನದಲ್ಲಿಯೇ ಇರುವವರನ್ನು ಕಂಡು ಅಲ್ಲಮ ಕೆರಳುವುದೂ ಉಂಟು.

ಸಿಡಿಲೊಡನೆ ಕಾದುವಂಗೆ ಕೊಡೆಯೊಂದು ಮರೆಯೆ?

ಪರ್ವತವ ಹೊರುವವಂಗೆ ಸಿಂಬೆಯೊಂದು ಸಹಾಯವೆ?

ಸಕ್ಕರೆಯ ಸವಿವುದಕ್ಕೆ ಬೇವೊಂದು ಪದಾರ್ಥವೆ?

ಗೊಗೇಶ್ವರನನರಿವುದಕ್ಕೆ ಕುರುಹು ಮುನ್ನೇಕೆ?

ಅಷ್ಟೇ ಅಲ್ಲದೆ ಗುಹೇಶ್ವರನೆಂಬ ಶಬ್ದ ಸಿನೆಬಂಜೆಯಾಯಿತ್ತು ಎನ್ನುತ್ತಾನೆ. ಆ ಶಾಬ್ದಿಕ ಕುರುಹು ಕೂಡ ಅಲ್ಲಮನನ್ನು ಆತಂಕಿತನನ್ನಾಗಿ ಮಾಡುತ್ತದೆ. ಗೊಹೇಶ್ವರನೆಂಬ ಕುರುಹು ಬೆಸಲೆಯಾದರಂತೂ ದೊಡ್ಡದೊಂದು ಸಂಸ್ಥೆಯೇ ಅಸ್ತಿತ್ವಕ್ಕೆ ಬಂದುಬಿಡುವುದರಿಂದ ಅದನ್ನು ಮೊದಲು ಸಿನೆಬಂಜೆಯಾಗಿಸುತ್ತಾನೆ. ಅವುಗಳ ನಡುನೆತ್ತಿಯ ಮೇಲೆ ಉಳಿಯಿಟ್ಟು ಹೊಡೆಯುತ್ತಾನೆ.

ಪೃಥ್ವಿಗೆ ಹುಟ್ಟಿದ ಶಿಲೆ, ಕಲ್ಲುಕುಟಿಕಂಗೆ ಹುಟ್ಟಿದ ಮೂರುತಿ

ಮಂತ್ರಕ್ಕೆ ಲಿಂಗವಾಯಿತ್ತಲ್ಲಾ!

ಈ ಮೂವರಿಗೆ ಹುಟ್ಟಿದ ಮಗನ ಲಿಂಗವೆಂದು

ಕೈವಿಡಿವ ಅಚ್ಚವ್ರತಗೇಡಿಗಳನೇನೆಂಬೆ, ಗುಹೇಶ್ವರ.

ಹೊನ್ನತೂಗಿದ ತ್ರಾಸುಕಟ್ಟಳೆ ಹೊನ್ನಿಂಗೆ ಸರಿಯಪ್ಪುದೆ? ಚಿನ್ನವನ್ನು ತೂಗಿದ ಗುಲಗಂಜಿ, ಗುಲಗಂಜಿ ಮಾತ್ರವೆ. ಮತ್ತೂ ಒಂದು ಅದ್ಭುತಪ್ರತಿಮೆಯನ್ನು ಅಲ್ಲಮ ಮುಂದಿಡುತ್ತಾನೆ.

ಕನ್ನದಲ್ಲಿ ಸವೆದ ಕಬ್ಬುನದಂತೆ ಮುನ್ನ ಹೋದ ಹಿರಿಯರು

ಲಿಂಗದ ಸುದ್ದಿಯನರಿಯರು — ಇನ್ನಾರು ಬಲ್ಲರು ಹೇಳಾ ಗುಹೇಶ್ವರಾ

ಕನ್ನವಿಕ್ಕುವ ಕೆಲಸದಲ್ಲಿ ತಾನೇ ಮುಂದಿದ್ದು ಎಷ್ಟು ಸವೆದರೂ ಕಬ್ಬಿಣವೆಂದೂ ಸಂಪತ್ತನ್ನು ಪಡೆಯಲಾರದು. ಕುರುಹೂ ಅಷ್ಟೇ ತಾನೇ ನಿಜವಾಗದು. ಅದರ ಬದಲಿಗೆ,

ಕ್ಷಣವಾದಡೆಯೂ ಆಗಲಿ ನಿಜದ ನೆನಹೇ ಸಾಕು

ಕ್ಷಣಾರ್ಧವಾದಡೆಯೂ ಆಗಲಿ ನಿಜದ ನೆನಹೇ ಸಾಕು

ಬೆಂಕಿಯೊಳಗುಳ್ಳ ಗುಣ ಬಿಸಿನೀರಲುಂಟೇ ಗುಹೇಶ್ವರ.

ಕುರುಹು ಪದದ ವ್ಯಾಪ್ತಿಯನ್ನು ಸ್ವಲ್ಪ ಹಿಗ್ಗಲಿಸಿ ಗಮನಿಸಿದರೆ ವಿಶ್ವದ ಇತಿಹಾಸದಲ್ಲಿ ಇದರಿಂದಾಗಿರುವ ಅನಾಹುತಗಳು ಅಷ್ಟಿಷ್ಟಲ್ಲ. ತಾವು ಕಟ್ಟಿಕೊಂಡ ಕುರುಹನ್ನು ಭಂಜನೆಗೊಳಿಸಲು ಯಾವುದೇ ಸಮೂಹ ಸಿದ್ಧವಿರುವುದಿಲ್ಲ. ಅದರ ಬಗೆಗೆ ವಿಚಿತ್ರ ಶಠತ್ವವನ್ನು ಬೆಳೆಸಿಕೊಂದು ಕುರುಹು ಕಾಲ್ಪನಿಕವಾಗಿರಲೀ ಮೂರ್ತರೂಪದ್ದಾಗಿರಲೀ ಅದನ್ನು ಶಾಶ್ವತವಾಗಿಸುವ ಹಠಕ್ಕೆ ಬೀಳುತ್ತವೆ. ಕುರುಹು ಯಾವ ಸತ್ಯಕ್ಕೆ ಸಂಕೇತವಾಗಿರುತ್ತದೆಯೋ ಆ ಸತ್ಯವೇ ಮರೆಯಾಗಿಬಿಡುತ್ತದೆ. ಸಾಮರಸ್ಯದ ಸಂಕೇತಗಳು ವಿಶ್ವವನ್ನೇ ಛಿದ್ರಗೊಳಿಸುವ ಸ್ಫೋಟಕಗಳಾಗುತ್ತವೆ. ತಾವು ಕಾಣಿಸಿಕೊಡಬೇಕಾದ ಸತ್ಯವನ್ನು ಮುಚ್ಚುವ ಪರದೆಗಳಾಗುತ್ತವೆ.

ಕುರುಹು ಪದದ ವ್ಯಾಪ್ತಿಯನ್ನು ಸ್ವಲ್ಪ ಹಿಗ್ಗಲಿಸಿ ಗಮನಿಸಿದರೆ ವಿಶ್ವದ ಇತಿಹಾಸದಲ್ಲಿ ಇದರಿಂದಾಗಿರುವ ಅನಾಹುತಗಳು ಅಷ್ಟಿಷ್ಟಲ್ಲ. ತಾವು ಕಟ್ಟಿಕೊಂಡ ಕುರುಹನ್ನು ಭಂಜನೆಗೊಳಿಸಲು ಯಾವುದೇ ಸಮೂಹ ಸಿದ್ಧವಿರುವುದಿಲ್ಲ. ಅದರ ಬಗೆಗೆ ವಿಚಿತ್ರ ಶಠತ್ವವನ್ನು ಬೆಳೆಸಿಕೊಂದು ಕುರುಹು ಕಾಲ್ಪನಿಕವಾಗಿರಲೀ ಮೂರ್ತರೂಪದ್ದಾಗಿರಲೀ ಅದನ್ನು ಶಾಶ್ವತವಾಗಿಸುವ ಹಠಕ್ಕೆ ಬೀಳುತ್ತವೆ. ಕುರುಹು ಯಾವ ಸತ್ಯಕ್ಕೆ ಸಂಕೇತವಾಗಿರುತ್ತದೆಯೋ ಆ ಸತ್ಯವೇ ಮರೆಯಾಗಿಬಿಡುತ್ತದೆ. ಸಾಮರಸ್ಯದ ಸಂಕೇತಗಳು ವಿಶ್ವವನ್ನೇ ಛಿದ್ರಗೊಳಿಸುವ ಸ್ಫೋಟಕಗಳಾಗುತ್ತವೆ. ತಾವು ಕಾಣಿಸಿಕೊಡಬೇಕಾದ ಸತ್ಯವನ್ನು ಮುಚ್ಚುವ ಪರದೆಗಳಾಗುತ್ತವೆ. ಹಾಗಾಗಿ ಅಲ್ಲಮ ತಾನು ಎದುರಾಗುವ ಯಾವ ಪ್ರತಿಮೆಯನ್ನೂ, ಯಾವ ಕುರುಹನ್ನೂ ವಿಸರ್ಜಿಸದೇ ಬಿಡುವುದಿಲ್ಲ. ತಾನು ನಡೆದ ದಾರಿಯನ್ನು ಅಳಿಸಿ ಹೋಗುತ್ತಾನೆ. ಹೀಗೆ ಸೃಜಿಸುವ ಮತ್ತು ವಿಸರ್ಜಿಸುವ ಕ್ರಮವೇ ಪ್ರಕ್ರಿಯಾಮೀಮಾಂಸೆಯ ದಾರಿಯೆಂಬ ಸೂಚನೆಯನ್ನು ಅಲ್ಲಮ ನೀಡುತ್ತಾನೆ.

ಭಕ್ತಂಗೆ ಉತ್ಪತ್ತಿಯಿಲ್ಲಾಗಿ ಸ್ಥಿತಿಯಿಲ್ಲ

ಸ್ಥಿತಿಯಿಲ್ಲಾಗಿ ಲಯವಿಲ್ಲ

ಲಯವಿಲ್ಲಾಗಿ ದೇಹನಾಮಪ್ರವರ್ತನೆಯಿಲ್ಲ

ಇವಾವೂ ಇಲ್ಲದ ಕಾರಣ ನಿಮ್ಮ ಶರಣನಂಗ

ಬಚ್ಚ ಬರಿಯ ಬಯಲ ಗುಹೇಶ್ವರ.

ಹುಟ್ಟು, ಸಾವು ಮತ್ತು ನಡುವಿನ ಬಾಳುವಿಕೆಯ ಅವಸ್ಥೆ — ಇವುಗಳಲ್ಲಿ ಸ್ವತಂತ್ರ ಅವಸ್ಥೆಯೆಂದು ಕರೆಯಬಹುದಾದದ್ದು ಯಾವುದೂ ಇಲ್ಲ. ಇರುವುದು ಪ್ರಕ್ರಿಯೆ ಮಾತ್ರ ಎಂಬ ನಿಲುವನ್ನು ಈ ವಚನವೂ ವ್ಯಕ್ತಪಡಿಸುತ್ತದೆ.

ಅಲ್ಲಮನ ವಚನಗಳಲ್ಲಿ ಪ್ರಕ್ರಿಯಾ ಮೀಮಾಂಸೆಯ ಈ ಹುಡುಕಾಟದಲ್ಲಿ ಒಂದು ತೊಡಕಿದೆ. ಅದೇನೆಂದರೆ ಅಲ್ಲಮನ ವಚನ ಸಮೂಹವು ಹೊತ್ತು ಸಾಗುತ್ತಿರುವ ಅರ್ಥಕೋಶದ ವ್ಯಾಪ್ತಿ ತುಂಬಾ ದೊಡ್ಡದಿದೆ. ಅದರಲ್ಲಿ ಮೊದಲೇ ನಿರ್ಧರಿಸಿಕೊಂಡ ತಾತ್ವಿಕತೆಗೆ ಒದಗಿ ಬರುವ ಭಾಗವನ್ನು ಸ್ವೀಕರಿಸಿ ಉಳಿದ ಅರ್ಥಕೋಶವನ್ನು ಎದುರಾಗದೆ ಹೋದರೆ, ಅಂತಹ ಅಧ್ಯಯನಗಳಿಗೆ ಅನೇಕ ಮಿತಿಗಳುಂಟಾಗುತ್ತವೆ. ಈ ಅಧ್ಯಯನವೂ ಹಾಗೆ ಮಿತಿಗೊಳಪಡಲೇಬೇಕು. ಹಾಗೆಯೇ ನಿರ್ದಿಷ್ಟ ಪಾಂಥಿಕ ದೃಷ್ಟಿಕೋನದ ಅಧ್ಯಯನಗಳಿಗೂ ಸಮಾನ ಮಿತಿಗಳುಂಟು. ಈ ಕ್ರಮದ ಅಧ್ಯಯನದ ಮಾದರಿಯೊಂದು ಚಾಲ್ತಿಯಲ್ಲಿರುವುದರಿಂದ ಪ್ರಸ್ತುತ ಅಧ್ಯಯನದಲ್ಲಿನ ಮಿತಿಗಳಿಗೆ ಕ್ಷಮೆಯುಂಟೆಂದು ಭಾವಿಸುತ್ತೇನೆ. □



'ಸಂವಾದ' ದೊರೆಯುವ ಸ್ಥಳ

☞ನವಕರ್ನಾಟಕ ಪ್ರಕಾಶನ ಪುಸ್ತಕ ಮಳಿಗೆ
✦ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ ಬೆಂಗಳೂರು- ೫೬೦ ೦೦೧, ☎ : ೨೨೨೦೩೩೫೮೦
✦ಗಾಂಧಿನಗರ, ಬೆಂಗಳೂರು-೫೬೦ ೦೦೯, ☎ : ೨೨೨೫೦೩೩೮೨, ✦ಸ್ಟೇಷನ್ ರಸ್ತೆ, ಗುಲ್ಬರ್ಗ-೨ ☎ : ೪೨೪೩೦೨
✦ಕೆ.ಎಸ್.ರಾವ್.ರಸ್ತೆ, ಮಂಗಳೂರು-೧, ☎ : ೨೪೪೧೦೦೧೬, ✦ರಾಮಸ್ವಾಮಿ ವೃತ್ತ ಮೈಸೂರು-೨೪, ☎ : ೨೪೨೪೮೯೪
☞ಬೆಳ್ಳಿಚುಕ್ಕಿ ಬುಕ್ ಟ್ರಸ್ಟ್, ೧೧೮/೩ ಮೊದಲ ಮಹಡಿ ೨ನೇ ಮುಖ್ಯ ರಸ್ತೆ, (ನಟರಾಜ್ ಟಾಕೀಸ್ ಪಕ್ಕ) ಶೇಷಾದ್ರಿಪುರಂ ಬೆಂ-೨೦
☞ಕೆ.ಎಸ್.ಅರ್.ಟಿ.ಸಿ. ಬುಕ್ ಸ್ಟಾಲ್, ಫ್ಲಾಟ್ ಫಾಮ್ ನಂ.೧, ಸ್ಟಾಲ್ ನಂ.೭, ಕೆಂಪೇಗೌಡ ಬಸ್ ನಿಲ್ದಾಣ, ಬೆಂಗಳೂರು
☞ಉದಯ ಕುಮಾರ್ ಅಶೋಕ ಸ್ಟೋರ್, ಹೋಟೆಲ್ ಅಶೋಕ, ವಿಜಯನಗರ ಬೆಂಗಳೂರು-೫೬೦೦೪೦

ನಮ್ಮ ಪ್ರಾಥಮಿಕ ಶಿಕ್ಷಣ ಎತ್ತ ಸಾಗಿದೆ!

(41ನೇ ಪುಟದಿಂದ)

ರನ ಪರಿಷೆಯಲ್ಲಿ, ಕೊಟ್ಟೂರೇಶ್ವರ ರಥೋತ್ಸವದಲ್ಲಿ, ಬಿಳಿಗಿರಿರಂಗನ ಉತ್ಸವದಲ್ಲಿ ಯಾಕೆ ಅವರು ಸಿಹಿ ಹಂಚಲಿಲ್ಲ?. ಬೆಂಗಳೂರಿನ ಕರಗದದ ಮಹೋತ್ಸವದಲ್ಲೂ ಇವರು ಸಿಹಿ ಹಂಚಲಿಲ್ಲ. ಅಲ್ಲಿನ ದೇವರುಗಳೆಲ್ಲ ಶೂದ್ರ ದೇವರುಗಳೆಂದು ತಾತ್ಸಾರವೆ? ಏಕೆಂದರೆ ಏಕಚಕ್ರಾತಿಪತ್ಯ, ಏಕರೂಪೀಕರಣ, ಸರ್ವಾಧಿಕಾರ, ವೈದಿಕ ಸಾಮ್ರಾಜ್ಯಶಾಹಿ ವಿಚಾರವನ್ನು ಒಪ್ಪಿಕೊಂಡಿರುವ ಪಕ್ಷದ ಸರ್ಕಾರವೊಂದು ಅಧಿಕಾರದಲ್ಲಿದ್ದಾಗ ಬಹುರೂಪಿ ಸಮಾಜದಲ್ಲಿನ ಬಹುರೂಪೀಕರಣವನ್ನು, ಪ್ರಜಾಪ್ರಭುತ್ವವನ್ನು ನಾಶ ಮಾಡುವ ಹುನ್ನಾರ್ರ ಅಲ್ಲಿ ನಡೆಯುತ್ತಿರುತ್ತದೆ. ಈಗ ನಮ್ಮಲ್ಲಿ ನಡೆದಿರುವುದು ಅದೇ ಆಗಿದೆ. ಸರ್ಕಾರದ ನೀತಿ ಏಕರೂಪೀಕರಣದತ್ತ ಇದ್ದಾಗ ನಾವು ಅದರಿಂದ ನಮ್ಮ ಸಾವಿರಾರು ವೈವಿಧ್ಯಮಯವಾದ ದೇವಾನುದೇವತೆಗಳ ಬಹುರೂಪಿ ನಾಡಿನಲ್ಲಿ ಸಾಮಾಜಿಕ ನ್ಯಾಯವನ್ನು ಬಯಸುವುದ್ರು ಅಸಾಧ್ಯವಾಗುತ್ತದೆ. ನಮ್ಮ ಬಹರೂಪಿ ಸಂಸ್ಕೃತಿಯ ಬಗ್ಗೆ ವೈದಿಕಶಾಹಿಗೆ ಅಸೂಯೆಯಿದ್ದಂತೆ ಕಾಣುತ್ತದೆ. ಈ ಬಗೆಯಲ್ಲಿ ಬಹಿರಂಗವಾಗಿ ತಾರತಮ್ಯವನ್ನು ಸರ್ಕಾರವು ಅನುಸರಿಸುತ್ತಿದ್ದರೆ ನಾವು ಯಾರಿಗೆ ದೂರು ಹೇಳುವುದು?

ನಿರ್ಲಕ್ಷ್ಯಕ್ಕೊಳಗಾಗಿರುವ ಪ್ರಾಥಮಿಕ ಶಿಕ್ಷಣ!

ಇಂದು ನಮ್ಮ ಸಮಾಜದಲ್ಲಿ ಉನ್ನತ ಶಿಕ್ಷಣವು ಹೆಚ್ಚು ಚರ್ಚೆಗೆ ವಸ್ತುವಾಗಿದೆ. ಸರ್ಕಾರವು ಅದರ ಬಗ್ಗೆ ಹೆಚ್ಚು ಗಮನ ನೀಡುತ್ತಿರುವಂತೆ ಕಾಣುತ್ತಿದೆ. ಪ್ರಾಥಮಿಕ ಶಿಕ್ಷಣದ ಮಂತ್ರಿಗಳು ಶಾಲಾ ಪಠ್ಯದ ಬಗ್ಗೆ ಹೆಚ್ಚು ಮಾತನಾಡುತ್ತಿದ್ದಾರೆಯೆ ವಿನಾ ಅಲ್ಲಿನ ಸ್ಥಿತಿಗತಿ ಬಗ್ಗೆ, ಹಿಂದುಳಿದ ಜಿಲ್ಲೆಗಳಲ್ಲಿನ ಶಾಲಾ ಪರಿಸ್ಥಿತಿ ಬಗ್ಗೆ, ಶಾಲಾ ಗುಣ ಮಟ್ಟದ ಬಗ್ಗೆ ಮಾತನಾಡುತ್ತಿಲ್ಲ. ನಮ್ಮ ರಾಜ್ಯದ ಜ್ಞಾನ ಆಯೋಗವು ವಿಜ್ಞಾನ, ತಂತ್ರಜ್ಞಾನ, ಪರಮಾಣು ಶಕ್ತಿ ಬಗ್ಗೆ ಮಾತನಾಡುತ್ತಿದೆಯೇ ವಿನಾ ಪ್ರಾಥಮಿಕ ಶಿಕ್ಷಣದ ಬಗ್ಗೆ ಅದು ಮಾತನಾಡುತ್ತಿಲ್ಲ. ಸಮಾಜ ವಿಜ್ಞಾನಗಳೆನ್ನುವ ಸಂಗತಿಗಳಿವೆ ಎಂಬುದರ ಬಗ್ಗೆ ಜ್ಞಾನ ಆಯೋಗವು ಏನೂ ಗೊತ್ತಿಲ್ಲವೇನೋ ಎಂಬಂತೆ ನಡೆದುಕೊಳ್ಳುತ್ತಿದೆ. ಸಾಮಾಜಿಕ ಬದಲಾವಣೆ ಬಗ್ಗೆ ಅದು ಚಿಂತನೆ ನಡೆಸಿದ್ದು ಕಂಡು ಬರುವುದಿಲ್ಲ. ಸಮಾಜ ವಿಜ್ಞಾನ, ಮಾನವಿಕಗಳ ಶಿಕ್ಷಣವೂ ಭೌತಶಾಸ್ತ್ರದಷ್ಟೇ, ನ್ಯಾನೋ ತಂತ್ರಜ್ಞಾನದಷ್ಟೇ ಮಹತ್ವವಾದುದೆಂಬ ಸಂಗತಿಯನ್ನು ಜ್ಞಾನ ಆಯೋಗವು ಮನಗಾಣಬೇಕು.

ಇಂದು ಶಿಕ್ಷಣವು ವ್ಯಾಪಾರವಾಗಿ ಬಿಟ್ಟಿದೆ. ಅದಕ್ಕೆ ಸರ್ಕಾರವು ಕುಮ್ಮಕ್ಕು ಕೊಡುತ್ತಿದೆ. ಸಮಾಜ ಸೇವೆಗಿಂತ ಇಲ್ಲಿ ಬಂಡವಾಳ ಹೂಡುವ ಬಗ್ಗೆ ಕಂಪನಿಗಳು ಚಿಂತಿಸುತ್ತಿವೆ. ಹೆಚ್ಚು ಬಂಡವಾಳ ಹೂಡಿದರೆ ಹೆಚ್ಚು ಲಾಭವೆಂಬ ನೀತಿಯು ಇಲ್ಲಿ ದಿಗ್ದರ್ಶನ ಸೂತ್ರವಾಗಿದೆ. ಇದು ಕೇವಲ ಉನ್ನತ ಶಿಕ್ಷಣಕ್ಕೆ ಮಾತ್ರ ಸೀಮಿತವಾಗಿಲ್ಲ. ಖಾಸಗಿ ಉದ್ದಿಮೆಗಾರರು ಪ್ರಾಥಮಿಕ ಶಿಕ್ಷಣ ಕ್ಷೇತ್ರವನ್ನು ದೊಡ್ಡ ಪ್ರಮಾಣದಲ್ಲಿ ಪ್ರವೇಶಿಸುತ್ತಿದ್ದಾರೆ. ಶಾಲೆಗೆ ಮಕ್ಕಳನ್ನು ಕಳುಹಿಸಲು ಸಾಧ್ಯವಿಲ್ಲದಂತಹ ಕಾಶಪ್ಪ ಕಾಂಬಳೆ ದಂಪತಿ ಸ್ಥಿತಿಯನ್ನು ಕೇಳಿವವರಾರು?

ಇಂದು ನಮ್ಮ ಸಮಾಜದಲ್ಲಿ ಉನ್ನತ ಶಿಕ್ಷಣವು ಹೆಚ್ಚು ಚರ್ಚೆಗೆ ವಸ್ತುವಾಗಿದೆ. ಸರ್ಕಾರವು ಅದರ ಬಗ್ಗೆ ಹೆಚ್ಚು ಗಮನ ನೀಡುತ್ತಿರುವಂತೆ ಕಾಣುತ್ತಿದೆ. ಪ್ರಾಥಮಿಕ ಶಿಕ್ಷಣದ ಮಂತ್ರಿಗಳು ಶಾಲಾ ಪಠ್ಯದ ಬಗ್ಗೆ ಹೆಚ್ಚು ಮಾತ ನಾಡುತ್ತಿದ್ದಾರೆಯೆ ವಿನಾ ಅಲ್ಲಿನ ಸ್ಥಿತಿಗತಿ ಬಗ್ಗೆ, ಹಿಂದುಳಿದ ಜಿಲ್ಲೆಗಳಲ್ಲಿನ ಶಾಲಾ ಪರಿಸ್ಥಿತಿ ಬಗ್ಗೆ, ಶಾಲಾ ಗುಣ ಮಟ್ಟದ ಬಗ್ಗೆ ಮಾತನಾಡುತ್ತಿಲ್ಲ. ನಮ್ಮ ರಾಜ್ಯದ ಜ್ಞಾನ ಆಯೋಗವು ವಿಜ್ಞಾನ, ತಂತ್ರಜ್ಞಾನ, ಪರಮಾಣು ಶಕ್ತಿ ಬಗ್ಗೆ ಮಾತನಾಡುತ್ತಿದೆಯೇ ವಿನಾ ಪ್ರಾಥಮಿಕ ಶಿಕ್ಷಣದ ಬಗ್ಗೆ ಅದು ಮಾತನಾಡುತ್ತಿಲ್ಲ. ಸಮಾಜ ವಿಜ್ಞಾನಗಳೆನ್ನುವ ಸಂಗತಿಗಳಿವೆ ಎಂಬುದರ ಬಗ್ಗೆ ಜ್ಞಾನ ಆಯೋಗವು ಏನೂ ಗೊತ್ತಿಲ್ಲವೇನೋ ಎಂಬಂತೆ ನಡೆದುಕೊಳ್ಳುತ್ತಿದೆ.

ಈ ಬಗ್ಗೆ ನಾವು ಗಂಭೀರವಾಗಿ ಯೋಚಿಸಬೇಕು. ನಮ್ಮ ಪ್ರಾಥಮಿಕ ಶಿಕ್ಷಣವನ್ನು ಸರ್ಕಾರವು ಆದ್ಯತೆಯ ಸಂಗತಿಯನ್ನಾಗಿ ಪರಿಗಣಿಸಬೇಕು. ಸರ್ವ ಶಿಕ್ಷಣ ಅಭಿಯಾನವೇ ಅಲ್ಲಿ ಎಲ್ಲವನ್ನೂ ಬಗೆಹರಿಸಿ ಬಿಡುತ್ತದೆ ಎಂಬ ಧೋರಣೆ ಸರಿಯಲ್ಲ. ಸರ್ಕಾರಿ ಶಾಲೆಗಳ ಸ್ಥಿತಿಗತಿಗಳನ್ನು ಉತ್ತಮ ಪಡಿಸುವುದರ ಬಗ್ಗೆ ನಾವು ಕ್ರಮ ವಹಿಸಬೇಕು. ಚಿ.ನವನಾಥನಿಗೆ ಬಂದಂತಹ ಗತಿ ಬೇರೆ ಮಕ್ಕಳಿಗೂ ಬರದಂತೆ ನೋಡಿಕೊಳ್ಳಬೇಕು. ಅಲ್ಲಿನ ಕಟ್ಟಡಗಳಿಗೆ ಒಂದು ವಿನ್ಯಾಸವನ್ನು ರೂಪಿಸಬೇಕು. ಅವು ನಮ್ಮ ಗ್ರಾಮೀಣ ಪ್ರದೇಶದಲ್ಲಿ ಜ್ಞಾನದ ಕೇಂದ್ರಗಳಾಗಬೇಕು. ಅವು ನಮ್ಮ ಗ್ರಾಮಾಂತರ ಪ್ರದೇಶದಲ್ಲಿ ಸಾಮಾಜಿಕ ಬದಲಾವಣೆಯ ಆಯುಧಗಳಾಗಬೇಕು. ಜ್ಞಾನವನ್ನು ಉತ್ಪಾದಿಸುವ ಕೇಂದ್ರಗಳಾಗಬೇಕು. ಕಂಠಪಾಠ ಮಾಡುವ, ಉರು ಹೊಡೆಯುವ, 'ಸಂತೆಯ ಹೊತ್ತಿಗೆ ಮೂರು ಮೊಳ ಬಟ್ಟೆ ನೇಯುವ' ಕೇಂದ್ರಗಳಾಗಬಾರದು. ಮಕ್ಕಳೂ ಜ್ಞಾನವನ್ನು ಸೃಷ್ಟಿಸಬಲ್ಲರು ಎಂಬುದನ್ನು ನಾವು ಮೊದಲು ಮನಗಾಣುವಂತಾಗಬೇಕು. ಮನುಸ್ಮೃತಿಯಲ್ಲಿದ್ದುದೇ, ಅಥವಾ ಧರ್ಮಶಾಸ್ತ್ರದಲ್ಲಿರುವುದೇ ಜ್ಞಾನವಲ್ಲ. ಅದು ಅನುಸಂಧಾನದ ಮೂಲಕ, ಪ್ರಸ್ತುತ ಸ್ಥಿತಿಗತಿಯನ್ನು ಕುರಿತಂತೆ ನಡೆಯುವ ಚರ್ಚೆಯ ಮೂಲಕ ಉಂಟಾಗಬೇಕಾದ ಒಂದು ಪ್ರಕ್ರಿಯೆ. □



ಸೃಜನಾತ್ಮಕ ಹಾಗೂ ವೈಚಾರಿಕ ಸಾಹಿತ್ಯ ಕೃತಿಗಳನ್ನು ವಿಮರ್ಶೆಗಾಗಿ

ಸಂವಾದ

ಆಹ್ವಾನಿಸುತ್ತದೆ.

ಪ್ರಕಾಶಕರು / ಲೇಖಕರು ಪ್ರಕಟಿತ ಕೃತಿಯ ೨ ಪ್ರತಿಗಳನ್ನು ಕಳುಹಿಸಿಕೊಡಬೇಕಾಗಿ ಕೋರಲಾಗಿದೆ.

ವಿಳಾಸ:
ಸಂಪಾದಕರು 'ಸಂವಾದ' ಮಾಸಪತ್ರಿಕೆ,
ಸ್ಫೂರ್ತಿಧಾಮ, ಅಂಜನಾಗರ,
ವಿಶ್ವನೀಡಂ ಅಂಚೆ, ಬೆಂಗಳೂರು-೫೬೦ ೦೯೦
ದೂರವಾಣಿ : ೩೨೮ ೭೯೪೩/೯೪೪೮೦೪೮೩೦೬

ಶಾಲಾ ಶಿಕ್ಷಣ ವ್ಯವಸ್ಥೆಗೊಂದು ಪ್ರಣಾಳಿಕೆ

ದಲಿತ್ ಡೈರಿ

ಚಂದ್ರಭಾನ್ ಪ್ರಸಾದ್

ಕನ್ನಡಕ್ಕೆ:
ಸತ್ಯಪ್ರಕಾಶ್ ಎಂ ಆರ್

ಜಗತ್ತಿನಾದ್ಯಂತ ನಾಗರೀಕತೆಗಳ ವಿಕಾಸದಲ್ಲಿ ಜ್ಞಾನ ಪ್ರಮುಖ ಪಾತ್ರ ವಹಿಸಿದೆ. ಆಧುನಿಕ ಜಗತ್ತಿನಲ್ಲಿ ಜನರಿಗೆ ಶಿಕ್ಷಣದ ಮೂಲಕ ಜ್ಞಾನ ತಲುಪುತ್ತಿದೆ. ಜ್ಞಾನ ತಲುಪುವುದು ಶಾಲೆಗಳ ಮೂಲಕ. ಬಹುದೊಡ್ಡ ಜವಾಬ್ದಾರಿಯನ್ನು ಹೊಂದಿರುವ ಶಾಲಾ ಶಿಕ್ಷಣ ವ್ಯವಸ್ಥೆ ನಾನು ಗಮನಿಸಿದಂತೆ ಗ್ರಾಮೀಣ ಪ್ರದೇಶಗಳಲ್ಲಿ ಅಧೋಗತಿಗೆ ಇಳಿಯುತ್ತಿದೆ. ಭಾರತ ಸರ್ಕಾರದ ವರದಿ (೨೦೦೫-೦೬ರ ಆಯ್ದ ಶೈಕ್ಷಣಿಕ ಅಂಕಿ ಅಂಶಗಳು)ಯ ಪ್ರಕಾರ ಒಂದನೆಯ ತರಗತಿಗೆ ದಾಖಲಾತಿ ಹೊಂದುವ ಮಕ್ಕಳಲ್ಲಿ ಶೇ. ೬೧.೬೨ ರಷ್ಟು ಮಂದಿ ಪ್ರೌಢ ಶಾಲೆಗೆ ಬರುವ ಹೊತ್ತಿಗೆ ಶಾಲೆ ಬಿಟ್ಟಿರುತ್ತಾರೆ. ಇವರಲ್ಲಿ ಶೇ. ೭೦.೫೭ ರಷ್ಟು ದಲಿತ ಮಕ್ಕಳಿದ್ದು, ಶೇ. ೭೮.೫೨ ಬುಡಕಟ್ಟು ಜನಾಂಗಗಳ ಮಕ್ಕಳಾಗಿದ್ದಾರೆ. ಇದೇ ವರದಿಯ ಪ್ರಕಾರ ೨೦೦೬ ರಲ್ಲಿ ಪ್ರೌಢಶಾಲೆಯ ಪರೀಕ್ಷೆ ತೆಗೆದುಕೊಂಡವರಲ್ಲಿ ಶೇ. ೩೨.೧೨ ರಷ್ಟು ಮಕ್ಕಳು ನಪಾಸಾಗಿದ್ದಾರೆ.

ಜಾತಿವ್ಯವಸ್ಥೆಯ ಕರಾಳ ಸಮಸ್ಯೆಯ ಜೊತೆಗೆ ಭಾರತಕ್ಕೆ ಬಹುದೊಡ್ಡ ಸವಾಲಾಗಿರುವುದು ಶಾಲಾ ಶಿಕ್ಷಣ ವ್ಯವಸ್ಥೆ. ಪ್ರಸ್ತುತ ಚುನಾವಣಾ ಸಂದರ್ಭದಲ್ಲಿ ನಾನೂ ಕೂಡ ಒಂದು "ಪ್ರಣಾಳಿಕೆ" ಯನ್ನು ಸಿದ್ಧಪಡಿಸಿದ್ದೇನೆ.

ಜಗತ್ತಿನಾದ್ಯಂತ ನಾಗರೀಕತೆಗಳ ವಿಕಾಸದಲ್ಲಿ ಜ್ಞಾನ ಪ್ರಮುಖ ಪಾತ್ರ ವಹಿಸಿದೆ. ಆಧುನಿಕ ಜಗತ್ತಿನಲ್ಲಿ ಜನರಿಗೆ ಶಿಕ್ಷಣದ ಮೂಲಕ ಜ್ಞಾನ ತಲುಪುತ್ತಿದೆ. ಜ್ಞಾನ ತಲುಪುವುದು ಶಾಲೆಗಳ ಮೂಲಕ. ಬಹುದೊಡ್ಡ ಜವಾಬ್ದಾರಿಯನ್ನು ಹೊಂದಿರುವ ಶಾಲಾ ಶಿಕ್ಷಣ ವ್ಯವಸ್ಥೆ ನಾನು ಗಮನಿಸಿದಂತೆ ಗ್ರಾಮೀಣ ಪ್ರದೇಶಗಳಲ್ಲಿ ಅಧೋಗತಿಗೆ ಇಳಿಯುತ್ತಿದೆ.

ಭಾರತ ಸರ್ಕಾರದ ವರದಿ (೨೦೦೫-೦೬ರ ಆಯ್ದ ಶೈಕ್ಷಣಿಕ ಅಂಕಿ ಅಂಶಗಳು)ಯ ಪ್ರಕಾರ ಒಂದನೆಯ ತರಗತಿಗೆ ದಾಖಲಾತಿ ಹೊಂದುವ ಮಕ್ಕಳಲ್ಲಿ ಶೇ. ೬೧.೬೨ರಷ್ಟು ಮಂದಿ ಪ್ರೌಢ ಶಾಲೆಗೆ ಬರುವ ಹೊತ್ತಿಗೆ ಶಾಲೆ ಬಿಟ್ಟಿರುತ್ತಾರೆ. ಇವರಲ್ಲಿ ಶೇ. ೭೦.೫೭ರಷ್ಟು ದಲಿತ ಮಕ್ಕಳಿದ್ದು, ಶೇ. ೭೮.೫೨ ಬುಡಕಟ್ಟು ಜನಾಂಗಗಳ ಮಕ್ಕಳಾಗಿದ್ದಾರೆ. ಇದೇ ವರದಿಯ ಪ್ರಕಾರ ೨೦೦೬ರಲ್ಲಿ ಪ್ರೌಢಶಾಲೆಯ ಪರೀಕ್ಷೆ ತೆಗೆದುಕೊಂಡವರಲ್ಲಿ ಶೇ. ೩೨.೧೨ರಷ್ಟು ಮಕ್ಕಳು ನಪಾಸಾಗಿದ್ದಾರೆ. ಅನುತ್ತೀರ್ಣರಾದವರಲ್ಲಿ ದಲಿತರು (೩೯.೨%) ಮತ್ತು ಬುಡಕಟ್ಟು ಜನಾಂಗ (ಶೇ. ೪೬.೯೬)ಗಳ ಮಕ್ಕಳ ಸಂಖ್ಯೆ ಹೆಚ್ಚಾಗಿದೆ.

ನಗರ/ ಗ್ರಾಮೀಣ, ಖಾಸಗಿ/ ಸರ್ಕಾರಿ ಶಾಲೆಗಳ ಅಂತರವನ್ನು ತಿಳಿಸುವ ತುಲನಾತ್ಮಕ ಅಂಕಿ-ಅಂಶಗಳು ಸದ್ಯಕ್ಕೆ ನನ್ನ ಬಳಿ ಇಲ್ಲ. ಆದರೆ, ಗ್ರಾಮೀಣ ಪ್ರದೇಶಗಳಲ್ಲಿ ನಪಾಸಾಗುವವರ ಪ್ರಮಾಣ ಬಹುತೇಕ ಶೇ. ೫೦ಗಿಂತ ಅಧಿಕವಾಗಿರುವುದಂತೂ ಖಚಿತ. ಈ ಕುರಿತು ಸ್ವಲ್ಪ ಲೆಕ್ಕಾಚಾರ ಹಾಕಿದರೆ, ಭಾರತ ಎಂಥಹ ದೊಡ್ಡ ಸಮಸ್ಯೆಯ ಸುಳಿಯಲ್ಲಿ ಸಿಲುಕಿದೆ ಎಂಬುದು ಗೊತ್ತಾಗುತ್ತದೆ. ಈಗಾಗಲೇ ಹೇಳಿದಂತೆ ಒಂದನೆಯ ತರಗತಿಗೆ ದಾಖಲಾಗುವ ಮಕ್ಕಳಲ್ಲಿ ಶೇ. ೬೧.೬೨ರಷ್ಟು ಮಂದಿ ಪ್ರೌಢಶಾಲೆಯ ಪರೀಕ್ಷೆ ಬರೆಯುವ ಹೊತ್ತಿಗೆ ಶಾಲೆ ಬಿಟ್ಟಿರುತ್ತಾರೆ. ಇನ್ನು ಪರೀಕ್ಷೆ ತೆಗೆದುಕೊಳ್ಳುವ ಶೇ. ೩೮.೩೮ರಷ್ಟು ಮಕ್ಕಳಲ್ಲಿ ಪ್ರತಿ ಮೂರನೆಯ ವಿದ್ಯಾರ್ಥಿ ಪ್ರೌಢಶಾಲೆಯಲ್ಲಿ ನಪಾಸಾಗುತ್ತಾನೆ. ಅಂದರೆ ಪ್ರಾಥಮಿಕ ಶಾಲೆಗೆ ದಾಖಲಾಗುವ ಮಕ್ಕಳಲ್ಲಿ ಶೇ. ೭೨ರಷ್ಟು ಮಕ್ಕಳು ಪ್ರೌಢ ಶಾಲೆಯನ್ನು ದಾಟುವುದಿಲ್ಲ.

ದೇಶದ ಶೇ. ೭೫ರಷ್ಟು ಮಕ್ಕಳಿಗೆ ಶಿಕ್ಷಣ- ಜ್ಞಾನವನ್ನು ಒದಗಿಸದಿದ್ದರೆ ನಾವು ಎಂಥಹಾ ರಾಷ್ಟ್ರ ಕಟ್ಟಲು ಸಾಧ್ಯ? ಅಂತರಾಷ್ಟ್ರೀಯ ಸ್ಥರಗಳಲ್ಲಿ ಭಾರತ ಹೇಗೆ ಸ್ಪರ್ಧೆ ಒಡ್ಡಲು ಸಾಧ್ಯ?

ಸಮಸ್ಯೆಯ ಮೂಲವನ್ನು ಸ್ವಲ್ಪ ಪರೀಕ್ಷಿಸೋಣ. ಭಾರತದಲ್ಲಿ ನಾಲ್ಕು ಗುಂಪುಗಳು ಶಾಲಾ ಶಿಕ್ಷಣವನ್ನು ಒದಗಿಸುತ್ತಿವೆ; (೧) ಸರ್ಕಾರಿ ಅನುದಾನಿತ ಅರೆ-ಖಾಸಗಿ ಶಾಲೆಗಳು, (೨) ಪಬ್ಲಿಕ್ ಶಾಲೆಗಳು ಎಂದು ಕರೆಯಲಾಗುವ ಖಾಸಗಿ ಶಾಲೆಗಳು, (೩) ಆಯಾ ರಾಜ್ಯಗಳ ಸರ್ಕಾರಿ ಶಾಲೆಗಳು, ಮತ್ತು (೪) ಕೇಂದ್ರ ಸರ್ಕಾರ ನಡೆಸುವ ಕೇಂದ್ರೀಯ ವಿದ್ಯಾಲಯಗಳು.

ಭಾರತದ ಬಹುತೇಕ ಶಾಲೆಗಳು ಈ ಮೇಲಿನ ಮೊದಲ ವರ್ಗಕ್ಕೆ ಸೇರುತ್ತದೆ. ಸೊಸೈಟಿ ನೊಂದಣಿ ಕಾಯ್ದೆಯಡಿ, ಸಂಸ್ಥೆಗಳು ತಮ್ಮ ಸಂಪನ್ಮೂಲಗಳಿಂದ ಶಾಲೆಗಳನ್ನು ಆರಂಭಿಸಿ ಸರ್ಕಾರಿ ಅನುದಾನ ಪಡೆಯುವುದು ಸಾಮಾನ್ಯ ಸಂಗತಿ. ಆಯಾ ಸಂಸ್ಥೆಗಳ ವ್ಯವಸ್ಥಾಪನಾ ಮಂಡಳಿಗಳು ಈ ಶಾಲೆಗಳನ್ನು ನಡೆಸುತ್ತವೆ. ಸರ್ಕಾರದ ಅನುದಾನ ದೊರಕುವುದಕ್ಕೆ ಮುಂಚೆಯೇ ಈ ಶಾಲೆಗಳು ಶಿಕ್ಷಕರನ್ನು ನೇಮಕ ಮಾಡಿಕೊಳ್ಳುತ್ತವೆ. ಕೆಲವು ವರ್ಷಗಳ ಬಳಿಕ ಶಾಲೆಗೆ ಸರ್ಕಾರಿ ಅನುದಾನ ದೊರಕಿದಾಗ ಶಾಲೆಯ ಶಿಕ್ಷಕ, ಮತ್ತು ಶಿಕ್ಷಕೇತರ ಸಿಬ್ಬಂದಿಗೆ ಆಯಾ ರಾಜ್ಯ ಸರ್ಕಾರಗಳಿಂದ ವೇತನ ನೀಡಲಾಗುತ್ತದೆ. ಇನ್ನು ಪ್ರಾಥಮಿಕ ಶಿಕ್ಷಣ (೧-೫ನೆಯ ತರಗತಿ)ವನ್ನು ಬಹುತೇಕ ರಾಜ್ಯ ಸರ್ಕಾರಗಳು ನೀಡುತ್ತವೆ.

ಸರ್ಕಾರ ನಡೆಸುವ ಪ್ರಾಥಮಿಕ ಶಾಲೆಗಳು ಶಾಲಾ ಶಿಕ್ಷಣ ವ್ಯವಸ್ಥೆಯ ನಿಜವಾದ ಸಮಸ್ಯೆಯಾಗಿ ಪರಿಣಮಿಸಿದೆ. ರಾಜ್ಯಮಟ್ಟದಲ್ಲಿ ರಾಜಕೀಯ ನೈತಿಕತೆ ಅಧಃಪತನಗೊಂಡಿರುವುದರಿಂದ ಶಿಕ್ಷಕರ ಆಯ್ಕೆ ಪ್ರಕ್ರಿಯೆ ಯಾವಾಗಲೂ ಪ್ರಶ್ನಾರ್ಹವಾಗಿರುತ್ತದೆ. ಇನ್ನು ಶಿಕ್ಷಕರು ಕೂಡ ತಮ್ಮ ಮೂಲ ಸ್ಥಳಗಳಿಗೆ ಹತ್ತಿರದ ಹಳ್ಳಿಗಳಲ್ಲಿ ನೇಮಕಾತಿ ಹೊಂದುವುದರಿಂದ ಶಿಕ್ಷಕ ವೃತ್ತಿ ಎರಡನೆಯ ಸ್ಥಾನಕ್ಕೆ ದೂಡಲ್ಪಡುತ್ತದೆ. ಇನ್ನು ಖಾಸಗಿ ವ್ಯವಸ್ಥಾಪಕತ್ವದ ಶಾಲೆಗಳಲ್ಲಿ ಶಿಕ್ಷಕರ ಗುಣಮಟ್ಟ ಕಳಪೆಯಾಗಿರುತ್ತದೆ. ಈ ವ್ಯವಸ್ಥೆಯಲ್ಲಿ ಕೂಡ ಶಿಕ್ಷಕರು ತಮ್ಮ ಮೂಲ ಸ್ಥಳಗಳಿಗೆ ಹತ್ತಿರದಲ್ಲಿಯೇ ಇರುವುದನ್ನು ಗಮನಿಸಬಹುದು. ಇವರು ಕೂಡ ಶಿಕ್ಷಕ ವೃತ್ತಿಗೆ ಮೊದಲ ಆದ್ಯತೆ ನೀಡುವುದಿಲ್ಲ.

ಹಾಗಾದರೆ ಇದಕ್ಕೆ ಪರಿಹಾರ ಏನು? ದೇಶದ ಪೋಷಕರು ಬಹುತೇಕ ತಮ್ಮ ಮಕ್ಕಳನ್ನು ಇಂಗ್ಲಿಷ್ ಮಾಧ್ಯಮದ ಪಬ್ಲಿಕ್ ಶಾಲೆಗಳಿಗೆ ಸೇರಿಸಲು ಇಷ್ಟಪಡುತ್ತಾರೆ. ಇಂಥಹಾ "ಪಬ್ಲಿಕ್ ಶಾಲೆ"ಗಳಲ್ಲಿ ಫಲಿತಾಂಶ ಅತ್ಯುತ್ತಮವಾಗಿದ್ದು, ಶಾಲೆ ಬಿಡುವವರ ಸಂಖ್ಯೆ ತೀರ ಕಡಿಮೆ. ಆದರೆ ಕೇಂದ್ರ ಸರ್ಕಾರದ ಕೇಂದ್ರೀಯ ವಿದ್ಯಾಲಗಳು "ಪಬ್ಲಿಕ್ ಶಾಲೆ"ಗಳಿಗೆ ತೀವ್ರ ಪ್ರತಿರೋಧ ಒಡ್ಡುತ್ತವೆ. ದೇಶಾದ್ಯಂತ ವಿಸ್ತರಿಸಿರುವ ಕೇಂದ್ರೀಯ ವಿದ್ಯಾಲಗಳು ಕೇಂದ್ರ ಸರ್ಕಾರಿ ನೌಕರರ ಮಕ್ಕಳಿಗಾಗಿ ವಿಶೇಷವಾಗಿ ತೆರೆಯಲ್ಪಟ್ಟಿವೆ. ಕಳೆದ ವರ್ಷ ಕೇಂದ್ರೀಯ ವಿದ್ಯಾಲಗಳು, "ಪಬ್ಲಿಕ್ ಶಾಲೆ"ಗಳಿಗಿಂತ ಉತ್ತಮ ಫಲಿತಾಂಶ ಒದಗಿಸಿವೆ. ಇದರರ್ಥ, ಕೇಂದ್ರ ಸರ್ಕಾರಕ್ಕೆ ಕೂಡ ಉತ್ತಮ ಶಿಕ್ಷಣ ನೀಡಲು ಸಾಧ್ಯವಿದೆ.

ಹಾಗಾದರೆ, ಕೇಂದ್ರೀಯ ವಿದ್ಯಾಲಯಗಳ ಯಶಸ್ಸಿನ ಗುಟ್ಟೇನು? ಯಶಸ್ಸಿನ ಕಾರಣಗಳು ಹಲವಾರಿರಬಹುದು, ಆದರೆ ನಾನಿಲ್ಲಿ ಮೂರು ಕಾರಣಗಳನ್ನು ಪಟ್ಟಿ ಮಾಡುತ್ತಿದ್ದೇನೆ. ಒಂದು, ಶಿಕ್ಷಕರು ತಮ್ಮ ಮೂಲ ಸ್ಥಳಗಳಿಂದ ದೂರ, ಬೇರೆ ರಾಜ್ಯಗಳಲ್ಲಿ ನೇಮಕ ಹೊಂದುತ್ತಾರೆ. ಹೀಗಾಗಿ ಶಿಕ್ಷಕರಿಗೆ ಪಾಠ ಮಾಡುವುದು ಬಿಟ್ಟು ಇನ್ನೇನು ಕೆಲಸವಿರುವುದಿಲ್ಲ. ಎರಡನೆಯದಾಗಿ, ರಾಷ್ಟ್ರಮಟ್ಟದ ಲಿಖಿತ ಪರೀಕ್ಷೆಯಲ್ಲಿ ಆಯ್ಕೆಯಾದ ನಂತರ ಗುಂಪು ಚರ್ಚೆ ನಡೆಸಿ ಶಿಕ್ಷಕರನ್ನು ಆಯ್ಕೆ ಮಾಡಲಾಗುತ್ತದೆ. ಮೂರನೆಯದಾಗಿ, ಕೇಂದ್ರೀಯ ವಿದ್ಯಾಲಯದ ಯಾವುದೇ ಶಿಕ್ಷಕರ ಸಂಘ ಕೂಡ ಇರುವುದಿಲ್ಲ.

ನನ್ನ ಪ್ರಣಾಳಿಕೆಯಲ್ಲಿ ಶಾಲಾ ಶಿಕ್ಷಣವನ್ನು ರಾಷ್ಟ್ರೀಕರಣಗೊಳಿಸುವ ಪ್ರಸ್ತಾವನೆಯಿಡುತ್ತಿ

ದ್ದೇನೆ. ಸರ್ಕಾರಿ ಶಾಲೆಗಳ ಜೊತೆಗೆ ಪಬ್ಲಿಕ್ ಶಾಲೆಗಳು ಕೂಡ ಕಾರ್ಯನಿರ್ವಹಿಸಲು ಅನುಮತಿ ನೀಡುತ್ತೇನೆ. ಆ ಮೂಲಕ ಸರ್ಕಾರಿ ಮತ್ತು ಪಬ್ಲಿಕ್ ಶಾಲೆಗಳ ನಡುವೆ ಉತ್ತಮ ಸ್ಪರ್ಧೆ ಸಾಧ್ಯವಾಗುತ್ತದೆ. ಶಾಲಾ ಶಿಕ್ಷಕರಿಗೆ ಉತ್ತಮ ವೇತನ ನೀಡುತ್ತೇನೆ. ತಮ್ಮ ಮೂಲ ಸ್ಥಳಗಳಿಗೆ ಭೇಟಿ ನೀಡಲು ವರ್ಷದಲ್ಲಿ ಮೂರು ಸಲ ಉಚಿತವಾಗಿ ವಿಮಾನದ ಟಿಕೆಟ್ ಸೌಲಭ್ಯ ನೀಡುತ್ತೇನೆ. ಶಿಕ್ಷಕರು ತಮ್ಮ ಮೂಲ ರಾಜ್ಯಗಳಲ್ಲಿ ಯಾವುದೇ ಕಾರಣಕ್ಕೂ ನೇಮಕ ಹೊಂದಲು ಬಿಡುವುದಿಲ್ಲ ಎಂಬ ಭರವಸೆ ನೀಡುತ್ತೇನೆ. ಜ್ಞಾನ ಸಮಾಜವನ್ನು ನಿರ್ಮಿಸದ ಹೊರತು ಜ್ಞಾನಾಧಾರಿತ ಆರ್ಥಿಕ ವ್ಯವಸ್ಥೆಯ ಬಗ್ಗೆ ಹೇಗೆ ಮಾತನಾಡಲು ಸಾಧ್ಯ? ಅಲ್ಲವೇ?

ಅಂಬೇಡ್ಕರ್ ಪ್ರಣಾಳಿಕೆಯ ಪುನರುತ್ಥಾನ

ದೇಶದ ಶೇ. ೬೦ ಮಂದಿ ಕೃಷಿ ಚಟುವಟಿಕೆಗಳಲ್ಲಿ ತೊಡಗಿದ್ದರೂ ಕೃಷಿಕರು ರಾಷ್ಟ್ರದ ಸಮಗ್ರ ಉತ್ಪನ್ನಕ್ಕೆ ಕೇವಲ ಶೇ. ೧೬.೨ರಷ್ಟು ಮಾತ್ರ ಕೊಡುಗೆ ನೀಡುತ್ತಿರುವುದು ನಿಜಕ್ಕೂ ನೋವಿನ ಸಂಗತಿ. ಇನ್ನುಳಿದ ಶೇ. ೪೦ ರಷ್ಟು ಮಂದಿ ಕೈಗಾರಿಕೆ ಮತ್ತು ಸೇವಾ ವಲಯದಲ್ಲಿ ತೊಡಗಿಕೊಂಡಿದ್ದು ಶೇ. ೮೨.೮ರಷ್ಟು ಕೊಡುಗೆ ನೀಡುತ್ತಿದ್ದಾರೆ.

ಅಂದರೆ ಭಾರತದ ಬಹುತೇಕ ಮಂದಿ ಆರ್ಥಿಕವಾಗಿ ಅಸಮರ್ಥವಾದ ಕೃಷಿ ಕ್ಷೇತ್ರದಲ್ಲಿ ತೊಡಗಿಕೊಂಡಿದ್ದಾರೆ. ದೇಶದ ಭೂಸಂಪತ್ತನ್ನು ಸಮರ್ಪಕವಾಗಿ ಬಳಸಿಕೊಳ್ಳದ ಕೃಷಿ, ಭಾರತದ ಆರ್ಥಿಕ ವ್ಯವಸ್ಥೆಗೆ ಅಪಾರ ನಷ್ಟವುಂಟುಮಾಡುತ್ತಿದೆ. ಭಾರತದಲ್ಲಿ ಒಂದು ಹೆಕ್ಟೇರಿಗೆ ೨.೮ ಟನ್ ಗೋಧಿ ಇಳುವರಿಯಿದ್ದರೆ, ಬ್ರಿಟನ್‌ನಲ್ಲಿ ಒಂದು ಹೆಕ್ಟೇರಿಗೆ ೭.೯ ಟನ್ ಗೋಧಿ ಬೆಳೆಯುತ್ತಾರೆ.

ಬ್ರಿಟನ್, ಫ್ರಾನ್ಸ್ ಮತ್ತು ಜರ್ಮನಿ ಮೂರು ರಾಷ್ಟ್ರಗಳು ಸೇರಿ ೯೮ ಲಕ್ಷ ಹೆಕ್ಟೇರ್ ಭೂಮಿಯಲ್ಲಿ ವರ್ಷಕ್ಕೆ ೬.೩೯ ಕೋಟಿ ಟನ್ ಗೋಧಿ ಬೆಳೆಯುತ್ತವೆ. ಆದರೆ ಭಾರತ ೨.೪೮ ಕೋಟಿ ಹೆಕ್ಟೇರ್ ಭೂಮಿಯಲ್ಲಿ ಕೇವಲ ೬.೫೧ ಟನ್ ಗೋಧಿ ಮಾತ್ರ ಬೆಳೆಯುತ್ತದೆ.

ನಿಜಕ್ಕೂ ಇದು ನಾಚಿಕೆಗೇಡಿನ ವಿಚಾರ. ಆದರೂ, ಭಾರತ ಕೃಷಿ ಪ್ರಧಾನ ರಾಷ್ಟ್ರ ಎಂಬ ಸ್ವಯಂಘೋಷಣೆಗಳಿಗೇನು ಕಮ್ಮಿಯಿಲ್ಲ. ಈ ವ್ಯಾಖ್ಯಾನದ ನಿಜವಾಗಿದ್ದರೆ ಭಾರತೀಯ ಕೃಷಿಕರು, ಕೃಷಿ ತಜ್ಞರಾಗಿರಬೇಕಿತ್ತು. ಬ್ರಿಟನ್ ಕೈಗಾರಿಕಾ ಪ್ರಧಾನ ರಾಷ್ಟ್ರವಾಗಿದ್ದರೂ ಅಲ್ಲಿನ ರೈತರು, ಭಾರತೀಯ ರೈತರು ಒಂದು ಹೆಕ್ಟೇರ್ ಭೂಮಿಯಲ್ಲಿ ಬೆಳೆಯುವ ಗೋಧಿಗಿಂತ ೨.೮೨ ಪಟ್ಟು ಹೆಚ್ಚು ಗೋಧಿ ಇಳುವರಿ ಪಡೆಯುತ್ತಾರೆ.

ಬ್ರಿಟನ್ನಿನ ಕೃಷಿಯ ಇತಿಹಾಸದ ಕೆಲವು ಪ್ರಮುಖ ವಿಚಾರಗಳನ್ನು ಈ ಸಂದರ್ಭದಲ್ಲಿ ನಾವು ಗಮನಿಸುವುದು ಸೂಕ್ತ. ೧೮೦೦ರಲ್ಲಿ ಬ್ರಿಟನ್ನಿನ ಕೃಷಿ ಪ್ರಸ್ತುತ ಭಾರತೀಯ ಕೃಷಿಯಂತೆ ನಷ್ಟದಲ್ಲಿತ್ತು. ಹತ್ತೊಂಭತ್ತನೆಯ ಶತಮಾನದ ಮೊದಲಾರ್ಧದಲ್ಲಿ, ಅಂದರೆ ೧೮೧೫ರಿಂದ ೧೮೪೬ರವರೆಗೆ ಬ್ರಿಟನ್ನಿನಲ್ಲಿ ಆಹಾರದ ಕೊರತೆ ಎಷ್ಟಿತ್ತೆಂದರೆ, ಬಡವರು ಬದುಕಲು ಅನುವು ಮಾಡಿಕೊಡಲು ೧೮೪೬ರಲ್ಲಿ ಧವಸ-ಧಾನ್ಯಗಳ ಮೇಲಿನ ಆಮದು ತೆರಿಗೆಯನ್ನು ಸರ್ಕಾರ ಮನ್ನಾ ಮಾಡಿತ್ತು. ಇದರಿಂದಾಗಿ ಅಮೆರಿಕಾ ಮತ್ತಿತರ ದೇಶಗಳಿಂದ ಆಮದಾಗುತ್ತಿದ್ದ ಗೋಧಿ ಅಗ್ಗವಾಗಿ ದೊರಕಲಾರಂಭಿಸಿದ ಪರಿಣಾಮ ಸ್ಥಳೀಯ ಭೂಮಾಲೀಕರು ತೊಂದರೆ ಅನುಭವಿಸಬೇಕಾಯಿತು.

೧೮೫೦-೬೦ರ ವೇಳೆಗೆ ಬ್ರಿಟನ್ನಿನಲ್ಲಿ ಟ್ರ್ಯಾಕ್ಟರನ್ನು ಕಂಡು ಹಿಡಿಯಲಾಯಿತು. ಟ್ರ್ಯಾಕ್ಟರ್ ಬರುವ ಮುಂಚೆ ಬ್ರಿಟನ್ನಿನ ರೈತರು ದನಗಳು ಮತ್ತು ಕುದುರೆಗಳನ್ನು ಬಳಸಿ ಉಳುಮೆ ಮಾಡುತ್ತಿದ್ದರು. ಅವರು ಬಳಸುತ್ತಿದ್ದ ನೇಗಿಲುಗಳು ಕೂಡ ಬಹುತೇಕ ಭಾರತೀಯ ನೇಗಿಲುಗಳಂತೆಯೇ ಇತ್ತು. ಬಿತ್ತನೆ ಕಾರ್ಯವನ್ನು ಕೈಗಳಿಂದಲೇ ಮಾಡುತ್ತಿದ್ದರು. ಅವರು ಕೂಡ ದನಕರುಗಳ ಸಗಣಿಯನ್ನು ಗೊಬ್ಬರವಾಗಿ ಬಳಸುತ್ತಿದ್ದರು ಮತ್ತು ಮಳೆಯನ್ನು ಅವಲಂಬಿಸಿದ್ದರು. ಅಂದಿನ ರೈತರು, ಭಾರತೀಯ ರೈತರಂತೆಯೇ ಸಣ್ಣ ಭೂಹಿಡುವಳಿದಾರರಾಗಿದ್ದರು. ಬ್ರಿಟನ್ನಿನ ಅಂದಿನ ರೈತರು ಒಂದು ಹೆಕ್ಟೇರಿಗೆ ಕೇವಲ ೧೨೦೦ ಕ್ವಿಂಟಾಲ್ ಗೋಧಿ ಬೆಳೆಯುತ್ತಿದ್ದರು. ಆದರೆ ಈಗ ಹೆಕ್ಟೇರಿಗೆ ೭,೯೦೦ ಕ್ವಿಂಟಾಲ್ ಗೋಧಿ ಬೆಳೆಯುತ್ತಿದ್ದಾರೆ. ಭಾರತ ಹೆಕ್ಟೇರಿಗೆ ಕೇವಲ ೨,೮೦೦ ಕ್ವಿಂಟಾಲ್ ಗೋಧಿ ಬೆಳೆಯುತ್ತದೆ. ಬ್ರಿಟನ್ನಿನ ಮಣ್ಣಿನ ಲಕ್ಷಣ ೧೮೦೦ರಲ್ಲಿ ಹೇಗಿತ್ತೋ ಈಗಲೂ ಹೆಚ್ಚುಕಮ್ಮಿ ಅದೇ ರೀತಿ ಇದೆ.

೧೮೫೦-೬೦ರ ವೇಳೆಗೆ ಬ್ರಿಟನ್ನಿನಲ್ಲಿ ಟ್ರ್ಯಾಕ್ಟರನ್ನು ಕಂಡು ಹಿಡಿಯಲಾಯಿತು. ಟ್ರ್ಯಾಕ್ಟರ್ ಬರುವ ಮುಂಚೆ ಬ್ರಿಟನ್ನಿನ ರೈತರು ದನಗಳು ಮತ್ತು ಕುದುರೆಗಳನ್ನು ಬಳಸಿ ಉಳುಮೆ ಮಾಡುತ್ತಿದ್ದರು. ಅವರು ಬಳಸುತ್ತಿದ್ದ ನೇಗಿಲುಗಳು ಕೂಡ ಬಹುತೇಕ ಭಾರತೀಯ ನೇಗಿಲುಗಳಂತೆಯೇ ಇತ್ತು. ಬಿತ್ತನೆ ಕಾರ್ಯವನ್ನು ಕೈಗಳಿಂದಲೇ ಮಾಡುತ್ತಿದ್ದರು. ಅವರು ಕೂಡ ದನಕರುಗಳ ಸಗಣಿಯನ್ನು ಗೊಬ್ಬರವಾಗಿ ಬಳಸುತ್ತಿದ್ದರು ಮತ್ತು ಮಳೆಯನ್ನು ಅವಲಂಬಿಸಿದ್ದರು. ಅಂದಿನ ರೈತರು, ಭಾರತೀಯ ರೈತರಂತೆಯೇ ಸಣ್ಣ ಭೂಹಿಡುವಳಿದಾರರಾಗಿದ್ದರು. ಬ್ರಿಟನ್ನಿನ ಅಂದಿನ ರೈತರು ಒಂದು ಹೆಕ್ಟೇರಿಗೆ ಕೇವಲ ೧೨೦೦ ಕ್ವಿಂಟಾಲ್ ಗೋಧಿ ಬೆಳೆಯುತ್ತಿದ್ದರು. ಆದರೆ ಈಗ ಹೆಕ್ಟೇರಿಗೆ ೭,೯೦೦ ಕ್ವಿಂಟಾಲ್ ಗೋಧಿ ಬೆಳೆಯುತ್ತಿದ್ದಾರೆ. ಭಾರತ ಹೆಕ್ಟೇರಿಗೆ ಕೇವಲ ೨,೮೦೦ ಕ್ವಿಂಟಾಲ್ ಗೋಧಿ ಬೆಳೆಯುತ್ತದೆ. ಬ್ರಿಟನ್ನಿನ ಮಣ್ಣಿನ ಲಕ್ಷಣ ೧೮೦೦ರಲ್ಲಿ ಹೇಗಿತ್ತೋ ಈಗಲೂ ಹೆಚ್ಚುಕಮ್ಮಿ ಅದೇ ರೀತಿ ಇದೆ. ಹಾಗಾದರೆ ಬ್ರಿಟನ್ನಿನ ಕೃಷಿಯ ದಿಕ್ಕು ಹೇಗೆ ಬದಲಾಯಿತು.

ಕೈಗಾರಿಕಾ ಕ್ರಾಂತಿಯ ನಂತರ ಯುರೋಪಿನಲ್ಲಿ ಕೃಷಿ ಕೂಡ ಒಂದು ಉದ್ಯಮವಾಗಿ ಬೆಳೆಯುತ್ತಾ ಬಂತು. ಕೈಗಾರಿಕೆಯ ವ್ಯಾಕರಣ ತುಂಬಾ ಸರಳ. ಲಾಭವಿಲ್ಲದೆ ಯಾವುದೇ ಆರ್ಥಿಕ ಚಟುವಟಿಕೆಗಳನ್ನು ಕೈಗೊಳ್ಳುವಂತಿಲ್ಲ. ಆರ್ಥಿಕವಾಗಿ ಸುಸ್ಥಿತಿಯಲ್ಲಿಲ್ಲದ ಯುರೋಪಿಯನ್ ಕೃಷಿ ಹೊಸ ರೀತಿಯ ಕೃಷಿಗೆ ದಾರಿ ಮಾಡಿಕೊಡಲೇಬೇಕಾಯಿತು. ಸಣ್ಣ ಭೂಹಿಡುವಳಿಗಳು ಕಣ್ಮರೆಯಾಗಿ ದೊಡ್ಡ ಭೂಹಿಡುವಳಿಗಳು ಬಂದವು. ಕೃಷಿ ಚಟುವಟಿಕೆಗಳಿಗೆ ಪೂರಕವಾಗಿ ಯಂತ್ರೋಪಕರಣಗಳು ಬಂದವು. ಗೊಬ್ಬರಗಳ ಬದಲಿಗೆ ರಾಸಾಯನಿಕ ಗೊಬ್ಬರಗಳು ಬಂದವು. ಅಧಿಕ ಇಳುವರಿ ನೀಡುವ ಬೀಜಗಳು ಮತ್ತು ಕ್ರಿಮಿನಾಶಕಗಳು ಬಂದವು. ಟ್ರ್ಯಾಕ್ಟರ್ ಬಂದ ಕೆಲವೇ ದಶಕಗಳಲ್ಲಿ ಬ್ರಿಟನ್ ಆಹಾರದ ಕೊರತೆ ನೀಗಿಸಿಕೊಂಡಿತು.

ಪ್ರಸ್ತುತ ಬ್ರಿಟನ್, ಫ್ರಾನ್ಸ್, ಮತ್ತು ಜರ್ಮನಿಯಲ್ಲಿ ಒಂದು ಹೆಕ್ಟೇರಿಗೆ ಇಳುವರಿಯಾಗುವ ಪ್ರಮಾಣದಲ್ಲಿ ಗೋಧಿ ಬೆಳೆಯಬೇಕಾದರೆ ಭಾರತ ವಾರ್ಷಿಕ ೧೯ ಕೋಟಿ ಟನ್ ಗೋಧಿ ಬೆಳೆಯಬೇಕಾಗುತ್ತದೆ. ಅಂದರೆ ಗೋಧಿ ರಫ್ತಿನಲ್ಲಿ ಮುಂಚೂಣಿಯಲ್ಲಿರುವ ವಿಶ್ವದ ಮೂರು ರಾಷ್ಟ್ರಗಳ (ಅಮೆರಿಕಾ, ಕೆನಡಾ ಮತ್ತು ಆಸ್ಟ್ರೇಲಿಯಾ) ಒಟ್ಟಾರೆ ಇಳುವರಿಗಿಂತ ೪.೮೧ ಕೋಟಿ ಟನ್ ಅಧಿಕ ಗೋಧಿಯನ್ನು ಭಾರತ ಬೆಳೆಯಬೇಕಾಗುತ್ತದೆ. ತರಕಾರಿ, ಅಕ್ಕಿ, ಕಬ್ಬು ಮತ್ತಿತರ ಬೆಳೆಗಳಲ್ಲಿ ಅಧಿಕ ಇಳುವರಿ ಸಾಧಿಸಿದರೆ ಭಾರತ ಇಡೀ ವಿಶ್ವಕ್ಕೆ ಆಹಾರ ಒದಗಿಸಬಹುದು ಮತ್ತು ಕೇವಲ ಕೃಷಿ ಒಂದರಿಂದ ಆರ್ಥಿಕ ಸೂಪರ್ ಪವರ್ ಆಗಿ ಹೊರಹೊಮ್ಮಬಹುದು.

ಈ ಎಲ್ಲ ಅಂಶಗಳನ್ನು ಗಮನದಲ್ಲಿರಿಸಿಕೊಂಡು ನಾನು ಪ್ರಣಾಳಿಕೆಯೊಂದನ್ನು ಸಿದ್ಧಪಡಿಸಿದ್ದೇನೆ. ಕೃಷಿ ಚಟುವಟಿಕೆಗಳನ್ನು ಸಂಪೂರ್ಣವಾಗಿ ಆಧುನಿಕರಣಗೊಳಿಸುವುದಾಗಿ ಈ ಪ್ರಣಾಳಿಕೆಯಲ್ಲಿ ಭರವಸೆ ನೀಡುತ್ತೇನೆ. ರೈತರಿಂದ ಭೂಮಿಯನ್ನು ಖರೀದಿಸಲು ಕಾರ್ಪೊರೇಟ್ ಸಂಸ್ಥೆಗಳಿಗೆ ಅವಕಾಶ ನೀಡುತ್ತೇನೆ. ಒಂದು ಭೂಹಿಡುವಳಿ ಕನಿಷ್ಠ ಸಾವಿರ ಹೆಕ್ಟೇರುಗಳಷ್ಟಿದ್ದು, ಈ ಭೂಮಿಯಲ್ಲಿ ಕಾರ್ಪೊರೇಟ್ ಸಂಸ್ಥೆಗಳು ಕೃಷಿ ಚಟುವಟಿಕೆ ಕೈಗೊಳ್ಳಲು ಅನುವು ಮಾಡಿಕೊಡುತ್ತೇನೆ. ಹೊಸ ಭೂಹಿಡುವಳಿಯಲ್ಲಿ ಹಿಂದಿನ ಭೂಮಾಲೀಕರು ಪಾಲುದಾರಿಕೆ ಹೊಂದಲು ಅವಕಾಶ ಕಲ್ಪಿಸಿಕೊಡುತ್ತೇನೆ. ಕೃಷಿ ಭೂಮಿ ಕಾರ್ಖಾನೆಗಳಂತಿದ್ದು, ಕೃಷಿ ಕಾರ್ಮಿಕರು ಕಾರ್ಖಾನೆಗಳ ಕಾರ್ಮಿಕರಂತಿರುತ್ತಾರೆ. ಎಸ್‌ಇಜೆಡ್‌ಗೆ ಬೃಹತ್ ಪ್ರಮಾಣದಲ್ಲಿ ಭೂಮಿ ನೀಡುವ ಮೂಲಕ ಕೃಷಿ ಕಾರ್ಮಿಕರ ಮಕ್ಕಳಿಗೆ ಕಾರ್ಖಾನೆಗಳಲ್ಲಿ ಉದ್ಯೋಗ ಕಲ್ಪಿಸಿಕೊಡುತ್ತೇನೆ. ೨೫ ವರ್ಷಗಳಲ್ಲಿ ಭಾರತವನ್ನು ಸಂಪೂರ್ಣವಾಗಿ ಕೈಗಾರಿಕೀಕರಣಗೊಂಡ, ಆಧುನಿಕರಣಗೊಂಡ ಪ್ರಬಲ ರಾಷ್ಟ್ರವನ್ನಾಗಿ ಪರಿವರ್ತಿಸುತ್ತೇನೆ.

ಕೈಗಾರಿಕಾ ಕ್ರಾಂತಿಗೆ ಮುಂಚೆ ಯುರೋಪಿನಲ್ಲಿ ಜಮೀನ್ದಾರಿ ಸಾಮಾಜಿಕ ವ್ಯವಸ್ಥೆಯಡಿ ಕೃಷಿ ಚಟುವಟಿಕೆ ನಡೆಯುತ್ತಿತ್ತು ಎಂಬುದನ್ನು ನಾವು ನೆನಪಿನಲ್ಲಿಡಬೇಕು. ಅಲ್ಲಿ ಆಧುನಿಕತೆಯ ಜೊತೆಗೆ ಜಮೀನ್ದಾರಿ ಪದ್ಧತಿ ಕೂಡ ಅಂತ್ಯ ಕಂಡಿತು.

ಅದೇ ರೀತಿ, ಈಗಿನ ಕೃಷಿ ವ್ಯವಸ್ಥೆ ಕಣ್ಮರೆಯಾಗುವ ಮೂಲಕ ಜಾತಿ ವ್ಯವಸ್ಥೆ ಕೂಡ ಸಾರ್ವಜನಿಕ ವಲಯದಿಂದ ಕಣ್ಮರೆಯಾಗುತ್ತದೆ. ಯಂತ್ರೋಪಕರಣಗಳು, ಬಂಡವಾಳ, ಮತ್ತು ನಗರೀಕರಣ ಜಾತಿವ್ಯವಸ್ಥೆಗೆ ತಡೆದುಕೊಳ್ಳಲಾಗದ ಪೆಟ್ಟು ನೀಡುವುದರಲ್ಲಿ ಸಂಶಯವಿಲ್ಲ. ಆಗ "ಮನುಧರ್ಮ" ತನ್ನ ಮೂಲ ಸ್ಥಳದಿಂದ ಉಚ್ಚಾಟನೆಯಾದಂತಾಗುತ್ತದೆ.

...ಟ ಹೇಳಬೇಕೆಂದರೆ ಇದು ನನ್ನ ಸ್ವಂತ ಪ್ರಣಾಳಿಕೆಯಲ್ಲ. ೧೯೫೨ರ ಚುನಾವಣೆಗೆ ಡಾ. ಬಿ. ಆರ್. ಅಂಬೇಡ್ಕರ್, ಇದೇ ರೀತಿಯ ಪ್ರಣಾಳಿಕೆ ಬರೆದಿದ್ದರು. ಹೀಗಾಗಿ ಈ ಪ್ರಣಾಳಿಕೆಯ ಮೂಲಕ, ಜಾತಿರಹಿತವಾದ, ಸಮೃದ್ಧವಾದ ಆಧುನಿಕ ರಾಷ್ಟ್ರ ನಿರ್ಮಾಣದ ತತ್ವ ಹೊಂದಿರುವ ಅಂಬೇಡ್ಕರ್‌ವಾದವನ್ನು ಪುನರುತ್ಥಾನಗೊಳಿಸಿದಂತಾಗುತ್ತದೆ.

ಪಶುಸಂಗೋಪನೆಯ ಬಿಕ್ಕಟ್ಟು

ಎಮ್ಮೆ, ದನ, ಹಂದಿ, ಮೇಕೆ, ಕುರಿ ಮತ್ತಿತರ ಪಶುಗಳ ಸಾಕಾಣಿಕೆಯಲ್ಲಿ ತೊಡಗಿರುವ ಕುಟುಂಬಗಳು ಶೈಕ್ಷಣಿಕವಾಗಿ ಹಿಂದುಳಿದಿರುವುದು ಗ್ರಾಮೀಣ ಭಾರತದ ಬಗ್ಗೆ ಕನಿಷ್ಠ ಜ್ಞಾನ ಇರುವವರಿಗೆ ತಿಳಿದೇ ಇರುತ್ತದೆ. ನನ್ನದೇ ಹಳ್ಳಿಯನ್ನು ನೋಡಿದಾಗ, ಪಶುಸಂಗೋಪನೆಯಲ್ಲಿ ತೊಡಗಿರುವ ನನ್ನ ಬಹಳಷ್ಟು ಸಂಬಂಧಿಕರು ಉತ್ತಮ ಶಿಕ್ಷಣದ ಕೊರತೆಯಿಂದಾಗಿ ಸರ್ಕಾರಿ ಉದ್ಯೋಗ ಗಳಿಸಲು ವಿಫಲರಾಗಿರುವುದು ಕಂಡುಬರುತ್ತದೆ. ಭಾರತದಲ್ಲಿ ಪಶುಸಂಗೋಪನೆಗೆ ಮಕ್ಕಳನ್ನು ಕೂಡ ಬಳಸಿಕೊಳ್ಳಲಾಗುತ್ತದೆ. ಇದರಿಂದಾಗಿ ಮಕ್ಕಳು ಶಾಲೆಗಳಲ್ಲಿ ದಾಖಲಾತಿ ಪಡೆಯುವುದು ಕಡಿಮೆ. ಹೇಗೋ ದಾಖಲಾತಿ ಪಡೆದ ಮಕ್ಕಳು ಕೂಡ ಶಾಲೆ ಬಿಟ್ಟು ಹೋಗುತ್ತಾರೆ. ಇನ್ನು ಶಾಲೆಯಲ್ಲಿಯೇ ಉಳಿದುಕೊಳ್ಳುವ ಮಕ್ಕಳು ಸರಿಯಾಗಿ ವಿದ್ಯಾಭ್ಯಾಸ ಮಾಡುವುದಿಲ್ಲ. ಇದಕ್ಕೆ ಅಪವಾದ ಎಂಬಂತೆ ಕೆಲವು ಮಕ್ಕಳು ಮಾತ್ರ ಉತ್ತಮ ಸಾಧನೆ ಮಾಡುತ್ತಾರೆ.

೨೦೦೩ರ ಪಶುಗಣತಿಯ ಪ್ರಕಾರ ಭಾರತದಲ್ಲಿ ೪೮.೫ ಕೋಟಿ ಪಶುಗಳು ಇವೆ. ಈ ಪಶುಗಳು ಗ್ರಾಮೀಣ ಪ್ರದೇಶಗಳಲ್ಲಿದೆ ಎಂಬ ಅಂಶವನ್ನು ಪ್ರತ್ಯೇಕವಾಗೇನೂ ಹೇಳಬೇಕಿಲ್ಲ. ದೇಶದಲ್ಲಿರುವ ೧೯.೩೫ ಕುಟುಂಬಗಳಲ್ಲಿ ಸುಮಾರು ೧೨ ಕೋಟಿ ಕುಟುಂಬಗಳು ಗ್ರಾಮೀಣ ಪ್ರದೇಶಗಳಲ್ಲಿವೆ. ಅಂದರೆ ಪ್ರತಿ ಗ್ರಾಮೀಣ ಕುಟುಂಬವೊಂದರಲ್ಲಿ ಸರಾಸರಿ ನಾಲ್ಕು ಪಶುಗಳಿವೆ.

ಸಂಶೋಧನಾಧಾರಿತ ಅಂಕಿ ಅಂಶಗಳು ಲಭ್ಯವಿಲ್ಲದಿದ್ದರೂ, ಪಶುಗಳ ಮಾಲಿಕತ್ವದಲ್ಲಿ ಜಾತಿ ತಾರತಮ್ಯವಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಗ್ರಾಮೀಣ ಪ್ರದೇಶದಲ್ಲಿ ಹೆಚ್ಚು ಪಶುಗಳಿರುವುದನ್ನು ಪ್ರತ್ಯೇಕವಾಗಿ ಹೇಳಬೇಕಿಲ್ಲ. ಉದಾಹರಣೆಗೆ ಕೆಳಜಾತಿಗಳು ಮೇಕೆ, ಕುರಿಗಳ ಸಾಕಾಣಿಕೆ ಮಾಡಿದರೆ, ಕೆಲವು ಮೇಲ್ಜಾತಿಗಳು ಹಸು ಮತ್ತು ಎಮ್ಮೆಗಳನ್ನು ಸಾಕುತ್ತಾರೆ. ಇನ್ನೂ ಸ್ಪಷ್ಟವಾಗಿ ಹೇಳಬೇಕೆಂದರೆ, ಹೆಚ್ಚು ಹೆಚ್ಚು ಓಬಿಸಿ, ದಲಿತರು ಮತ್ತು ಬುಡಕಟ್ಟು ಜನಾಂಗಗಳು ಪಶುಸಂಗೋಪನೆಯಲ್ಲಿ ತೊಡಗಿರುತ್ತಾರೆ. ಓಬಿಸಿಗಳಲ್ಲಿಯೇ ಮೇಲ್ಜಾತಿಗಳು ಹಸು ಮತ್ತು ಎಮ್ಮೆ ಸಾಕಾಣಿಕೆ ಮಾಡುತ್ತಿರುತ್ತಾರೆ. ದಲಿತರು, ಬುಡಕಟ್ಟು ಜನಾಂಗದವರು ಮತ್ತು ಓಬಿಸಿಗಳಲ್ಲಿ ಕೆಳಜಾತಿಗಳು ಹಂದಿ, ಮೇಕೆ ಮತ್ತು ಕುರಿ ಸಾಕಾಣಿಕೆಯಲ್ಲಿ ತೊಡಗಿರುತ್ತಾರೆ.

೨೦೦೩ರ ಪಶುಗಣತಿಯ ಪ್ರಕಾರ ದೇಶದ ಒಟ್ಟಾರೆ ಪಶುಗಳಲ್ಲಿ ಶೇ. ೫೮.೪೮ರಷ್ಟು ಹಸು ಮತ್ತು ಎಮ್ಮೆಗಳಿವೆ. ನನ್ನ ಅಂದಾಜಿನ ಪ್ರಕಾರ ಹಸು ಮತ್ತು ಎಮ್ಮೆಗಳ ಸಾಕಾಣಿಕೆ ಮಾಡುವ ದೇಶದ ಪ್ರತಿ ಕುಟುಂಬದಲ್ಲಿ ಬಳಿ ಸರಾಸರಿ ಹತ್ತು ಪಶುಗಳಿರಬಹುದು.

ದೇಶದಲ್ಲಿ ಮೂರು ರೀತಿಯ ಪಶುಸಾಕಾಣಿಕೆದಾರರಿದ್ದಾರೆ: (೧) ಜೀವನೋಪಾಯಕ್ಕೆ ಪಶುಗಳನ್ನು ಅವಲಂಬಿಸಿರುವವರು, (೨) ಆರ್ಥಿಕವಾಗಿ ಸುಸ್ಥಿತಿಯಲ್ಲಿದ್ದು, ಹಾಲಿಗಾಗಿ ಪಶುಸಾಕಾಣಿಕೆ ಮಾಡುವವರು, (೩) ಸಾಮಾಜಿಕವಾಗಿ ಉತ್ತಮ ಸ್ಥಿತಿಯಲ್ಲಿದ್ದು, ಸಾಂಸ್ಕೃತಿಕ ಕಾರಣಗಳಿಗಾಗಿ ಪಶುಸಾಕಾಣಿಕೆ ಮಾಡುವವರು. ವಾರ್ಷಿಕ ಹತ್ತು ಮೆಟ್ರಿಕ್ ಟನ್‌ಗಳಷ್ಟು ಗೋಧಿ ಮತ್ತು ಅಕ್ಕಿಯನ್ನು ಬೆಳೆಯುವ ಕುಟುಂಬಗಳು ಕೇವಲ ಸಾಂಸ್ಕೃತಿಕ ಕಾರಣಗಳಿಗಾಗಿ ಹತ್ತು- ಹನ್ನೆರಡು ಎಮ್ಮೆಗಳನ್ನು ಸಾಕುವುದನ್ನು ನಾನು ನೋಡಿದ್ದೇನೆ.

ಹಾಗಾದರೆ ಮುಂದಿನ ಎರಡು ದಶಕಗಳಲ್ಲಿ ಏನಾಗಬಹುದು? ಜೀವನೋಪಾಯಕ್ಕಾಗಿ ಪಶುಸಾಕಾಣಿಕೆಯಲ್ಲಿ ತೊಡಗಿರುವವರ ಮುಂದಿನ ಪೀಳಿಗೆ ಕೂಡ ಇದೇ ಕಸುಬನ್ನು ಅವಲಂಬಿಸುವುದರಿಂದ ಮುಂದಿನೆರಡು ದಶಕಗಳ ನಂತರವೂ ಇವರು ಬಡವರಾಗಿಯೇ ಇರುತ್ತಾರೆ. ಈ ಜನ ಲಾರಿ ಚಾಲಕರಾಗಲು ಕೂಡ ಸಾಧ್ಯವಿಲ್ಲ. ಯಾಕೆಂದರೆ ಲಾರಿ ಚಾಲನೆ ಪರವಾನಗಿ ಪಡೆಯಲು ಕನಿಷ್ಠ ಪ್ರೌಢಶಾಲಾ ಶಿಕ್ಷಣ ಪೂರೈಸಿರಬೇಕು. ಹೊಸ ಆರ್ಥಿಕ ವ್ಯವಸ್ಥೆಯಲ್ಲಿ ಯಂತ್ರೋಪಕರಣಗಳ ಬಳಕೆಗೆ ಕೂಡ ಶಿಕ್ಷಣ ಅವಶ್ಯಕ.

ಕೇವಲ ಹಾಲಿಗಾಗಿ ಪಶುಸಾಕಾಣಿಕೆ ಮಾಡುವವರು ಆಧುನಿಕ ಶಿಕ್ಷಣವಿಲ್ಲದೆಯೇ ಶ್ರೀಮಂತರಾಗುತ್ತಾರೆ. ಶಿಕ್ಷಣವಿಲ್ಲದ ಶ್ರೀಮಂತರು ವಿಶ್ವದಾದ್ಯಂತ ಕ್ರೌರ್ಯದ ಪ್ರತಿಪಾದಕರಾಗಿರುವುದನ್ನು ನಾವು ಕಾಣಬಹುದು.

ಹೀಗೆ ಜಾತಿ ಆಧಾರದ ಮೇಲೆ ಸಂಘಟನೆಯಾಗುವ ಅಶಿಕ್ಷಿತ ಶ್ರೀಮಂತರು ಅತ್ಯಂತ ಅಪಾಯಕಾರಿ. ಕಳೆದ ವರ್ಷ ಅತ್ಯಂತ ಹಿಂಸಾತ್ಮಕವಾಗಿ ನಡೆದ ಗುಜ್ಜರ್ ಸಮುದಾಯದ ಪ್ರತಿಭಟನೆ ಇದಕ್ಕೆ ಸೂಕ್ತ ಉದಾಹರಣೆ. ಭಾರತ ಕೂಡ ಪಶು ಕೇಂದ್ರಿತ ಸಾಮಾಜಿಕ ಬಿಕ್ಕಟ್ಟಿನ ಸುಳಿಗೆ ಸಿಲುಕುತ್ತಿದೆ. ಅಶಿಕ್ಷಿತ ಶ್ರೀಮಂತರು ಜ್ಞಾನಾಧಾರಿತ ಆರ್ಥಿಕ ವ್ಯವಸ್ಥೆಯಿಂದ ಮತ್ತು ಆಧುನಿಕ ಜೀವನಶೈಲಿಯಿಂದ ಹೊರಗುಳಿದು, ಒಟ್ಟಾರೆ ವ್ಯವಸ್ಥೆಯನ್ನು ದೂಷಿಸುತ್ತಾರೆಯೇ ಹೊರತು ತಮ್ಮ "ಪಶು ಸಂಸ್ಕೃತಿ"ಯನ್ನಲ್ಲ.

ಸಂಶೋಧನಾಧಾರಿತ ಅಂಕಿ ಅಂಶಗಳು ಲಭ್ಯವಿಲ್ಲದಿದ್ದರೂ, ಪಶುಗಳ ಮಾಲಿಕತ್ವದಲ್ಲಿ ಜಾತಿ ತಾರತಮ್ಯವಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಗ್ರಾಮೀಣ ಪ್ರದೇಶದಲ್ಲಿ ಹೆಚ್ಚು ಪಶುಗಳಿರುವುದನ್ನು ಪ್ರತ್ಯೇಕವಾಗಿ ಹೇಳಬೇಕಿಲ್ಲ. ಉದಾಹರಣೆಗೆ ಕೆಳಜಾತಿಗಳು ಮೇಕೆ, ಕುರಿಗಳ ಸಾಕಾಣಿಕೆ ಮಾಡಿದರೆ, ಕೆಲವು ಮೇಲ್ಜಾತಿಗಳು ಹಸು ಮತ್ತು ಎಮ್ಮೆಗಳನ್ನು ಸಾಕುತ್ತಾರೆ. ಇನ್ನೂ ಸ್ಪಷ್ಟವಾಗಿ ಹೇಳಬೇಕೆಂದರೆ, ಹೆಚ್ಚು ಹೆಚ್ಚು ಓಬಿಸಿ, ದಲಿತರು ಮತ್ತು ಬುಡಕಟ್ಟು ಜನಾಂಗಗಳು ಪಶುಸಂಗೋಪನೆಯಲ್ಲಿ ತೊಡಗಿರುತ್ತಾರೆ. ಓಬಿಸಿಗಳಲ್ಲಿಯೇ ಮೇಲ್ಜಾತಿಗಳು ಹಸು ಮತ್ತು ಎಮ್ಮೆ ಸಾಕಾಣಿಕೆ ಮಾಡುತ್ತಿರುತ್ತಾರೆ. ದಲಿತರು, ಬುಡಕಟ್ಟು ಜನಾಂಗದವರು ಮತ್ತು ಓಬಿಸಿಗಳಲ್ಲಿ ಕೆಳಜಾತಿಗಳು ಹಂದಿ, ಮೇಕೆ ಮತ್ತು ಕುರಿ ಸಾಕಾಣಿಕೆಯಲ್ಲಿ ತೊಡಗಿರುತ್ತಾರೆ. ೨೦೦೩ರ ಪಶುಗಣತಿಯ ಪ್ರಕಾರ ದೇಶದ ಒಟ್ಟಾರೆ ಪಶುಗಳಲ್ಲಿ ಶೇ. ೫೮.೪೮ರಷ್ಟು ಹಸು ಮತ್ತು ಎಮ್ಮೆಗಳಿವೆ.

ಭಾರತ ಒಂದು ಬಹು ದೊಡ್ಡ ಸಾಮಾಜಿಕ ಸಂಕಷ್ಟವನ್ನು ಎದುರಿಸಲಿದೆ ಎಂಬ ಆತಂಕವಿರುವುದರಿಂದ ನಾನು ಈ ಪ್ರಣಾಳಿಕೆಯನ್ನು ಪ್ರತಿಪಾದಿಸುತ್ತಿದ್ದೇನೆ.

ಯಾವುದೇ ಭಾರತೀಯ ಕುಟುಂಬ ಪಶುಸಾಕಾಣಿಕೆಯಲ್ಲಿ ತೊಡಗಲು ಶಾಸನಾತ್ಮಕವಾಗಿ ಅಥವಾ ಇತರೆ ರೂಪದಲ್ಲಿ ನಿರ್ಬಂಧ ಹೇರುವುದಿಲ್ಲ ಎಂಬ ಭರವಸೆ ನೀಡುತ್ತೇನೆ. ಆದರೆ ಜೀವನೋಪಾಯದ ಪಶುಸಾಕಾಣಿಕೆದಾರರಿಗೆ ಕಸುಬಿನಿಂದ ಮುಕ್ತಿ ದೊರಕಿಸಿಕೊಡುತ್ತೇನೆ. ಶತಮಾನಗಳಿಂದ ಹೇಗೋ ಬದುಕಿರುವ ಈ ಜನ, ಮುಂದೆಯೂ ಜೀವನೋಪಾಯಕ್ಕಾಗಿ ಹೊಸ ಮಾರ್ಗಗಳನ್ನು ಕಂಡುಕೊಳ್ಳುವುದರಲ್ಲಿ ಸಂಶಯವಿಲ್ಲ.

ನನ್ನ ಪ್ರಣಾಳಿಕೆಯ ಕೆಲವು ಅಂಶಗಳು ಈ ರೀತಿ ಇವೆ:

೧. ಹೈನುಗಾರಿಕೆ ಮತ್ತು ಮಾಂಸ ಉತ್ಪಾದನಾ ಕ್ಷೇತ್ರದಲ್ಲಿ ಕಾರ್ಪೊರೇಟ್ ಸಂಸ್ಥೆಗಳ ಪ್ರವೇಶಕ್ಕೆ ಉತ್ತೇಜನ ನೀಡುತ್ತೇನೆ.

೨. ಈ ಸಂಸ್ಥೆಗಳಿಗೆ ಕಡಿಮೆ ದರದಲ್ಲಿ ಭೂಮಿ ನೀಡುವುದರ ಜೊತೆಗೆ ನಿರಂತರ ವಿದ್ಯುತ್ ಪೂರೈಕೆಯಂತಹ ಅವಶ್ಯಕ ಸೌಲಭ್ಯ ಕಲ್ಪಿಸಿಕೊಡುತ್ತೇನೆ.

೩. ಪ್ರತಿ ಫಾರಂ ಒಂದರಲ್ಲಿ ೫,೦೦೦–೧೦,೦೦೦ ಹಸು–ಎಮ್ಮೆಗಳು ಇರುವಂತೆ ನೋಡಿಕೊಳ್ಳುತ್ತೇನೆ.

೪. ಈ ಫಾರಂಗಳಲ್ಲಿ ಕೆಲಸ ಮಾಡುವವರನ್ನು ಕೈಗಾರಿಕಾ ಕಾರ್ಮಿಕರೆಂದು ಪರಿಗಣಿಸಿ, ಸಮವಸ್ತ್ರ ಧರಿಸುವಂತೆ ಮಾಡಿ, ಉತ್ತಮ ವೇತನ ನೀಡುತ್ತೇನೆ.

೫. ಇದೇ ಮಾದರಿಯಲ್ಲಿ ಹಂದಿ, ಮೇಕೆ, ಮತ್ತು ಕುರಿ ಸಾಕಾಣಿಕೆ ಕೂಡ ಕೈಗೊಳ್ಳುತ್ತೇನೆ.

೬. ಜಾಗತಿಕ ಮಟ್ಟದ ತಂತ್ರಜ್ಞಾನ ಮತ್ತು ವ್ಯವಹಾರ ತಂತ್ರಗಳನ್ನು ಬಳಸಿ ಹೈನು ಉತ್ಪನ್ನಗಳನ್ನು ಮಾರುಕಟ್ಟೆ ಮಾಡುತ್ತೇನೆ.

೭. ಈ ಹೊಸ ಹೈನುಗಾರಿಕೆಯ ಮಾದರಿಯಿಂದಾಗಿ ೧೯೯೦ರ ನಂತರ ಟಿ.ವಿ., ರೆಫ್ರಿಜರೇಟರ್‌ಗಳು, ಮತ್ತು ವಾಷಿಂಗ್‌ಮೆಷಿನ್‌ಗಳ ಬೆಲೆ ಕುಸಿದಂತೆ, ಹಾಲು ಮತ್ತು ಮಾಂಸದ ಬೆಲೆ ಕೂಡ ಕುಸಿಯುತ್ತದೆ. ೧೯೯೦ರಲ್ಲಿ ೨೧,೯೦೦ ರೂ. ಬೆಲೆಯಿದ್ದ ಕಲರ್ ಟಿ.ವಿ. ಮಾಡೆಲ್ ಒಂದರ ಬೆಲೆ ಈಗ ಕೇವಲ ೭,೦೦೦ ರೂ.

೮. ಎಲ್ಲ ಭಾರತೀಯರಿಗೂ ಹಾಲು, ಮೊಸರು, ಬೆಣ್ಣೆ, ತುಪ್ಪ ಮತ್ತು ಮಾಂಸ ದೊರಕುವಂತೆ ಮಾಡಿ ಆಧುನಿಕ ಭಾರತಕ್ಕೆ ಅಡಿಪಾಯ ಹಾಕುತ್ತೇನೆ. ಆ ಮೂಲಕ ಬಿಕ್ಕಟ್ಟಿನಿಂದ ಮುಕ್ತವಾದ ಭಾರತವನ್ನು ನಿರ್ಮಾಣ ಮಾಡುತ್ತೇನೆ.

* * * * *

ಏಪ್ರಿಲ್ ೨೪ರ ಬಿರು ಬಿಸಿಲ ದಿನ ಅದು. ತೀವ್ರ ಆತಂಕದ ನಡುವೆ ಮಹಾರಾಷ್ಟ್ರದ ಯವತ್ಮಾಳ್ ಜಿಲ್ಲೆಯ

ಬುಡಕಟ್ಟು ಸಮುದಾಯಗಳ ಸುಧಾರಣಾ ಪ್ರಣಾಳಿಕೆ

ದತ್ತಾಪುರ ಎಂಬ ಹಳ್ಳಿಯನ್ನು ಪ್ರವೇಶಿಸಿದೆ. ಜಿಲ್ಲಾಕೇಂದ್ರದಿಂದ ಸುಮಾರು ೩೦ ಮೈಲಿ ದೂರದಲ್ಲಿ ಬುಡಕಟ್ಟು ಸಮುದಾಯದ ಜನರಿಂದ ತುಂಬಿರುವ ಕೊಲಂ ಎಂಬ ಪ್ರಾಚೀನ ಗ್ರಾಮಕ್ಕೆ ಅಂದು ನಾನು ಭೇಟಿ ನೀಡಿದೆ. ಕೊಲಂ ಗ್ರಾಮದ ಮಣಿರಾಂ ಮತ್ತು ಘೋಟೇಕರ್ ಎಂಬ ಯುವಕರು ನನ್ನೊಡನೆ ಇದ್ದುದರಿಂದ ಕೊಲಂ ನಿವಾಸಿಗಳ ಜೊತೆ ಸುಲಭ ಸಂಪರ್ಕ ಸಾಧ್ಯವಾಯಿತು. ಅಂದು ಯವತ್ಮಾಳ್‌ನ ಮಾಜಿ ಜಿಲ್ಲಾಧಿಕಾರಿ ಡಾ. ಹರ್ಷದೀಪ್ ಕಾಂಬಳೆ ಕೂಡ ನನ್ನೊಡನಿದ್ದರು.

ಅಂದು ನಿರ್ಮಲ ಆಕಾಶದಲ್ಲಿ ಮಳೆಯ ಕಾಮನಬಿಲ್ಲು ಕಾಣಿಸದಿದ್ದರೂ ದಿಢೀರನೇ ಸಿಡಿಲೊಂದು ಬಡಿದಹಾಗಾಯಿತು. ಅಲ್ಲಿನ ಗುಡಿಸಲೊಂದರಿಂದ ಸದ್ದಿಲ್ಲದೆ ಹೊರಬಂದ ಕೊಲಂ ಸಮುದಾಯಕ್ಕೆ ಸೇರಿದ ಪುಟ್ಟ ಬಾಲಕಿಯನ್ನು ನೋಡಿ ಅಸಾಧ್ಯವಾದುದನ್ನು ನೋಡಿದ ಅನುಭವ ನನಗಾಯಿತು. ಸ್ಕರ್ಟ್ ಮತ್ತು ಮೇಲುಡಿಗೆಯನ್ನು ತೊಟ್ಟಿದ್ದ ಆಕೆ ತನ್ನ ಪುಟ್ಟ ಕೈಯಲ್ಲಿ ಪುಸ್ತಕವೊಂದನ್ನು ಹಿಡಿದಿದ್ದಳು. ಡಾ. ಕಾಂಬಳೆ ಆಕೆಯನ್ನು ಕರೆದಾಗ ಹಿರಿಯರ ಒತ್ತಾಯದ ಮೇಲೆ ನಮ್ಮ ಬಳಿಗೆ ಬಂದಳು. ಸುಮಾರು ಒಂಭತ್ತು ವರ್ಷ ವಯಸ್ಸಿನ ಈಕೆಯ ಹೆಸರು ನಾಲು ಅರವಿಂದ್ ಕಸರ್. ಆಕೆ ತನ್ನ ಕೈಯಲ್ಲಿ ನಾಲ್ಕನೆಯ ತರಗತಿಯ ಇಂಗ್ಲಿಷ್ ಪಠ್ಯಪುಸ್ತಕವನ್ನು ಹಿಡಿದಿದ್ದಳು.

"ಭಾರತ ನನ್ನ ದೇಶ. ಎಲ್ಲ ಭಾರತೀಯರು ನನ್ನ ಅಣ್ಣ ತಮ್ಮಂದಿರು." ಹೀಗೆ ಪುಸ್ತಕದ ಮೊದಲ ಪುಟವನ್ನು ತಡವರಿಸದೆ ಓದಿದಳು ಆಕೆ. "ಕೊಲಮಿ ಭಾಷೆಗಿಂತ ಮರಾಠಿ ಭಾಷೆ ನನಗಿಷ್ಟ" ಎಂದು ಹೇಳಿದ ಆಕೆ, "ಇಂಗ್ಲಿಷ್ ಭಾಷೆ ಇನ್ನೂ ಇಷ್ಟ" ಎಂದು ಆತ್ಮವಿಶ್ವಾಸದಿಂದ ನುಡಿದಳು. ಒಂದು ಕ್ಷಣ ಆ ಪುಟ್ಟ ಬಾಲಕಿ ನನಗೆ ಪ್ರೇರಣೆಯ ದೇವತೆಯಾಗಿ ಕಂಡಳು. ಪ್ರಾಚೀನವಾದ ತನ್ನ ಕೊಲಮಿ ಭಾಷೆ, ವೇಷ ಭೂಷಣ ಮತ್ತು ಆಹಾರ ಪದ್ಧತಿಯನ್ನು ಆಕೆ ನಿರಾಕರಿಸುತ್ತಿದ್ದುದು ಸ್ಪಷ್ಟವಾಗಿತ್ತು.

ನಂತರ ಅಲ್ಲಿನ ಹಿರಿಯ ಕೊಲಮಿಗಳು "ಕಾಡೆಮ್ಮೆಗಳು ದಾಳಿ ಮಾಡಿ ಬೆಳೆ ನಾಶ ಮಾಡುವ" ಬಗ್ಗೆ ಹೇಳಿದರು. "ಪ್ರಕೃತಿಯ ಕೊಡುಗೆಯನ್ನು ನೀವು ಆಸ್ವಾದಿಸುತ್ತಿರಬೇಕು" ಎಂಬ ನನ್ನ ಪ್ರಶ್ನೆಗೆ, ಅವರು "ಕಾಡೆಮ್ಮೆ ತಿನ್ನುವುದು ಅಗೌರವದ ಸಂಕೇತ, ನಾವು ಕೂಡ ಕೋಳಿ, ಮೇಕೆ ಮಾಂಸ ತಿನ್ನಲಾರಂಭಿಸಿದ್ದೇವೆ" ಎಂಬ ಉತ್ತರ ನೀಡಿದರು.

ಸುಮಾರು ೧೦೦ರಷ್ಟಿರುವ ಕೊಲಂ ಕುಟುಂಬಗಳಲ್ಲಿ ಒಬ್ಬನೇ ಒಬ್ಬ ಪದವೀಧರನಿದ್ದು, ಸುಮಾರು ೩೫ ಮಂದಿ ಮಕ್ಕಳು ಸಮೀಪದ ಆಶ್ರಮ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾರೆ. "ನಮಗೆ ಉತ್ತಮ ಗುಣಮಟ್ಟದ ರೆಸಿಡೆನ್ಷಿಯಲ್ ಶಾಲೆ ಬೇಕು. ನಾವು ಕೂಡ ನಮ್ಮ ಮಕ್ಕಳಿಗೆ ಶಿಕ್ಷಣ ನೀಡಬೇಕೆಂದು ಬಯಸುತ್ತೇವೆ" ಎಂದು ಪದವೀಧರ ಗಜಾನನ ಪಿಂಪಲ್‌ಕುಟೆ ಅಭಿಪ್ರಾಯಪಡುತ್ತಾನೆ.

"ನೀರಾವರಿ ಸೌಲಭ್ಯವಿಲ್ಲದೆ ನಮ್ಮ ಬೆಳೆ ಯಾವಾಗಲೂ ನಾಶವಾಗುತ್ತದೆ" ಎಂದು ನೋವಿನಿಂದ ನುಡಿಯುತ್ತಾರೆ ಕೆಲವು ಹಿರಿಯ ಕೊಲಮಿಗಳು. ಯವತ್ಮಾಳ್‌ನಲ್ಲಿ ಸರಾಸರಿ ವಾರ್ಷಿಕ ೯೫೦ ಮಿ.ಮೀ ಮಳೆಯಾದರೂ ಇಲ್ಲಿ ನೀರಿನ ಕೊರತೆಯಿರುವುದು ಪರಿಸ್ಥಿತಿಯ ವ್ಯಂಗ್ಯ. ಇನ್ನು ಆತ್ಮಹತ್ಯೆಯ ಪ್ರಾಂತ್ಯವೆಂದು ಕರೆಸಿಕೊಳ್ಳುವ ವಿದರ್ಭದಲ್ಲಿ ಕೂಡ ವಾರ್ಷಿಕ ೮೦೦ ಮಿ. ಮೀ ಮಳೆಯಾಗುತ್ತದೆ.

"ನೀರಾವರಿ ಸೌಲಭ್ಯವಿಲ್ಲದೆ ನಮ್ಮ ಬೆಳೆ ಯಾವಾಗಲೂ ನಾಶವಾಗುತ್ತದೆ" ಎಂದು ನೋವಿನಿಂದ ನುಡಿಯುತ್ತಾರೆ ಕೆಲವು ಹಿರಿಯ ಕೊಲಮಿಗಳು. ಯವತ್ಮಾಳ್‌ನಲ್ಲಿ ಸರಾಸರಿ ವಾರ್ಷಿಕ ೯೫೦ ಮಿ.ಮೀ ಮಳೆಯಾದರೂ ಇಲ್ಲಿ ನೀರಿನ ಕೊರತೆಯಿರುವುದು ಪರಿಸ್ಥಿತಿಯ ವ್ಯಂಗ್ಯ. ಇನ್ನು ಆತ್ಮಹತ್ಯೆಯ ಪ್ರಾಂತ್ಯವೆಂದು ಕರೆಸಿ ಕೊಳ್ಳುವ ವಿದರ್ಭದಲ್ಲಿ ಕೂಡ ವಾರ್ಷಿಕ ೮೦೦ ಮಿ. ಮೀ ಮಳೆಯಾಗುತ್ತದೆ. ಮಹಾರಾಷ್ಟ್ರ ಸರ್ಕಾರದ ಅಲಕ್ಷ್ಯದ ಫಲವಾಗಿ ವಿದರ್ಭದಲ್ಲಿ ಮಳೆನೀರಿನ ಸಮರ್ಪಕ ಬಳಕೆ ಸಾಧ್ಯವಾಗಿಲ್ಲ. ಕಾಂಬಳೆ ಅವರ ಪರಿಶ್ರಮದ ಫಲವಾಗಿ ಬೆಂಬಳ ಅಣೆಕಟ್ಟೆ ಈಗ ಸಿದ್ಧವಾಗಿ ನಿಂತಿದೆ. ಬೆಂಬಳ ನೀರಾವರಿ ಯೋಜನೆ ಇಲ್ಲಿನ ಸುಮಾರು ೫೦,೦೦೦ ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಒದಗಿಸುತ್ತದೆ. ದಶಕಗಳ ಹಿಂದೆ ಆರಂಭವಾದ ಈ ಯೋಜನೆ ನೆನೆಗುದಿಗೆ ಬಿದ್ದಿತ್ತು. ಕೇವಲ ಮೂರು ವರ್ಷಗಳಲ್ಲಿ (೨೦೦೪ರಿಂದ ೨೦೦೭ರವರೆಗೆ) ಜಿಲ್ಲಾಧಿಕಾರಿ ಡಾ. ಕಾಂಬಳೆ ಅಣೆಕಟ್ಟೆ ನಿರ್ಮಾಣ ಪೂರ್ಣಗೊಳಿಸಿದರು.

ಮಹಾರಾಷ್ಟ್ರ ಸರ್ಕಾರದ ಅಲಕ್ಷ್ಯದ ಫಲವಾಗಿ ವಿದರ್ಭದಲ್ಲಿ ಮಳೆನೀರಿನ ಸಮರ್ಪಕ ಬಳಕೆ ಸಾಧ್ಯವಾಗಿಲ್ಲ. ಕಾಂಬಳೆ ಅವರ ಪರಿಶ್ರಮದ ಫಲವಾಗಿ ಬೆಂಬಳ ಅಣೆಕಟ್ಟೆ ಈಗ ಸಿದ್ಧವಾಗಿ ನಿಂತಿದೆ. ಬೆಂಬಳ ನೀರಾವರಿ ಯೋಜನೆ ಇಲ್ಲಿನ ಸುಮಾರು ೫೦,೦೦೦ ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಒದಗಿಸುತ್ತದೆ. ದಶಕಗಳ ಹಿಂದೆ ಆರಂಭವಾದ ಈ ಯೋಜನೆ ನೆನೆಗುದಿಗೆ ಬಿದ್ದಿತ್ತು. ಕೇವಲ ಮೂರು ವರ್ಷಗಳಲ್ಲಿ (೨೦೦೪ರಿಂದ ೨೦೦೭ರವರೆಗೆ) ಜಿಲ್ಲಾಧಿಕಾರಿ ಡಾ. ಕಾಂಬಳೆ ಅಣೆಕಟ್ಟೆ ನಿರ್ಮಾಣ ಪೂರ್ಣಗೊಳಿಸಿದರು.

ಏಪ್ರಿಲ್ ೨೩-೨೫ರವರೆಗೆ ಯಾವತ್ಮಾಲ್‌ನಲ್ಲಿ "ಸಮತಾ ಪರ್ವ್" ಎಂಬ ಸಮಾರಂಭವನ್ನು ಉದ್ಘಾಟಿಸಲು ನಾನು ಅಂದು ಭೇಟಿ ನೀಡಿದ್ದೆ. ಮಹಾತ್ಮ ಫುಲೆ ಮತ್ತು ಡಾ. ಅಂಬೇಡ್ಕರ್ ಅವರಂತಹ ಸಾಮಾಜಿಕ ಸುಧಾರಕರ ಚಿಂತನೆಗಳನ್ನು ಪ್ರತಿಪಾದಿಸಲು ಮಹಾರಾಷ್ಟ್ರ ಸರ್ಕಾರ ಉತ್ತೇಜನ ನೀಡುತ್ತದೆ. ಡಾ. ಕಾಂಬಳೆ ಈ ನೀತಿಯನ್ನು ಬಳಸಿಕೊಂಡು "ಸಮತಾ ಪರ್ವ್" ಸಮಾರಂಭವನ್ನು ಆಯೋಜಿಸಿದ್ದರು. ಸಮಾರಂಭದ ಆಯೋಜನಾ ಸಮಿತಿಯಲ್ಲಿ ಎಲ್ಲ ಜಾತಿಗಳಿಂದಲೂ ಸದಸ್ಯರಿರುತ್ತಾರೆ. ಮಹಾತ್ಮ ಫುಲೆ ಮತ್ತು ಡಾ. ಅಂಬೇಡ್ಕರರ ವಿಚಾರಧಾರೆಯನ್ನು ಆಧರಿಸಿದ ಈ "ಸಮತಾ ಪರ್ವ್" ಸುಮಾರು ಒಂಭತ್ತು ದಿನಗಳ ಕಾಲ ನಡೆಯುತ್ತಿದ್ದು, ಎಲ್ಲ ಜಾತಿ, ವರ್ಗಗಳ ಸುಮಾರು ೧,೦೦೦-೧೫,೦೦೦ ಮಂದಿ ಪ್ರತಿದಿನ ಭಾಗವಹಿಸುತ್ತಾರೆ. ಇನ್ನು ಡಾ. ಕಾಂಬಳೆ ಅವರ ತಂಡ ಸುಮಾರು ೨೫ ಮಂದಿ ಬುಡಕಟ್ಟು/ದಲಿತ ಸುಮುದಾಯದ ಮಕ್ಕಳನ್ನು ದತ್ತು ತೆಗೆದುಕೊಂಡು ಯವತ್ಮಾಳ್‌ನಲ್ಲಿ ದೊರಕುವ ಉತ್ತಮ ಶಿಕ್ಷಣ ಪೂರೈಸುತ್ತಿದ್ದಾರೆ. ನಾಲು ಈ ತಂಡದ ಹೊಸ ಶೋಧ. ಡಾ. ಕಾಂಬಳೆ ಅವರೇನಾದರೂ ಮೇಲ್ಜಾತಿಗೆ ಸೇರಿದ್ದು, ಬಿಳಿಯ ವರ್ಣದವರಾಗಿದ್ದರೆ ಇಷ್ಟು ಹೊತ್ತಿಗೆ ಅವರಿಗೆ ಪದ್ಮಶ್ರೀ ಪ್ರಶಸ್ತಿ ಖಂಡಿತ ದೊರಕುತ್ತಿತ್ತು.

ಏಪ್ರಿಲ್ ೨೩ರಂದು ಸಂಜೆ ಆರು ಗಂಟೆಯ ಹೊತ್ತಿಗೆ ಸಮಾರಂಭದ ಸ್ಥಳಕ್ಕೆ ನಾನು ಹೋದಾಗ ಸುಮಾರು ೧೦,೦೦೦ ಮಂದಿ ನಮಗಾಗಿ ಕಾಯುತ್ತಿದ್ದರು. ರಾತ್ರಿ ಹತ್ತು ಗಂಟೆಗೆ ಸಮಾರಂಭ ಮುಗಿಯುವುದರ ಹೊತ್ತಿಗೆ ಇನ್ನು ೫,೦೦೦ ಮಂದಿ ಸೇರಿದ್ದರು. ಇವರಲ್ಲಿ ಬುಡಕಟ್ಟು ಸಮುದಾಯಗಳಿಗೆ ಸೇರಿದ ಸಾವಿರಾರು ಮಂದಿ, ಮಹಾತ್ಮಾ ಫುಲೆ ಮತ್ತು ಅಂಬೇಡ್ಕರ್ ಅವರ ಚಿಂತನೆಯ ಬಗ್ಗೆ ತಿಳಿದುಕೊಳ್ಳುವುದನ್ನು ನೋಡಿ ಸಂತಸವಾಯಿತು. ಕಾಂಬಳೆ ಅವರು ಈ ಪ್ರಾಂತ್ಯಕ್ಕೆ ಕಾಲಿಡುವ ಮೊದಲು, ಸರ್ಕಾರಿ ಅಧಿಕಾರಿಗಳು, ವಿಶ್ವವಿದ್ಯಾನಿಲಯದ ಪ್ರೊಫೆಸರ್‌ಗಳು, ವಿದೇಶಿಯರು ಭೇಟಿ ನೀಡಿ, ಬುಡಕಟ್ಟು ಜನರ ಫೋಟೋಗಳನ್ನು ಸೆರೆಹಿಡಿದು ಕಣ್ಮರೆಯಾಗುತ್ತಿದ್ದರು. ಆದರೆ ಕಾಂಬಳೆ ಅವರ ತಂಡ ಪ್ರತಿಭಾವಂತ ಕೊಲಂ ಸಮುದಾಯದ ಮಕ್ಕಳಿಗೆ ಶಿಕ್ಷಣ ನೀಡುವ ಮೂಲಕ ಹೊಸ ಸುಶಿಕ್ಷಿತ ಪೀಳಿಗೆಯನ್ನು ನಿರ್ಮಿಸುತ್ತಿದ್ದಾರೆ.

ಡಾ. ಕಾಂಬಳೆ ಅವರ ಕಾರ್ಯ ನನ್ನ ಬುಡಕಟ್ಟು ಪ್ರಣಾಳಿಕೆಗೆ ಪ್ರೇರಣೆಯಾಗಿದೆ. ಮೊದಲಿಗೆ ನಾನು ಬುಡಕಟ್ಟು ಪ್ರಾಂತ್ಯಗಳಲ್ಲಿ ನೀರಾವರಿ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತೇನೆ. ಎರಡನೆಯದಾಗಿ, ಬುಡಕಟ್ಟು ಪ್ರಾಂತ್ಯಗಳಲ್ಲಿ ರೆಸಿಡೆನ್ಷಿಯಲ್ ಶಾಲೆಗಳನ್ನು ಸಹಸ್ರ ಸಂಖ್ಯೆಯಲ್ಲಿ ಆರಂಭಿಸುತ್ತೇನೆ. ಹಾಗೂ ಮೂರನೆಯದಾಗಿ, ಬುಡಕಟ್ಟು ಪ್ರದೇಶಗಳಲ್ಲಿ ದಲಿತರ ದೇವತೆ ಇಂಗ್ಲಿಷ್ ಮಾತೆಯ ವಿಗ್ರಹಗಳನ್ನು ಪ್ರತಿಷ್ಠಾಪಿಸುತ್ತೇನೆ. □

ಬುದ್ಧಾಯಣ

೪೫

ಬೆಲೆಯ ಬೆಲೆ ಏನು....?!

ಬೋಧಿಸತ್ವರನ್ನು ಬೆಲೆಗಾರನ ವೃತ್ತಿಯಿಂದ ನಿವೃತ್ತಿಗೊಳಿಸಿ ಮಂತ್ರಿ ಪದವಿಯನ್ನು ನೀಡಿದ. ಅಂದಿನಿಂದ ಲಾಳುದಾಯಿಯ ಕಾರುಬಾರ ಪ್ರಾರಂಭವಾಯಿತು. ಅವಿದ್ಯಾವಂತನಾದ ಆತನಿಗೆ ಸಹಜವಾಗಿ ಲೋಕಜ್ಞಾನವಿರಲಿಲ್ಲ. ವಸ್ತುವಿನ ನ್ಯಾಯ ಬೆಲೆಯಾಗಲೀ ಭೂಮಿ ಮತ್ತು ಸಂಪತ್ತಿನ ಬೆಲೆಯಾಗಲಿ ಗೊತ್ತಿರಲಿಲ್ಲ. ಅಂಕೆ ಸಂಖ್ಯೆಯ ಗಣಿತ ಜ್ಞಾನದ ಲವಲೇಷವು ಅರಿತಿರಲಿಲ್ಲ. ಅಷ್ಟೇ ಅಲ್ಲ ಒಂದು ರೂಪಾಯಿಗೆ ಎಷ್ಟು ನಾಣ್ಯಗಳನ್ನು ಹಾಕಬೇಕು. ನೂರು ರೂಪಾಯಿಗೆ ಎಷ್ಟು ರೂ.ಗಳ ಬೆಲೆ ಎಂಬುದು ತಿಳಿದಿರಲಿಲ್ಲ. ಆತನಿಗೆ ಗೊತ್ತಿದ್ದದು ಒಂದು ರೂಪಾಯಿ ಅಥವಾ ನೂರು ರೂ.ಗಳು ಮಾತ್ರ.

ಸಿ ಎಚ್. ರಾಜಶೇಖರ್

ಅಂದಿನ ದಿನಗಳಲ್ಲಿ ಗೌತಮ ಬುದ್ಧರು ಸಾವತ್ಥಿಯ ಜೇತವನದಲ್ಲಿ ತಂಗಿದ್ದರು. ಆ ಸಮಯದಲ್ಲಿ ಕಾಶೀ ರಾಜ್ಯವನ್ನು ಬ್ರಹ್ಮದತ್ತ ರಾಜನು ಆಳುತ್ತಿದ್ದ. ವಾರಾಣಸಿಯು ಆತನ ರಾಜಧಾನಿಯಾಗಿತ್ತು ಬಲು ಸಂಪತ್ತಿನಿಂದಲೂ ಅಪಾರ ವೈಭದಿಂದ ಕೂಡಿದ್ದ ವಾರಾಣಸಿಯ ಪ್ರಕಾರ ಹನ್ನೆರಡು ಯೋಜನವಿತ್ತು. ಅದರ ಒಳ ಹೊರಗಿನ ವಿಸ್ತಾರ ವ್ಯಾಪ್ತಿಯು ಮುನ್ನೂರು ಯೋಜನವಿತ್ತು.

ಇಂತಹ ಸಮಯದಲ್ಲಿ ಬೋಧಿಸತ್ವರು ರಾಜನ ಆಸ್ಥಾನದಲ್ಲಿ ಆನೆ, ಕುದುರೆ, ಚಿನ್ನ, ಬೆಳ್ಳಿ, ಮುತ್ತು, ರತ್ನ, ಮತ್ತು ವಜ್ರ ಮುಂತಾದ ವಸ್ತುಗಳ ಬೆಲೆಯನ್ನು ನಿಗದಿ ಮಾಡುವ ಬೆಲೆಗಾರನ ವೃತ್ತಿಯನ್ನು ಮಾಡುತ್ತಿದ್ದರು. ಅವರು ಎಂದಿಗೂ ವಸ್ತುಗಳ ಬೆಲೆಯನ್ನು ನಿರ್ಧರಿಸುವ ಸಮಯದಲ್ಲಿ ಪಕ್ಷಪಾತ ಮಾಡುತ್ತಿರಲಿಲ್ಲ. ತಂದ ವಸ್ತುವನ್ನು ಸೂಕ್ಷವಾಗಿ ಪರೀಕ್ಷಿಸಿ ನಿಖರವಾದ ಬೆಲೆಯನ್ನು ನಿರ್ಧರಿಸಿ ಹೇಳುತ್ತಿದ್ದರು.

ಹಾಗಾಗಿ ದಿನದಿಂದ ದಿನಕ್ಕೆ ಅವರ ಕೀರ್ತಿಯು ಹೆಚ್ಚಾಗಿ ಸುತ್ತಲ ರಾಜ್ಯದಿಂದ ನೂರಾರು ವ್ಯಾಪಾರಿಗಳು ತಮ್ಮ ವಸ್ತುಗಳನ್ನು ವಾರಾಣಸಿಗೆ ತಂದು ನ್ಯಾಯ ಬೆಲೆಯನ್ನು ಪಡೆದು ಹೋಗುತ್ತಿದ್ದರು. ಆಂದಿನ ದಿನಗಳ ಪರಿಸ್ಥಿತಿ ಹೇಗಿತ್ತೆಂದರೆ ರಾಜನ ಬೆಲೆಗಾರ ಬೆಲೆಯನ್ನು ಒಮ್ಮೆ ಕಟ್ಟಿದ ಎಂದರೆ ಅಲ್ಲಿಗೆ ಮುಂದಿನ ಮಾತಿಲ್ಲ ಅದು ಲಾಭವೋ ನಷ್ಟವೋ ಆ ವಸ್ತುವನ್ನು ಅಷ್ಟೇ ಬೆಲೆಗೆ ರಾಜನಿಗೆ ಕೊಡಬೇಕಾಗಿತ್ತು. ಇಲ್ಲವೆಂದರೆ ದಂಡನೆ ತಪ್ಪುತ್ತಿರಲಿಲ್ಲ. ಇದು ರಾಜಾಜ್ಞೆ ಕೂಡ ಆಗಿತ್ತು. ಹಾಗಾಗಿ ರಾಜಾಸ್ಥಾನಕ್ಕೆ ವಸ್ತುಗಳನ್ನು ತರುವವರು ನನ್ನ ವಸ್ತುವಿಗೆ ಇಷ್ಟೇ ಬೆಲೆ ಒಂದು ಪಕ್ಷ ನನ್ನ ನಿರೀಕ್ಷೆಯ ಬೆಲೆಯು ಸಿಗದಾಗ ಆತ ಚೌಕಾಸಿ ಮಾಡುವ ಅಥವಾ ನಿರಾಕರಿಸಿ ವಸ್ತುವನ್ನು ರಾಜನಿಗೆ ಕೊಡದೆ ಹಿಂದಕ್ಕೆ ತೆಗೆದುಕೊಂಡು ಹೋಗುವ ಪದ್ಧತಿ ಇರಲಿಲ್ಲ. ಅಲ್ಲಿ ಅವರು ಕೊಂಡು ತಂದ ವಸ್ತುವಿನ ಬೆಲೆಯನ್ನು ನಿರ್ಧರಿಸುವವನು ರಾಜನ ಬೆಲೆಗಾರನೇ ಆಗಿದ್ದ ವ್ಯಾಪಾರಿಗಳ ಹಣೇಬರಹವನ್ನು ಆತ ನಿರ್ಧರಿಸುವ ಹೊಣೆಗಾರನಾಗಿದ್ದ.

ಬೋಧಿಸತ್ವರು ಎಂದಿಗೂ ವಸ್ತುವಿನ ಬೆಲೆಯನ್ನು ನಿರ್ಧರಿಸುವಾಗ ಧರ್ಮ ಮತ್ತು ನ್ಯಾಯವನ್ನು ಬಿಡುತ್ತಿರಲಿಲ್ಲ. ಆದರೆ ರಾಜನು ಲೋಭಿಯಾಗಿದ್ದ ದಿನದಿಂದ ದಿನಕ್ಕೆ ಆತ ಚಿಂತಾಕ್ರಾಂತನಾದ. ಈ ಬೋಧಿಸತ್ವನು ಹೀಗೆಯೇ ವಸ್ತುಗಳ ಮಾಲಿಕರಿಗೆ ಆಯಾ ವಸ್ತುವಿಗೆ ಯೋಗ್ಯವಾದ ಬೆಲೆಯನ್ನು ಕೊಡಿಸುತ್ತಿದ್ದರೆ ನನ್ನ ಖಜಾನೆಯು-ಶೀಘ್ರವೇ ಖಾಲಿಯಾಗುವುದು ಎಂದು ತಳಮಳಗೊಂಡ ತನ್ನ ಅಂತಃಪುರದ ತೆರೆದ ಕಿಟಕಿಯ ಬಳಿ ನಿಂತು ಹೀಗೆ ಯೋಚಿಸುತ್ತಿರಲು ಹೊರಗಿನ ರಾಜಬೀದಿಯಲ್ಲಿ ಒಬ್ಬ ಕಡು ಮೂರ್ಖ ಲೋಭಿ ಮತ್ತು ಗ್ರಾಮೀಣ ಮನುಷ್ಯನಂತೆ ಕಂಡು ಬರುತ್ತಿದ್ದ ಮನುಷ್ಯನೊಬ್ಬ ನೆಡೆದು ಹೋಗುತ್ತಿದುದ್ದನ್ನು ಕಂಡ ಆತನೆ ಬೆಲೆ ನಿರ್ಧರಿಸಲು ಸರಿಯಾದ ವ್ಯಕ್ತಿ ಎನ್ನಿಸಿತು. ತಕ್ಷಣವೆ ತನ್ನ ಸೇವಕನನ್ನು ಕರೆದು ಆ ವ್ಯಕ್ತಿಯನ್ನು ತೋರಿಸಿ ಕರೆತರಲು ಹೇಳಿದ.

ಹೆದರಿ ಗಡಗಡನೆ ನಡುಗುತ್ತಿದ್ದ ಆತ ರಾಜನೆದುರು ನಿಂತು ತಲೆಬಾಗಿ ನಮಸ್ಕರಿಸಿದ ಆತನನ್ನು ಕೇಶಗಿನಿಂದ ಮೇಲಿನ ತನಕ ಸೂಕ್ಷ್ಮವಾಗಿ ಗಮನಿಸಿದ ಬಳಿಕ:

"ಎಲವೋ! ನಿನ್ನ ಹೆಸರೇನು?"

"ದೇವಾಲಾಳುದಾಯಿ ಎಂದು!"

"ಅಸ್ಥಾನದಲ್ಲಿ ವಸ್ತುಗಳ ಬೆಲೆಕಟ್ಟುವ ವೃತ್ತಿಯನ್ನು ಮಾಡಬಲ್ಲೆಯಾ?"

"ದೇವಾ ತಾವು ಅನುಗ್ರಹಸಿದರೆ ಮಾಡುವೆ!"

"ಹಾಗಾದರೆ ಇಂದಿನಿಂದ ನೀನು ನನ್ನ ಅಸ್ಥಾನದ ಬೆಲೆಗಾರ!" ಎಂದು ಘೋಷಿಸಿದ ಆತ ಅಪಾರ ಸಂತೋಷದಿಂದ ಒಪ್ಪಿಕೊಂಡ.

ಬೋಧಿಸತ್ವರನ್ನು ಬೆಲೆಗಾರನ ವೃತ್ತಿಯಿಂದ ನಿವೃತ್ತಿಗೊಳಿಸಿ ಮಂತ್ರಿ ಪದವಿಯನ್ನು ನೀಡಿದ. ಅಂದಿನಿಂದ ಲಾಳುದಾಯಿಯ ಕಾರುಬಾರ ಪ್ರಾರಂಭವಾಯಿತು. ಅವಿದ್ಯಾವಂತನಾದ ಆತನಿಗೆ ಸಹಜವಾಗಿ ಲೋಕಜ್ಞಾನವಿರಲಿಲ್ಲ. ವಸ್ತುವಿನ ನ್ಯಾಯ ಬೆಲೆಯಾಗಲೀ ಭೂಮಿ ಮತ್ತು ಸಂಪತ್ತಿನ ಬೆಲೆಯಾಗಲಿ ಗೊತ್ತಿರಲಿಲ್ಲ. ಅಂಕೆ ಸಂಖ್ಯೆಯ ಗಣಿತ ಜ್ಞಾನದ ಲವಲೇಶವು ಅರಿತಿರಲಿಲ್ಲ. ಅಷ್ಟೇ ಅಲ್ಲ ಒಂದು ರೂಪಾಯಿಗೆ ಎಷ್ಟು ನಾಣ್ಯಗಳನ್ನು ಹಾಕಬೇಕು. ನೂರು ರೂಪಾಯಿಗೆ ಎಷ್ಟು ರೂಪಾಯಿಗಳ ಬೆಲೆ ಎಂಬುದು ತಿಳಿದಿರಲಿಲ್ಲ. ಆತನಿಗೆ ಗೊತ್ತಿದ್ದದು ಒಂದು ರೂಪಯಿ ಅಥವಾ ನೂರು ರೂಪಾಯಿಗಳು ಮಾತ್ರ. ಹಾಗಾಗಿ ಸಾಮಾನ್ಯವಾಗಿ ಯಾವುದೇ ಲಕ್ಷ ಬೆಲೆ ಬಾಳುವ ವಸ್ತುವಿಗೇ ಆಗಲಿ ಒಂದು ರೂಪಾಯಿ ಎನ್ನುತ್ತಿದ್ದ ಅಥವಾ ನೂರು ರೂಪಾಯಿ ಎನ್ನುತ್ತಿದ್ದ.

ಹೀಗಾಗಿ ಲಾಳುದಾಯಿಯ ಅವಿವೇಕನದಿಂದ ರಾಜನಿಗೆ ಅಪಾರ ಲಾಭವಾಗುತ್ತಿತ್ತು. ಆದರೆ ಅದೇ ಸಮಯದಲ್ಲಿ ವ್ಯಾಪಾರಸ್ತರು ತಮ್ಮ ವಸ್ತುಗಳಿಗೆ ನ್ಯಾಯಬೆಲೆಯು ಸಿಗದೆ ಪರದಾಡುವಂತಾಯಿತು. ಆತನ ಅಜ್ಞಾನದಿಂದ ಅಪಾರ ನಷ್ಟವನ್ನು ಅನುಭವಿಸಿದ ವ್ಯಾಪಾರಸ್ಥರು ರಾಜನಿಗೆ ಎದುರಾಡದೆ ತಮ್ಮ ಪ್ರಾಣ ಉಳಿದರೆ ಸಾಕೆಂದು ಮರುಮಾತನಾಡದೆ ಹಿಂದಿರುಗುತ್ತಿದ್ದರು.

ಅಂತಹ ಸಮಯದಲ್ಲಿ ಒಬ್ಬ ಪ್ರಸಿದ್ಧ ಕುದುರೆ ವ್ಯಾಪಾರಿಯು ಹೊರದೇಶದಿಂದ ಐನೂರು ಉತ್ತಮ ಜಾತಿಯ ಕುದುರೆಗಳನ್ನು ತೆಗೆದುಕೊಂಡು ಬಂದ. ರಾಜ ಬಂದು ಕದುರೆಗಳನ್ನು ನೋಡಿ ಬಲು ಸಂತೋಷಗೊಂಡ. ಬೆಲೆಗಾರನಾದ ಲಾಳುದಾಯಿಯನ್ನು ಕರೆದು ಬೆಲೆ ಕಟ್ಟಲು ಹೇಳಲು ಆತ:

"ಮಹಾಸ್ವಾಮಿ, ಈ ಐನೂರು ಕುದುರೆಗಳ ಬೆಲೆ ಒಂದು ನೂರು ರೂಪಾಯಿಗಳು ಅಷ್ಟೇ....!" ಎಂದ. ಇದನ್ನು ಕೇಳಿದ ವ್ಯಾಪಾರಿಯು ಸುಸ್ತಾಗಿ ತಲೆಯ ಮೇಲೆ ಕೈಹೊತ್ತು ಕುಳಿತ ರಾಜನು ಲಾಳುದಾಯಿಯ ಲೋಭಿತನಕ್ಕೆ ಬೆನ್ನು ತಟ್ಟುತ್ತಾ :

"ಭಲೇ... ಭಲೇ... ಲಾಳುದಾಯಿ ನಿನ್ನ ಪಾಂಡಿತ್ಯ ಅಪಾರ. ನಿನ್ನ ಕುಶಲತೆ ಅಪಾರ. ಹಾಗಾದರೆ ಈಗಲೇ ಈ ಕುದುರೆಗಳನ್ನು ನಮ್ಮ ಲಾಯಕ್ಕೆ ಕಟ್ಟಿಸು!" ಎಂದ.

ಹಣವನ್ನು ಪಡೆದು ಕದುರೆಗಳನ್ನು ರಾಜಸೇವಕರಿಗೆ ಒಪ್ಪಿಸಿದ ಬಳಿಕ ಆ ವ್ಯಾಪಾರಿಯು: "ಹೀಗೇನು ಮಾಡಲಿ? ಇದಕ್ಕೆ ಪರಿಹಾರವೇನು? ಬರಿಸಲಾರುದ ನಷ್ಟವನ್ನು ಹೊತ್ತುಕೊಂಡು, ಊರಿಗೆ ಹೇಗೆ ಹೋಗಿ ಸಂಸಾರವನ್ನು ಸಾಗಿಸಲಿ?" ಎಂದು ಪರಿಪರಿಯಾಗಿ ಪರಿತಪಿಸುತ್ತಿರಲು ಆತನಿಗೆ ಬೋಧಿಸತ್ವನ ನೆನಪಾಯಿತು. ಆತ ಅವರನ್ನು ಸಂಧಿಸಿ ನೆಡೆದ ವಿಷಯ ಹೇಳಿ:

"ಸ್ವಾಮಿ, ಹೇಗಾದರೂ ಮಾಡಿ ನನ್ನನ್ನು ಈ ವಿಪತ್ತನಿಂದ ಕಾಪಾಡಿ ನಷ್ಟವನ್ನು ತುಂಬಿಸಿ ಕೊಡಿ!" ಎಂದು ಶರಣಾದ. ಬೋಧಿಸತ್ವರು ಆತನಿಗೆ ಅಭಯ ನೀಡಿ ಧೈರ್ಯ ತುಂಬಿದರು. ಬಳಿಕ ಆತನಿಗೊಂದು ಉಪಾಯವನ್ನು ಹೇಳಿಕೊಟ್ಟರು. ಆತ ಅದರಂತೆ ಲಾಳುದಾಯಿಯನ್ನು ಸಂಧಿಸಿ ಆತನ ಪಾಂಡಿತ್ಯ ಮತ್ತು ವ್ಯವಹಾರಿಕಾ ಚತುರತೆಯನ್ನು ಇನ್ನಿಲ್ಲದಂತೆ ಹೊಗಳುತ್ತಾ:

"ಸ್ವಾಮೀ, ನನ್ನ ಐನೂರು ಕುದುರೆಗಳ ಬೆಲೆ ಒಂದು ನೂರು ರೂಪಾಯಿಗಳೆಂದು ನನಗೆ ತಿಳಿಯಿತು. ಅದು ಸರಿ. ಆದರೆ ನನಗೆ ತಲೆ ತಿನ್ನುತ್ತಿರುವ ವಿಷಯ ವೆಂದರೆ ಆ ನೂರು ರೂಪಾಯಿಗಳ ಬೆಲೆ ಏನು? ಎಂಬುದೇ ಆಗಿದೆ. ಆದ್ದರಿಂದ ತಾವು ಬೆಲೆ ಏನು ಎಂದು ಹೇಳಬಲ್ಲಿರಾ?" "ಎಲೈ ವ್ಯಾಪಾರಿಯೇ, ಹೇಳಬಲ್ಲೆ! ಎಲ್ಲಿ ಬೇಕಾದರೂ ಹೇಳಬಲ್ಲೆ!" "ಸ್ವಾಮಿ, ಹಾಗಾದರೆ ರಾಜನೆದುರು, ರಾಜ ಪರಿಷತ್ತಿನ ಎದುರು ಹೇಳಬಲ್ಲೀರಾ?" "ಏಕಾಗದು! ಖಂಡಿತಾ ಹೇಳಬಲ್ಲೆ!" ಎಂದು ಒಪ್ಪಿಕೊಂಡ. ಮರುದಿನ ಆ ವ್ಯಾಪಾರಿಯು ತುಂಬಿದ ರಾಜ ಪರಿಷತ್ತನ್ನು ಪ್ರವೇಶಿಸಿ. ರಾಜನಿಗೆ ವಂದಿಸಿ, ತಾನು ಬಂದ ಉದ್ದೇಶವನ್ನು ವಿವರಿಸಿದ ಬಳಿಕ ರಾಜನು ಆತನ ನ್ಯಾಯವನ್ನು ತೀರ್ಮಾನಿಸಲು ಒಪ್ಪಿಕೊಂಡ. ಕುದುರೆ ವ್ಯಾಪಾರಿಯು ಮತ್ತೊಮ್ಮೆ ರಾಜನಿಗೆ ತಲೆಬಾಗಿ ವಂದಿಸುತ್ತಾ: "ಪ್ರಭು ಐನೂರು ಕುದುರೆಗಳ ಬೆಲೆ ಒಂದು ರೂಪಾಯಿಗಳು ಎಂಬುದನ್ನೇನೊ ತಿಳಿದೆ ಆದರೆ ಈಗ ಒಂದು ನೂರು ರೂಪಾಯಿಗಳ ಬೆಲೆ ಏನು ಎಂಬುದನ್ನು ನಿಮ್ಮ ಬೆಲೆಗಾರರಿಂದ ತಿಳಿಯ ಬಯಸುತ್ತೇನೆ!" ಎಂದ. ಇದರ ಹಿಂದಿನ ರಹಸ್ಯವನ್ನು ತಿಳಿಯದಿದ್ದ ಅವಿವೇಕಿ ರಾಜ: "ಎಲೈ ಬೆಲೆಗಾರ! ಐನೂರು ಕುದುರೆಗಳ ಬೆಲೆ ಏನು?" "ಪ್ರಭು, ಒಂದು ನೂರು ರೂಪಾಯಿಗಳು!" "ಎಲವೋ ಬೆಲೆಗಾರ, ಹಾಗಾದರೆ ಆ ಒಂದು ನೂರು ರೂಪಾಯಿಗಳ ಬೆಲೆ ಏನಾಗುತ್ತದೆ?" "ಪ್ರಭು, ರಾಜ್ಯದ ಒಳ ಹೊರಗಿನ ಎಲ್ಲಾ ಸಂಪತ್ತನ್ನು ಸೇರಿಸಿದರೆ ಒಂದು ನೂರು ರೂಪಾಯಿ ಬೆಲೆಗೆ ಸಮನಾಗುತ್ತದೆ!" ಎಂದ.

"ಸ್ವಾಮಿ, ನಿಮ್ಮಿಂದಾಗಿ ನನಗೆ ಅಪಾರ ಲಾಭವಾಯಿತು. ಆ ಲಾಭದಲ್ಲಿ ನಿಮಗೊಂದಷ್ಟು ಕಾಣಿಕೆಯನ್ನೂ ಕೊಡಲು ಬಂದಿದ್ದೇನೆ!" ಎಂದು ಆತನಿಗೆ ಕೈತುಂಬಾ ಲಂಚ ಕೊಟ್ಟ, ಇದರಿಂದ ಲಾಳುದಾಯಿ ಅಪಾರ ಸಂತೋಷದಿಂದ ಉಬ್ಬಿ ಹೋದ. ಇದೆ ಸರಿಯಾದ ಸಮಯವೆಂದು:

"ಸ್ವಾಮೀ, ನನ್ನ ಐನೂರು ಕುದುರೆಗಳ ಬೆಲೆ ಒಂದು ನೂರು ರೂಪಾಯಿಗಳೆಂದು ನನಗೆ ತಿಳಿಯಿತು. ಅದು ಸರಿ. ಆದರೆ ನನಗೆ ತಲೆ ತಿನ್ನುತ್ತಿರುವ ವಿಷಯವೆಂದರೆ ಆ ನೂರು ರೂಪಾಯಿಗಳ ಬೆಲೆ ಏನು? ಎಂಬುದೇ ಆಗಿದೆ. ಆದ್ದರಿಂದ ತಾವು ಬೆಲೆ ಏನು ಎಂದು ಹೇಳಬಲ್ಲಿರಾ?"

"ಎಲೈ ವ್ಯಾಪಾರಿಯೇ, ಹೇಳಬಲ್ಲೆ! ಎಲ್ಲಿ ಬೇಕಾದರೂ ಹೇಳಬಲ್ಲೆ!"

"ಸ್ವಾಮಿ, ಹಾಗಾದರೆ ರಾಜನೆದುರು, ರಾಜಪರಿಷತ್ತಿನ ಎದುರು ಹೇಳಬಲ್ಲೀರಾ?"

"ಏಕಾಗದು! ಖಂಡಿತಾ ಹೇಳಬಲ್ಲೆ!" ಎಂದು ಒಪ್ಪಿಕೊಂಡ.

ಮರುದಿನ ಆ ವ್ಯಾಪಾರಿಯು ತುಂಬಿದ ರಾಜ ಪರಿಷತ್ತನ್ನು ಪ್ರವೇಶಿಸಿ. ರಾಜನಿಗೆ ವಂದಿಸಿ, ತಾನು ಬಂದ ಉದ್ದೇಶವನ್ನು ವಿವರಿಸಿದ ಬಳಿಕ ರಾಜನು ಆತನ ನ್ಯಾಯವನ್ನು ತೀರ್ಮಾನಿಸಲು ಒಪ್ಪಿಕೊಂಡ. ಕುದುರೆ ವ್ಯಾಪರಿಯು ಮತ್ತೊಮ್ಮೆ ರಾಜನಿಗೆ ತಲೆಬಾಗಿ ವಂದಿಸುತ್ತಾ:

"ಪ್ರಭು ಐನೂರು ಕುದುರೆಗಳ ಬೆಲೆ ಒಂದು ರೂಪಾಯಿಗಳು ಎಂಬುದನ್ನೇನೊ ತಿಳಿದೆ ಆದರೆ ಈಗ ಒಂದು ನೂರು ರೂಪಾಯಿಗಳ ಬೆಲೆ ಏನು ಎಂಬುದನ್ನು ನಿಮ್ಮ ಬೆಲೆಗಾರರಿಂದ ತಿಳಿಯ ಬಯಸುತ್ತೇನೆ!" ಎಂದ. ಇದರ ಹಿಂದಿನ ರಹಸ್ಯವನ್ನು ತಿಳಿಯದಿದ್ದ ಅವಿವೇಕಿ ರಾಜ:

"ಎಲೈ ಬೆಲೆಗಾರ! ಐನೂರು ಕುದುರೆಗಳ ಬೆಲೆ ಏನು?"

"ಪ್ರಭು, ಒಂದು ನೂರು ರೂಪಾಯಿಗಳು!"

"ಎಲವೋ ಬೆಲೆಗಾರ, ಹಾಗಾದರೆ ಆ ಒಂದು ನೂರು ರೂಪಾಯಿಗಳ ಬೆಲೆ ಏನಾಗುತ್ತದೆ?"

"ಪ್ರಭು, ರಾಜ್ಯದ ಒಳ ಹೊರಗಿನ ಎಲ್ಲಾ ಸಂಪತ್ತನ್ನು ಸೇರಿಸಿದರೆ ಒಂದು ನೂರು ರೂಪಾಯಿ ಬೆಲೆಗೆ ಸಮನಾಗುತ್ತದೆ!" ಎಂದ.

ಈ ಅವಿವೇಕಿಯ ಉತ್ತರವನ್ನು ಕೇಳಿದ ತುಂಬಿದ ಸಭೆಯು ನಗುವನ್ನು ತಡೆಯಲಾರದೆ ಕೈಚಪ್ಪಾಳೆ ತಟ್ಟುತ್ತಾ:

"ನಾವುಗಳು ಇದುವರೆಗೂ ರಾಷ್ಟ್ರದ ಒಳ ಹೊರಗಿನ ಭೂಮಿ, ಸಂಪತ್ತು ಮತ್ತು ತುಂಬಿ ತುಳುಕುತ್ತಿರುವ ಖಜಾನೆಯ ಬೆಲೆ ಅಮೂಲ್ಯವೆಂದು ಎಂದಿಗೂ ಬೆಲೆ ಕಟ್ಟಲು ಸಾಧ್ಯವಿಲ್ಲವೆಂದು ತಿಳಿದಿದ್ದೆವು. ಆದರೆ ಇಂದು ಈ ಮೂರ್ಖ ಬೆಲೆಗಾರನಿಂದ ತಿಳಿಯಿತು: ಈ ರಾಜ್ಯದ ಒಳ ಹೊರಗಿನ ಸಂಪತ್ತಿನ ಬೆಲೆ ಒಂದು ನೂರು ರೂಪಾಯಿ ಎಂದು! ಅಹ್ಹಾ....ಹ್ಹಾ....ಎಂಥಹ ರಾಜ! ಎಂಥಹ ಬೆಲೆಗಾರ! ಅವರಿಬ್ಬರ ಜೋಡಿ ಅಮೋಘವಾದದ್ದು....!" ಎಂದು ನಕ್ಕೂ ನಕ್ಕೂ ಸುಮ್ಮನಾದರು.

ಅವಿವೇಕಿಯಾದ ಲಾಳುದಾಯಿ ಇದು ನನ್ನ ಪಾಂಡಿತ್ಯಕ್ಕೆ ದೊರೆತ ಪ್ರಶಂಸೆ ಎಂದು ತಿಳಿದು ಅಮಾತ್ಯರಿಗೂ ಮತ್ತು ರಾಜನಿಗೂ ವಂದಿಸುತ್ತಾ:

"ಪ್ರಭು, ಹಾಗಾದರೆ ತಾವು ಬೆನ್ನು ತಟ್ಟಿದಂತೆ ನನ್ನ ಪಾಂಡಿತ್ಯ ಅಪಾರವಿಲ್ಲವೆ? ನನ್ನ ಕುಶಲತೆ ಅಪಾರವಲ್ಲವೆ?!" ಎನ್ನಲು:

ಕುಸಿದು ಕೂರುವ ಸರದಿ ಈಗ ರಾಜನದಾಯಿತು! □

'SAMVADA' Kannada Monthly, JUNE 2009 RNI-KAR KAN/2002/9246 CPMG/KA/BGW-706/2009-11
Office of Posting: RAJAJINAGAR HO, Date of Posting: 27-28 of Every Month

ಸುಖೀ ರೈತ - ಸುಖೀ ರಾಜ್ಯ

ಕರ್ನಾಟಕ ಸರ್ಕಾರವು ಕೃಷಿಗೆ ಹಿಂದೆಂದಿಗಿಂತಲೂ ಹೆಚ್ಚಿನ ಆದ್ಯತೆ ನೀಡಿದೆ. ಸಾಂಪ್ರದಾಯಿಕ ಕೃಷಿ ವಿಧಾನದೊಂದಿಗೆ ಆಧುನಿಕ ಯಾಂತ್ರೀಕೃತ ಕೃಷಿ ವಿಧಾನವನ್ನು ಮೇಳೈಸಿ ರೈತರು ಅತ್ಯಧಿಕ ಇಳುವರಿ ಪಡೆಯಲು ಸರ್ಕಾರ ಕೃಷಿ ವಲಯದಲ್ಲಿ ಹಲವು ವಿನೂತನ ಕ್ರಮಗಳನ್ನು ಜಾರಿಗೊಳಿಸಿದೆ.

ಕೃಷಿ ಅಭಿವೃದ್ಧಿಯ ಪ್ರಮುಖ ಅಂಶಗಳು

* ಸಮಗ್ರ ಕೃಷಿ ಅಭಿವೃದ್ಧಿಗೆ ಮುಖ್ಯಮಂತ್ರಿ ನೇತೃತ್ವದಲ್ಲಿ ಕೃಷಿ ಮಿಷನ್.
* 50 ಲಕ್ಷ ಒಣಭೂಮಿ ಕೃಷಿಕರಿಗೆ ಸಾವಿರ ರೂಪಾಯಿ ಗೊಬ್ಬರ, ಮತ್ತು ಬೀಜ ಖರೀದಿಗೆ ಸಹಾಯಧನ.
* ಹಾಲು ಉತಾದಕರಿಗೆ ಪ್ರತಿ ಲೀಟರ್ ಹಾಲಿಗೆ 2 ರೂ. ನಂತೆ ಪ್ರೋತ್ಸಾಹ ಧನ.
* ಕೃಷಿ ಆವರ್ತ ನಿಧಿಗೆ 500 ಕೋಟಿ ರೂಪಾಯಿ ಮೀಸಲು.
* ಕೃಷಿಕರು, ನೇಕಾರರು, ಮೀನುಗಾರರಿಗೆ ಶೇ. 3 ರ ಬಡ್ಡಿ ದರದಲ್ಲಿ ಸಾಲ ಸೌಲಭ್ಯ.
* ಸಾವಯುವ ಕೃಷಿ ಉತ್ತೇಜನಕ್ಕೆ ವಿಶೇಷ ಆಯೋಗ.
* ರೈತರಿಗೆ ತರಬೇತಿ ಮತ್ತು ಅಧ್ಯಯನ ಪ್ರವಾಸ ಕಾರ್ಯಕ್ರಮ.

ಕರ್ನಾಟಕ ವಾರ್ತೆ
Karnataka Information